॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥
॥ ಶ್ರೀ ಗುರುಭ್ಯೋನಮಃ ॥

ಸುಖಬೋಧಸಾಗರ

ಶ್ರೀಹರಿಕಥಾಮೃತಸಾರ

ಪ್ರತಿ ಪದ್ಯದ ಸರಳ ಸುಂದರ ಸುಲಭ
ಭಾವಸಂಗ್ರಹದೊಂದಿಗೆ

ವಿ ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಪ್ರಕಾಶನ :
ರಾಮಕೃಷ್ಣಪ್ಪದ್ವೈತವೇದಾಂತಪಾಠಶಾಲಾ
ನರಸಮ್ಮ ಸೀತಾರಾಮಯ್ಯಬಾಡಿಗಾರ್ಡ್ ಧರ್ಮಸಂಸ್ಥೆ
ಮಾಡೆಲ್‌ಹೌಸ್, ಎರಡನೆಯ ಬೀದಿ, ಬೆಂಗಳೂರು.

'ಸುಖಬೋಧಸಾಗರ ಶ್ರೀ ಹರಿಕಥಾಮೃತಸಾರ' ಹೇಮಲಂಬಿ ಕಾರ್ತಿಕ ಬಹುಳ ತೃತೀಯಾ, ದಿನಾಂಕ : 6-11-2017 ರಂದು ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದಂಗಳವರಿಂದ ಬೆಂಗಳೂರಿನಲ್ಲಿ ಈ ಕೃತಿಯು ಲೋಕೇಶಾರ್ಪಣೆ ಹಾಗೂ ಲೋಕಾರ್ಪಣೆ ಆಯಿತು.

ಪ್ರಥಮ ಮುದ್ರಣ : 2017, ನವೆಂಬರ್

ಪುಟಗಳು : 550

ಬೆಲೆ : **150-00**

ಪ್ರತಿಗಳು : 3000

ಸಂಪಾದನೆ : ವಿ|| ಬೆಮ್ಮತ್ತಿ ವೇಂಕಟೇಶಾಚಾರ್ಯ
ಮೊ: 9141495120

ಪ್ರಕಾಶನ : **ಭೀಮಣ್ಣ ಬಾಡಿಗಾರ್ಡ್,**

ಪುಸ್ತಕ ದೊರೆಯುವ ಸ್ಥಳ : ರಾಮಕೃಷ್ಣಾದ್ವೈತ ವೇದಾಂತ ಪಾಠಶಾಲಾ
4, ಮಾಡಲ್ ಹೌಸ್ 2ನೇ ಬೀದಿ,
ಬಸವನಗುಡಿ, ಬೆಂಗಳೂರು-560004.
ಫೋನ್ :9483538101
080-26618177

ಅಕ್ಷರ ಜೋಡಣೆ : ಶ್ರೀಮತಿ ನಾಗಲತಾ ಎಸ್.

ಮುದ್ರಣ : ಮುಕ್ತಿಪಥ ಮುದ್ರಣಾಲಯ, ಬೆಂಗಳೂರು.

ಮುದ್ರಣ (ಸಹಾಯ) : ಪಿ. ಮಂಜುನಾಥ್

ಹಂಸನಾಮಕ ಪರಮಾತ್ಮನ ಪರಂಪರೆಯ
ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನದ
ಶ್ರೀರಾಘವೇಂದ್ರಸ್ವಾಮಿಗಳಮಠದ ಪೀಠಾಧಿಪತಿಗಳಾಗಿದ್ದ
ಶ್ರೀಶ್ರೀ1008ಶ್ರೀಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ
ಕರಕಮಲಸಂಜಾತರಾದ
ಶ್ರೀಶ್ರೀ1008ಶ್ರೀಸುವಿದ್ಯೇಂದ್ರತೀರ್ಥರ
ಅನುಗ್ರಹ ಸಂದೇಶ

[illegible] .

[illegible] ಭಾಮಿನೀಷಟ್ಪದಿಯಲ್ಲಿ [illegible] [illegible] ಲಾಗುತ್ತದೆ. ಇದರಿಂದ [illegible]

ಇತಿ ನಾರಾಯಣಸ್ಮರಣೆಗಳು.

[illegible]

ಗುರುನುಡಿ

ಶ್ರೀಹರಿಕಥಾಮೃತಸಾರಗ್ರಂಥವನ್ನು ದಾಸವರೇಣ್ಯರಾದ ಶ್ರೀಜಗನ್ನಾಥ-ದಾಸರಿಂದ ವಿರಚಿತವಾದದ್ದು. ಸಕಲಶಾಸ್ತ್ರಗಳ ಸಾರವನ್ನು 32 ಸಂಧಿಗಳಲ್ಲಿ ವಿಸ್ತಾರವಾಗಿ ತಿಳಿಸಿದ್ದಾರೆ. ಶ್ರೀವೇದವ್ಯಾಸದೇವರ ಮತ್ತು ಶ್ರೀಮಧ್ವಾಚಾರ್ಯರ ಸಿದ್ಧಾಂತಕ್ಕೆ ಅವಿರುದ್ಧವಾಗಿ ರಚನೆ ಮಾಡಿದ್ದಾರೆ. ಶ್ರೀಮಟ್ಟೀಕಾಕೃತ್ಪಾದರ ಮೇರುಕೃತಿ ಶ್ರೀಮನ್ನ್ಯಾಯಸುಧಾದಿ ಗ್ರಂಥಗಳಲ್ಲಿ ಕಠಿಣವಾಗಿ ಹೇಳಲ್ಪಟ್ಟ ವಿಷಯಗಳನ್ನು ಸರಳ, ಸುಂದರವಾಗಿ ಸದೃಷ್ಟಾಂತವಾಗಿ ಕನ್ನಡದಲ್ಲಿ ವಿವರಣೆ ಮಾಡಿದ್ದಾರೆ. ಮಂಗಳಾಚರಣಸಂಧಿಯ ಪಲ್ಲವಿಯಲ್ಲಿ ''ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತು ಪೇಳುವೆ ಪರಮ ಭಗವದ್ಭಕ್ತರಿದನಾದರದಿ ಕೇಳುವುದು''. ಈ ಹರಿಕಥೆಯನ್ನು ಗುರುಗಳ ಕರುಣ ಅಂತ ಹೇಳಿದ್ದಾರೆ. ಈ ವಿಷಯಕ್ಕೆ ಜಗನ್ನಾಥದಾಸರೇ ಸಾಕ್ಷಿ. ಹೇಗೆಂದರೆ ಶ್ರೀವಿಜಯದಾಸರದಲ್ಲಿ ಮಾಡಿದ ಅಪರಾಧಕ್ಕಾಗಿ ಅವರಿಗೆ ದೇಹಾಲಸ್ಯವಾಗಿ ಅನೇಕ ಕಷ್ಟಗಳನ್ನು ಅನುಭವಿಸಿ ವಿಜಯದಾಸರ ಅನುಗ್ರಹದಿಂದ ಅವರ ಶಿಷ್ಯರಾದ ಗೋಪಾಲದಾಸರ ಮೂಲಕ 40 ವರ್ಷ ಆಯಸ್ಸು, ಆರೋಗ್ಯವನ್ನು ಪಡೆದು ಅನೇಕ ದೇವರನಾಮಗಳು, ಪದ, ಪದ್ಯ, ಸುಳಾದಿ, ಉಗಾಭೋಗಗಳನ್ನು ರಚಿಸಿ ಪುರಂದರದಾಸರ ಪರಂಪರೆಯನ್ನು ಮುಂದುವರೆಸಿ ಶಿಷ್ಯರಿಗೆ ಉಪದೇಶಿಸಿ ಅಂಕಿತವನ್ನು ಕೊಟ್ಟು ಸಜ್ಜನರನ್ನು ಉದ್ಧಾರ ಮಾಡಿದರು. ಇಂತಹ ಮೇರು ಕೃತಿಯಾದ ಹರಿಕಥಾಮೃತಸಾರವನ್ನು ಮ.ಶಾ.ಸಂ. ವಿದ್ವಾನ್. ಬೆಮ್ಮತ್ತಿ ವೇಂಕಟೇಶಾಚಾರ್ಯರು ಪ್ರತಿಯೊಂದು ಪದ್ಯಕ್ಕೂ ಸರಳವಾದ ಶೀರ್ಷಿಕೆಯನ್ನು ಬರೆದಿದ್ದಾರೆ. ಶ್ರೀ ಭೀಮಣ್ಣ ಬಾಡಿಗಾರ್ಡ್ ಇವರ ಪ್ರಾರ್ಥನೆಯಂತೆ ರಚಿಸಿಕೊಟ್ಟು ಸಜ್ಜನರಿಗೆ ಉಪಕಾರ ಮಾಡಿದ್ದಾರೆ. ಭೀಮಣ್ಣ ಅವರ ಧರ್ಮಪತ್ನಿ ದಿ|| ವಿಜಯಾ ಅವರ ಸ್ಮರಣಾರ್ಥವಾಗಿ ಈ ಗ್ರಂಥವನ್ನು ಲೋಕಕ್ಕೆ ಅರ್ಪಿಸುತ್ತಿದ್ದಾರೆ. ದಿ|| ವಿಜಯಾ ಅವರು ಪ್ರಯಾಗಕ್ಷೇತ್ರದಲ್ಲಿ ಹುಟ್ಟಿ ಜೀವನ ಪರ್ಯಂತ ವಿಶೇಷವಾಗಿ ಸಾಧನೆಯನ್ನು ಮಾಡುತ್ತಾ, ಹರಿ, ವಾಯು, ಗುರುಗಳ ದಾಸಸಾಹಿತ್ಯ ಸೇವೆಯನ್ನು ಮಾಡುತ್ತಾ, ಪುಷ್ಕರ ಕ್ಷೇತ್ರದಲ್ಲಿ ದೇಹತ್ಯಾಗವನ್ನು ಮಾಡಿದರು. ಇವರ ಜೀವನದ ಉಸಿರು ಹರಿಕಥಾಮೃತಸಾರವಾಗಿತ್ತು. ಇವರಿಗೆ ಉತ್ತಮ ಪುಣ್ಯಲೋಕ ಲಭಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಇಂತಿ ಸಜ್ಜನದಾಸ,

ಕಂಬಾಲೂರು ಮಧುಸೂದನ ಆಚಾರ್ಯ

ಪ್ರಕಾಶಕರ ನುಡಿ

ನಮ್ಮ ತಂದೆಯವರ ಮಾತಾಮಹಂದಿರಾದ ಶ್ರೀರಾಮಕೃಷ್ಣಪ್ಪನವರು 1930ರಲ್ಲಿ ಕೀರ್ತಿಶೇಷರಾದ ನಂತರ ಅವರ ಇಚ್ಛೆಗೆ ಅನುಗುಣವಾಗಿ ಅವರು ಉಳಿಸಿದ್ದ ಆಸ್ತಿಯಿಂದ ಮಾರಿ ಬಂದ ಹಣವನ್ನು ಆಗಿನ ಮೈಸೂರು ಸರ್ಕಾರದಲ್ಲಿ ಠೇವಣಿ ರೂಪದಲ್ಲಿ ಇರಿಸಿ ಅದರಿಂದ ಬರುವ ಬಡ್ಡಿ ಹಣದಿಂದ ಶ್ರೀರಾಮಕೃಷ್ಣ ದ್ವೈತವೇದಾಂತ ಪಾಠಶಾಲಾವನ್ನು ನಮ್ಮ ತಂದೆಯವರ ಲೌಕಿಕ ಹಾಗೂ ಅಧ್ಯಾತ್ಮ ಗುರುಗಳಾದ ರಾವ್ ಬಹದ್ದೂರ್ ವೇಂಕಟೇಶಾಚಾರ್ಯ ಅವರ ಅಧ್ಯಕ್ಷತೆಯಲ್ಲಿ 1937ರಲ್ಲಿ ಚಾಮರಾಜಪೇಟೆಯ ಶ್ರೀಮನ್ ಮಾಧ್ವಸಂಘದಲ್ಲಿ ಪ್ರಾರಂಭಿಸಲಾಯಿತು. ಪ್ರತಿನಿತ್ಯವು ವೇದ, ವೇದಾಂತಗಳ ಪಾಠಗಳನ್ನು ಆಗಿನ ಪಂಡಿತರುಗಳು ಆದ ಮ.ಶಾ.ಸಂ. ಸರ್ವಶ್ರೀ ಮಾಗಡಿ ರಂಗನಾಥಾಚಾರ್ಯ, ಇನ್ನಾ ಕೃಷ್ಣಾಚಾರ್ಯ, ಖೇಡಾ ಚಂದ್ರಹಾಸಾಚಾರ್ಯ, ಆದೋನಿ ರಾಘವೇಂದ್ರಾಚಾರ್ಯ, ಕಾಶೀ ಶ್ರೀಪಾದಾಚಾರ್ಯ ಅವರುಗಳು ಶ್ರದ್ಧಾಭಕ್ತಿಗಳಿಂದ ಪಾಠಹೇಳಿ ನೂರಾರು ವಿದ್ಯಾರ್ಥಿಗಳನ್ನು ತಯಾರು ಮಾಡಿ ಅವರುಗಳು ಮಧ್ವಸಿದ್ಧಾಂತದ ತತ್ವಗಳನ್ನು ಅಧ್ಯಯನ ಮಾಡಲು ಅನುಕೂಲಗಳನ್ನು ಕಲ್ಪಿಸಿದರು. ಸರ್ಕಾರದಿಂದ ಬರುತ್ತಿದ್ದ ಕೇವಲ 6% ಬಡ್ಡಿ ಹಣದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಅವರ ತರಗತಿಗಳಿಗೆ ಅನುಸಾರವಾಗಿ ಸೂಕ್ತ ವಿದ್ಯಾರ್ಥಿವೇತನವನ್ನು ಪಾಠಶಾಲೆಯ ವತಿಯಿಂದ ನೀಡಲಾಗುತ್ತಿತ್ತು. ಈ ರೀತಿ ನಾಲ್ಕೈದು ದಶಕಗಳವರೆಗೆ ಪಾಠಶಾಲೆಯನ್ನು ನಡೆಸಿ ಅದರ ಜೊತೆ ಜೊತೆಗೆ ಶ್ರೀಮದಾಚಾರ್ಯರ ಸರ್ವಮೂಲ ಗ್ರಂಥಗಳಲ್ಲಿ ಹಲವಾರು ಗ್ರಂಥಗಳನ್ನು ಟೀಕಾಟಿಪ್ಪಣಿಗಳ ಸಹಿತ ಪ್ರಪ್ರಥಮ ಬಾರಿ ಸುಂದರವಾಗಿ ಮುದ್ರಿಸಿ ಅತಿ ಕಡಿಮೆ ಬೆಲೆಗಳನ್ನು ನಿಗದಿಸಿ ಹಾಗೂ ಪೂರ್ಣಪ್ರಜ್ಞವಿದ್ಯಾಪೀಠದ ಆಗಿನ ಎಷ್ಟೋ ವಿದ್ಯಾರ್ಥಿಗಳಿಗೆ ಈ ಎಲ್ಲಾ ಗ್ರಂಥಗಳನ್ನು ಕೀರ್ತಿಶೇಷ. ಪ್ರಾಣೇಶರಾಯರು ಉಚಿತವಾಗಿ ಕೊಟ್ಟು ಆ ವಿದ್ಯಾರ್ಥಿಗಳ ಅಧ್ಯಯನಕ್ಕೆ ಸಹಾಯ ಮಾಡಿದ್ದಾರೆ. 80ರ ದಶಕದಿಂದ ಸರ್ಕಾರದ ಕೆಲವು ನಿರ್ಬಂಧಗಳಿಂದ

ಬದ್ಧಿ ಹಾಗ ಬೆಳೆಯುತ್ತಿದ್ದಾಗ ಶ್ರೀಪ್ರಾಣೇಶರಾಯರು ತಮ್ಮ ಸ್ವಂತ ಸಂಪಾದನೆ ಹಣವನ್ನು ಪಾಠಶಾಲೆಯನ್ನು ನಡೆಸಲು ವಿನಿಯೋಗಿಸಿ ಮತ್ತು ಇದೇಕಾರಣದಿಂದ ಪಾಠಶಾಲೆಯನ್ನು ಶ್ರೀಮನ್ಮಧ್ವಸಂಘದಿಂದ ವರ್ಗಾವಣೆ ಮಾಡಬೇಕಾದ ಪರಿಸ್ಥಿತಿ ಬಂದು, ಹಿರಿಯ ವಿದ್ವಾಂಸರಾದ ಮ.ಶಾ.ಸಂ. ಶ್ರೀನಿವಾಸರು ಧರ್ಮಿಷ್ಠರ ಮನೆಯಲ್ಲಿಯೇ ಮುಂದುವರೆಸಲಾಯಿತು.

ಶ್ರೀಪ್ರಾಣೇಶರಾಯರು ತಮ್ಮ ಮಾತಾಪಿತೃಗಳ ಸವಿನೆನಪಿನಲ್ಲಿ ಇನ್ನೊಂದು ಧರ್ಮಸಂಸ್ಥೆಯನ್ನು ಸ್ಥಾಪಿಸಿ ಆ ಸಂಸ್ಥೆಯ ವತಿಯಿಂದಲೂ ಗ್ರಂಥ ಪ್ರಕಾಶನ ಕಾರ್ಯಮುಂದುವರೆಸಿದರು. ಶ್ರೀಪ್ರಾಣೇಶರಾಯರು ತಮ್ಮ ನೆಚ್ಚಿನ ಗುರುವರ್ಯರುಗಳಾದ, ರಾ.ಬ. ವೆಂಕಟೇಶಾಚಾರ್ ಹಾಗೂ ಆದೋನಿ ಶ್ರೀರಾಘವೇಂದ್ರಾಚಾರ್ಯರ ಶಿಷ್ಯತ್ವ ವಹಿಸಿ ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಹಲವು ಸಾಧನ ಸಾತ್ವಿಕ ಜೀವನ ನಡೆಸಿ 2001ರಲ್ಲಿ ಕೀರ್ತಿಶೇಷರಾದರು. ತದನಂತರವೂ ಅವರ ವಂಶಸ್ಥರಾದ ನಾವುಗಳು, ಪಾಠಶಾಲೆಯ ಕಾರ್ಯವನ್ನು ನಮ್ಮ ಸ್ವಂತ ಖರ್ಚಿನಲ್ಲಿ ಯಥಾಶಕ್ತಿ ಗ್ರಂಥ ಪ್ರಕಟಣೆಯನ್ನು ಮುಂದುವರೆಸುತ್ತಿದ್ದೇವೆ.

ಪೂಜ್ಯಶ್ರೀಸುವಿದ್ಯೇಂದ್ರತೀರ್ಥಶ್ರೀಪಾದಂಗಳವರು ಪೂರ್ವಾಶ್ರಮದಿಂದಲೂ ನಮ್ಮ ಹಿರಿಯರಾದಿಯಾಗಿ ಎಲ್ಲರ ಮೇಲೂ ಹೃತ್ಪೂರ್ವಕ ಆಶೀರ್ವಾದ ಮಾಡುತ್ತಾ ಹರಸುತ್ತಿದ್ದಾರೆ. ಈ ಗ್ರಂಥಕ್ಕೂ ತಮ್ಮ ಆಶೀರ್ವಚನ ಸಂದೇಶ ನೀಡಿ ಹರಸಿದ್ದಾರೆ. ನಮ್ಮ ಕುಟುಂಬ ವರ್ಗಕ್ಕೆಲ್ಲಾ ಅವರ ಆಶೀರ್ವಾದ ಕವಚ ನಿರಂತರ ಇರಲೆಂದು ಸಾಷ್ಟಾಂಗ ಪ್ರಣಾಮಗಳೊಂದಿಗೆ ಬೇಡುತ್ತೇವೆ.

ನಮ್ಮ ಧರ್ಮಸಂಸ್ಥೆಗಳ ಆಶ್ರಯದಲ್ಲಿ ಇದುವರೆವಿಗೂ ಶ್ರೀಮದಾಚಾರ್ಯರ ಸರ್ವಮೂಲಗ್ರಂಥಗಳಲ್ಲಿ ಕೆಲವು ಗ್ರಂಥಗಳನ್ನು ಟೀಕಾ ಮತ್ತು ಟಿಪ್ಪಣಿಗಳ ಸಹಿತ ಪ್ರಕಾಶಿಸಿದ್ದೇವೆ. ಇದೀಗ ಶ್ರೀಜಗನ್ನಾಥದಾಸಾರ್ಯರ ಮೇರು ಕೃತಿಯಾದ ಕನ್ನಡದ ಶ್ರೀಮನ್ನ್ಯಾಯಸುಧಾ ಎಂದೇ ಪ್ರಖ್ಯಾತವಾಗಿರುವ ಶ್ರೀಹರಿಕಥಾಮೃತಸಾರ ಗ್ರಂಥದ ಮೂಲ ಮತ್ತು ಸರಳವಾದ ಪ್ರತಿಪದ್ಯದ

ಭಾವಸಂಗ್ರಹವನ್ನೂ ಪಾರಾಯಣಕ್ಕೆ ಅನುಕೂಲವಾಗುವಂತೆ ಮುದ್ರಣ ಮಾಡಿ ಸದ್ಭಕ್ತರ ಕೈ ಸೇರುತ್ತಿರುವುದು ಬಹಳ ಸಂತೋಷದ ವಿಷಯ.

ಮ.ಶಾ.ಸಂ. ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯರು ಮತ್ತು ಅವರ ಧರ್ಮಪತ್ನಿ ಈ ಗ್ರಂಥದ ಶುದ್ಧ ಪ್ರತಿ ಸಂಪಾದಿಸಿ, ಪ್ರತಿ ಪದ್ಯಕ್ಕೂ ಸುಂದರವಾದ ಭಾವಸಂಗ್ರಹ ವಾಕ್ಯಗಳನ್ನು ರಚಿಸಿ ಸಕಾಲಕ್ಕೆ ಪೂರ್ಣಮಾಡಿ, ಮುದ್ರಣ ಕಾರ್ಯವನ್ನೂ ಮಾಡಿಸಿರುತ್ತಾರೆ. ಉದ್ಗ್ರಂಥಗಳ ಅನುವಾದ ಕಾರ್ಯನಿರಂತರ ಮಾಡುತ್ತಿದ್ದರೂ, ನಮ್ಮ ಮೇಲಿನ ಅಭಿಮಾನದಿಂದ ಈ ಕಾರ್ಯವನ್ನು ತಮ್ಮ ಸ್ವಂತ ಕಾರ್ಯಕ್ಕಿಂತ ಹೆಚ್ಚು ಆಸಕ್ತಿ ವಹಿಸಿ ಬಹಳ ಸುಂದರವಾಗಿ ಈ ಗ್ರಂಥ ಹೊರಬರಲು ಕಾರಣರಾಗಿದ್ದಾರೆ. ಆ ದಂಪತಿಗಳಿಗೆ ನಾವು ಚಿರಋಣಿಗಳಾಗಿದ್ದೇವೆ.

ಶ್ರೀಹರಿಕಥಾಮೃತಸಾರ ಪಾಠವನ್ನು ಹೇಳಿದ ಗುರುಗಳಾದ ಮ.ಶಾ.ಸಂ. ವಿದ್ವಾನ್ ಶ್ರೀ ಕಂಬಾಲೂರು ಮಧುಸೂದನಾಚಾರ್ಯರು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆಯೂ ನಮಗೆ ಆಶೀರ್ವಚನವನ್ನು ಅನುಗ್ರಹಿಸಿದ್ದಾರೆ. ಅವರಿಗೆ ನಾವು ಚಿರಋಣಿಗಳಾಗಿದ್ದೇವೆ.

ಇನ್ನು ಈ ಗ್ರಂಥದ ಪ್ರಕಟಣೆಗೆ ಮುಖ್ಯಕಾರಣಳಾದ ನನ್ನ ಧರ್ಮಪತ್ನಿ ವಿಜಯಳ ಬಗ್ಗೆ ನನ್ನ ಅಂತರಾಳದ ಕೆಲವು ಮಾತುಗಳನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ಅವಳು 1968ರಲ್ಲಿ ಬೆಂಗಳೂರಿಗೆ ಬಂದು ನೆಲಿಸಿದಾಗ ಕನ್ನಡ ಓದಲು ಕಷ್ಟವಾಗುತ್ತಿದ್ದರೂ ಶ್ರೀಹರಿಕಥಾಮೃತಸಾರ ಗ್ರಂಥದ ಬಗ್ಗೆ ಕೇಳಿ ತಾನೂ ಕಲಿಯಬೇಕೆಂಬ ಹೆಬ್ಬಯಕೆ ಇದ್ದರೂ ಆಗ ಅದು ಕಾರಣಾಂತರಗಳಿಂದ ಈಡೇರಿರಲಿಲ್ಲ.

ಈಗ್ಗೆ ಸುಮಾರು 25 ವರ್ಷಗಳ ಹಿಂದೆ ದಾಸರಾಯರ ವಂಶಸ್ಥರಾದ ಶ್ರೀಚಿಕ್ಕೇರೂರು ಮ.ಶಾ.ಸಂ. ಶ್ರೀಸಂಜೀವಮೂರ್ತಿದಾಸರ

ಪರಿಚಯವಾಯಿತು. ಅವರು ಎಲ್ಲಾ ಕಡೆಗಳಲ್ಲೂ ಶ್ರೀಹರಿಕಥಾಮೃತಸಾರದ ಪ್ರವಚನವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದರು. ಅದರ ಶ್ರವಣದಿಂದ ಪ್ರಭಾವಿತಳಾಗಿ, ನಿತ್ಯ ಪಾರಾಯಣ ಮಾಡಲು ಬಯಸಿ, ಮೂಲತಃ ಪ್ರಯಾಗದಲ್ಲಿ ಹುಟ್ಟಿ ಬೆಳೆದವಳಾದ್ದರಿಂದ, ದೇವನಾಗರೀ ಲಿಪಿಯಲ್ಲಿರುವ ಪುಸ್ತಕವನ್ನು ಸ್ನೇಹಿತರ ಮೂಲಕ ಪೂನಾದಿಂದ ತರಿಸಿಕೊಂಡು ಪ್ರತಿನಿತ್ಯ ಓದುವ ಹವ್ಯಾಸ ಬೆಳೆಸಿಕೊಂಡಳು. ಅದೇ ಸಮಯಕ್ಕೆ ರಾಜಾಜೀನಗರದಲ್ಲಿ ವಾಸವಾಗಿರುವ ಗುರುಮಾತೆ ಶ್ರೀಮತಿ ಸರೋಜಮ್ಮನವರ ಪರಿಚಯವಾಗಿ, ಅಧಿಕಮಾಸಗಳಲ್ಲಿ ನಿತ್ಯಪಾರಾಯಣದಲ್ಲಿ ಭಾಗವಹಿಸಿ ಸರಾಗವಾಗಿ ಪಾರಾಯಣ ಮಾಡಲು ಹೇಳಿಕೊಟ್ಟು ಅನುಗ್ರಹಿಸಿದರು. ಅಲ್ಲಿಂದ ಮುಂದೆ ಎಲ್ಲೇ ಹೋದರು ತನ್ನ ದೇವನಾಗರೀ ಲಿಪಿಯ ಪುಸ್ತಕ ಜೊತೆಯಲ್ಲೇ ಇಟ್ಟುಕೊಂಡು ಪಾರಾಯಣ ಮಾಡುತ್ತಿದ್ದಳು. ಶ್ರೀಶ್ರೀಸುವಿದ್ಯೇಂದ್ರತೀರ್ಥರು ರಾಯಚೂರು ಚಾತುರ್ಮಾಸ್ಯ ಸಂದರ್ಭದಲ್ಲಿ ಮಾಡಿದ ಸಮಗ್ರ ಗ್ರಂಥದ ಪಾಠವನ್ನು ಕೇಳುತ್ತಿದ್ದಳು. ಆದರೆ ಅವಳ ಅಚಲವಾದ ಶ್ರದ್ಧಾಭಕ್ತಿಗೆ, ದಾಸಾರ್ಯರು ಕರುಣಾಸಂಧಿಯಲ್ಲಿ ತಿಳಿಸಿದಂತೆ ಪರಮಾತ್ಮನ ಅಪಾರ ಕರುಣೆಯಿಂದ ಆ ಗ್ರಂಥದ ಪಾರಾಯಣ ಅಧ್ಯಯನ ಮಾಡಲು ಅನುಕೂಲವಾಯಿತು. ಅವಳ ಜೀವನಕ್ಕೆ ಒಂದು ಮುಕುಟ ಪ್ರಾಯದಂತೆ ಸಾರ್ಥಕತೆಯನ್ನು ಆ ಕರುಣಾಮಯಿ ಒದಗಿಸಿದರು. ಅದೇನೆಂದರೆ 2014ರಲ್ಲಿ ಪ.ಶಾ.ಸಂ. ವಿದ್ವಾನ್ ಕಂಬಾಲೂರು ಮಧುಸೂದನಾಚಾರ್ಯರು (ಕಂ. ಗುರುರಾಜಾಚಾರ್ಯರ ತಮ್ಮಂದಿರು) ಶ್ರೀ ಹರಿಕಥಾಮೃತಸಾರ ಸಮಗ್ರ ಗ್ರಂಥವನ್ನು ಪಾಠಕ್ರಮದಲ್ಲಿ ಎಲ್ಲಾ ಮುಖ್ಯ ವ್ಯಾಖ್ಯಾನಗಳೊಂದಿಗೆ ಹೇಳಲು ಪ್ರಾರಂಭಿಸಿದಾಗ, ನಮ್ಮ ಪ್ರಾರ್ಥನೆ ಮೇರೆಗೆ ಸುಮಾರು 2 ವರ್ಷ ನಮ್ಮ ಮನೆಗೆ ಬಂದು ಪ್ರತಿನಿತ್ಯ ಪಾಠವನ್ನು ಹೇಳಿ, ಸೂಕ್ಷ್ಮ ವಿಚಾರಗಳ ಬಗ್ಗೆ ನಮ್ಮಗಳಿಂದ ಚರ್ಚೆ ಮಾಡಿಸಿ ಅನುಗ್ರಹ ಮಾಡಿದ್ದಾರೆ. ಈ ಗ್ರಂಥದ ಮಂಗಳ ಸಂದರ್ಭದಲ್ಲಿ ನನ್ನ ಪತ್ನಿಯಿಂದ ಅವಳಿಗೆ ಅನುಕೂಲವಾಗುವ ರೀತಿಯಲ್ಲಿ ಹಿಂದಿ

ಭಾಷೆಯಲ್ಲಿಯೇ ಅನುವಾದ ಮಾಡಿಸಿ ಶ್ರೀಹರಿವಾಯುಗರುಗಳಿಗೆ ಸಮರ್ಪಣೆ ಮಾಡಿಸಿ ಹೃತ್ಪೂರ್ವಕವಾಗಿ ಆಶೀರ್ವದಿಸಿದ್ದಾರೆ. ಇದು ಅವಳ ಜೀವನದ ಅತ್ಯಂತ ಸೌಭಾಗ್ಯದ ಸಂದರ್ಭವಾಗಿ ಆ ಚೇತನ ತನ್ನ ಜೀವನದ ಸಾರ್ಥಕತೆಯನ್ನು ಪಡೆದು ಜೀವನದ ಅಂತ್ಯಕಾಲದಲ್ಲಿ ಅನಿರೀಕ್ಷಿತವಾಗಿ ಶ್ರೀ ಪುಷ್ಕರ ಕ್ಷೇತ್ರಕ್ಕೆ ಭೇಟಿ ನೀಡಿ ಋಜುರಾಜರಾದ ಶ್ರೀ ಬ್ರಹ್ಮದೇವರ ಸಮ್ಮುಖದಲ್ಲಿ ಗ್ರಂಥದ ಸಮಗ್ರ ಪಾರಾಯಣ ಮಾಡಿ ಸಮರ್ಪಿಸಿ ಕೃತಾರ್ಥಗಳಾಗಿ ಆದರ ಮುಂದಿನ ದಿನವೇ ಅಂದರೆ ದುರ್ಮುಖಿ ಸಂವತ್ಸರ ಕಾರ್ತೀಕ ಬಹುಳ ಚತುರ್ಥಿಯಂದು (17-11-2016) ಆ ಕ್ಷೇತ್ರದಲ್ಲಿಯೇ ತನ್ನ ಇಹಲೋಕದ ಯಾತ್ರೆಯನ್ನು ಮುಗಿಸಿ ಸದ್ಗತಿಗೆ ಪಾತ್ರಳಾದಳು. ಅವಳು ಪ್ರತಿನಿತ್ಯ ಕಲ್ಪಸಾಧನಸಂಧಿಯಲ್ಲಿ ಬರುವ ನೂರುಜನ ಋಜುಗಣಸ್ಥ ಹೆಸರುಗಳನ್ನು ವಾಮನ ಪುರಾಣದಲ್ಲಿ ತಿಳಿಸಿರುವಂತೆ

ವಾಮನಪುರಾಣದಲಿ ಪೇಳಿದ
ಈ ಮಹಾತ್ಮರ ಪರಮಮಂಗಳ-
ನಾಮಗಳ ಸಂಪ್ರೀತಿಪೂರ್ವಕ ನಿತ್ಯ ಸ್ಮರಿಸುವರ ॥
ಶ್ರೀಮನೋರಮನವರು ಬೇಡಿದ
ಕಾಮಿತಾರ್ಥಗಳಿತ್ತು ತನ್ನ ತ್ರಿ-
ಧಾಮದೊಳಗನುದಿನದಲಿಟ್ಟಾನಂದ ಪಡಿಸುವನು ॥

ಪಾರಾಯಣ ಮಾಡಿದ್ದರ ಫಲವೆಂಬಂತೆ ಪ್ರತ್ಯಕ್ಷವಾಗಿ ಸಿದ್ಧಿಯನ್ನು ಪಡೆದು ಶ್ರೀಹರಿವಾಯುಗುರುಗಳ ಹಾಗೂ ದಾಸವರ್ಯರ ಕೃಪೆಗೆ ಪಾತ್ರಳಾದಳು.

ಈ ಗ್ರಂಥವು ಶ್ರದ್ಧಾಭಕ್ತಿಗಳಿಂದ ಅಧ್ಯಯನ ಪಾರಾಯಣ ಮಾಡುವವರಿಗೆ "ಪ್ರತ್ಯಕ್ಷ ಸಿರಿಪ್ರದ" ಎಂಬುದಕ್ಕೆ ನನ್ನ ಧರ್ಮಪತ್ನಿಯ ಜೀವನವೇ ಒಂದು ನಿದರ್ಶನವಾಗಿದೆ.

ದಿನಾಂಕ : 06-11-2017
ಹೇಮಲಂಬಿ.ಕಾ.ಬ.ಚತುರ್ಥಿ

ಭೀಮಣ್ಣ ಬಾಡಿಗಾರ್ಡ್
ಪ್ರಕಾಶಕರು

ಮಾತೃದೇವೀಂ ಸದಾಶ್ರಯೇ

'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಶ್ರುತಿವಾಕ್ಯದ ಜ್ವಲಂತ ನಿದರ್ಶನ ನಮ್ಮ ಮಾತೃಪಾದರು ಎಂದು ತಿಳಿಸಲು ಬಹಳ ಹೆಮ್ಮೆ ಮತ್ತು ಗೌರವ ಎನಿಸುತ್ತದೆ. ಪವಿತ್ರ ಕ್ಷೇತ್ರರಾಜನಾದ ''ಪ್ರಯಾಗ''ದಲ್ಲಿ ಜನಿಸಿ, ನಿತ್ಯ ತ್ರಿವೇಣಿ ಸಂಗಮ ಸ್ನಾನ, ವೇಣಿಮಾಧವನ ದರ್ಶನ ಸೇವಾ, ''ಬಡೇ ಹನೂಮಾನ್‌ಜಿ'''ಯ ದರ್ಶನ ಸೇವೆ ಮತ್ತು ನಮ್ಮ ಮಾತಾಮಹರ ಮನೆಯಲ್ಲಿ ಇರುವ ಗೋವುಗಳ ವಿಶೇಷ ಸೇವೆಗಳಿಂದ ಪುನೀತರಾಗಿದ್ದರು. ಇದಕ್ಕೆ ಕಲಶಪ್ರಾಯದಂತೆ ನಮ್ಮ ಮಾತಾಮಹ ಮತ್ತು ಮಾತಾಮಹಿಯರ ಸೇವೆಯಿಂದ ಅವರ ಸಂಪೂರ್ಣ ಆಶೀರ್ವಾದಕ್ಕೆ ಪಾತ್ರರಾಗಿದ್ದರು. ನಂತರದ ದಿವಸಗಳಲ್ಲಿ ಪ್ರಯಾಗದಿಂದ ಬೆಂಗಳೂರಿಗೆ ಬಂದ ನಂತರ ಶ್ರೀಮದಾಚಾರ್ಯರ ಶಾಸ್ತ್ರದಲ್ಲಿ ವಿಶೇಷ ಆಸಕ್ತಿಗೊಂಡು ಶ್ರೀಹರಿಕಥಾಮೃತಸಾರದಲ್ಲಿ ಭಕ್ತಿಶ್ರದ್ಧಾ ಹೆಚ್ಚಾಗಿ, ಅದರ ಅರ್ಥಸಹಿತ ಅನುಸಂಧಾನ ಪೂರ್ವಕ ಪಾರಾಯಣ ಮಾಡಬೇಕೆಂಬ ದೃಢ ಸಂಕಲ್ಪವಾಯಿತು. ಅಮ್ಮನ ಈ ಸಂಕಲ್ಪ ಪೂರ್ವಕ ಪ್ರಾರ್ಥನೆಯನ್ನು ಭಗವಂತನು ಆಲಿಸಿ ಅವರಿಗೆ ಶ್ರೀಹರಿಕಥಾಮೃತಸಾರದ ಪಾರಾಯಣ ಮತ್ತು ಅರ್ಥಸಹಿತ ಅನುಸಂಧಾನಕ್ಕೆ ಗುರುಗಳನ್ನು ಕರುಣಿಸಿ, ಜೀವನ ಸಾರ್ಥಕ್ಯಗೊಳಿಸಿದನು. ತನ್ನ ಸಾಧನೆಯ ಜೊತೆ ಜೊತೆಗೆ ನಮ್ಮ ಪಿತಾಮಹಚರಣರಾದ ''ಶ್ರೀ ಬಿ.ಎಸ್. ಪ್ರಾಣೇಶರಾಯರ'' ನಿರಂತರ ಸೇವಾ ಕೈಂಕರ್ಯದಲ್ಲಿ ರತರಾಗಿ, ನಮ್ಮ ತಂದೆಯ ಸಾಧನೆಗೆ ಎಲ್ಲ ರೀತಿ ಸಹಕಾರ ಕೊಟ್ಟು ಪತಿಭಕ್ತಿ, ಪಾರಾಯಣರಾಗಿ, ಮಕ್ಕಳಾದ ನನ್ನ ಹಾಗೂ ನನ್ನ ಅಣ್ಣನ ಲಾಲನೆ ಪಾಲನದಲ್ಲಿ ಚ್ಯುತಿ ಬಾರದಂತೆ, ನಮಗೆ ಹಿರಿದಾದ ಆಚಾರ್ಯರ ಶಾಸ್ತ್ರದಲ್ಲೇ ಆಸಕ್ತಿ ಹುಟ್ಟಿಸಿ ಸಂಸ್ಕಾರ ತುಂಬಿ ನಮಗೆ ಸನ್ಮಾರ್ಗದಲ್ಲಿ ನಡೆಯಲು ನಾಂದಿ ಹಾಕಿಕೊಟ್ಟಿದ್ದಾರೆ.

''ವಿನಾ ದೈನ್ಯೇನ ಜೀವನಂ ಅನಾಯಾಸೇನ ಮರಣಂ'' ಎಂಬ ವಾಕ್ಯದಂತೆ ತಮ್ಮ ಜೀವನವನ್ನು ವಿದ್ಯಾದಾನ ಅರ್ಜನಕ್ಕೆ ಮೀಸಲು ಇಟ್ಟು ಭಗವಂತನನ್ನು ಬಿಟ್ಟು ಬೇರೆ ಯಾರಲ್ಲೂ ತನ್ನ ದೈನ್ಯತೆ ತೋರದೇ ಬದುಕಿ ತೋರಿಸಿದ್ದಾರೆ. ಅಮ್ಮನ ಹೆಬ್ಬಯಕೆ ಇದ್ದಂತೆ ಅರಿಶಿನ ಕುಂಕುಮ ಇದ್ದಾಗಲೇ ಮಹತ್ತರವಾದ ''ಪುಷ್ಕರ'' ಕ್ಷೇತ್ರದಲ್ಲಿ ಪತಿದೇವರ ಭುಜದ ಮೇಲೆ ಒರಗಿ ಶ್ರೀಹರಿಕಥಾಮೃತಸಾರ ಪಠಿಸುತ್ತ ಇಹಲೋಕದ

ಬಂಧ ಕಳಚಿ ಮುಕ್ತಿಮಾರ್ಗದ ಪಯಣ ಬೆಳೆಸಿದ್ದಾರೆ. ಇದು ಎಲ್ಲ ಸುಮಂಗಲಿಯರ ಕನಸು. ಇದನ್ನು ಭಗವಂತ ನಮ್ಮ ಮಾತೃಶ್ರೀಗೆ ಅನಾಯಾಸವಾಗಿ ಕರುಣಿಸಿದ್ದಾನೆ. ಆಕೆಯ ಬದುಕಿನಂತೆ ನಮ್ಮ ಜೀವನವೂ ಸಾಧನೆಯ ದಾರಿ ಹಿಡಿಯಲಿ ನಾಲ್ಕು ಜನ ಸಜ್ಜನರು ನಮ್ಮನ್ನು ಸಜ್ಜನರೆಂದು ಕರೆಯಲಿ ಎಂಬ ಪ್ರಾರ್ಥನೆಯೊಂದಿಗೆ ಈ ನಾಲ್ಕು ತೊದಲು ನುಡಿಗಳನ್ನು ಅಮ್ಮನ ಅಂತರ್ಯಾಮಿ ಶ್ರೀಹರಿವಾಯುಗುರುಗಳಿಗೆ ಸಲ್ಲಿಸುತ್ತೇವೆ.

ಚಿ॥ ಶ್ರೀಮಧ್ವ ,
ಚಿ॥ ಶ್ರೀಬದರಿವಿಶಾಲ

*****

ಅಜ್ಜಿಯ ನೆನಪು

ಅಜ್ಜಿಗೆ ಶ್ರೀಹರಿಕಥಾಮೃತಸಾರವೆಂದರೆ ಪಂಚಪ್ರಾಣ. ತಾವು ಸದಾ ಅದನ್ನು ಪಾರಾಯಣ ಮಾಡುತ್ತಾ ಮತ್ತು ತನ್ನ ಮೊಮ್ಮಕ್ಕಳಾದ ನಮಗೆ ಶ್ರೀ ಗ್ರಂಥದ ಮಹತ್ವವನ್ನು ಆರಂಭಿಕ ಸಂಧಿಗಳನ್ನು ತಿಳಿಸಿ, ಬಾಯಿಪಾಠ ಮಾಡಿಸಿ ಅದರ ಹಿಂದಿನ ತತ್ವ ವಿಚಾರಗಳನ್ನು ಹೇಳಿಕೊಡುತ್ತಿದ್ದರು. ಈ ಗ್ರಂಥವನ್ನು ತಾವು ಯಾವ ಕ್ಷೇತ್ರಕ್ಕೆ ಹೋದರೂ ಸದಾ ಜೊತೆಯಲ್ಲಿ ಕೊಂಡೊಯ್ಯುತ್ತಿದ್ದರು. ಅಜ್ಜಿಯು ನಮಗೆ ನಿತ್ಯಕರ್ಮಾನುಷ್ಠಾನದ ಬಗ್ಗೆ ಹೆಚ್ಚು ಉಪದೇಶ ಕೊಡುತ್ತಿದ್ದರು. ಮತ್ತು ಎಲ್ಲ ನಿತ್ಯ ನೈಮಿತ್ತಿಕ ಕಾರ್ಯವನ್ನು ಅತಿ ಸಂಭ್ರಮದಿಂದ ಮಾಡುವಂತೆ ಆಗ್ರಹಿಸುತ್ತಿದ್ದರು. ಮೊಮ್ಮಕ್ಕಳಾದ ನಮ್ಮನ್ನು ಅತಿ ಪ್ರೀತಿ ಹಾಗೂ ಅಕ್ಕರೆಯಿಂದ ಕಾಣುತ್ತಿದ್ದರು. ಯಾರೊಬ್ಬರು ನಮ್ಮನ್ನು ಬೈಯಬಾರದೆಂದು ಶಾಸನ ಮಾಡಿದ್ದರು. ಅಜ್ಜಿಯ ಉಪದೇಶ ಹಾಗೂ ಅವರ ಜೀವನ ನಮಗೆಲ್ಲ ಒಂದು ಮಾದರಿ. ಅವರ ಆಶೀರ್ವಾದದಿಂದ ನಾವು ಸನ್ಮಾರ್ಗದಲ್ಲಿ ನಡೆದು ನಮ್ಮ ಜೀವನ ಸಾರ್ಥಕವಾಗಲೆಂದು ಅಜ್ಜಿಯ ಅಂತರ್ಯಾಮಿ ಶ್ರೀಹರಿವಾಯುಗುರುಗಳನ್ನು ಪ್ರಾರ್ಥಿಸುತ್ತೇವೆ.

ಚಿ॥ ಅನುಶ್ರೀವೇಣಿ,
ಚಿ॥ ಸುಶ್ರಿಯಾ

ಚಿ॥ ಶ್ರೀನಿಧಿ
ಚಿ॥ ಶ್ರೀಹರಿ
ಚಿ॥ ಶ್ರೀಧವ ಪಯೋನಿಧಿ

ಮುನ್ನುಡಿ

ಹಕ್ಕಿ ಅಂಗಳದಲ್ಲಿ ಕೂತಂತೆ ನಾವಿಲ್ಲಿ ಇದ್ದೇವೆ. ಮಕ್ಕಳ ಉಸುಕಿನ ಮನೆಯಂತೆ ನಮ್ಮದು ಸಂಸಾರ. ಇಂದು ಇರುತ್ತೆ, ನಾಳೆ ಇರುವುದಿಲ್ಲ. ಹೊರಟು ಬಿಡುತ್ತೇವೆ. ಯಾವುದೂ ಶಾಶ್ವತವಲ್ಲ.

ಇದು ತಿಳಿದವರ ಮಾತುಗಳು. ಸಂಸಾರ ಕ್ಷಣಿಕವೆಂಬುದು ಸತ್ಯ. ಇರುವ ಆ ಕ್ಷಣ ಸಾರ್ಥಕ ಆಗಬೇಕು. ಒಂದು ಕ್ಷಣವೂ ವ್ಯರ್ಥವಾಗಬಾರದು. ಏಕೆಂದರೆ ಕಾಲಪುರುಷ ಸುಮ್ಮನೆ ಇರುವುದಿಲ್ಲ. ಅದಕ್ಕಾಗಿ ಮಾನವೀಯ ಆಕಾಂಕ್ಷೆಗಳನ್ನು ದಾಟಬೇಕು ದೇವರೆಡೆ ಚಿತ್ತ ಕೇಂದ್ರೀಕೃತವಾಗಬೇಕು. ದೇವರಿಗಾಗಿ ಕಾತರ, ದೇವರನ್ನು ಕಾಣುವ ಹಂಬಲ ಉಮ್ಮಳಿಸಬೇಕು. ಇದುವೇ ದೈವೀ ಉನ್ಮಾದದ ಸ್ಥಿತಿ.

ಈ ದೈವೀ ಉನ್ಮಾದದಲ್ಲಿ ಬಾಯಲ್ಲಿ ಬರುವ ಹೆಸರೆಲ್ಲಾ ದೇವರ ಹೆಸರು. ತಿನ್ನುವುದೆಲ್ಲಾ ದೇವರ ನೈವೇದ್ಯ, ಕೇಳುವುದೆಲ್ಲಾ ಶ್ರೀಹರಿಯ ವಾರ್ತೆ, ನೋಡುವುದೆಲ್ಲಾ ದೇವರ ಪ್ರತೀಕ, ತಿರುಗಾಡುವುದೆಲ್ಲಾ ದೇವರ ಪ್ರದಕ್ಷಿಣೆ, ಮಲಗುವ ಕ್ಷಣಗಳೆಲ್ಲವೂ ದೇವರಿಗೆ ನಮಸ್ಕಾರ. ಅಷ್ಟೇ ಅಲ್ಲದೇ ಬೀಸುವಗಾಳಿ, ಹಕ್ಕಿಯ ಚಿಲಿಪಿಲಿಯ ನಾದ, ಹಲ್ಲಿಯ ಲೊಚಗುಟ್ಟುವ ಶಬ್ದ ಎಲ್ಲವೂ ಕೂಡ ಭಗವಂತನ ಗುಣಗಾನ.

ಇದನ್ನು ತಿಳಿಸುವುದಕ್ಕಾಗಿಯೇ ಬ್ರಹ್ಮಸೂತ್ರಗಳು ಹೊರಟವು. ಎಲ್ಲಾ ಶಬ್ದಗಳು ದೇವರನ್ನೇ ಹೇಳುವುದರಿಂದ ವ್ಯವಹರಿಸಲು ಉಪಯೋಗಿಸುವ ನಮ್ಮೆಲ್ಲಾ ಶಬ್ದಗಳು ದೇವರ ಗುಣವಾಚಕಗಳೇ ಆಗುತ್ತವೆ ಎಂಬ ಅರಿವಿನ ಹಿನ್ನಲೆಯಲ್ಲಿ ದೇವರೇ ನಮ್ಮ ಜೀವನದ ಮುಖ್ಯಉದ್ದೇಶ. ದೇವರಿಗಾಗಿಯೇ ನಮ್ಮೆಲ್ಲ ಕೆಲಸ ಕಾರ್ಯಗಳು. ಉಳಿದವರೆಲ್ಲರೂ ದೇವರ ಅಧೀನರೇ ಹೊರತು ನಮಗೆ ಅವರು ಆತ್ಯಂತಿಕರಲ್ಲ ಎಂಬ ಪ್ರಮೇಯ ಹೊರಹೊಮ್ಮಿತು. ಈ ಬ್ರಹ್ಮಸೂತ್ರದ ಸಾರಾಮೃತವನ್ನೇ ಶ್ರೀಜಗನ್ನಾಥದಾಸರು ಹರಿಕಥಾಮೃತಸಾರ ಗ್ರಂಥದ ಮೂಲಕ ಕನ್ನಡ ಭಾಷೆಯಲ್ಲಿ ಎಲ್ಲ ಜಿಜ್ಞಾಸುಗಳಿಗೂ ಹಂಚಿದರು.

ವೇದ, ಉಪನಿಷತ್ತು, ಮಹಾಭಾರತ, ಭಾಗವತಾದಿ ಮಹಾಪುರಾಣ ಮೊದಲಾದ ವಾಙ್ಮಯ ಪ್ರಪಂಚದ ಗರ್ಭದಲ್ಲಿ ಅಡಗಿದ ತಿರುಳನ್ನು ಕನ್ನಡ ಭಾಷೆಯಲ್ಲಿ ತಿಳಿಯಾಗಿ ತಿಳಿಸಿದರು. ಸಂಸ್ಕೃತ ಭಾಷೆಯೆಂಬ ಕಬ್ಬಿಣದ ಕವಚದಲ್ಲಿ ಅಡಗಿ ಕುಳಿತ ಉತ್ತಮ

ತತ್ವರತ್ನಗಳನ್ನು ಕನ್ನಡದ ಸರದಲ್ಲಿ ಪೋಣಿಸಿ ನೀಡಿದರು. ಸಾಗರದ ಆಳದಲ್ಲಿ ಹುದುಗಿದ ಅಮೃತವನ್ನು ಮೇಲೆತ್ತಿ ತಂದು ಭೂಸುರರಿಗೆ ಹಂಚಿದರು.

ಈ ಕೃತಿಯ ಬಗ್ಗೆ

ಎಲ್ಲರಿಗೂ ಹರಿಕಥಾಮೃತಸಾರ ಗ್ರಂಥ ಸುಲಭವಾಗಿ ಅರ್ಥವಾಗುವ ಕನ್ನಡ ಪದ್ಯಗಳಲ್ಲ. ಕೆಲವೊಮ್ಮೆ ಅರ್ಥವಾದಂತೆ ಕಂಡರೂ ಅದರ ತಿರುಳು ಗಮನಕ್ಕೆ ಬಾರದೇ ಅನ್ಯಾರ್ಥವನ್ನೇ ತಿಳಿಯುವ ಸಂದರ್ಭವಿರುತ್ತದೆ. ಜನಸಾಮಾನ್ಯರಿಗಷ್ಟೇ ಅಲ್ಲದೇ ವಿದ್ವಾಂಸರೂ ಕೂಡ ಅರ್ಥ ಮಾಡಿಕೊಳ್ಳಲು ಕಣ್ಣರಳಿ ಏಕಾಗ್ರತೆಯಿಂದ ಓದಬೇಕಾಗುತ್ತದೆ. ಆದ್ದರಿಂದ ವ್ಯಾಖ್ಯಾನದ ಸಹಾಯವಿಲ್ಲದೇ ಹರಿಕಥಾಮೃತಸಾರದ ಸಾವಿರ ಪದ್ಯಗಳ ಮರ್ಮವನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಆದರೆ ವ್ಯಾಖ್ಯಾನಗಳನ್ನು ಓದುವ ಅವಕಾಶ ಎಲ್ಲರಿಗೂ ಇರುವುದಿಲ್ಲ. ಕೆಲವರಿಗೆ ವ್ಯಾಖ್ಯಾನವನ್ನು ಓದಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಇನ್ನೂ ಕೆಲವರಿಗೆ ವ್ಯಾಖ್ಯಾನ ಓದುವ ಸಮಯ ಇರುವುದಿಲ್ಲ. ಇನ್ನೂ ಕೆಲವರಿಗೆ ಭಕ್ತಿಪುರಸ್ಸರವಾಗಿ ಮೂಲ ಶ್ಲೋಕಗಳನ್ನು ಪಾರಾಯಣ ಮಾಡುವುದರಲ್ಲಷ್ಟೇ ಆಸಕ್ತಿ ಇರುತ್ತದೆ. ಇಂಥವರನ್ನೆಲ್ಲಾ ಉದ್ದೇಶವನ್ನಾಗಿಟ್ಟುಕೊಂಡು ಈ ಕೃತಿಯನ್ನು ರಚಿಸಲಾಗಿದೆ. ಅರ್ಥಾನುಸಂಧಾನವಿಲ್ಲದೇ ಪಾರಾಯಣ ಮಾಡುವುದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಅರ್ಥಾನುಸಂಧಾನ ಮಾಡಿಕೊಳ್ಳಲು ದೀರ್ಘವಾದ ವ್ಯಾಖ್ಯಾನಗಳನ್ನು ಓದುವ ಸಮಯ ಸಂದರ್ಭಗಳು ಇರುವುದಿಲ್ಲ. ಅಂಥವರು ಈ ಕೃತಿಯು ಸಂಪೂರ್ಣವಾಗಿ ಉಪಯುಕ್ತವಾಗುತ್ತದೆ.

ಪ್ರತಿಯೊಂದು ಪದ್ಯಗಳ ವ್ಯಾಖ್ಯಾನವನ್ನು ಓದಿ, ಆ ಪದ್ಯದ ಭಾವವನ್ನು ತಿಳಿದು ಅದರ ಚುಟುಕುವಾದ ಸಂಗ್ರಹವನ್ನು ಪ್ರತಿಯೊಂದು ಪದ್ಯಗಳ ಮೇಲೆ ನೀಡಲಾಗಿದೆ. ಇದು ಶೀರ್ಷಿಕೆ ಕ್ರಮದಲ್ಲಿದ್ದರೂ ಕೂಡ ಆ ಪದ್ಯದ ಸಂಪೂರ್ಣ ಅಭಿಪ್ರಾಯವನ್ನು ತಿಳಿಸುತ್ತದೆ. ವೇಗವಾಗಿ ಪಾರಾಯಣ ಮಾಡುವವರೂ ಕೂಡ ಕ್ಷಣಮಾತ್ರದಲ್ಲಿ ಚುಟುಕಾದ ಸಂಗ್ರಹವನ್ನು ಗಮನಿಸಿ, ಆ ಪದ್ಯವನ್ನು ಪಠಿಸಿದಾಗ ತಕ್ಕಮಟ್ಟಿಗೆ ಅರ್ಥಾನುಸಂಧಾನವಾಗುತ್ತದೆ. ಈ ಕೃತಿಯು ಸುಲಭವಾಗಿ ಪದ್ಯಗಳ ಅರ್ಥವನ್ನು ತಿಳಿಯಲು ಕಾರಣವಾಗುವುದರಿಂದ ಈ ಕೃತಿಯು ಸುಖಬೋಧ ಎನಿಸಿದೆ. ಸುಖವಾಗಿ ತಿಳಿಯಬಹುದಾದ ಪ್ರಮೇಯ ರತ್ನಗಳು ಅಗಾಧವಾಗಿರುವುದರಿಂದ ಸುಖಬೋಧಸಾಗರ

ಎನಿಸಿದೆ. ಮತ್ತು ಸುಖಬೋಧರೆನಿಸಿದ ಜಗದ್ಗುರು ಶ್ರೀಮಧ್ವಾಚಾರ್ಯರ ಸರ್ವಮೂಲಗ್ರಂಥಗಳಲ್ಲಿರುವ ಪ್ರಮೇಯಗಳ ಆಗರವೇ ಹರಿಕಥಾಮೃತವಾಗಿರುವುದರಿಂದ ಇದು ಸುಖಬೋಧಸಾಗರ ಎನಿಸಿದೆ.

ಶ್ರೀಮತಿ ವಿಜಯಾ ಭೀಮಣ್ಣ ಬಾಡಿಗಾರ್ಡ್ ಇವರಿಗೆ ಭಗವಂತನ ಕೃಪೆ ಇರಲಿ

ಉತ್ತರಪ್ರದೇಶದ ಪ್ರಯಾಗಕ್ಷೇತ್ರ (ಅಲಹಾಬಾದ್) ಜನ್ಮಸ್ಥಳವಾದರೂ ಶ್ರೀಮತಿ ವಿಜಯಾ ಅವರಲ್ಲಿದ್ದ ಮಾಧ್ವದೀಕ್ಷೆ ಎಂಥವರಿಗೂ ಆದರ್ಶವಾಗಿತ್ತು. ಪ್ರತಿಯೊಬ್ಬರಲ್ಲೂ ತಾಯಿ ಮಗುವಿನಲ್ಲಿ ವಾತ್ಸಲ್ಯ ತೋರುವಂತೆ ವ್ಯವಹರಿಸುತ್ತಿದ್ದರು. ಉತ್ತಮ ಕವಿತಾಶಕ್ತಿ, ವಾಗ್ಮಿತ್ವ, ತ್ಯಾಗ, ಉದಾರಭಾವನೆ, ಕರ್ತವ್ಯ ಪರಿಪಾಲನೆ, ಸಿದ್ಧಾಂತ ದೀಕ್ಷೆ ಈ ಎಲ್ಲ ಗುಣಗಳು ಹೇರಳವಾಗಿದ್ದವು. ವಿಶೇಷವಾಗಿ ಹರಿಕಥಾಮೃತಸಾರದ ಬಗ್ಗೆ ಎಲ್ಲಿಲ್ಲದ ಆಸಕ್ತಿಯಿತ್ತು. ಹರಿಕಥಾಮೃತಸಾರ ಗ್ರಂಥವನ್ನು ಹಿಂದಿಪದ್ಯಗಳ ರೂಪದಲ್ಲಿ ರಚನೆ ಮಾಡುತ್ತಿದ್ದರು. ಹಿಂದಿ ರಾಜ್ಯಗಳಲ್ಲಿ ಹರಿಕಥಾಮೃತಸಾರವನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕೆಂಬ ಹೆಬ್ಬಯಕೆ ಇವರದ್ದಾಗಿತ್ತು. ಮತ್ತೊಬ್ಬರಿಗೆ ಹರಿಕಥಾಮೃತಸಾರ ಪಾಠವನ್ನು ಹೇಳುತ್ತಾ, ಉತ್ತಮರಿಂದ ಹರಿಕಥಾಮೃತಸಾರ ಪಾಠ ಕೇಳುತ್ತಾ ಜೀವನವನ್ನು ಹರಿಕಥಾಮೃತಸಾರಕ್ಕಾಗಿಯೇ ಮುಡುಪಾಗಿಟ್ಟಿದ್ದರು. ಯುವಜನಾಂಗ ಮೊಬೈಲ್ ಕೈಯಲಿಲ್ಲದೆ ಹೇಗೆ ಇರುವುದಿಲ್ಲವೋ, ಅದರಂತೆ ಇವರು ಹರಿಕಥಾಮೃತಸಾರ ಪುಸ್ತಕವನ್ನು ಕೈಯಲ್ಲಿ ಹಿಡಿಯದೇ ಇರುತ್ತಿರಲಿಲ್ಲ. ಯಾವಾಗಲೂ ಹರಿಕಥಾಮೃತಸಾರ ಪುಸ್ತಕ ಇವರ ಕೈಯಲ್ಲಿ ಇದ್ದೇ ಇರುತ್ತಿತ್ತು.

ಒಂದುದಿನ ಪುಷ್ಕರ ಕ್ಷೇತ್ರದಲ್ಲಿ ಇದ್ದಕ್ಕಿದ್ದಂತೆ ಹರಿಕಥಾಮೃತಸಾರವನ್ನು ಪಾರಾಯಣ ಮಾಡುತ್ತಾ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಗಂಡಂದಿರಾದ ಭೀಮಣ್ಣ ಅವರ ಹೆಗಲಿನ ಮೇಲೆ ತಲೆಯಿಟ್ಟು ಹರಿಪಾದವನ್ನೈದಿದರು. ಇದರ ಹಿಂದಿನ ದಿನ ಶ್ರೀಪುಷ್ಕರ ಕ್ಷೇತ್ರದಲ್ಲಿ, ಬ್ರಹ್ಮದೇವರ ಸನ್ನಿಧಾನದಲ್ಲಿ ಸಮಗ್ರ ಶ್ರೀಹರಿಕಥಾಮೃತಸಾರ ಪಾರಾಯಣವನ್ನು ಮಾಡಿ, ಪತ್ಯಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ, ಶ್ರೀಬ್ರಹ್ಮದೇವರ ಅಂತರ್ಗತ, ಪಂಚರೂಪಾಭಿನ್ನ ತಮ್ಮ ಕುಲಸ್ವಾಮಿ ಶ್ರೀಭೂದುರ್ಗಾಸಮೇತ ಶ್ರೀಲಕ್ಷ್ಮೀವೆಂಕಟೇಶ್ವರಸ್ವಾಮಿಗೆ ಸಮರ್ಪಣೆ ಮಾಡಿ, ದೇವಸ್ಥಾನದ ಆವರಣದಲ್ಲೇ ತಮ್ಮ

ಪತಿಯ ಮೂಲಕ ತಮ್ಮ ಕೊನೆಯ ಭಾವಚಿತ್ರವನ್ನು ತೆಗೆಸಿಕೊಂಡಿದ್ದರು. ಅದೇ ಫೋಟೋವನ್ನು ಈ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಹಾಗೂ ಪ್ರತಿನಿತ್ಯ ನೂರು ಜನ ಋಜುಜೀವಿಗಳ ಹೆಸರಿರುವ ಪದ್ಯಗಳನ್ನು ಹೇಳದೇ ಊಟವನ್ನೂ ಕೂಡ ಮಾಡುತ್ತಿರಲಿಲ್ಲ. ಅವರ ತೃಪ್ತಿಗಾಗಿ ಆ ಶ್ಲೋಕಗಳನ್ನೂ ಕೂಡ ಅವರ ಫೋಟೋ ಇರುವ ಮುಂದಿನ ಪುಟಗಳಲ್ಲಿ ಮುದ್ರಿಸಲಾಗಿದೆ.

ಆ ಜೀವನ ಬೆನ್ನುಲುಬಾಗಿ ಲೌಕಿಕ ಕಾರ್ಯ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ಜೊತೆ ಜೊತೆಯಾಗಿ ಇದ್ದ ಪತ್ನಿಯ ಅಗಲಿಕೆಯಿಂದ ಭೀಮಣ್ಣ ಅವರು ಬಹಳಷ್ಟು ನೊಂದಿದ್ದಾರೆ. ಆದರೂ ಆ ಪತ್ನಿಯ ಆತ್ಮಕ್ಕೆ ತೃಪ್ತಿಯಾಗಬೇಕೆಂಬ ಉದ್ದೇಶದಿಂದ ಅವರ ಜೀವಾಳದಂತಿದ್ದ ಹರಿಕಥಾಮೃತಸಾರ ಗ್ರಂಥವನ್ನು ಶುದ್ಧವಾಗಿ ಮುದ್ರಿಸಿ, ಪಾರಾಯಣಕ್ಕೆ ಅನುಕೂಲವಾಗುವಂತೆ ಸಾರಾಂಶಗಳನ್ನು ಬರೆಸಿ, 2000 ಪ್ರತಿಗಳನ್ನು ಪ್ರಕಟಣೆ ಮಾಡಿ, ಜಿಜ್ಞಾಸುಗಳಿಗೆ ಉಚಿತವಾಗಿ ಕೊಡಬೇಕೆಂಬ ಹೆಬ್ಬಯಕೆಯನ್ನು ಹೊಂದಿದ್ದಾರೆ. ಈ ಪುಸ್ತಕವನ್ನು ಉಚಿತವಾಗಿ ತೆಗೆದುಕೊಂಡು ಪಾರಾಯಣ ಮಾಡುವವರ ಪುಣ್ಯ ಭೀಮಣ್ಣ ಅವರ ಧರ್ಮಪತ್ನಿಯಾದ ವಿಜಯಾ ಅವರಿಗೆ ಸಲ್ಲಬೇಕು. ಇದರಿಂದ ಅವರಿಗೆ ಸದ್ಗತಿಯಾಗಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರವಾಗಿ ಜನ್ಮಜನ್ಮಾಂತರದಲ್ಲೂ ವೈಷ್ಣವರಾಗಿ, ಹರಿದಾಸದೀಕ್ಷಿತರಾಗಿ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬುದಷ್ಟೇ ಈ ಕೃತಿ ಪ್ರಕಾಶನದ ಮುಖ್ಯ ಉದ್ದೇಶ.

ಕೃತಜ್ಞತೆಗಳು

ಪರಮಪೂಜ್ಯ ಶ್ರೀಸುವಿದ್ಯೇಂದ್ರತೀರ್ಥಶ್ರೀಪಾದಂಗಳವರು ಈ ಪುಸ್ತಕಕ್ಕೆ ಅನುಗ್ರಹ ಸಂದೇಶವನ್ನು ಬರೆದು ಪರಮಾನುಗ್ರಹವನ್ನು ಮಾಡಿದ್ದಾರೆ. ನನಗೆ ವಿಷ್ಣುತತ್ವವಿನಿರ್ಣಯ, ನ್ಯಾಯಾಮೃತ ಮೊದಲಾದ ಉದ್ಗ್ರಂಥಗಳನ್ನು ಪಾಠ ಮಾಡಿ, ಉತ್ತಮ ವ್ಯಕ್ತಿಯನ್ನಾಗಿ ಮಾಡಿರುತ್ತಾರೆ. ಹಾಗೂ ಇಂದು ನಾನು ಪುಸ್ತಕ ಪ್ರಕಾಶನ ಪ್ರಪಂಚದಲ್ಲಿ ದಾಪುಗಾಲನ್ನಿಡಲು ಪ್ರಥಮ ಪ್ರೇರಕರು ಹಾಗೂ ಉತ್ತೇಜಕರೂ ಅನುಗ್ರಾಹಕರೂ ಇವರೇ ಆಗಿದ್ದಾರೆಂದು ವಿನಮ್ರನಾಗಿ ಹೇಳುತ್ತೇನೆ. ಪರಮಪೂಜ್ಯ ಶ್ರೀಪಾದಂಗಳವರಿಗೆ ನನ್ನ ಅನಂತ ಸಾಷ್ಟಾಂಗ ನಮಸ್ಕಾರಗಳು.

'ವಾದಿರಾಜಕೋಶಕೊಪ್ಪವ ಹರಿಕಥಾಮೃತಸಾರ' ಎಂಬ ಅದ್ಭುತವಾದ ಪುಸ್ತಕವನ್ನು ಪ್ರಕಾಶನ ಮಾಡಿದ ಅಣ್ಣಂದಿರಾದ ಶ್ರೀವಿಜಯೀಂದ್ರಾಚಾರ್ಯರ ಉಪಕಾರವೂ ಕೂಡ

ಈ ಕೃತಿಯ ವಿಷಯದಲ್ಲಿ ಬಹಳಷ್ಟಿದೆ. ಪ್ರತಿಯೊಂದು ಕಾರ್ಯಗಳಲ್ಲೂ ಕೂಡ ಉತ್ತೇಜನ್ನ ನೀಡುವ ಇವರು ಈ ಪುಸ್ತಕದ ಸಂಶೋಧನೆ ಹಾಗೂ ಸಾರಾಂಶಗಳ ನಿರೂಪಣೆ ಪ್ರತಿಯೊಂದರಲ್ಲೂ ಕೂಡ ಸಹಾಯವನ್ನು ಮಾಡಿದ್ದಾರೆ. ಇವರಿಗೂ ಅನಂತ ಕೃತಜ್ಞತೆಗಳು.

ನನ್ನ ಅತ್ತಿಗೆಯಾದ ಶ್ರೀಮತಿ ವಿ. ಸರಯೂ ಇವರು ಹರಿಕಥಾಮೃತಸಾರವನ್ನು ತಮ್ಮ ಉಸಿರನ್ನಾಗಿ ಮಾಡಿಕೊಂಡಿದ್ದಾರೆ. ಆಮೂಲಾಗ್ರವಾಗಿ ಕಂಠಪಾಠ ಮಾಡಿ, ಹಿಂದಿನಿಂದ ಮುಂದೆ, ಮುಂದಿನಿಂದ ಹಿಂದೆ ಅನೇಕ ರಾಗಗಳಲ್ಲಿ ಪಠಿಸುತ್ತಾರೆ. ಹಾಗೂ ಪಲಿಮಾರು ಮಠಾಧೀಶರಾದ ಶ್ರೀವಿದ್ಯಾಧೀಶತೀರ್ಥ- ಶ್ರೀಪಾದಂಗಳವರಲ್ಲಿ ಇನ್ನೂ ಕೆಲವು ಅನೇಕ ಯತಿವರೇಣ್ಯರ ಬಳಿ ಹಲವು ವರ್ಷಗಳ ಹಿಂದೆ ಪರೀಕ್ಷೆಯನ್ನು ನೀಡಿ, ಎಲ್ಲ ವಿದ್ವಾಂಸರ ಅಚ್ಚರಿಗೆ ಪಾತ್ರರಾಗಿದ್ದಾರೆ. ತಮ್ಮ ಪುಟ್ಟ ಹೆಣ್ಣುಮಕ್ಕಳಿಗೆ 8-10 ವರ್ಷದಲ್ಲಿಯೇ ಹರಿಕಥಾಮೃತಸಾರವನ್ನು ಸಂಪೂರ್ಣವಾಗಿ ಮುಖೋದ್ಗತ ಮಾಡಿಸುತ್ತಿದ್ದಾರೆ. ಇವರು ಆಮೂಲಾಗ್ರವಾಗಿ ಈ ಕೃತಿಯ ಸಂಶೋಧನೆ ಹಾಗೂ ಸಾರಭಾಗಗಳ ಲೇಖನ ಇವುಗಳಲ್ಲಿ ತೊಡಗಿಕೊಂಡು ನನಗೆ ಮಹದುಪಕಾರವನ್ನು ಮಾಡಿದ್ದಾರೆ. ಇವರ ಉಪಕಾರಕ್ಕೆ ನಾನು ಚಿರಋಣಿಯಾಗಿದ್ದೇನೆ.

ನನ್ನ ಧರ್ಮಪತ್ನಿಯಾದ ಡಾ|| ಪದ್ಮಾವತಿ ವಿ. ಇವಳೂ ಸಹ ಆಮೂಲಾಗ್ರವಾದ ಕಾರ್ಯದಲ್ಲಿ ಸಂಪೂರ್ಣವಾಗಿ ತನ್ನನ್ನು ತೊಡಗಿಸಿಕೊಂಡು ಉಪಕರಿಸಿದ್ದಾಳೆ. ಇವಳಿಗೂ ಭಗವಂತನು ಪೂರ್ಣವಾಗಿ ಅನುಗ್ರಹಿಸಲಿ.

ಇನ್ನೂ ಅನೇಕ ವಿದ್ವಾಂಸರು, ಚಿಂತಕರು, ಜಿಜ್ಞಾಸುಗಳು ಮಾರ್ಗದರ್ಶನವನ್ನು ಮಾಡಿ, ಅಲ್ಲಲ್ಲಿ ಅನೇಕ ಸಂಶಯಗಳನ್ನು ಪರಿಹರಿಸಿ, ಪಾಠಶೋಧನೆಯ ಬಗ್ಗೆ, ಶೀರ್ಷಿಕೆಯ ಬಗ್ಗೆ ಉಪಕಾರವನ್ನು ಮಾಡಿದ್ದಾರೆ. ಅವರೆಲ್ಲರಿಗೂ ಕೂಡ ಮನಸಾ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಡಿ.ಟಿ.ಪಿ. ಕಾರ್ಯದಲ್ಲಿ ಉಪಕರಿಸಿದ ಎಸ್. ನಾಗಲತಾ ಇವರಿಗೆ ಭಗವಂತನು ಅನುಗ್ರಹವನ್ನು ಮಾಡಲಿ. ಸಮಯಕ್ಕೆ ಸರಿಯಾಗಿ ಶುದ್ಧವಾಗಿ ಮುದ್ರಣವನ್ನು ಮಾಡಿಕೊಟ್ಟ ಪಿ. ಮಂಜುನಾಥ್, ಪವನ್ ಪ್ರಿಂಟರ್ಸ್ ಮಾಲೀಕ, ಇವನಿಗೂ ಕೂಡ ಶ್ರೀಹರಿವಾಯುಗುರುಗಳು ಅನುಗ್ರಹವನ್ನು ಮಾಡಲಿ.

|| ಶ್ರೀಕೃಷ್ಣಾರ್ಪಣಮಸ್ತು ||

ವಿದ್ವಾನ್ ಬೆಮ್ಮತ್ತಿ ವೇಂಕಟೇಶಾಚಾರ್ಯ



ವೇಣಿಮಾಧವ






ಶ್ರೀ ವೇದವ್ಯಾಸದೇವರು ಹಾಗೂ ಶ್ರೀ ಮಧ್ವಾಚಾರ್ಯರು



ನೇದೃಶಂ ಸ್ಥಲಮಲಂ ಶಮಲಗ್ನಂ
ನಾಸ್ಯ ತೀರ್ಥಸಲಿಲಸ್ಯ ಸಮಂ ವಾ ।
ನಾಸ್ತಿ ವಿಷ್ಣುಸದೃಶಂ ನನು ದೈವಂ
ನಾಸ್ಮದುಕ್ತಿಸದೃಶಂ ಹಿತವಾಕ್ಯಂ ॥




ಜಲಜೇಷ್ಠನಿಭಾಕಾರಂ ಜಗದೀಶಪದಾಶ್ರಯಂ ।
ಜಗತೀತಲವಿಖ್ಯಾತಂ ಜಗನ್ನಾಥಗುರುಂ ಭಜೇ

ಶ್ರೀ ಜಗನ್ನಾಥದಾಸರು

ಗ್ರಂಥಕರ್ತೃಗಳು

ಪರಮಪೂಜ್ಯ ಶ್ರೀ ಸುಶಮೀಂದ್ರತೀರ್ಥರು



ವಿಧಿವನ್ ಮೂಲರಾಮಾರ್ಚಾನ್ ಮಂತ್ರಾಧೀಶೇನ ಪೋಷಿತಂ ।
ವಿರೋಧಿಸರ್ವಶಮನಂ ಶ್ರೀ ಸುಶಮೀಂದ್ರಗುರುಂ ಭಜೇ ॥



ಶ್ರೀ ರಾಮಕೃಷ್ಣಪ್ಪ


ಪ್ರೇರಕಶಕ್ತಿ – ಶ್ರೀರಾಮಕೃಷ್ಣಪ್ಪದ್ವೈತವೇದಾಂತಪಾಠಶಾಲಾ



ಶ್ರೀಮತಿ ನರಸಮ್ಮ ಮತ್ತು ಶ್ರೀ ಸೀತಾರಾಮಯ್ಯ

ಪ್ರೇರಕಶಕ್ತಿ – ನರಸಮ್ಮಸೀತಾರಾಮಯ್ಯ ಟ್ರಸ್ಟ್

ಶ್ರೀಮದ್ವೈಷ್ಣವಪದಾಂಭೋಜ ಸಂಸೇವನಸದಾರತಾನ್
ಶ್ರೀಪಿತಾಮಹಪದಂ ವಂದೇ ಸುಧಾಪರಿಮಳಾಸ್ವಾದಿತಾನ್ ।
ಪ್ರಯಾಗಕ್ಷೇತ್ರಜಾತಾಯಾಂ ಪತಿಭಕ್ತಿಪರಾಯಣಾಮ್
ಅನ್ನಪೂರ್ಣಪತಿಪ್ರಿಯಾಸಕ್ತಾಮ್ ಅನಸೂಯಾಮಾತರಂ ಭಜೇ ॥




ಶ್ರೀಮತಿ ಅನಸೂಯಾಬಾಯಿ ಹಾಗೂ
ಶ್ರೀ ಪ್ರಾಣೇಶರಾವ್ ಬಾಡಿಗಾರ್ಡ್



ಈ ಕೃತಿಯ ಪ್ರಕಾಶಕರಾದ ಶ್ರೀ ಭೀಮಣ್ಣ ಬಾಡಿಗಾರ್ಡ್ ಇವರು
ತಮ್ಮ ಧರ್ಮಪತ್ನಿಯಾದ ಶ್ರೀಮತಿ ವಿಜಯಾ ಅವರ ಜೊತೆ

ವೇಣೀಮಾಧವಪದಾಸಕ್ತಾಮ್ ಸತೀಮ್ ಶ್ರುತಿಪಥಾಶ್ರಿತಾಂ ।
ವಿದ್ಯಾದಾನೇಽಗ್ರೇಸರಾಂ ಮೇ ಮಾತೃದೇವೀಮ್ ಸದಾಶ್ರಯೇ ॥



ಶ್ರೀಮತಿ ವಿಜಯಾ ಅವರು ಪುಷ್ಕರತೀರ್ಥದ
ಪುಷ್ಕರ ದೇವಾಲಯದಲ್ಲಿ "ನನಗೆ ವೈಷ್ಣವ ಜನ್ಮ ನೀಡಿದ
ಶ್ರೀಹರಿವಾಯುಗುರುಗಳಿಗೆ ನನ್ನ ಭಕ್ತಿಯ ನಮನ.
ಎಲ್ಲಾ ವೈಷ್ಣವರಿಗೂ ನನ್ನ ನಮನ. ನಾನು ಹರಿಪಾದವನ್ನು
ಹೊಂದುವೆನು" ಎಂಬ ಖುಷಿ ಉಲ್ಲಾಸಗಳಿಂದ
ತಮ್ಮ ಪತಿಯ ಬಳಿ ತೆಗೆಸಿಕೊಂಡ ಕೊನೆಯ ಫೋಟೋ.

|| ಶ್ರೀ ಗುರುಭ್ಯೋ ನಮಃ ||

ಶ್ರೀಜಗನ್ನಾಥದಾಸರಾಯರಿಂದ ವಿರಚಿತ

ಶ್ರೀ ಹರಿಕಥಾಮೃತಸಾರ

ಮಂಗಳಾಚರಣಸಂಧಿ-1

ಹರಿಭಕುತರೇ ! ಆಲಿಸಿರಿ ಹರಿಕಥಾಮೃತವ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ನರಸಿಂಹದೇವರೇ! ನೀಡಿರಿ ಎಲ್ಲಾ ಬಗೆಯ ಮಂಗಳವ

ಶ್ರೀರಮಣಿ ಕರಕಮಲಪೂಜಿತ
ಚಾರುಚರಣ ಸರೋಜ ಬ್ರಹ್ಮಸ-
ಮೀರ ವಾಣಿ ಫಣೀಂದ್ರ ವೀಂದ್ರ ಭವೇಂದ್ರ ಮುಖ ವಿನುತ ॥
ನೀರಜಭವಾಂಡೋದಯಸ್ಥಿತಿ
ಕಾರಣನೇ ಕೈವಲ್ಯದಾಯಕ
ನಾರಸಿಂಹನೇ ನಮಿಪೆ ಕರುಣಿಪುದೆಮಗೆ ಮಂಗಳವ ॥1॥

ಹರಿಚಿಂತನೆಯಿಂದ ಹಿಗ್ಗಿದ ಮಹಾಲಕುಮಿಯೇ!
ಸಲಹು ಎನ್ನನು

ಜಗದುದರನತಿವಿಮಲ ಗುಣರೂ-
ಪಗಳನಾಲೋಚನದಿ ಭಾರತ
ನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ ॥
ಬಗೆ ಬಗೆಯ ನೂತನವ ಕಾಣುತ
ಮಿಗೆ ಹರುಷದಿಂ ಪೊಗಳಿ ಹಿಗ್ಗುವ
ತ್ರಿಗುಣಮಾನಿ ಮಹಾಲಕುಮಿ ಸಂತೈಸಲನುದಿನವು ॥2॥

ಪಿತಾಮಹಬ್ರಹ್ಮದೇವರೇ ! ದಯಪಾಲಿಸಿರಿ ಸದ್ಬುದ್ಧಿಯ

ನಿರುಪಮಾನಂದಾತ್ಮಭವ ನಿ-
ರ್ಜರಸಭಾಸಂಸೇವ್ಯ ಋಜುಗಣ
ದರಸೆ ಸತ್ವಪ್ರಚುರ ವಾಣೀಮುಖಸರೋಜೇನ ॥
ಗರುಡಶೇಷಶಶಾಂಕದಳಶೇಖ-
ರರ ಜನಕ ಜಗದ್ಗುರುವೇ ತ್ವ-
ಚ್ಚರಣಗಳಿಗಭಿವಂದಿಸುವೆ ಪಾಲಿಪುದು ಸನ್ಮತಿಯ ॥3॥

21600 ಹಂಸ ಮಂತ್ರ ಜಪ ಮಾಡುವ ಗುರು ಪವಮಾನರೇ ! ಸಲಹಿರಿ ಎನ್ನನು

ಆರು ಮೂರೆರಡೊಂದು ಸಾವಿರ
ಮೂರೆರಡು ಶತಶ್ವಾಸಜಪಗಳ
ಮೂರು ವಿಧ ಜೀವರೊಳಗಬ್ಜಜಕಲ್ಪ ಪರಿಯಂತ ॥
ತಾ ರಚಿಸಿ ಸಾತ್ವರಿಗೆ ಸುಖ ಸಂ-
ಸಾರ ಮಿಶ್ರರಿಗಧಮಜನರಿಗ-
ಪಾರ ದುಃಖಗಳೀವ ಗುರು ಪವಮಾನ ಸಲಹೆಮ್ಮ ॥4॥

ವೇದಾಭಿಮಾನಿನೀ ಸರಸ್ವತಿದೇವಿಯರೇ! ನೆಲೆಸಿರಿ ನಾಲಿಗೆಯಲಿ

ಚತುರವದನನ ರಾಣಿ ಅತಿರೋ-
ಹಿತ ವಿಮಲ ವಿಜ್ಞಾನಿ ನಿಗಮ
ಪ್ರತತಿಗಳಿಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ ॥
ನತಿಸಿ ಬೇಡುವೆ ಜನನಿ ಲಕುಮೀ
ಪತಿಯ ಗುಣಗಳ ತುತಿಪುದಕೆ ಸ-
ನ್ಮತಿಯ ಪಾಲಿಸಿ ನೆಲೆಸು ನೀ ಮದ್ವದನಸದನದಲಿ ॥5॥

ಭಾರತಿದೇವಿಯರೇ ! ಎನಗಿರಲಿ ಹರಿವಾಯುಗುರುಗಳಲಿ ಎಡಬಿಡದ ಭಕುತಿ

ಕೃತಿರಮಣ ಪ್ರದ್ಯುಮ್ನನಂದನೇ
ಚತುರವಿಂಶತಿ ತತ್ವಪತಿ ದೇವ-
ವತೆಗಳಿಗೆ ಗುರುವೆನಿಸುತಿಹ ಮಾರುತನ ನಿಜಪತ್ನಿ ॥
ಸತತ ಹರಿಯಲಿ ಗುರುಗಳಲಿ ಸ-
ದ್ರತಿಯ ಪಾಲಿಸಿ ಭಾಗವತ ಭಾ-
ರತ ಪುರಾಣ ರಹಸ್ಯ ತತ್ವಗಳರುವು ಕರುಣದಲಿ ॥6॥

ವೇದಪೀಠಶ್ರೀವೇದವ್ಯಾಸರೇ!
ಸುಜ್ಞಾನದಿಂದ ಪಾಲಿಸಿರಿ ಎನ್ನ

ವೇದಪೀಠ ವಿರಿಂಚಿ ಭವ ಶ-
ಕ್ರಾದಿ ಸುರವಿಜ್ಞಾನದಾಯಕ
ಮೋದಚಿನ್ಮಯಗಾತ್ರ ಲೋಕಪವಿತ್ರ ಸುಚರಿತ್ರ ॥
ಛೇದಭೇದವಿಷಾದಕುಟಿಲಾಂ-
ತಾದಿಮಧ್ಯವಿದೂರ ಆದಾ-
ನಾದಿಕಾರಣ ಬಾದರಾಯಣ ಪಾಹಿ ಸತ್ರಾಣ ॥7॥

ಚತುರ್ದಶ ಲೋಕಗುರುಗಳಾದ ಶ್ರೀಮಧ್ವಾಚಾರ್ಯರೇ!
ಎಂದೆಂದೂ ನಿಮಗೆ ನಮನ

ಕ್ಷಿತಿಯೊಳಗೆ ಮಣಿಮಂತ ಮೊದಲಾ-
ದತಿ ದುರಾತ್ಮರು ಒಂದಧಿಕವಿಂ-
ಶತಿ ಕುಭಾಷ್ಯವ ರಚಿಸಿ ನಡುಮನೆಯೆಂಬ ಬ್ರಾಹ್ಮಣನ ॥
ಸತಿಯ ಜಠರದೊಳವತರಿಸಿ ಭಾ-
ರತೀರಮಣ ಮಧ್ವಾಭಿಧಾನದಿ
ಚತುರದಶಲೋಕದಲಿ ಮೆರೆದಪ್ರತಿಮಗೊಂದಿಸುವೆ ॥8॥

ವಿಷ್ಣುಸರ್ವೋತ್ತಮತ್ವ ಸ್ಥಾಪಿಸಿದ ಆನಂದತೀರ್ಥರ ಉಪಕಾರ ಎಂದೂ ಮರೆಯೆ

ಪಂಚಭೇದಾತ್ಮಕ ಪ್ರಪಂಚಕೆ
ಪಂಚರೂಪಾತ್ಮಕನೆ ದೈವಕ
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ ॥
ಪಂಚವಿಂಶತಿ ತತ್ವ ತರತಮ
ಪಂಚಿಕೆಗಳನು ಪೇಳ್ದ ಭಾವಿವಿ-
ರಿಂಚಿಯೆನಿಪಾನಂದತೀರ್ಥರ ನೆನೆವೆನನುದಿನವು ॥9॥

ಕೈಲಾಸವಾಸಿ ಮಹಾರುದ್ರದೇವರೇ ! ಕರುಣಿಸು ಸುಂಮಗಳವ

ವಾಮದೇವ ವಿರಿಂಚಿತನಯ ಉ-
ಮಾಮನೋಹರ ಉಗ್ರಧೂರ್ಜಟಿ
ಸಾಮಜಾಜಿನವಸನಭೂಷಣ ಸುಮನಸೋತ್ತಂಸ ॥
ಕಾಮಹರ ಕೈಲಾಸಮಂದಿರ ।
ಸೋಮ ಸೂರ್ಯಾನಲ ವಿಲೋಚನ
ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಳವ ॥10॥

ಶೇಷಪದವಿಗಾಗಿ ಸಾಧನೆ ಅದೆಷ್ಟು ಅದ್ಭುತ!

ಕೃತ್ತಿವಾಸನೆ ಹಿಂದೆ ನೀ ನಾ-
ಲ್ವತ್ತುಕಲ್ಪ ಸಮೀರನಲಿ ಶ್ರೀ-
ಷ್ಟತ್ವ ವಹಿಸ್ಯಖಿಳಾಗಮಾರ್ಥಗಳೋದಿ ಜಲಧಿಯೊಳು ॥
ಹತ್ತು ಕಲ್ಪದಿ ತಪವಗೈದಾ-
ದಿತ್ಯರೊಳಗುತ್ತಮನೆನಿಸಿ ಪುರು-
ಷೋತ್ತಮನ ಪರಿಯಂಕಪದವೈದಿದೆಯೊ ಮಹದೇವ ॥11॥

ದೇವ, ಋಷಿ, ಪಿತೃ, ಗಂಧರ್ವ, ಯತಿವರ್ಗಕೆ ಅನವರತ ನಮನ

ಪಾಕಶಾಸನ ಮುಖ್ಯ ಸಕಲ ದಿ-
ವೌಕಸರಿಗಭಿನಮಿಪೆ ಋಷಿಗಳಿ-
ಗೇಕಚಿತ್ತದಿ ಪಿತೃಗಳಿಗೆ ಗಂಧರ್ವಕ್ಷಿತಿಪರಿಗೆ ॥
ಆಕಮಲನಾಭಾದಿ ಯತಿಗಳಾ
ನೀಕಕಾನಮಿಸುವೆನು ಬಿಡದೆ ರ-
ಮಾಕಳತ್ರನ ದಾಸವರ್ಗಕೆ ನಮಿಪೆನನವರತ ॥12॥

ಪರಮ ಭಾಗವತರನು ಎಂದೆಂದು ಕೊಂಡಾಡಿರಿ

ಪರಿಮಳವು ಸುಮನದೊಳಗನಲನು
ಅರಣಿಯೊಳಗಿಪ್ಪಂತೆ ದಾಮೋ-
ದರನು ಬ್ರಹ್ಮಾದಿಗಳ ಮನದಲಿ ತೋರಿತೋರದಲೆ ॥
ಇರುತಿಹ ಜಗನ್ನಾಥವಿಟ್ಠಲನ
ಕರುಣ ಪಡೆದ ಮುಮುಕ್ಷುಜೀವರು
ಪರಮಭಾಗವತರನು ಕೊಂಡಾಡುವುದು ಪ್ರತಿದಿನವು
॥13॥

॥ ಇಲ್ಲಿಗೆ ಮೊದಲನೆಯ ಮಂಗಳಾಚರಣಸಂಧಿ ಮುಗಿಯಿತು॥

ಕರುಣಾಸಂಧಿ-2

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಹರಿಕಥಾ ಶ್ರವಣ ಅದೆಷ್ಟು ಸುಖಕರ !

ಶ್ರವಣ ಮನಕಾನಂದವೀವುದು
ಭವಜನಿತದುಃಖಗಳ ಕಳೆವುದು
ವಿವಿಧಭೋಗಗಳಿಹಪರಂಗಳಲಿತ್ತು ಸಲಹುವುದು
ಭುವನಪಾವನನೆನಿಪ ಲಕುಮೀ
ಧವನ ಮಂಗಳಕಥೆಯ ಪರಮೋ
ತ್ಸವದಿ ಕಿವಿಗೊಟ್ಟಾಲಿಪುದು ಭೂಸುರರು ದಿನದಿನದಿ ||1||

ಹರಿಕಥೆಗೆ ಭಾಷೆ ಅಡ್ಡಿ ಆಗದು

ಮಳೆಯ ನೀರೋಣಿಯಲಿ ಪರಿಯಲು
ಬಳಸರೂರೊಳಗಿದ್ದ ಜನರಾ
ಜಲವು ಹೆದ್ದೊರೆಗೂಡೆ ಮಜ್ಜನಪಾನ ಗೈದಪರು ॥
ಕಲುಷವಚನಗಳಾದರೆಯು ಬಾಂ -
ಬೊಳೆಯ ಪೆತ್ತನ ಪಾದಮಹಿಮಾ
ಜಲಧಿ ಪೊಕ್ಕುದರಿಂದ ಮಾಣ್ದಪರೇ ಮಹೀಸುರರು ॥2॥

ಭಕ್ತರ ಅಲ್ಪ ಸ್ತೋತ್ರಕ್ಕೆ ವಶನಾಗುವ ಕರುಣಾಳು

ಶ್ರುತಿತತಿಗಳಭಿಮಾನಿ ಲಕುಮೀ
ಸ್ತುತಿಗಳಿಗೆ ಗೋಚರಿಸದಪ್ರತಿ-
ಹತ ಮಹೈಶ್ವರ್ಯಾದ್ಯಖಿಳ ಸದ್ಗುಣಗಣಾಂಬೋಧಿ ॥
ಪ್ರತಿದಿವಸ ತನ್ನಂಘ್ರಿಸೇವಾ-
ರತಮಹಾತ್ಮರು ಮಾಡುತಿಹ ಸಂ-
ಸ್ತುತಿಗೆ ವಶನಾಗುವನಿವನ ಕಾರುಣ್ಯಕೇನೆಂಬೆ ॥3॥

ಭಕುತರ ಮನೆ-ಮನೆಗಳಿಗೆ ತಿರುಗುವ ಕರುಣಾಳು

ಮನವಚನಕತಿದೂರ ನೆನೆವರ-
ನನುಸರಿಸಿ ತಿರುಗುವನು ಜಾಹ್ನವೀ
ಜನಕ ಜನರೊಳಗಿದ್ದು ಜನಿಸುವ ಜಗದುದರ ತಾನು ॥
ಘನಮಹಿಮ ಗಾಂಗೇಯನುತ ಗಾ-
ಯನವ ಕೇಳುತ ಗಗನಚರವಾ-
ಹನ ದಿವೌಕಸರೊಡನೆ ತಿರುಗುವ ಮನೆಮನೆಗಳಲ್ಲಿ ॥4॥

ಅತಿಸುಲಭನನು ಚಿಂತಿಸದೆ ಏಕೆ ಬಳಲುವಿರಿ ?

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ ಕುಳಿತು ಪಾಡಲು
ನಿಲುವ ನಿಂತರೆ ನಲಿವ ನಲಿದರೆ ಒಲಿವೆ ನಿಮಗೆಂಬ ॥
ಸುಲಭನೋ ಹರಿ ತನ್ನವರನರ
ಘಳಿಗೆ ಬಿಟ್ಟಗಲನು ರಮಾಧವ
ನೊಲಿಸಲರಿಯದೆ ಪಾಮರರು
ಬಳಲುವರು ಭವದೊಳಗೆ ॥5॥

ಮನವ ನೀಡಿದರೆ ತನ್ನನ್ನೇ ನೀಡುವ

ಮನದೊಳಗೆ ತಾನಿದ್ದು ಮನವೆಂ
ದೆನಿಸಿಕೊಂಬನು ಮನದ ವೃತ್ತಿಗ-
ಳನುಸರಿಸಿ ಭೋಗಗಳನೀವನು ತ್ರಿವಿಧಚೇತನಕೆ ॥
ಮನವನಿತ್ತರೆ ತನ್ನನೀವನು
ತನುವ ದಂಡಿಸಿ ದಿನದಿನದಿ ಸಾ-
ಧನವ ಮಾಳ್ಪರಿಗಿತ್ತಪನು ಸ್ವರ್ಗಾದಿಭೋಗಗಳ ॥6॥

ಎನಗೆ ಬೇರೇನೂ ಬೇಡ ನೀನೊಬ್ಬ ಸಾಕು

ಪರಮಸತ್ಪುರುಷಾರ್ಥರೂಪನು
ಹರಿಯು ಲೋಕಕೆ ಎಂದು ಪರಮಾ-
ದರದಿ ಸದುಪಾಸನೆಯ ಗೈವರಿಗಿತ್ತಪನು ತನ್ನ ॥
ಮರೆದು ಧರ್ಮಾರ್ಥಗಳ ಕಾಮಿಸು
ವರಿಗೆ ನಗುತತಿ ಶೀಘ್ರದಿಂದಲಿ
ಸುರಪತನಯ ಸುಯೋಧನರಿಗಿತ್ತಂತೆ ಕೊಡುತಿಪ್ಪ ॥7॥

ಅಖಿಳಾಂಡಕೋಟಿಬ್ರಹ್ಮಾಂಡನಾಯಕನಿಗೆ ಭಕುತರ ಬಗ್ಗೆ ಒಲವು

ಜಗವನೆಲ್ಲವ ನಿರ್ಮಿಸುವ ನಾ-
ಲ್ಮೊಗನೊಳಗೆ ತಾನಿದ್ದು ಸಲಹುವ
ಗಗನಕೇಶನೊಳಿದ್ದು ಸಂಹರಿಸುವನು ಲೋಕಗಳ ॥
ಸ್ವಗತಭೇದವಿವರ್ಜಿತನು ಸ-
ರ್ವಗ ಸದಾನಂದೈಕದೇಹನು
ಬಗೆಬಗೆಯ ನಾಮದಲಿ ಕರೆಸುತ ಭಕುತರನು ಪೊರೆವ
॥8॥

ಎಲ್ಲಾ ಅಧಿಷ್ಠಾನಗಳಲ್ಲಿ ಕರುಣಾಳುವಿನ ವ್ಯಾಪಾರ

ಒಬ್ಬನಲಿ ನಿಂತಾಡುವನು ಮ-
ತ್ತೊಬ್ಬನಲಿ ನೋಡುವನು ಬೇಡುವ
ನೊಬ್ಬನಲಿ ನೀಡುವನು ಮಾತಾಡುವನು ಬೆರಗಾಗಿ ॥
ಅಬ್ಬರದ ಹೆದ್ದೈವನಿವ ಮ-
ತ್ತೊಬ್ಬರನು ಲೆಕ್ಕಿಸನು ಲೋಕದೊ-
ಳೊಬ್ಬನೇ ತಾ ಬಾಧ್ಯಬಾಧಕನಾದ ನಿರ್ಭೀತ ॥9॥

ಶರಣಾಗತರಿಗೆ ಶಾಶ್ವತ ಕಲ್ಪವೃಕ್ಷ

ಶರಣಜನಮಂದಾರ ಶಾಶ್ವತ
ಕರುಣಿ ಕಮಲಾಕಾಂತ ಕಾಮದ
ಪರಮ ಪಾವನತರ ಸುಮಂಗಳಚರಿತ ಪಾರ್ಥಸಖ ॥
ನಿರುಪಮಾನಂದಾತ್ಮ ನಿರ್ಗತ
ದುರಿತ ದೇವವರೇಣ್ಯನೆಂದಾ-
ದರದಿ ಕರೆಯಲು ಬಂದೊದಗುವನು ತನ್ನವರ ಬಳಿಗೆ
॥10॥

ತಾಯಿಯಂತೆ ಭಕುತರಿದ್ದಲ್ಲೇ ಬಂದು ಸಲಹುವ ಶ್ರೀಹರಿ

ಜನನಿಯನು ಕಾಣದಿಹ ಬಾಲಕ
ನೆನೆನೆನೆದು ಹಲಬುತಿರೆ ಕತ್ತಲೆ
ಮನೆಯೊಳಡಗಿದ್ದವನ ನೋಡುತ ನಗುತ ಹರುಷದಲಿ ॥
ತನಯನಂ ಬಿಗಿದಪ್ಪಿ ರಂಬಿಸಿ
ಕನಲಿಕೆಯ ಕಳೆವಂತೆ ಮಧುಸೂ-
ದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನು ॥11॥

ಭಕುತನ ಕೂಗಿಗೆ ಎಲ್ಲವನ್ನೂ ಮರೆತು ಓಡಿಬರುವ

ಇಟ್ಟಿಕಲ್ಲನು ಭಕುತಿಯಿಂದಲಿ
ಕೊಟ್ಟ ಭಕುತಗೆ ಮೆಚ್ಚಿ ತನ್ನನೆ
ಕೊಟ್ಟ ಬಡಬ್ರಾಹ್ಮಣನ ಒಪ್ಪಿಡಿಯವಲಿಗಖಿಳಾರ್ಥ ॥
ಕೆಟ್ಟ ಮಾತುಗಳೆಂದನದೆ ಚೈದ್ಯನ
ಪೊಟ್ಟೆಯೊಳಗಿಂಬಿಟ್ಟ ಬಾಣದ-
ಲಿಟ್ಟ ಭೀಷ್ಮನವಗುಣಗಳೆಣಿಸಿದನೇನೊ ಕರುಣಾಳು ॥12॥

ಪ್ರತಿಫಲದ ಅಪೇಕ್ಷೆ ಇಲ್ಲದೆ ಕಾಯುವ ಕರುಣಾಳು

ಧವನ ಸಂರಕ್ಷಿಸುವ ಫಣಿ ತಾ-
ನುಣದೆ ಮತ್ತೊಬ್ಬರಿಗೆ ಕೊಡುದನು -
ದಿನದಿ ನೋಡುತ ಸುಖಿಸುವಂದದಿ ಲಕುಮಿವಲ್ಲಭನು ॥
ಪ್ರಣತರನು ಕಾಯ್ದಿಹನು ನಿಷ್ಕಾ-
ಮನದಿ ನಿತ್ಯಾನಂದಮಯ ದು-
ರ್ಜನರ ಸೇವೆಯನೊಲ್ಲನಪ್ರತಿಮಲ್ಲ ಜಗಕೆಲ್ಲ ॥13॥

ಭಕುತರ ತೊದಲ್ನುಡಿಗೂ ಹಿಗ್ಗುವ ಹೆದ್ದೈವ

ಬಾಲಕನ ಕಲಭಾಷೆ ಜನನಿಯು
ಕೇಳಿ ಸುಖಪಡುವಂತೆ ಲಕುಮೀ-
ಲೋಲ ಭಕುತರು ಮಾಡುತಿಹ ಸಂಸ್ತುತಿಗೆ ಹಿಗ್ಗುವನು ॥
ತಾಳ ತನ್ನವರಲ್ಲಿ ಮಾಡುವ
ಹೇಳನವ ಹೆದ್ದೈವ ವಿದುರನ
ಆಲಯದಿ ಪಾಲುಂಡು ಕುರುಪನ ಮಾನವನೆ ಕೊಂಡ
॥14॥

ಸ್ಮರಿಸುವವರ ಅಪರಾಧ ಲೆಕ್ಕಿಸದ ಕರುಣಾಳು

ಸ್ಮರಿಸುವವರಪರಾಧಗಳ ತಾ-
ಸ್ಮರಿಸ ಸಕಲೇಷ್ಟಪ್ರದಾಯಕ
ಮರಳಿ ತನಗರ್ಪಿಸಲು ಕೊಟ್ಟುದನಂತಮಡಿ ಮಾಡಿ ॥
ಪರಿಪರಿಯಲಿಂದುಣಿಸಿ ಸುಖಸಾ-
ಗರದಿಲೋಲಾಡಿಸುವ ಮಂಗಳ-
ಚರಿತ ಚಿನ್ಮಯಗಾತ್ರ ಲೋಕಪವಿತ್ರ ಸುಚರಿತ್ರ ॥15॥

ಅನಂತಸುಖವೀವ ಕರುಣಾಳು

ಏನು ಕರುಣಾನಿಧಿಯೋ ಹರಿ ಮ-
ತ್ತೇನು ಭಕ್ತಾಧೀನನೋ ಇ-
ನ್ನೇನು ಈತನ ಲೀಲೆ ಇಚ್ಛಾಮಾತ್ರದಲಿ ಜಗವ ॥
ತಾನೆ ಸೃಜಿಸುವ ಪಾಲಿಸುವ ನಿ-
ರ್ವಾಣ ಮೊದಲಾದಖಿಳ ಲೋಕ
ಸ್ಥಾನದಲಿ ಮತ್ತವರನಿಟ್ಟಾನಂದಪಡಿಸುವನು ॥16॥

'ನೀನೇ ಬೇಕು' ಎನ್ನುವವನ ವಶನಾಗುವ ರಾಜಾಧಿರಾಜ

ಜನಪ ಮೆಚ್ಚಿದರೀವ ಧನ ವಾ-
ಹನ ವಿಭೂಷಣ ವಸನ ಭೂಮಿಯ
ತನುಮನಗಳಿತ್ತಾದರಿಪರುಂಟೇನೊ ಲೋಕದೊಳು ॥
ಅನವರತ ನೆನೆವವರನಂತಾ-
ಸನವೆ ಮೊದಲಾದಾಲಯದೊಳಿ-
ಟ್ಟಣುಗನಂದದಲವರ ವಶನಾಗುವ ಮಹಾಮಹಿಮ॥17॥

ಭುವನಪಾವನ ಚರಿತನ ಗೆಲ್ಲುವವನಾರು ?

ಭುವನಪಾವನಚರಿತ ಪುಣ್ಯ
ಶ್ರವಣಕೀರ್ತನ ಪಾಪನಾಶನ
ಕವಿಭಿರೀಡಿತ ಕೈರವದಳಶ್ಯಾಮನಿಸ್ಸೀಮ ॥
ಯುವತಿವೇಷದಿ ಹಿಂದೆ ಗೌರೀ-
ಧವನ ಮೋಹಿಸಿ ಕೆಡಿಸಿ ಉಳಿಸಿದ
ಇವನ ಮಾಯವ ಗೆಲುವನಾವನು ಈ ಜಗತ್ರಯದಿ
॥18॥

ಅಸುರಾವೇಶದಿಂದ ಮಾಡಿದ ಮಹಾಪರಾಧಗಳ ಎಣಿಸಲಾರ

ಪಾಪಕರ್ಮವ ಸಹಿಸುವರೆ ಲ-
ಕ್ಷ್ಮೀಪತಿಗೆ ಸಮರಾದ ದಿವಿಜರ
ನೀ ಪಯೋಜಭವಾಂಡದೊಳಗಾವಲ್ಲಿ ನಾ ಕಾಣೆ ॥
ಗೋಪ ಗುರುವಿನ ಮಡದಿ ಭೃಗು ನಗ
ಚಾಪ ಮೊದಲಾದವರು ಮಾಡ್ದ ಮ-
ಹಾಪರಾಧಗಳೆಣಿಸಿದನೆ ಕರುಣಾಸಮುದ್ರ ಹರಿ ॥19॥

ಹರಿನಾಮಗಂಗೆಯಲ್ಲಿ ಮೀಯಿರಿ

ಅಂಗುಟಾಗ್ರದಿ ಜನಿಸಿದಮರತ-
ರಂಗಿಣಿಯು ಲೋಕತ್ರಯಗಳಘ-
ಹಿಂಗಿಸುವಳವ್ಯಾಕೃತಾಕಾಶಾಂತ ವ್ಯಾಪಿಸಿದ ॥
ಇಂಗಡಲ ಮಗಳೊಡೆಯನಂಗೋ-
ಪಾಂಗಗಳಲಿಪ್ಪಮಲನಂತ ಸು-
ಮಂಗಳಪ್ರದನಾಮ ಪಾವನಮಾಳ್ಪದೇನರಿದು ॥20॥

ಕಾಮಧೇನು ಕಲ್ಪತರು ಚಿಂತಾಮಣಿಗಳಲ್ಲೂ ಊಹಿಸಲಾಗದ ಧಾರಾಳತನ

ಕಾಮಧೇನು ಸುಕಲ್ಪತರು ಚಿಂ-
ತಾಮಣಿಗಳಮರೇಂದ್ರಲೋಕದಿ
ಕಾಮಿತಾರ್ಥಗಳೀವುವಲ್ಲವೆ ಸೇವೆ ಮಾಳ್ಪರಿಗೆ ॥
ಶ್ರೀಮುಕುಂದನ ಪರಮಮಂಗಳ
ನಾಮ ನರಕಸ್ಥರನು ಸಲಹಿತು
ಪಾಮರರ ಪಂಡಿತರೆನಿಸಿ ಪುರುಷಾರ್ಥ ಕೊಡುತಿಹುದು
॥21॥

ಕಾಲ್ಪನಿಕಪದಾರ್ಥ ಸ್ವೀಕರಿಸಿ ಅಪ್ರಾಕೃತಪದಾರ್ಥ ನೀಡುವ ದಯಸಾಗರ

ಮನದೊಳಗೆ ಸುಂದರಪದಾರ್ಥವ
ನೆನೆದು ಕೊಡೆ ಕೈಕೊಂಡು ಬಲುನೂ-
ತನ ಸುಶೋಭಿತಗಂಧಸುರಸೋಪೇತ ಫಲರಾಶಿ ॥
ದ್ಯುನದಿನಿವಹಗಳಂತೆ ಕೊಟ್ಟವ-
ರನು ಸದಾ ಸಂತೈಸುವನು ಸ-
ದ್ಗುಣವ ಕದ್ದವರಘವ ಕದಿವನು ಅನಘನೆಂದೆನಿಸಿ ॥22॥

ನಮ್ಮ ಜೊತೆಗಿದ್ದು ಆಡುವ ದೇವದೇವೋತ್ತಮ

ಚೇತನಾಚೇತನವಿಲಕ್ಷಣ
ನೂತನಪದಾರ್ಥಗಳೊಳಗೆ ಬಲು
ನೂತನತಿಸುಂದರಕೆ ಸುಂದರ ರಸಕೆ ರಸರೂಪ ॥
ಜಾತರೂಪೋದರ ಭವಾದ್ಯರೊ-
ಳಾತತಪ್ರತಿಮ ಪ್ರಭಾವ ಧ-
ರಾತಳದೊಳೆಮ್ಮೊಡನೆಯಾಡುತಲಿಪ್ಪ ನಮ್ಮಪ್ಪ ॥23॥

ಹಿಂದು ಮುಂದು ಎಡಬಲದಲಿದ್ದು ಭಯ ಪರಿಹರಿಸುವ

ತಂದೆತಾಯ್ಗಳು ತಮ್ಮ ಶಿಶುವಿಗೆ
ಬಂದ ಭಯಗಳ ಪರಿಹರಿಸಿ ನಿಜ
ಮಂದಿರದಿ ಬೇಡಿದುದನಿತ್ತಾದರಿಸುವಂದದಲಿ ॥
ಹಿಂದೆ ಮುಂದೆಡಬಲದಿ ಒಳಹೊರ-
ಗಿಂದಿರೇಶನು ತನ್ನವರನಂ
ದೆಂದು ಸಲಹುವನಾಗಸದವೋಲೆತ್ತ ನೋಡಿದರು ॥24॥

ನೆರಳಿನಂತೆ ಸಂಚರಿಸಿ ಇಷ್ಟಾರ್ಥಕೊಡುವ ಶ್ರೀಹರಿ

ಒಡಲನೆಳಲಂದದಲಿ ಹರಿ ನ-
ಮ್ಮೊಡನೆ ತಿರುಗುವ ಒಂದರೆಕ್ಷಣ
ಬಿಡದೆ ಬೆಂಬಲನಾಗಿ ಭಕ್ತಾಧೀನನೆಂದೆನಿಸಿ ॥
ತಡೆವ ದುರಿತೌಘಗಳ ಕಾಮದ
ಕೊಡುವ ಸಕಲೇಷ್ಟಗಳ ಸಂತತ
ನಡೆವ ನಮ್ಮಂದದಲಿ ನವಸುವಿಶೇಷ ಸನ್ಮಹಿಮ ॥25॥

ಭಕ್ತಿಯೆಂಬ ಹಗ್ಗದಿಂದ ಕಟ್ಟಿದರೆ
ಸಂಸಾರಹಗ್ಗವ ಬಿಡುಸುವವನು

ಬಿಟ್ಟವರ ಭವಪಾಶದಿಂದಲಿ
ಕಟ್ಟುವನು ಬಹು ಕಠಿಣನಿವ ಶ್ರೀ-
ಪ್ಪೇಷ್ಟನೆಂದರಿತನವರತ ಸದ್ಭಕ್ತಿಪಾಶದಲಿ ॥
ಕಟ್ಟುವರ ಭವಕಟ್ಟು ಬಿಡಿಸುವ
ಸಿಟ್ಟಿನವನಿವನಲ್ಲ ಕಾಮದ
ಕೊಟ್ಟು ಕಾವನು ಸಕಲ ಸೌಖ್ಯವನಿಹಪರಂಗಳಲಿ ॥26॥

ಕಣ್ಣಿನ ರೆಪ್ಪೆಯಂತೆ ಸಲಹುವ ನಿಷ್ಕಾಮಿ

ಕಣ್ಣೆಗೆವೆಯಂದದಲಿ ಕೈಮೈ
ತಿಣ್ಣಗೊದಗುವ ತೆರದಿ ಪಲ್ಗಳು
ಪಣ್ಣುಫಲಗಳನಗಿದು ಜಿಹ್ವೆಗೆ ರಸವನೀವಂತೆ ॥
ಪುಣ್ಯಫಲವೀವಂದದಲಿ ನುಡಿ
ವೆಣ್ಣನಾಳ್ವಾಂಡದೊಳು ಲಕ್ಷ್ಮಣ
ನಣ್ಣನೊದಗುವ ಭಕ್ತರವಸರಮಕರಗಣಸಹಿತ ॥27॥

ಅರೆಗಳಿಗೆಯೂ ಬಿಡದೆ ಸಲಹಿ ಅಮೃತವನ್ನೇ ಉಣಿಸುವನು

ಕೊಟ್ಟದನು ಕೈಗೊಂಬರೆಕ್ಷಣ
ಬಿಟ್ಟಗಲ ತನ್ನವರ ದುರಿತಗ-
ಳಟ್ಟುವನು ದೂರದಲಿ ದುರಿತಾರಣ್ಯಪಾವಕನು ॥
ಬಿಟ್ಟ ಬೆನ್ನಲಿ ಹೊರಿಸಿದವರೊಳು
ಸಿಟ್ಟು ಮಾಡಿದನೇನೊ ಹರಿ ಕಂ-
ಗೆಟ್ಟ ಸುರರಿಗೆ ಸುಧೆಯನುಣಿಸಿದ ಮುರಿದನಹಿತರನು

॥28॥

ನಿರಂತರ ಹರಿಪಾದಸ್ಮರಣೆಯ ಮಹಾಫಲ

ಖೇದ ಮೋದ ಜಯಾಪಜಯ ಮೊದ-
ಲಾದ ದೋಷಗಳಿಲ್ಲ ಚಿನ್ಮಯ
ಸಾದರದಿ ತನ್ನಂಘ್ರಿಕಮಲವ ನಂಬಿ ತುತಿಸುವರ ॥
ಕಾದುಕೊಂಡಿಹ ಪರಮಕರುಣಮ-
ಹೋದಧಿಯು ತನ್ನವರು ಮಾಡ್ದಪ-
ರಾಧಗಳ ನೋಡದಲೆ ಸಲಹುವ ಸರ್ವಕಾಮದನು

॥29॥

ದುಷ್ಟರ ಸಂಹಾರ ಶಿಷ್ಟರ ಪಾಲನೆಯೇ ದಶಾವತಾರಗಳ ಉದ್ದೇಶ

ಮೀನ ಕೂರ್ಮ ವರಾಹ ನರಪಂ-
ಚಾನನಾತುಳಶೌರ್ಯ ವಾಮನ
ರೇಣುಕಾತ್ಮಜ ರಾವಣಾದಿನಿಶಾಚರಧ್ವಂಸಿ ॥
ಧೇನುಕಾಸುರಮಥನ ತ್ರಿಪುರವ
ಹಾನಿಗೈಸಿದ ನಿಪುಣ ಕಲಿಮುಖ
ದಾನವರ ಸಂಹರಿಸಿ ಧರ್ಮದಿ ಕಾಯ್ದ ಸುಜನರನು॥30॥

ಭಕ್ತರ ರಕ್ಷಣೆಗಾಗಿಯೇ ಧರೆಗಿಳಿದು ಬಂದ ಕರುಣಾಮೂರ್ತಿ

ಶ್ರೀಮನೋಹರ ಕಮಲವರ್ಜಿತ
ಕಾಮಿತಪ್ರದ ಕೈರವದಳ-
ಶ್ಯಾಮ ಶಬಲ ಶರಣ್ಯ ಶಾಶ್ವತ ಶರ್ಕರಾಕ್ಷಸಖ ॥
ಸಾಮಸನ್ನುತ ಸಕಲಗುಣಗಣ-
ಧಾಮ ಶ್ರೀಜಗನ್ನಾಥವಿಟ್ಠಲ
ನೀ ಮಹಿಯೊಳವತರಿಸಿ ಸಲಹಿದ ಸಕಲ ಸುಜನರನು
॥31॥

॥ ಎರಡನೆಯ ಕರುಣಾಸಂಧಿ ಮುಗಿಯಿತು ॥

ವ್ಯಾಪ್ತಿಸಂಧಿ -3

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಮೂರು ಪುರುಷಗಳಿಂದ ತುಂಬಿದ ಜಗತ್ತು

ಪುರುಷರೂಪತ್ರಯ ಪುರಾತನ
ಪುರುಷ ಪುರುಷೋತ್ತಮ ಕ್ಷರಾಕ್ಷರ
ಪುರುಷಪೂಜಿತಪಾದ ಪೂರ್ಣಾನಂದಜ್ಞಾನಮಯ ॥
ಪುರುಷಸೂಕ್ತಸುಮೇಯ ತತ್ತ-
ತ್ಪುರುಷಹೃತ್ಪುಷ್ಕರನಿಲಯ ಮಹಾ
ಪುರುಷಬ್ರಾಂಡಾಂತರದಿ ಬಹಿರದಿ ವ್ಯಾಪ್ತ ನಿರ್ಲಿಪ್ತ ॥1॥

ದುಷ್ಟರ ಸಂಹಾರ ಶಿಷ್ಟರ ಪಾಲನೆಯೇ ದಶಾವತಾರಗಳ ಉದ್ದೇಶ

ಮೀನ ಕೂರ್ಮ ವರಾಹ ನರಪಂ-
ಚಾನನಾತುಳಶೌರ್ಯ ವಾಮನ
ರೇಣುಕಾತ್ಮಜ ರಾವಣಾದಿನಿಶಾಚರಧ್ವಂಸಿ ॥
ಧೇನುಕಾಸುರಮಥನ ತ್ರಿಪುರವ
ಹಾನಿಗೈಸಿದ ನಿಪುಣ ಕಲಿಮುಖ
ದಾನವರ ಸಂಹರಿಸಿ ಧರ್ಮದಿ ಕಾಯ್ದ ಸುಜನರನು॥30॥

ಭಕ್ತರ ರಕ್ಷಣೆಗಾಗಿಯೇ ಧರೆಗಿಳಿದು ಬಂದ ಕರುಣಾಮೂರ್ತಿ

ಶ್ರೀಮನೋಹರ ಶಮಲವರ್ಜಿತ
ಕಾಮಿತಪ್ರದ ಕೈರವದಳ-
ಶ್ಯಾಮ ಶಬಲ ಶರಣ್ಯ ಶಾಶ್ವತ ಶರ್ಕರಾಕ್ಷಸಖ ॥
ಸಾಮಸನ್ನುತ ಸಕಲಗುಣಗಣ-
ಧಾಮ ಶ್ರೀಜಗನ್ನಾಥವಿಟ್ಠಲ
ನೀ ಮಹಿಯೊಳವತರಿಸಿ ಸಲಹಿದ ಸಕಲ ಸುಜನರನು
॥31॥

॥ ಎರಡನೆಯ ಕರುಣಾಸಂಧಿ ಮುಗಿಯಿತು ॥

ವ್ಯಾಪ್ತಿಸಂಧಿ -3

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಮೂರು ಪುರುಷಗಳಿಂದ ತುಂಬಿದ ಜಗತ್ತು

ಪುರುಷರೂಪತ್ರಯ ಪುರಾತನ
ಪುರುಷ ಪುರುಷೋತ್ತಮ ಕ್ಷರಾಕ್ಷರ
ಪುರುಷಪೂಜಿತಪಾದ ಪೂರ್ಣಾನಂದಜ್ಞಾನಮಯ ||
ಪುರುಷಸೂಕ್ತಸುಮೇಯ ತತ್ತ-
ತ್ಪುರುಷಹೃತ್ಪುಷ್ಕರನಿಲಯ ಮಹಾ
ಪುರುಷಜಾಂಡಾಂತರದಿ ಬಹಿರದಿ ವ್ಯಾಪ್ತ ನಿರ್ಲಿಪ್ತ ||1||

ಭಗವಂತನ ಮಹಿಮೆ ತಿಳಿದವರು ಯಾರು ?

ಸ್ತ್ರೀ ನಪುಂಸಕ ಪುರುಷ ಭೂ ಸಲಿ-
ಲಾನಲಾನಿಲಗಗನ ಮನ ಶಶಿ
ಭಾನು ಕಾಲ ಗುಣ ಪ್ರಕೃತಿಯೊಳಗೊಂದು ತಾನಲ್ಲ ॥
ಏನು ಇವನ ಮಹಾಮಹಿಮೆ ಕಡೆ-
ಗಾಣರಜಭವಶಕ್ರಮುಖರು ನಿ-
ಧಾನಿಸಲು ಮಾನವರಿಗಳವಡುದೇ ವಿಚಾರಿಸಲು ॥2॥

ಪಂಚತನ್ಮಾತ್ರಾದಿ ವಿಷಯಗಳ ಭೋಕ್ತೃ

ಗಂಧ ರಸ ರೂಪ ಸ್ಪರುಶ ಶ-
ಬ್ದೊಂದು ತಾನಲ್ಲದರದರ ಪೆಸ-
ರಿಂದ ಕರೆಸುತ ಜೀವರಿಗೆ ತರ್ಪಕನು ತಾನಾಗಿ ॥
ಪೊಂದಿಕೊಂಡಿಹ ಪರಮಕರುಣಾ
ಸಿಂಧು ಶಾಶ್ವತ ಮನವೆ ಮೊದಲಾ-
ದಿಂದ್ರಿಯಗಳೊಳಗಿದ್ದು ಭೋಗಿಸುತಿಹನು ವಿಷಯಗಳ
॥3॥

ದಶೇಂದ್ರಿಯಗಳಲ್ಲಿ ಪ್ರದ್ಯುಮ್ನನೇ ಸ್ವತಂತ್ರಕರ್ತೃ

ಶ್ರವಣ ನಯನ ಘ್ರಾಣ ತ್ವಗ್ರಸ
ನಿವುಗಳಲಿ ವಾಕ್ ಪಾಣಿ ಪಾದಾ
ದ್ಯವಯವಗಳಲಿ ತದ್ಗುಣಗಳಲಿ ತತ್ಪತಿಗಳೊಳಗೆ ॥
ಪ್ರವಿತತನು ತಾನಾಗಿ ಕೃತಿಪತಿ
ವಿವಿಧ ಕರ್ಮವ ಮಾಡಿ ಮಾಡಿಸಿ
ಭವಕೆ ಕಾರಣನಾಗಿ ತಿರುಗಿಸುತಿಹನು ತಿಳಿಸದಲೆ ॥4॥

ವಿಷಯೇಂದ್ರಿಯಗಳಲ್ಲಿ ವ್ಯಾಪ್ತನ ನಿರ್ಲಿಪ್ತ ವ್ಯಾಪಾರ

ಗುಣಿ ಗುಣಗಳೊಳಗಿದ್ದು ಗುಣಿ ಗುಣ-
ನೆನಿಸುವನು ಗುಣಬದ್ಧನಾಗದೆ
ಗುಣಜ ಪುಣ್ಯಾಪುಣ್ಯಫಲ ಬ್ರಹ್ಮಾದಿಚೇತನಕೆ ॥
ಉಣಿಸುತವರೊಳಗಿದ್ದು ವೃಜಿನಾ-
ರ್ದನ ಚಿದಾನಂದ್ಯೆಕದೇಹನು
ಕೊನೆಗೆ ಸಚರಾಚರಜಗದ್ಭುಕುವೆನಿಪನವ್ಯಯನು ॥5॥

ವಿಶ್ವ, ಬುದ್ಧ, ಸಿದ್ಧ, ಪ್ರಸಿದ್ಧ ಭಗವಂತನೆಂಬ ಚತುರ್ಮೂರ್ತಿಗಳು

ವಿಶ್ವ ತಾನೆಂದೆನಿಸಿಕೊಂಬನಿ-
ರುದ್ಧದೇವನು ಸರ್ವಜೀವರ
ಬುದ್ಧಿಯೊಳ್ ನೆಲೆಸಿದ್ದು ಕೃತಿಪತಿ ಬುದ್ಧಿಯೆನಿಸುವನು ||
ಸಿದ್ಧಿಯೆನಿಸುವ ಸಂಕರುಷಣ ಪ್ರ-
ಸಿದ್ಧನಾಮಕ ವಾಸುದೇವನ-
ವದ್ಯರೂಪಚತುಷ್ಟಯಗಳನರಿತವನೆ ಪಂಡಿತನು ||6||

ನಾಕು ದೇಹದಲ್ಲಿ ನಾಕು ರೂಪವನ್ನು ಪೂಜಿಸು

ತನುಚತುಷ್ಟಯಗಳೊಳು ನಾರಾ-
ಯಣನು ಹೃತ್ಕಮಲಾಖ್ಯಸಿಂಹಾ-
ಸನದೊಳನಿರುದ್ಧಾದಿ ರೂಪಗಳಿಂದ ಶೋಭಿಸುತ ||
ತನಗೆ ತಾನೇ ಸೇವ್ಯ ಸೇವಕ-
ನೆನಿಸಿ ಸೇವಾಸಕ್ತ ಸುರರೊಳ-
ಗನವರತ ನೆಲೆಸಿದ್ದು ಸೇವೆಯ ಕೊಂಬನವರಂತೆ ||7||

ನಿರಂಶರಿಗೂ ಸಾಂಶಸುಖ ನೀಡುವ ರೂಪತ್ರಯ

ಜಾಗರ ಸ್ವಪ್ನಂಗಳೊಳು ವರ
ಭೋಗಿಶಯನ ಬಹುಪ್ರಕಾರ ವಿ-
ಭಾಗಗೈಸಿ ನಿರಂಶಜೀವರ ಚಿಚ್ಛರೀರವನು ॥
ಭೋಗವಿತ್ತು ಸುಷುಪ್ತಿಕಾಲದಿ
ಸಾಗರವ ನದಿ ಕೂಡುವಂತೆ ವಿ -
ಯೋಗರಹಿತನು ಅಂಶಗಳನೇಕತ್ರ ವೈದಿಸುವ ॥8॥

ಶ್ರೀಭೂದುರ್ಗಸಹಿತನಾದ ಭಗವಂತನ ಪ್ರೇರ್ಯ-ಪ್ರೇರಕ ವ್ಯಾಪಾರ

ಭಾರ್ಯರಿಂದೊಡಗೂಡಿ ಕಾರಣ
ಕಾರ್ಯವಸ್ತುಗಳಲ್ಲಿ ಪ್ರೇರಕ
ಪ್ರೇರ್ಯರೂಪಗಳಿಂದ ಪಟತಂತುಗಳವೋಲಿದ್ದು ॥
ಸೂರ್ಯಕಿರಣಗಳಂತೆ ತನ್ನಯ
ವೀರ್ಯದಿಂದಲೇ ಕೊಡುತ ಕೊಳುತಿಹ-
ನಾರ್ಯರಿಗೆ ಈತನ ವಿಹಾರವು ಗೋಚರಿಪುದೇನೋ
॥9॥

ಪ್ರತಿಮೆ, ಅರ್ಚಕ, ಪೂಜಾಪರಿಕರಗಳಲ್ಲಿ ನಿಂತು ಪೂಜಿಸಿಕೊಳ್ಳುವನು

ಜನಕ ತನ್ನಾತ್ಮಜಗೆ ವರಭೂ-
ಷಣಾದುಕೂಲವ ತೊಡಿಸಿ ತಾ ವಂ-
ದನೆಯ ಕೈಕೊಳುತವನ ಹರಸುತ ಹರುಷಪಡುವಂತೆ ॥
ವನರುಹೇಕ್ಷಣ ಪೂಜ್ಯಪೂಜಕ-
ನೆನಿಸಿ ಪೂಜಾಸಾಧನ ಪದಾ-
ರ್ಥನು ತನಗೆ ತಾನಾಗಿ ಫಲಗಳನೀವ ಭಜಕರಿಗೆ ॥10॥

ಅಸೃಜ ತ್ರಿವಿಧಜೀವರ ಸೃಷ್ಟಿ

ತಂದೆ ಬಹುಸಂಭ್ರಮದಿ ತನ್ನಯ
ಬಂಧುಬಳಗವನೆರಹಿ ಮದುವೆಯ
ನಂದನಗೆ ತಾ ಮಾಡಿ ಮನೆಯೊಳಗಿಡುವ ತೆರನಂತೆ ॥
ಇಂದಿರಾಧವ ತನ್ನ ಇಚ್ಛೆಗ-
ಳಿಂದ ಗುಣಗಳ ಚೇತನಕೆ ಸಂ-
ಬಂಧಗೈಸಿ ಸುಖಾಸುಖಾತ್ಮಕ ಸಂಸೃತಿಯೊಳಿಡುವ ॥11॥

ವ್ಯಾಪ್ತನ ಅವ್ಯಕ್ತ ಕಾರುಣ್ಯ

ತೃಣಕೃತಾಲಯದೊಳಗೆ ಪೊಗೆ ಸಂ-
ದಣಿಸಿ ಪ್ರತಿ ಛಿದ್ರದಲಿ ಪೊರಮ
ಟ್ಟನಲನಿರವನು ತೋರಿ ತೋರದಲಿಪ್ಪ ತೆರನಂತೆ ॥
ವನಜಜಾಂಡದೊಳಖಿಳ ಜೀವರ
ತನುವಿನೊಳಹೊರಗಿದ್ದು ಕಾಣಿಸ-
ದನಿಮಿಷೇಶನು ಸಕಲಕರ್ಮವ ಮಾಳ್ಪನವರಂತೆ ॥12॥

ಜಗದ್ವೃಕ್ಷದ ಮೂಲಾಧಾರ ಭಗವಂತ

ಪಾದಪಗಳಡಿಗೆರೆಯೆ ಸಲಿಲವು
ತೋದು ಕೊಂಬೆಗಳುಬ್ಬಿ ಪುಷ್ಪ
ಸ್ವಾದು ಫಲವೀವಂದದಲಿ ಸರ್ವೇಶ್ವರನು ಜನರಾ- ॥
ರಾಧನೆಯ ಕೈಕೊಂಡು ಬ್ರಹ್ಮ ಭ-
ವಾದಿಗಳ ನಾಮದಲಿ ಫಲವಿ-
ತ್ತಾದರಿಸುವನು ತನ್ನ ಮಹಿಮೆಯ ತೋರಗೊಡ ಜನಕೆ
॥13॥

ಅಗಮ್ಯ ಮಹಿಮನ ಕರುಣೆ ಎಂತೋ ?

ಶ್ರುತಿತತಿಗಳಿಗೆ ಗೋಚರಿಸದ
ಪ್ರತಿಮಜ್ಞಾನಂದಾತ್ಮನಚ್ಯುತ
ವಿತತ ವಿಶ್ವಾಧಾರ ವಿದ್ಯಾಧೀಶ ವಿಧಿಜನಕ ॥
ಪ್ರತಿದಿವಸ ಚೇತನರೊಳಗೆ ಪ್ರಾ-
ಕೃತಪುರುಷನಂದದಲಿ ಸಂಚರಿ-
ಸುತ ನಿಯಮ್ಯನಿಯಾಮಕನು ತಾನಾಗಿ ಸಂತೈಪ ॥14॥

ಮನಸ್ಸನ್ನು ವಿಷಯದೆಡೆ ಆಕರ್ಷಿಸುವ ವಿಶ್ವನಾಮಕ

ಮನ ವಿಷಯದೊಳಗಿರಿಸಿ ವಿಷಯವ
ಮನದೊಳಗೆ ನೆಲೆಗೊಳಿಸಿ ಬಲು ನೂ-
ತನವು ಸುಸಮೀಚೀನವಿದುಪಾದೇಯವೆಂದರುಪಿ ॥
ಕನಸಿಲಾದರು ತನ್ನ ಪಾದದ
ನೆನೆವನೀಯದೆ ಸರ್ವರೊಳಗಿ-
ದ್ದನುಭವಿಸುವನು ಸ್ಥೂಲವಿಷಯವ ವಿಶ್ವನೆಂದೆನಿಸಿ ॥15॥

ಗ್ರಾಹ್ಯಗ್ರಾಹಕನಾಗಿ ವಿಷಯ ಭೋಗಿಸುವ ಶ್ರೀಹರಿ

ತೋದಕನು ತಾನಾಗಿ ಮನ ಮೊದ-
ಲಾದಕರಣದೊಳಿದ್ದು ವಿಷಯವ-
ನೈದುವನು ನಿಜಪೂರ್ಣಸುಖಮಯ ಗ್ರಾಹ್ಯಗ್ರಾಹಕನು ॥
ವೇದವೇದ್ಯನು ತಿಳಿಯದವನೋ-
ಪಾದಿ ಭುಂಜಿಸುತೆಲ್ಲರೊಳಗಾ-
ಹ್ಲಾದ ಪಡುವನು ಭಕ್ತವತ್ಸಲ ಭಾಗ್ಯಸಂಪನ್ನ ॥16॥

ತ್ರಿಜಗದ್‌ವ್ಯಾಪ್ತನಾದರೂ ಪರಮ ಆಪ್ತ

ನಿತ್ಯನಿಗಮಾತೀತ ನಿರ್ಗುಣ
ಭೃತ್ಯವತ್ಸಲ ಭಯವಿನಾಶನ
ಸತ್ಯಕಾಮ ಶರಣ್ಯ ಶ್ಯಾಮಲ ಕೋಮಲಾಂಗ ಸುಖೀ ॥
ಮತ್ತನಂದದಿ ಮರ್ತ್ಯರೊಳಹೊರ-
ಗೆತ್ತನೋಡಲು ಸುತ್ತಲಿಪ್ಪನು
ಅತ್ಯಧಿಕ ಸಂತೃಪ್ತ ತ್ರಿಜಗದ್ವ್ಯಾಪ್ತ ಪರಮಾಪ್ತ ॥17॥

ತ್ರಿವಿಧರಲ್ಲಿ ಸ್ವಪ್ರಕಾಶನ ವ್ಯಾಪಾರ

ಪವಿಹರಿನ್ಮಣಿವಿದ್ರುಮದ ಸ-
ಚ್ಚವಿಗಳಂದದಿ ರಾಜಿಸುತ ಮಾ-
ಧವ ನಿರಂತರ ದೇವದಾನವಮಾನವರೊಳಿದ್ದು ॥
ತ್ರಿವಿಧ ಗುಣಕರ್ಮಸ್ವಭಾವವ
ಪವನಮುಖ ದೇವಾಂತರಾತ್ಮಕ
ದಿವಸದಿವಸದಿ ವ್ಯಕ್ತ ಮಾಡುತಲವರೊಳಿದ್ದಣಿಪ ॥18॥

ಅಚಿಂತ್ಯ ಶಕ್ತಿಯನ್ನು ಅರಿಯದ ದಾನವರ ಗತಿ

ಅಣುಮಹತ್ತಿನೊಳಿಪ್ಪ ಘನ ಪರ-
ಮಣುವಿನೊಳಡಗಿಸುವ ಸೂಕ್ಷ್ಮವ
ಮುಣುಗಿಸುವ ತೇಲಿಸುವ ಸ್ಥೂಲಗಳವನ ಮಾಯವಿದು॥
ದನುಜ ರಕ್ಕಸರೆಲ್ಲರಿವನೊಳು
ಮುನಿದು ಮಾಡುವದೇನುಲೂಖಲ
ವನಿಕೆಗಳು ಧಾನ್ಯಗಳ ಹಣಿವಂದದಲಿ ಸಂಹರಿಪ ॥19॥

ವೈಷಮ್ಯನೈರ್ಘೃಣ್ಯರಹಿತನಾಗಿ ಮಾಡುವ ವ್ಯಾಪಾರ

ದೇವ ಮಾನವ ದಾನವರು ಎಂ-
ದೀ ವಿಧದಲಾವಾಗಲಿಪ್ಪರು
ಮೂವರೊಳಗಿವಗಿಲ್ಲ ಸ್ನೇಹೋದಾಸೀನದ್ವೇಷ ॥
ಜೀವರಧಿಕಾರಾನುಸಾರದ-
ಲೀವ ಸುಖಸಂಸಾರದುಃಖವ
ತಾ ಉಣದಲವರವರಿಗುಣಿಸುವ ನಿರ್ಗತಾಶನನು ॥20॥

ಎಲ್ಲಾ ಕ್ರಿಯೆಗಳಲ್ಲೂ ಭಗವಂತನನ್ನು ಕಾಣು

ಎಲ್ಲಿ ಕೇಳಿದರಲ್ಲಿ ನೋಡಿದ-
ರೆಲ್ಲಿ ಬೇಡಿದರೆಲ್ಲಿ ನೀಡಿದ-
ರೆಲ್ಲಿ ಓಡಿದರೆಲ್ಲಿ ಆಡಿದರಲ್ಲೆ ಇರುತಿಹನು ॥
ಬಲ್ಲಿದರಿಗತಿಬಲ್ಲಿದನು ಸರಿ-
ಯಿಲ್ಲ ಇವಗಾವಲ್ಲಿ ನೋಡಲು
ಖುಲ್ಲ ಮಾನವರೊಲ್ಲನಪ್ರತಿಮಲ್ಲ ಜಗಕೆಲ್ಲ ॥21॥

ವ್ಯಾಪ್ತನ ಸನ್ನಿಧಾನದಿಂದ ಆಪ್ತ

ತಪ್ತಲೋಹವು ನೋಳ್ಪ ಜನರಿಗೆ
ಸಪ್ತಜಿಹ್ವನ ತೆರದಿ ತೋರ್ಪದು
ಲುಪ್ತಪಾವಕ ಲೋಹ ಕಾಂಬುದು ಪೂರ್ವದೋಪಾದಿ ||
ಸಪ್ತವಾಹನ ನಿಖಿಳ ಜನರೊಳು
ವ್ಯಾಪ್ತನಾದುದರಿಂದ ಸರ್ವರು
ಆಪ್ತರಾಗಿಹರೆಲ್ಲ ಕಾಲದಿ ಹಿತವ ಕೈಕೊಂಡು ||22||

ಮಳೆ ಸುರಿಸುವಂತೆ ಫಲ ನೀಡುವ ಶ್ರೀಹರಿಗೆ ವೈಷಮ್ಯವೆಲ್ಲಿ?

ವಾರಿದನು ಮಳೆಗರೆಯೆ ಬೆಳೆದಿಹ
ಭೂರುಹಂಗಳ ಚಿತ್ರ ಫಲರಸ
ಬೇರೆಬೇರಿಪ್ಪಂತೆ ಬಹುವಿಧಜೀವರೊಳಗಿದ್ದು ||
ಮಾರಮಣನವರವರ ಯೋಗ್ಯತೆ
ಮೀರದಲೆ ಗುಣಕರ್ಮಗಳನು-
ಸಾರ ನಡೆಸುವ ದೇವನಿಗೆ ವೈಷಮ್ಯವೆಲ್ಲಿಹುದೋ ||23||

ತ್ರಿವಿಧಜೀವರಲ್ಲಿ ವಂಚಿಸದೇ ಫಲ ನೀಡುವನು

ವಾರಿಜಾಪ್ತನ ಕಿರಣಮಣಿಗಳ
ಸೇರಿ ತತ್ತದ್ವರ್ಣಗಳನು ವಿ-
ಕಾರಗೈಸದೆ ನೋಳ್ಪರಿಗೆ ಕಂಗೊಳಿಸುವಂದದಲಿ ॥
ಮಾರಮಣ ಲೋಕತ್ರಯದೊಳಿಹ
ಮೂರುವಿಧ ಜೀವರೊಳಗಿದ್ದು ವಿ-
ಹಾರ ಮಾಡುವನವರ
ಯೋಗ್ಯತೆ ಕರ್ಮವನನುಸರಿಸಿ ॥24॥

ಪ್ರತಿಯೊಂದು ಕರ್ಮಗಳಿಗೆ ಸಾಕ್ಷಿಯಾಗಿದ್ದಾನೆ ಭಗವಂತ, ಎಚ್ಚರ!

ಜಲವನಪಹರಿಸುವ ಘಳಿಗೆಬ-
ಟ್ಟಲನುಳಿದು ಜೈಘಂಟೆ ಕೈ ಪಿಡಿ-
ದೆಳೆದು ಹೊಡೆವಂದದಲಿ ಸಂತತ ಕರ್ತೃ ತಾನಾಗಿ ॥
ಹಲಧರಾನುಜ ಪುಣ್ಯಪಾಪದ
ಫಲಗಳನು ದೇವಾಸುರರ ಗಣ-
ದೊಳು ವಿಭಾಗವ ಮಾಡಿ ಉಣಿಸುತ ಸಾಕ್ಷಿಯಾಗಿಪ್ಪ
॥25॥

ಆಕಾಶದಂತೆ ವ್ಯಾಪ್ತನಾದವನ ನಿರ್ಲಿಪ್ತತೆ.

ಪೊಂದಿಕೊಂಡಿಹ ಸರ್ವರೊಳು ಸಂ-
ಬಂಧವಾಗದೆ ಸಕಲಕರ್ಮವ
ರಂದದಲಿ ತಾ ಮಾಡಿ ಮಾಡಿಸಿ ತತ್ಫಲಗಳುಣದೆ ॥
ಕುಂದದಣು ಮಹತ್ತೆನಿಪ ಘಟ
ಮಂದಿರದಿ ಸರ್ವತ್ರ ತುಂಬಿಹ
ಬಾಂದಳದ ತೆರನಂತೆ ಇರುತಿಪ್ಪನು ರಮಾರಮಣ ॥26॥

ಬಾಧ್ಯರಲ್ಲಿದ್ದರೂ ನಿರ್ಬಾಧ್ಯನಾಗಿಹನು

ಕಾದಕಬ್ಬಿಣ ಹಿಡಿದು ಬಡಿಯಲು
ವೇದನೆಯು ಲೋಹಗಳಿಗಲ್ಲದೆ
ಆದುದೇನೈ ಅನಲಗಾವ್ಯಥೆ ಏನು ಮಾಡಿದರು ॥
ಆದಿದೇವನು ಸರ್ವಜೀವರ
ಕಾದುಕೊಂಡಿಹನೊಳಹೊರಗೆ ದುಃ-
ಖಾದಿಗಳು ಸಂಬಂಧವಾಗುವವೇನೊ ಚಿನ್ಮಯಗೆ ॥27॥

ಜಗತ್ತಿನ ಸೃಷ್ಟಿ ಸ್ಥಿತಿಲಯಗಳು ಇವನಿಗೆ ಬಾಲಲೀಲೆ

ಮಳಲ ಮನೆಗಳ ಮಾಡಿ ಮಕ್ಕಳು
ಕೆಲವು ಕಾಲದಲಾಡಿ ಮೋದದಿ
ತುಳಿದು ಕೆಡಿಸುವ ತರದಿ ಲಕುಮೀರಮಣ ಲೋಕಗಳ ॥
ಹಲವು ಬಗೆಯಲಿ ನಿರ್ಮಿಸುವ ನಿ-
ಶ್ಚಲನು ತಾನಾಗಿದ್ದು ಸಲಹುವ
ಎಲರುಣಿಯವೋಲ್ ನುಂಗುವಗೆಲ್ಲಿಹುದೊ ಸುಖದುಃಖ
॥28॥

ಜೀವನವೆಂಬ ನಾಟಕದಲ್ಲಿ ಜ್ಞಾನಾನಂದಮಯನ ಮಾತ್ರ

ವೇಷಭಾಷೆಗಳಿಂದ ಜನರ ಪ್ರ-
ಮೋಷಗೈಸುವ ನಟಪುರುಷನೋಳ್
ದೋಷದೂರನು ಲೋಕದೊಳು ಬಹುರೂಪ ಮಾತಿನಲಿ ॥
ತೋಷಿಸುವನವರವರ ಮನದಭಿ-
ಲಾಷೆಗಳ ಪೂರೈಸುತನುದಿನ
ಪೋಷಿಸುವ ಪೂತಾತ್ಮ ಪೂರ್ಣಾನಂದ ಜ್ಞಾನಮಯ
॥29॥

ಶ್ರೀಹರಿಗೆ ಕಾಲಗುಣಕರ್ಮದ ಸಂಬಂಧವಿಲ್ಲವೆನ್ನಲು ಮಾಂತ್ರಿಕನ ಉದಾಹರಣೆ

ಅಧಮ ಮಾನವನೋರ್ವ ಮಂತ್ರೌ-
ಷಧಗಳನು ತಾನರಿತು ಪಾವಕ
ಉದಕಗಳ ಸಂಬಂಧವಿಲ್ಲದೆ ಇಪ್ಪನದರೊಳಗೆ ॥
ಪದುಮಜಾಂಡೋದರನು ಸರ್ವರ
ಹೃದಯದೊಳಗಿರೆ ಕಾಲಗುಣ ಕ-
ರ್ಮಕಲುಷ ಸಂಬಂಧವಾಗುವದೇ ನಿರಂಜನಗೆ ॥30॥

ಅನಂತಗುಣ ಸಂಪನ್ನನ ವ್ಯಾಪ್ತತ್ವವನ್ನು ಚಿಂತಿಸು.

ಒಂದು ಗುಣದೊಳನಂತ ಗುಣಗಳು
ಒಂದು ರೂಪದೊಳಿಹವು ಲೋಕಗ-
ಳೊಂದು ರೂಪದಿ ಧರಿಸಿ ತದ್ಗತ ಪದಾರ್ಥದೊಳಹೊರಗೆ॥
ಬಾಂದಳದವೋಲಿದ್ದು ಬಹು ಪೆಸ-
ರಿಂದ ಕರೆಸುತ ಪೂರ್ಣಜ್ಞಾನಾ-
ನಂದಮಯ ಪರಿಪರಿ ವಿಹಾರವ ಮಾಡಿ ಮಾಡಿಸುವ
॥31॥

ವ್ಯಾಪ್ತತ್ವ ಚಿಂತನೆ ನರಸಿಂಹನಿಗೆ ಸಮರ್ಪಣೆ

ಎಲ್ಲರೊಳು ತಾನಿಪ್ಪ ತನ್ನೊಳ-
ಗೆಲ್ಲರನು ಧರಿಸಿಹನು ಅಪ್ರತಿ-
ಮಲ್ಲ ಮನ್ಮಥಜನಕ ಜಗದಾದ್ಯಂತಮಧ್ಯಗಳ ॥
ಬಲ್ಲ ಬಹುಗುಣಭರಿತ ದಾನವ
ದಲ್ಲಣ ಜಗನ್ನಾಥವಿಟ್ಠಲ
ಸೊಲ್ಲನಾಲಿಸಿ ಸ್ತಂಭದಿಂದಲಿ ಬಂದ ಭಕುತನಿಗೆ ॥ 32॥

॥ ಇಲ್ಲಿಗೆ ಮೂರನೆಯ ವ್ಯಾಪ್ತಿಸಂಧಿ ಮುಗಿಯಿತು ॥

ಭೋಜನರಸವಿಭಾಗಸಂಧಿ-4

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಚತುರ್ವಿಧ ಭೋಜನದಲ್ಲಿ ಚತುರ್ಮೂರ್ತ್ಯಾತ್ಮಕನ ಚತುರ್ವಿಧ ವ್ಯಾಪಾರ

ವನಜಜಾಂಡದೊಳುಳ್ಳಖಿಳ ಚೇ-
ತನರು ಭುಂಜಿಪ ಚತುರವಿಧ ಭೋ-
ಜನಪದಾರ್ಥದಿ ಚತುರವಿಧ ರಸರೂಪ ತಾನಾಗಿ ||
ಮನಕೆ ಬಂದುದನುಂಡುಣಿಸಿ ಸಂ-
ಹನನಕುಪಚಯಕರಣಕಾನಂ-
ದನಿಮಿಷರಿಗಾತ್ಮಪ್ರದರ್ಶನ ಸುಖವನೀವ ಹರಿ ||1||

ಸ್ಥೂಲಾನ್ನವನ್ನು ಸೂಕ್ಷ್ಮದೇಹಕ್ಕೆ ತಲುಪಿಸುವ ನಾಡಿಗತ ವರಾಹ

ನೀಡದಂದದಲಿಪ್ಪ ಲಿಂಗಕೆ
ಷೋಡಶಾತ್ಮಕ ರಸವಿಭಾಗವ
ಮಾಡಿ ಷೋಡಶ ಕಲೆಗಳಿಗೆ ಉಪಚಯಗಳನೆ ಕೊಡುತ॥
ಕ್ರೋಡ ಎಪ್ಪತ್ತೆರಡು ಸಾವಿರ
ನಾಡಿಗತ ದೇವತೆಗಳೊಳಗಿ-
ದ್ದಾಡುತಾನಂದಾತ್ಮ ಚರಿಸುವ ಲೋಕದೊಳು ತಾನು॥2॥

ಬೃಹತೀನಾಮಕನ 72000 ರೂಪಗಳು

ವಾರಿವಾಚ್ಯನು ವಾರಿಯೊಳಗಿ-
ದ್ದಾರು ರಸವೆಂದೆನಿಸಿ ಮೂವ-
ತ್ತಾರು ಸಾವಿರ ಸ್ತ್ರೀಪುರುಷನಾಡಿಯೊಳು ತದ್ರೂಪ ॥
ಧಾರಕನು ತಾನಾಗಿ ಸರ್ವಶ-
ರೀರಗಳಲಿ ಅಹಶ್ಚ ರಾತ್ರಿ ವಿ-
ಹಾರ ಮಾಳ್ಪನು ಬೃಹತಿಯೆಂಬ ಸುನಾಮದಿಂ ಕರೆಸಿ
॥3॥

ಸ್ಥೂಲರಸಗತ ರೂಪವೇ ನಾಡಿಗತ 72000 ರೂಪಗಳು

ಆರು ರಸ ಸತ್ವಾದಿ ಭೇದದಿ
ಆರು ಮೂರಾಗಿಹವು ಸಾರಾ-
ಸಾರ ನೀತಾನೀತ ಖಂಡಾಖಂಡ ಚಿತ್ಪ್ರಚುರ ॥
ಈರಧಿಕ ಎಪ್ಪತ್ತು ಸಾವಿರ
ಮಾರಮಣನ ರಸಾಖ್ಯರೂಪ ಶ-
ರೀರದಲಿ ಭೋಜ್ಯ ಸುಪದಾರ್ಥದಿ ತಿಳಿದು ಭುಂಜಿಪುದು
॥4॥

ಕ್ಷೀರ, ಘೃತ, ಗುಡ ಫಲಗಳಲ್ಲಿರುವ ಭಗವದ್ರೂಪಗಳು

ಕ್ಷೀರಗತರಸರೂಪಗಳು ಮು -
ನ್ನೂರು ಮೇಲ್ಪೈವತ್ತುನಾಲಕು
ಚಾರು ಘೃತಗತರೂಪಗಳು ಇಪ್ಪತ್ತರೊಂಭತ್ತು ॥
ಸಾರ ಗುಡದೊಳಗೈದು ಸಾವಿರ
ನೂರವೊಂದು ಸುರೂಪ ದ್ವಿಸಹ-
ಸ್ರಾರೆರಡು ಶತಪಂಚವಿಂಶತಿರೂಪಫಲಗಳಲಿ ॥5॥

ಊಟ ಮಾಡುವಾಗ ಚಿಂತನೆ ಹೇಗಿರಬೇಕು

ವಿಶದ ಸ್ಥಿರ ತೀಕ್ಷ್ಣವು ನಿರಹರ
ರಸಗಳೊಳು ಮೂರೈದು ಸಾವಿರ
ತ್ರಿಶತನವ ರೂಪಗಳ ಚಿಂತಿಸಿ ಭುಂಜಿಪುದು ವಿಷಯ ॥
ಶ್ವಸನ ತತ್ತೇಶರೊಳಗಿದ್ದೀ-
ಪೆಸರಿನಿಂದಲಿ ಕರೆಸುವನು ಧೇ-
ನಿಸಿದರೀಪರಿ ಮನಕೆ ಪೊಳೆವನು ಬಲ್ಲ ವಿಬುಧರಿಗೆ ॥6॥

ಭೋಕ್ತೃವಿನ ಇಂದ್ರಿಯಗಳಲ್ಲಿ ಭಗವದ್ರೂಪಗಳು

ಕಪಿಲ ನರಹರಿ ಭಾರ್ಗವತ್ರಯ
ವಪುಷನೇತ್ರದಿ ನಾಸಿಕಾಸ್ಯದಿ
ಶಫರನಾಮಕ ಜಿಹ್ವೆಯಲಿ ದಂತದಲಿ ಹಂಸಾಖ್ಯ ॥
ತ್ರಿಪದಿಪಾದ್ಯಹಯಾಸ್ಯ ವಾಚ್ಯದೊ-
ಳಪರಿಮಿತ ಸುಖಪೂರ್ಣ ಸಂತತ
ಕೃಪಣರೊಳಗಿದ್ದವರವರ ರಸ ಸ್ವೀಕರಿಸಿ ಕೊಡುವ ॥7॥

ಭೋಜ್ಯ ಹಾಗೂ ಭೋಕ್ತೃಗಳಲ್ಲಿ ಚತುರ್ಮೂರ್ತಿಗಳು

ನಿರುಪಮಾನಂದಾತ್ಮ ಹರಿ ಸಂ-
ಕರುಷಣ ಪ್ರದ್ಯುಮ್ನರೂಪದಿ
ಇರುತಿಹನು ಭೋಕ್ತೃಗಳೊಳಗೆ ತಚ್ಛಕ್ತಿದನು ಎನಿಸಿ ॥
ಕರೆಸುವನು ನಾರಾಯಣನಿರು-
ದ್ಧರಡು ನಾಮದಿ ಭೋಜ್ಯವಸ್ತುಗ
ನಿರುತ ತರ್ಪಕನಾಗಿ ತೃಪ್ತಿಯನೀವ ಚೇತನಕೆ ॥8॥

ಅವಕಾಶಪ್ರದ ವಾಸುದೇವ

ವಾಸುದೇವನು ಒಳಹೊರಗೆ ಅವ-
ಕಾಶ ಕೊಡುವ ನಭಸ್ಥನಾಗಿ ರ-
ಮಾಸಮೇತ ವಿಹಾರ ಮಾಳ್ಪನು ಪಂಚರೂಪದಲಿ ॥
ಆ ಸರೋರುಹಸಂಭವಾಭವ
ವಾಸವಾದ್ಯಮರಾದಿ ಚೇತನ
ರಾಶಿಯೊಳಿಹನೆಂದು ಅರಿತವನೆ ಕೋವಿದನು ॥9॥

ಅನ್ನ, ಭಕ್ಷ್ಯ, ಪರಮಾನ್ನ, ತುಪ್ಪ, ಸೂಪಗಳಲ್ಲಿರುವ ನಾಕು ರೂಪಗಳು

ವಾಸುದೇವನು ಅನ್ನದೊಳು ನಾ-
ನಾ ಸುಭಕ್ಷ್ಯದಿ ಸಂಕರುಷಣ ಕೃ-
ತೀಶ ಪರಮಾನ್ನದೊಳು ಘೃತದೊಳಗಿಪ್ಪನನಿರುದ್ಧ ॥
ಆ ಸುಪರ್ಣಾಂಸಗನು ಸೂಪದಿ
ವಾಸವಾನುಜ ಶಾಕದೊಳು ಮೂ-
ಲೇಶ ನಾರಾಯಣನು ಸರ್ವತ್ರದಲಿ ನೆಲಸಿಹನು ॥10॥

ಐದನೆಯ ನಾರಾಯಣರೂಪ ಹಾಗೂ ಖಂಡಾಖಂಡ ರೂಪಗಳು

ಅಗಣಿತಾತ್ಮ ಸುಭೋಜನ ಪದಾ-
ರ್ಥಗಳೊಳಗೆ ಅಖಂಡವಂದೊಂ-
ದಗಳಿನೊಳನಂತಾಂಶದಿಂದಲಿ ಖಂಡನೆಂದೆನಿಸಿ ॥
ಜಗದಿ ಜೀವರ ತೃಪ್ತಿಪಡಿಸುವ
ಸ್ವಗತಭೇದವಿವರ್ಜಿತನ ಈ-
ಬಗೆಯ ರೂಪವನರಿತು ಭುಂಜಿಸಿ ಅರ್ಪಿಸವನಡಿಗೆ
॥11॥

ಉಂಡು ನಿತ್ಯೋಪವಾಸಿ ಆಗು

ಈ ಪರಿಯಲರಿತುಂಬ ನರ ನಿ-
ತ್ಯೋಪವಾಸಿ ನಿರಾಮಯನು ನಿ-
ಷ್ಪಾಪಿ ನಿತ್ಯಮಹತ್ಸುಯಜ್ಞಗಳಾಚರಿಸಿದವನು ॥
ಪೋಪುದಿಪ್ಪುದು ಬಪ್ಪುದೆಲ್ಲರ-
ಮಾಪತಿಗಧಿಷ್ಠಾನವೆನ್ನು ಕೃ-
ಪಾಪಯೋನಿಧಿ ಮಾತನಾಲಿಸುತಿಹ ಜನನಿಯಂತೆ ॥12॥

ಅನಿರುದ್ಧನ 8,251 ಪ್ರದ್ಯುಮ್ನನ 5543 ಕೋಶಾಕಾರರೂಪಗಳು

ಆರೆರಡುಸಾವಿರದ ಮೇಲಿ-
ನ್ನೂರ ಐವತ್ತೊಂದು ರೂಪದಿ
ಸಾರಭೋಕ್ತನಿರುದ್ಧದೇವನು ಅನ್ನಮಯನೆನಿಪ ॥
ಮೂರೆರಡುವರೆಸಾವಿರದ ಮೇಲೆ
ಮೂರಧಿಕನಾಲ್ವತ್ತು ರೂಪದಿ
ತೋರುತಿಹ ಪ್ರದ್ಯುಮ್ನ ಜಗದೊಳು ಪ್ರಾಣಮಯನಾಗಿ
॥13॥

ಸಂಕರುಷಣ-5,62,107, ವಾಸುದೇವ-4,374 ರೂಪಗಳ ವ್ಯಾಪಾರ

ಎರಡು ಕೋಶದ ಒಳಹೊರಗೆ ಸಂ-
ಕರುಷಣೈದು ಸುಲಕ್ಷದರವ-
ತ್ತೆರಡುಸಾವಿರದೇಳಧಿಕಶತರೂಪಗಳ ಧರಿಸಿ ॥
ಕರೆಸಿಕೊಂಬ ಮನೋಮಯನು ಎಂ-
ದರವಿದೂರನು ಈರೆರಡು ಸಾ-
ವಿರದ ಮುನ್ನೂರಾದ ಮೇಲ್ನಾಲ್ಕಧಿಕ ಎಪ್ಪತ್ತು ॥14॥

ಮಹದಾದಿಗಳಲ್ಲಿ ವಾಸುದೇವನ ವಿಜ್ಞಾನಮಯರೂಪ

ರೂಪದಿಂದ ವಿಜ್ಞಾನಮಯನೆಂ-
ಬೀ ಪೆಸರಿನಿಂ ವಾಸುದೇವನು
ವ್ಯಾಪಿಸಿಹ ಮಹದಾದಿತತ್ವ ತತ್ವತಿಗಳೊಳಗೆ ॥
ಈ ಪುರುಷನಾಮಕನ ಶುಭಸ್ವೇ-
ದಾಪಳೆನಿಸಿ ರಮಾಂಬ ತಾ ಬ್ರ-
ಹ್ಮಾಪರೋಕ್ಷಿಗಳಾದವರ ಲಿಂಗಾಂಗ ಕೆಡಿಸುವಳು ॥15॥

ಉಂಡು ನಿತ್ಯೋಪವಾಸಿ ಆಗು

ಈ ಪರಿಯಲರಿತುಂಬ ನರ ನಿ-
ತ್ಯೋಪವಾಸಿ ನಿರಾಮಯನು ನಿ-
ಷ್ಪಾಪಿ ನಿತ್ಯಮಹತ್ಸುಯಜ್ಞಗಳಾಚರಿಸಿದವನು ॥
ಪೋಪುದಿಪ್ಪುದು ಬಪ್ಪುದೆಲ್ಲರ-
ಮಾಪತಿಗಧಿಷ್ಠಾನವೆನ್ನು ಕೃ-
ಪಾಪಯೋನಿಧಿ ಮಾತನಾಲಿಸುತಿಹ ಜನನಿಯಂತೆ ॥12॥

ಅನಿರುದ್ಧನ 8,251 ಪ್ರದ್ಯುಮ್ನನ 5543 ಕೋಶಾಕಾರರೂಪಗಳು

ಆರೆರಡುಸಾವಿರದ ಮೇಲಿ-
ನ್ನೂರ ಐವತ್ತೊಂದು ರೂಪದಿ
ಸಾರಭೋಕ್ತನಿರುದ್ಧದೇವನು ಅನ್ನಮಯನೆನಿಪ ॥
ಮೂರೆರಡುವರೆಸಾವಿರದ ಮೇಲೆ
ಮೂರಧಿಕನಾಲ್ವತ್ತು ರೂಪದಿ
ತೋರುತಿಹ ಪ್ರದ್ಯುಮ್ನ ಜಗದೊಳು ಪ್ರಾಣಮಯನಾಗಿ
॥13॥

ಸಂಕರುಷಣ-5,62,107, ವಾಸುದೇವ-4,374 ರೂಪಗಳ ವ್ಯಾಪಾರ

ಎರಡು ಕೋಶದ ಒಳಹೊರಗೆ ಸಂ-
ಕರುಷಣೈದು ಸುಲಕ್ಷದರವ-
ತ್ತೆರಡುಸಾವಿರದೇಳಧಿಕಶತರೂಪಗಳ ಧರಿಸಿ ॥
ಕರೆಸಿಕೊಂಬ ಮನೋಮಯನು ಎಂ-
ದರವಿದೂರನು ಈರೆರಡು ಸಾ-
ವಿರದ ಮುನ್ನೂರಾದ ಮೇಲ್ನಾಲ್ಕಧಿಕ ಎಪ್ಪತ್ತು ॥14॥

ಮಹದಾದಿಗಳಲ್ಲಿ ವಾಸುದೇವನ ವಿಜ್ಞಾನಮಯರೂಪ

ರೂಪದಿಂದ ವಿಜ್ಞಾನಮಯನೆಂ-
ಬೀ ಪೆಸರಿನಿಂ ವಾಸುದೇವನು
ವ್ಯಾಪಿಸಿಹ ಮಹದಾದಿತತ್ವ ತತ್ತತಿಗಳೊಳಗೆ ॥
ಈ ಪುರುಷನಾಮಕನ ಶುಭಸ್ವೇ-
ದಾಪಳೆನಿಸಿ ರಮಾಂಬ ತಾ ಬ್ರ-
ಹ್ಮಾಪರೋಕ್ಷಿಗಳಾದವರ ಲಿಂಗಾಂಗ ಕೆಡಿಸುವಳು ॥15॥

ನಾರಾಯಣನ 5,125 ರೂಪಗಳು
ಕೋಶಾಕಾರರೂಪಗಳು 5,85,400

ಐದು ಸಾವಿರ ನೂರ ಇಪ್ಪ-
ತ್ತೈದು ನಾರಾಯಣನ ರೂಪವ
ತಾ ಧರಿಸಿಕೊಂಡನುದಿನದಿ ಆನಂದಮಯನೆನಿಪ ॥
ಐದು ಲಕ್ಷದ ಮೇಲೆ ಎಂಭ-
ತ್ತೈದು ಸಾವಿರ ನಾಲ್ಕು ಶತಗಳ
ಐದು ಕೋಶಾತ್ಮಕ ವಿರಿಂಚಾಂಡದೊಳು ತುಂಬಿಹನು
॥16॥

ಅನ್ನ-101, ಪ್ರಾಣ-513, ಮನಸ್ಸು-55,
ವಿಜ್ಞಾನ-584 ರೂಪಗಳು

ನೂರವೊಂದು ಸುರೂಪದಿ ಶಾಂ-
ತೀರಮಣ ತಾನನ್ನನೆನಿಪ್ಪೆ
ನೂರ ಮೇಲ್ಮೂರಧಿಕದಶ ಪ್ರಾಣಾಖ್ಯ ಪ್ರದ್ಯುಮ್ನ ॥
ತೋರುತಿಹನ್ಶೈವತ್ತು ಐದು ವಿ-
ಕಾರ ಮನದೊಳು ಸಂಕರುಷಣ್ಶೈ
ನೂರು ಚತುರಾಶೀತಿ ವಿಜ್ಞಾನಾತ್ಮ ವಿಶ್ವಾಖ್ಯ ॥17॥

ಆನಂದನ 3,052 ರೂಪಗಳು, ಒಟ್ಟು ಕೋಶರಕ್ಷಕ ರೂಪಗಳು-4,305

ಮೂರುಸಾವಿರದರ್ಧಶತ ಮೇ-
ಲೀರಧಿಕ ರೂಪಗಳ ಧರಿಸಿ ಶ-
ರೀರದೊಳಗಾನಂದಮಯ ನಾರಾಯಣಾಹ್ವಯನು ॥
ಈರೆರಡು ಸಾವಿರದ ಮೇಲ್ಮೂ-
ನ್ನೂರ ಐದು ಸುರೂಪದಿಂದಲಿ
ಭಾರತೀಶನೊಳಿಪ್ಪ ನವನೀತಸ್ಥಘೃತದಂತೆ ॥18॥

ಪ್ರಾಣನಲ್ಲಿ-53, ಅಪಾನನಲ್ಲಿ-511, ವ್ಯಾನನಲ್ಲಿ-55, ಉದಾನದಲ್ಲಿ-535 ಭಗವದ್ರೂಪಗಳು

ಮೂರಧಿಕ ಐವತ್ತು ಪ್ರಾಣ ಶ-
ರೀರದೊಳಗನಿರುದ್ಧಪ್ಪೈ-
ನೂರು ಹನ್ನೊಂದಧಿಕಪಾನದೊಳಿಪ್ಪ ಪ್ರದ್ಯುಮ್ನ ॥
ಮೂರನೇ ವ್ಯಾನದೊಳಗೈದರೆ
ನೂರು ರೂಪದಿ ಸಂಕರುಷಣೈ-
ನೂರ ಮೂವತ್ತೈದುದಾನನೊಳಿಪ್ಪ ಮಾಯೇಶ ॥19॥

ಸಮಾನನಲ್ಲಿ 557 ರೂಪಗಳು
ಒಟ್ಟು 1,711 ಪ್ರಾಣಗತ ಅನಿರುದ್ಧಾದಿ ರೂಪಗಳು

ಮೂಲ ನಾರಾಯಣನು ಐವ-
ತ್ತೇಳಧಿಕ ಐನೂರು ರೂಪವ
ತಾಳಿ ಸರ್ವತ್ರದಿ ಸಮಾನನೊಳಿಪ್ಪ ಸರ್ವೇಶ ॥
ಲೀಲೆಗೈವನು ಸಾವಿರದ ಮೇ-
ಲೇಳು ನೂರ್ಹನ್ನೊಂದು ರೂಪವ
ತಾಳಿ ಪಂಚಪ್ರಾಣರೊಳು ಲೋಕಗಳ ಸಲಹುವನು॥20॥

ಪಿತೃದೇವತೆಗಳಿಗೆ ಅನ್ನಕಲ್ಪಕವಾದ 93 ರೂಪಗಳು

ತ್ರಿನವತಿಸ್ವರೂಪಾತ್ಮಕನಿರು-
ದ್ಧನು ಸದಾ ಯಜಮಾನನಾಗಿ-
ದ್ದನಲ ಯಮ ಸೋಮಾದಿ ಪಿತೃದೇವತೆಗಳಿಗೆ ಅನ್ನ- ॥
ನೆನಿಪನ ಪ್ರದ್ಯುಮ್ನ ಸಂಕರು-
ಷಣ ವಿಭಾಗವ ಮಾಡಿಕೊಂ-
ಡುಣಿಪ ನಿತ್ಯಾನಂದಭೋಜನದಾಯಿ ತುರ್ಯಾಹ್ವ॥21॥

ಪಿತ್ರಂತರ್ಗತ ವಸು, ರುದ್ರ, ಆದಿತ್ಯಾಂತರ್ಗತ ಷಣ್ಣವತಿ ರೂಪಗಳು

ಷಣ್ಣವತಿನಾಮಕನು ವಸು ಮೂ-
ಗಣ್ಣ ಭಾಸ್ಕರರೊಳಗೆ ನಿಂತು ಪ್ರ-
ಪನ್ನರನುದಿನ ನಿಷ್ಕಪಟ ಸದ್ಭಕ್ತಿಯಲಿ ಮಾಳ್ಪ ॥
ಪುಣ್ಯಕರ್ಮವ ಸ್ವೀಕರಿಸಿ ಕಾ-
ರುಣ್ಯಸಾಗರನ ಪಿತೃಗಳಿಗ-
ಗಣ್ಯ ಸುಖವಿತ್ತವರ ಪೊರೆವನು ಎಲ್ಲ ಕಾಲದಲಿ ॥22॥

ದೇಹಗತ ಅನಿರುದ್ಧನ ಷಣ್ಣವತಿ ರೂಪಗಳು

ಸುತಪನೇಕೋತ್ತರಸುಪಂಚಾ
ಶತವರಣ ಕರುಣದಿ ಚತುರ್ವಿಂ-
ಶತಿಸುತತ್ವದಿ ಧಾತುಗಳೊಳಿದ್ದವಿರತಾನಿರುದ್ಧ ॥
ಜತನ ಮಾಳ್ಪನು ಜಗದಿ ಜೀವ
ಪ್ರತತಿಗಳ ಷಣ್ಣವತಿನಾಮಕ
ಚತುರಮೂರ್ತಿಗಳರ್ಚಿಸುವರದರಿಂದ ಬಲ್ಲವರು ॥23॥

ಭಗವಂತ ಉಣ್ಣುವುದು ಭಕ್ತಿರಸಮಾತ್ರ

ಅಂಬುಜಜಾಂಡೋದರನು ವಿಪಿನದಿ
ಶಬರಿಯೆಂಜಲನುಂಡು ಗೋಕುಲ
ದಬಲೆಯರನೊಲಿಸಿದನು ಋಷಿಪತ್ನಿಯರು ಕೊಟ್ಟನ್ನ ॥
ಸುಭುಜ ತಾ ಭುಂಜಿಸಿದ ಸ್ವರಮಣ
ಕುಬುಜೆಗಂಧಕೆ ಒಲಿದ ಮುನಿಗಣ
ವಿಬುಧಸೇವಿತ ಬಿಡುವನೇ ನಾವಿತ್ತ ಕರ್ಮಫಲ ॥24॥

ಭಕ್ತರು ಅರ್ಪಿಸುವ ಅನ್ನಕ್ಕೆ ಕೈಒಡ್ಡುವ ನಿತ್ಯತೃಪ್ತ

ಗಣನೆಯಿಲ್ಲದ ಪರಮಸುಖ ಸ-
ದ್ಗುಣಗಣಂಗಳ ಲೇಶಲೇಶಕೆ
ಎಣೆಯೆನಿಸದು ರಮಾಬ್ಜಭವಶಕ್ರಾದಿಗಳ ಸುಖವು ॥
ಉಣುತುಣುತ ಮೈಮರೆತು ಕೃಷ್ಣಾ-
ರ್ಪಣವೆನಲು ಕೈಕೊಂಬನರ್ಭಕ
ಜನನಿ ಭೋಜನಸಮಯದಲಿ ಕೈವಡ್ಡುವಂದದಲಿ ॥25॥

ಪುಣ್ಯ ಪಾಪ ಕರ್ಮಗಳ ಅರ್ಪಿಸಿ ಪಾವನರಾಗೋಣ

ಜೀವಕೃತ ಕರ್ಮಗಳ ಬಿಡದೆ ರ-
ಮಾವರನು ಸ್ವೀಕರಿಸಿ ಫಲಗಳ-
ನೀವನಧಿಕಾರಾನುಸಾರದಲವರಿಗನವರತ ॥
ಪಾವಕನು ಸರ್ವಸ್ವ ಭುಂಜಿಸಿ
ತಾ ವಿಕಾರವನೈದನೊಮ್ಮೆಗೆ
ಪಾವನಕೆ ಪಾವನನೆನಿಪ ಹರಿಯುಂಬುದೇನರಿದು ॥26॥

ದೇವರಿಗೆ ಎಲ್ಲವೂ ಸುರಸ

ಕಲುಷಜಿಹ್ವೆಗೆ ಸುಷ್ಟು ಭೋಜನ
ಜಲ ಮೊದಲು ವಿಷದೋರುವುದು ನಿ-
ಷ್ಕಲುಷಜಿಹ್ವೆಗೆ ಸುರಸ ತೋರುವುದೆಲ್ಲ ಕಾಲದಲಿ ॥
ಸುಲಲಿತಾಂಗಗೆ ಸಕಲ ರಸ ಮಂ-
ಗಳವೆನಿಸಿತಿಹುದನ್ನಮಯ ಕೈ
ಕೊಳದೆ ಬಿಡುವನೆ ಪೂತನಿಯ ವಿಷಮೊಲೆಯನುಂಡವನು ॥27॥

ಅನ್ನರಸಭೋಗದಿಂದ ಶುಭಾಶುಭಗಳ ಲೇಪವಿಲ್ಲ

ಪೇಳಲೇನು ಸಮೀರದೇವನು
ಕಾಲಕೂಟವನುಂಡು ಲೋಕವ
ಪಾಲಿಸಿದ ತದ್ದಾಸನೋರ್ವನು ಅಮೃತನೆನಿಸಿದನು ॥
ಶ್ರೀಲಕುಮಿವಲ್ಲಭ ಶುಭಾಶುಭ
ಜಾಲಕರ್ಮಗಳುಂಬನುಪಚಯ
ದೇಳಿಗೆಗಳವಗಿಲ್ಲವೆಂದಿಗು ಸ್ವರಸಗಳ ಬಿಟ್ಟು ॥28॥

ಭೋಜನದಲ್ಲಿ ಭಗವಂತನ ವಿವಿಧ ಚಿಂತನೆಗಳು

ಈ ಪರಿಯಲಚ್ಯುತನ ತತ್ತ-
ದ್ರೂಪ ತನ್ನಾಮಗಳ ಸಲೆ ನಾ-
ನಾ ಪದಾರ್ಥದಿ ನೆನೆನೆನೆದು ಭುಂಜಿಸುತಲಿರು ವಿಷಯ॥
ಪ್ರಾಪಕ ಸ್ಥಾಪಕ ನಿಯಾಮಕ
ವ್ಯಾಪಕನು ಎಂದರಿದು ನೀ ನಿ-
ರ್ಲೇಪನಾಗಿರು ಪುಣ್ಯಪಾಪಗಳರ್ಪಿಸವನಡಿಗೆ ॥29॥

5,89,705 ಅನ್ನಮಯಾದಿ ರೂಪಗಳಿಗೆ ಭೋಜನ ಸಮರ್ಪಣೆ

ಐದು ಲಕ್ಷೆಂಭತ್ತರೊಂಭ-
ತ್ತಾದ ಸಾವಿರದೇಳುನೂರರ-
ಐದು ರೂಪವ ಧರಿಸಿ ಭೋಕ್ತೃಗೆ ಭೋಜ್ಯನೆಂದೆನಿಸಿ ॥
ಶ್ರೀಧರಾ ದುರ್ಗಾರಮಣ ಪಾ-
ದಾದಿಶಿರಪರ್ಯಂತವ್ಯಾಪಿಸಿ
ಕಾದುಕೊಂಡಿಹ ಸಂತತ ಜಗನ್ನಾಥವಿಟ್ಠಲನು ॥30॥

॥ ಇಲ್ಲಿಗೆ ನಾಕನೆಯ ಭೋಜನರಸವಿಭಾಗಸಂಧಿ ಮುಗಿಯಿತು ॥

ವಿಭೂತಿಸಂಧಿ-5

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಭಗವಂತನ ಬಗೆ ಬಗೆಯ ರೂಪಗಳು

ಶ್ರೀತರುಣಿವಲ್ಲಭನ ಪರಮ ವಿ-
ಭೂತಿರೂಪವ ಕಂಡಕಂಡ-
ಲ್ಲೀತೆರದಿ ಚಿಂತಿಸುತ ಮನದಲಿ ನೋಡು ಸಂಭ್ರಮದಿ||
ನೀತಸಾಧಾರಣ ವಿಶೇಷ ಸ-
ಜಾತಿ ನೈಜಾಹಿತವು ಸಹಜ ವಿ-
ಜಾತಿ ಖಂಡಾಖಂಡ ಬಗೆಗಳನರಿತು ಬುಧರಿಂದ ||1||

ಸೃಷ್ಟಿಯೊಳಗೆ ಶ್ರೇಷ್ಠ ವಿಭೂತಿರೂಪವನ್ನು ಚಿಂತಿಸು

ಜಲಧರಾಗಸದೊಳಗೆ ಚರಿಸುವ
ಹಲವು ಜೀವರ ನಿರ್ಮಿಸಿಹನದ-
ರೊಳು ಸಜಾತಿ ವಿಜಾತಿ ಸಾಧಾರಣ ವಿಶೇಷಗಳ ॥
ತಿಳಿದು ತತ್ತತ್ಸ್ಥಾನದಲಿ ವೆ-
ಗ್ಗಳಿಸಿ ಹಬ್ಬಿದ ಮನದಿ ಪೂಜಿಸು
ತಲವ ವ್ಯಾಪ್ತದ ರೂಪಗಳ ನೋಡುತಲಿ ಹಿಗ್ಗುವುದು॥2॥

24 ಸ್ಥಾನಗಳಲ್ಲಿ ಭಗವಂತನ ವಿಭೂತಿ ರೂಪಗಳು

ಪ್ರತಿಮೆ ಶಾಲಗ್ರಾಮ ಗೋಽಭ್ಯಾ-
ಗತ ಅತಿಥಿ ಶ್ರೀತುಳಸಿ ಪಿಪ್ಪಲ
ಯತಿ ವನಸ್ಥ ಗೃಹಸ್ಥ ವಟು ಯಜಮಾನ ಸ್ವಪರಜನ ॥
ಪೃಥಿವಿ ಜಲಶಿಖಿ ಪವನ ತಾರಾ
ಪಥ ನವಗ್ರಹ ಯೋಗ ಕರಣ ಭ
ತಿಥಿ ಸಿತಾಸಿತಪಕ್ಷ ಸಂಕ್ರಮಣವನಧಿಷ್ಠಾನ ॥3॥

ಶಾಲಗ್ರಾಮದಲ್ಲಿ 5535 ವಿಭೂತಿ ರೂಪಗಳು

ಕಾದ ಕಾಂಚನದೊಳಗೆ ಶೋಭಿಪ
ಆದಿತೇಯಾಸ್ಯನ ತೆರದಿ ಲಕು-
ಮೀಧವನು ಪ್ರತಿದಿನದಿ ಶಾಲಗ್ರಾಮದೊಳಗಿಪ್ಪ ॥
ಐದುಸಾವಿರ ಮೇಲೆ ಮೂವ-
ತ್ತೈದಧಿಕ ಐನೂರು ರೂಪದಿ
ಭೂಧರಗಳಭಿಮಾನಿ ದಿವಿಜರೊಳಿಪ್ಪನನವರತ ॥4॥

ಪ್ರತಿಮೆಗಳಲ್ಲಿ 513 ವಿಭೂತಿ ರೂಪಗಳು

ಶ್ರೀರಮಣ ಪ್ರತಿಮೆಗಳೊಳಗೆ ಹದಿ-
ಮೂರಧಿಕವಾಗಿಪ್ಪ ಮೇಲೈ
ನೂರು ರೂಪವ ಧರಿಸಿ ಇಪ್ಪನು ಆಹಿತಾಚಲದಿ ॥
ದಾರುಮಥನವ ಗೈಯೆ ಪಾವಕ
ತೋರುವಂತೆ ಪ್ರತೀಕ ಸುರರೊಳು
ತೋರುತಿಪ್ಪನು ತತ್ತದಾಕಾರದಲಿ ನೋಳ್ಪರಿಗೆ ॥5॥

ಪೂಜಾಸಲಕರಣೆಗಳಲ್ಲಿ 52,114 ರೂಪಗಳ ಅನುಸಂಧಾನ

ಕರಣನಿಯಾಮಕನು ತಾನುಪ-
ಕರಣದೊಳಗೈವತ್ತೆರಡು ಸಾ-
ವಿರದ ಹದಿನಾಲ್ಕಧಿಕ ಶತರೂಪಗಳನೆ ಧರಿಸಿ ॥
ಇರುತಿಹನು ತದ್ರೂಪನಾಮಗ-
ಳರಿತು ಪೂಜಿಸುತಿಹರ ಪೂಜೆಯ
ನಿರುತ ಕೈಗೊಂಬನು ತೃಷಾರ್ತನು ಜಲವ ಕೊಂಬಂತೆ
॥6॥

ಅನಂತ ವಿಭೂತಿರೂಪವುಳ್ಳ ಬಿಂಬನ ಪೂಜೆ

ಬಿಂಬರೂಪನು ಈ ತೆರದಿ ಜಡ
ಪೊಂಬಸಿರ ಮೊದಲಾದ ಸುರರೊಳ-
ಗಿಂಬುಗೊಂಡಿಹನೆಂದರಿದು ಧರ್ಮಾರ್ಥಕಾಮಗಳ ॥
ಹಂಬಲಿಸದನುದಿನದಿ ವಿಶ್ವಕು-
ಟುಂಬಿ ಕೊಟ್ಟ ಕಣಾನ್ನ ಕುತ್ಸಿತ
ಕಂಬಳಿಯೆ ಸೌಭಾಗ್ಯವೆಂದವನಂಘ್ರಿಗಳ ಭಜಿಸು ॥7॥

ಬಾಹ್ಯಪೂಜೋಪಕರಣಗಳಲ್ಲಿ ಇರುವ ಭಗವದ್ರೂಪಗಳ ಸಂಖ್ಯೆ

ವಾರಿಯೊಳಗಿಪ್ಪತ್ತನಾಲಕು
ಮೂರೆರಡು ಸಾವಿರದ ಮೇಲ್ ಮು-
ನ್ನೂರ ಹದಿನೇಳೆನಿಪ ರೂಪವು ಶ್ರೀತುಳಸಿದಳದಿ ॥
ನೂರರವತ್ತೊಂದು ಪುಷ್ಪದಿ
ಮೂರಧಿಕದಶ ದೀಪದೊಳು ನಾ-
ನೂರುಮೂರು ಸುಮೂರ್ತಿಗಳು ಗಂಧದೊಳಗಿರುತಿಹವು
॥8॥

ಹೃತ್ಕಮಲವಾಸಿಯ ದುಷ್ಟಶಿಕ್ಷಣೆ, ಶಿಷ್ಟರಕ್ಷಣೆ

ಅಷ್ಟದಳ ಸದ್-ಹೃದಯ ಕಮಲಾ-
ಧಿಷ್ಠಿತನು ತಾನಾಗಿ ಸರ್ವೋ-
ತ್ಕೃಷ್ಟಮಹಿಮನು ದಳಗಳಲಿ ಸಂಚರಿಸುತೊಳಗಿದ್ದು ॥
ದುಷ್ಟರಿಗೆ ದುರ್ಬುದ್ಧಿ ಕರ್ಮವಿ-
ಶಿಷ್ಟರಿಗೆ ಸುಜ್ಞಾನ ಧರ್ಮಸು
ಪುಷ್ಟಿಗೈಸುತ ಸಂತೈಪ ನಿರ್ದುಷ್ಟ ಸುಖಪೂರ್ಣ ॥9॥

'ಮಮ ಸ್ವಾಮಿ ಸರ್ವಾಂತರ್ಯಾಮಿ' ಎಂದು ನಿರಂತರ ಚಿಂತಿಸು

ವಿತ್ತದೇಹಾಗಾರ ದಾರಾ-
ಪತ್ಯಮಿತ್ರಾದಿಗಳೊಳಗೆ ಗುಣ
ಚಿತ್ತ ಬುದ್ಧ್ಯಾದಿಂದ್ರಿಯಗಳೊಳು ಜ್ಞಾನಕರ್ಮದೊಳು ॥
ತತ್ತದಾಹ್ವಯನಾಗಿ ಕರೆಸುತ
ಸತ್ಯಸಂಕಲ್ಪಾನುಸಾರದಿ
ನಿತ್ಯದಲಿ ತಾ ಮಾಡಿ ಮಾಡಿಪನೆಂದು ಸ್ಮರಿಸುತಿರು ॥10॥

ಭಾವ ದ್ರವ್ಯ ಕ್ರಿಯಾದ್ವೈತಗಳ ಚಿಂತನೆ

ಭಾವದ್ರವ್ಯಕ್ರಿಯೆಗಳೆನಿಸುವ
ಈ ವಿಧಾದ್ವೈತತ್ರಯಂಗಳ
ಭಾವಿಸುತ ಸದ್ಭಕ್ತಿಯಲಿ ಸರ್ವತ್ರ ಮರಿಯದಲೆ ॥
ತಾವಕನು ತಾನೆಂದು ಪ್ರತಿದಿನ
ಸೇವಿಸುವ ಭಕ್ತರಿಗೆ ತನ್ನನು
ಈವ ಕಾವ ಕೃಪಾಳು ಕರಿವರಗೊಲಿದ ತೆರನಂತೆ ॥11॥

ಗೋವಿಂದನರ್ಚಿಸಿ ನಲಿದು ಕೊಂಡಾಡು

ಬಾಂದಳವೆ ಮೊದಲಾದದರೊಳೊಂ-
ದೊಂದರಲಿ ಪೂಜಾ ಸುಸಾಧನ
ವೆಂದೆನಿಸುವ ಪದಾರ್ಥಗಳು ಬಗೆಬಗೆಯ ನೂತನದಿ ॥
ಸಂದಣಿಸಿಕೊಂಡಿಹವು ಧ್ಯಾನಕೆ
ತಂದಿನಿತು ಚಿಂತಿಸಿ ಸದಾ ಗೋ-
ವಿಂದನರ್ಚಿಸಿ ನೋಡುತಲಿ ನಲಿನಲಿದಾಡು ಕೊಂಡಾಡು
॥12॥

ಮಾನಸಿಕಪೂಜಾ ವೈಭವ

ಜಲಜನಾಭನ ಮೂರ್ತಿ ಮನದಲಿ
ನೆಲೆಗೊಳಿಸಿ ನಿಶ್ಚಲ ಭಕುತಿಯಲಿ
ಛಳಿ ಬಿಸಿಲು ಮಳೆಗಾಳಿಗಳ ನಿಂದಿಸದೆ ನಿತ್ಯದಲಿ ॥
ನೆಲದಲಿಹ ಗಂಧವೆ ಸುಗಂಧವು
ಜಲವೆ ರಸರೂಪವೆ ಸುದೀಪವು
ಎಲರು ಚಾಮರ ಶಬ್ದವಾದ್ಯಗಳರ್ಪಿಸಲು ಒಲಿವ ॥13॥

ಈ ದೇಹ ಪರಮಾತ್ಮನ ಮನೆ

ಗೋಳಕಗಳು ರಮಾರಮಣನ ನಿ-
ಜಾಲಯಗಳನುದಿನದಿ ಸಂಪ್ರ-
ಕ್ಷಾಲನೆಯೆ ಸಮ್ಮಾರ್ಜನವು ಕರಣಗಳೆ ದೀಪಗಳು ॥
ಸಾಲು ತತ್ತದ್ವಿಷಯಗಳ ಸ-
ಮ್ಮೇಳನವೆ ಪರಿಯಂಕ ತತ್ಸುಖ
ದೇಳಿಗೆಯೆ ಸುಪ್ಪತ್ತಿಗಾತ್ಮನಿವೇದನವೆ ವಸನ ॥14॥

ಪಾದುಕೆಯಂತೆ ಪಾಪಕರ್ಮಗಳ ಅರ್ಪಿಸು

ಪಾಪಕರ್ಮವು ಪಾದುಕೆಗಳನು
ಲೇಪನವು ಸತ್ಪುಣ್ಯಶಾಸ್ತ್ರಾ-
ಲಾಪನವೆ ಶ್ರೀತುಳಸಿ ಸುಮನೋವೃತ್ತಿಗಳು ಸುಮನ ॥
ಕೋಪ ಧೂಪವು ಭಕ್ತಿಭೂಷಣ
ವ್ಯಾಪಿಸಿದ ಸದ್ಬುದ್ಧಿ ಛತ್ರವು
ದೀಪವೇ ಸುಜ್ಞಾನ ಆರ್ತಿಗಳೆ ಗುಣಕಥನ ॥15॥

ಅನುಭವಕ್ಕೆ ಬರಬೇಕು ಸಕಲ ಸಾಧನೆಗಳು

ಮನವಚನಕಾಯಕ ಪ್ರದಕ್ಷಿಣೆ-
ಯನುದಿನದಿ ಸರ್ವತ್ರ ವ್ಯಾಪಕ
ವನರುಹೇಕ್ಷಣಗರ್ಪಿಸುತ ಮೋದಿಸುತಲಿರು ಸತತ ॥
ಅನುಭವಕೆ ತಂದುಕೊ ಸಕಲಸಾ-
ಧನಗಳೊಳಗಿದೆ ಮುಖ್ಯಪಾಮರ
ಮನುಜರಿಗೆ ಪೇಳಿದರೆ ತಿಳಿಯದು ಬುಧರಿಗಲ್ಲದಲೆ ॥16॥

ಸರ್ವಕರ್ಮಸಮರ್ಪಣೆಯೊಂದೇ ಸಾಧನೆಗೆ ಉಪಾಯ

ಚತುರವಿಧ ಪುರುಷಾರ್ಥ ಪಡೆವರೆ
ಚತುರದಶಲೋಕಗಳ ಮಧ್ಯದೊ-
ಳಿತರುಪಾಯಗಳಿಲ್ಲ ನೋಡಲು ಸಕಲಶಾಸ್ತ್ರದಲಿ ॥
ಸತತ ವಿಷಯೇಂದ್ರಿಯಗಳಲ್ಲಿ ಪ್ರವಿ-
ತತನೆನಿಸಿ ರಾಜಿಸುವ ಲಕುಮೀ
ಪತಿಗೆ ಸರ್ವಸಮರ್ಪಣೆಯು ಮಹಾಪೂಜೆ ಸದುಪಾಯ
॥17॥

ಮನೋವಾಕ್ಕಾಯಕ ಯಜ್ಞಾನುಸಂಧಾನ

ಗೋಳಕವೆ ಕುಂಡಾಗ್ನಿ ಕರಣವು
ಮೇಲೊದಗಿಬಹವಿಷಯ ಸಮಿಧೆಯು
ಗಾಳಿ ಯತ್ನವು ಕಾಮ ಧೂಮವು ಸನ್ನಿಧಾನಾರ್ಚಿ ॥
ಮೇಳವೆ ಪ್ರಜ್ವಾಲೆ ಕಿಡಿಗಳು
ತೂಳಿದಾನಂದಗಳೆ ತತ್ತ
ತ್ಕಾಲ ಮಾತುಗಳೆಲ್ಲ ಮಂತ್ರಾಧ್ಯಾತ್ಮಯಜ್ಞವಿದು ॥18॥

ದೇಹವೇ ದೇವರ ಪಟ್ಟಣ

ಮಧುವಿರೋಧಿಯ ಪಟ್ಟಣಕೆ ಪೂ-
ರ್ವದ ಕವಾಟಗಳಕ್ಷಿ ನಾಸಿಕ
ವದನ ಶ್ರೋತ್ರಗಳೆರಡು ದಕ್ಷಿಣ ಉತ್ತರದ್ವಾರ ॥
ಗುದ ಉಪಸ್ಥಗಳೆರಡು ಪಶ್ಚಿಮ
ಕದಗಳೆನಿಪವು ಷಟ್ಸರೋಜವೆ
ಸದನ ಹೃದಯವೆ ಮಂಟಪಂಗಳು ತ್ರಿಗುಣಗಳೆ ಕಲಶ
॥19॥

ಪಟ್ಟಣದ ಆವರಣಗಳು ಮತ್ತು ವೀಥಿಗಳು

ಧಾತುಗಳು ಸಪ್ತಾವರಣ ಉಪ-
ವೀಥಗಳೆ ನಾಡಿಗಳು ಮದಗಳು
ಯೂಥಪಗಳು ಸುಷುಮ್ನನಾಡಿಯೇ ರಾಜಪಂಥಾನ ॥
ಈ ತನೂರುಹಗಳೆ ವನಂಗಳು
ಮಾತರಿಶ್ವನು ಪಂಚರೂಪದಿ
ಪಾತಕಗಳೆಂಬರಿಗಳನು ಸಂಹರಿಪ ತಳವಾರ ॥20॥

ಪಟ್ಟಣದಲ್ಲಿ ವಿಷಯಗಳನ್ನು ಖರೀದಿಸುವ ವರ್ತಕ ಜೀವ

ಇನಶಶಂಕಾದಿಗಳೇ ಲಕ್ಷ್ಮೀ
ವನಿತೆಯರಸನ ದ್ವಾರಪಾಲಕ-
ರೆನಿಸುತಿಪ್ಪರು ಮನದ ವೃತ್ತಿಗಳೇ ಪದಾತಿಗಳು ॥
ಅನುಭವಿಪ ವಿಷಯಂಗಳೇ ಪ-
ಟ್ಟಣಕೆ ಬಪ್ಪ ಪಸಾರಗಳು ಜೀ-
ವನು ಸುವರ್ತಕ ಕಪ್ಪಗಳ ಕೈಕೊಂಬ ಹರಿ ತಾನು ॥21॥

ದೇಹವೇ ದೇವರ ಸುಂದರ ಅರಮನೆ

ಉರುಪರಾಕ್ರಮನರಮನೆಗೆ ದಶ-
ಕರಣಗಳು ಕನ್ನಡಿಯ ಸಾಲುಗ-
ಳರವಿದೂರನ ತದ್ವಿಹಾರಕೆ ಚಿತ್ತಮಂಟಪವು ॥
ಮರಳಿ ಬೀಸುವ ಶ್ವಾಸಗಳು ಚಾ-
ಮರವಿಲಾಸಿನಿ ಬುದ್ಧಿ ದಾಮೋ-
ದರಗೆ ಸಾಷ್ಟಾಂಗ ಪ್ರಣಾಮಗಳೇ ಸುಶಯನಗಳು ॥22॥

ಇಂದ್ರಿಯಗಳೇ ಅರಮನೆಯ ದ್ವಾರಗಳು ಇತ್ಯಾದಿ ವರ್ಣನೆ

ಮಾರಮಣನರಮನೆಗೆ ಸುಮಹಾ
ದ್ವಾರವೆನಿಸುವ ವದನಕೊಪ್ಪುವ
ತೋರಣ ಸ್ಮಶ್ರುಗಳು ಕೇಶಗಳೇ ಪತಾಕೆಗಳು ॥
ಊರಿನಡೆವಂಘ್ರಿಗಳು ಜಂಘೆಗ-
ಳೂರು ಮಧ್ಯೋದರ ಶಿರಗಳಾ-
ಗಾರದುಪ್ಪರಿಗೆಗಳು ಕೋಶಗಳೈದು ಕೋಣೆಗಳು ॥23॥

ದೇಹವೇ ರಥವೆಂಬ ವರ್ಣನೆ

ಈ ಶರೀರವೆ ರಥ ಪತಾಕ ಸು-
ವಾಸಗಳೆ ಪುಂಡ್ರಗಳು ಧ್ವಜ ಸಿಂ-
ಹಾಸನವೆ ಚಿತ್ತವು ಸುಬುದ್ಧಿಯೇ ಕಲಶ ಸನ್ಮನವೆ ॥
ಪಾಶ ಗುಣ ದಂಡತ್ರಯಗಳು ಶು-
ಭಾಶುಭದ್ವಯ ಕರ್ಮ ಚಕ್ರ ಮ-
ಹಾಸಮರ್ಥಾಶ್ವಗಳು ದಶಕರಣಂಗಳೆನಿಸುವವು ॥24॥

ಶ್ರೀಹರಿಯೇ ಈ ದೇಹದ ರಥಿಕ !
ನಿನಗೇಕೆ ಮಮತೆ ?

ಮಾತರಿಶ್ವನು ದೇಹರಥದೊಳು
ಸೂತನಾಗಿಹ ಸರ್ವಕಾಲದಿ
ಶ್ರೀತರುಣಿವಲ್ಲಭ ರಥಿಕನೆಂದರಿದು ನಿತ್ಯದಲಿ ॥
ಪ್ರೀತಿಯಿಂದಲಿ ಪೋಷಿಸುವ ವಾ
ತಾತಪಾದಿಗಳಿಂದಲವಿರತ
ಈ ತನುವಿನೊಳು ಮಮತೆ ಬಿಟ್ಟಿಹನವನೇ ಮಹಾಯೋಗಿ
॥25॥

ಈ ದೇಹವೇ ಭವಸಾಗರ ದಾಟಿಸುವ ನೌಕೆ

ಭವವೆನಿಪ ವನಧಿಯೊಳು ಕರ್ಮ
ಪ್ರವಹದೊಳು ಸಂಚರಿಸುತಿಹ ದೇ-
ಹವ ಸುನಾವೆಯ ಮಾಡಿ ತನ್ನವರಿಂದಲೊಡಗೂಡಿ ॥
ದಿವಸದಿವಸಗಳಲ್ಲಿ ಲಕುಮೀ
ಧವನು ಕ್ರೀಡಿಪನೆಂದು ಚಿಂತಿಸೆ
ಪವನನಯ್ಯ ಭವಾಬ್ಧಿ ದಾಟಿಸಿ ಪರಮಸುಖವೀವ ॥26॥

ಜಗತ್ತಿನಲ್ಲಿರುವ ಸಕಲಪದಾರ್ಥಗಳನ್ನು ದೇವರಿಗೆ ಸಮರ್ಪಿಸು

ಆಪಣಾಲಯಗತಪದಾರ್ಥವು
ಸ್ತ್ರೀಪುರುಷರುಗಳಿಂದ್ರಿಯಗಳಲಿ
ದೀಪಪಾವಕರೊಳಿಡುತಿಹ ತೈಲಾದಿ ದ್ರವ್ಯಗಳ ॥
ಆ ಪರಮಗವದಾನವೆಂದು ಪ-
ದೇಪದೇ ಮರೆಯದಲೆ ಸ್ಮರಿಸುತ
ಭೂಪನಂದದಿ ಸಂಚರಿಸು ನಿರ್ಭಯದಿ ಸರ್ವತ್ರ ॥27॥

ಪ್ರಪಂಚದಲ್ಲಿ ಇರುವ ಪದಾರ್ಥಗಳಿಂದ ಶ್ರೀಹರಿಯ ಪೂಜಾಕ್ರಮ

ವಾರಿಜಭವಾಂಡವೆ ಸುಮಂಟಪ
ಮೇರುಗಿರಿ ಸಿಂಹಾಸನವು ಭಾ-
ಗೀರಥಿಯೆ ಮಜ್ಜನವು ದಿಗ್ವಸ್ತ್ರಗಳು ನುಡಿ ಮಂತ್ರ ॥
ಭೂರುಹಜ ಫಲಪುಷ್ಪ ಗಂಧ ಸ-
ಮೀರ ಶಶಿರವಿ ದೀಪ ಭೂಷಣ
ತಾರಕೆಗಳೆಂದರ್ಪಿಸಲು ಕೈಕೊಂಡು ಮನ್ನಿಸುವ ॥28॥

ಕ್ಷತ್ರಿಯರಲ್ಲಿ ದೇವತೆಗಳು ಹಾಗೂ ಭಗವದ್ರೂಪ

ಭೂಸುರರೊಳಿಪ್ಪಬ್ಜಭವನೊಳು
ವಾಸುದೇವನು ವಾಯು ಖಗಪ ಸ-
ದಾಶಿವಹಿಪೇಂದ್ರನು ವಿವಸ್ವಾನ್ನಾಮಕ ಸೂರ್ಯ ॥
ಭೇಶಕಾಮಮರಾಸ್ಯ ವರುಣಾ-
ದೀ ಸುರರು ಕ್ಷತ್ರಿಯರೊಳಿಪ್ಪರು
ವಾಸವಾಗಿಹ ಸಂಕರುಷಣನ ನೋಡಿ ಮೋದಿಪರು॥29॥

ವೈಶ್ಯರಲ್ಲಿ ದೇವತೆಗಳು ಹಾಗೂ ಭಗವದ್ರೂಪ

ಮೀನಕೇತನ ತನಯ ಪ್ರಾಣಾ-
ಪಾನವ್ಯಾನೋದಾನಮುಖ್ಯೈ-
ಕೋನಪಂಚಾಶನ್ಮರುದ್ಗಣ ರುದ್ರ ವಸುಗಣರು ॥
ಮೇನಕಾತ್ಮಜಕುವರ ವಿಷ್ವ-
ಕ್ಸೇನ ಧನಪಾದ್ಯನಿಮಿಷರನು ಸ-
ದಾನುರಾಗದಿ ಧೇನಿಪುದು ವೈಶ್ಯರೊಳು ಪ್ರದ್ಯುಮ್ನ ॥30॥

ಶೂದ್ರರಲ್ಲಿ ದೇವತೆಗಳು ಹಾಗೂ ಭಗವದ್ರೂಪ

ಇರುತಿಹರು ನಾಸತ್ಯದಸ್ರರು
ನಿರಋುತಿಯು ಯಮಧರ್ಮ ಯಮಕಿಂ-
ಕರರು ಮೇದಿನಿ ಕಾಲಮೃತ್ಯು ಶನೈಶ್ಚರಾದಿಗಳು ॥
ಕರೆಸಿಕೊಂಬರು ಶೂದ್ರನೆಂದನ-
ವರತ ಶೂದ್ರರೊಳಿಪ್ಪರಿವರೊಳ-
ಗರವಿದೂರನಿರುದ್ಧನಿಹನೆಂದರಿತು ಮನ್ನಿಪುದು ॥31॥

ಚತುಷ್ಪಾತ್ ನಾಮಕ ನಾರಾಯಣನೇ ಜಾತಿಧರ್ಮ ಪ್ರವರ್ತಕ

ವೀತಭಯ ನಾರಾಯಣ ಚತು-
ಷ್ಪಾತು ತಾನೆಂದೆನಿಸಿ ತತ್ತ -
ಜ್ಜಾತಿ ಧರ್ಮ ಸಕುರ್ಮಗಳ ತಾ ಮಾಡಿ ಮಾಡಿಸುವ ॥
ಚೇತನರ ಒಳಹೊರಗೆ ಓತ
ಪ್ರೋತನಾಗಿದ್ದೆಲ್ಲರಿಗೆ ಸಂ-
ಪ್ರೀತಿಯಲಿ ಧರ್ಮಾರ್ಥಕಾಮಾದಿಗಳ ಕೊಡುತಿಹನು
॥32॥

ಸರ್ವಾಂತರ್ಯಾಮಿಯ ವ್ಯಾಪರವೇ ಬಿಂಬನ ವ್ಯಾಪಾರ

ನಿಧನ ಧನದ ವಿಧಾತ ವಿಗತಾ- ।
ಭ್ಯಧಿಕಸಮ ಸಮವರ್ತಿ ಸಾಮಗ
ತ್ರಿದಶಗಣಸಂಪೂಜ್ಯ ತ್ರಿಕಕುಬ್ಧಾಮ ಶುಭನಾಮ ॥
ಮಧುಮಥನ ಭೃಗುರಾಮ ಘೋಟಕ
ವದನ ಸರ್ವಪದಾರ್ಥದೊಳು ತುದಿ
ಮೊದಲು ತುಂಬಿಹನೆಂದು ಚಿಂತಿಸು ಬಿಂಬರೂಪದಲಿ
॥33॥

ಬಿಂಬ ಪ್ರತಿಬಿಂಬಗಳಿಗೆ ಭೇದ

ಕನ್ನಡಿಯ ಕೈವಿಡಿದು ನೋಡಲು
ತನ್ನಿರವು ಸವ್ಯಾಪಸವ್ಯದಿ
ಕಣ್ಣಿಗೊಪ್ಪುವ ತೆರದಿ ಅನಿರುದ್ಧನಿಗೆ ಈ ಜಗವು ॥
ಭಿನ್ನಭಿನ್ನವೆ ತೋರುತಿಪ್ಪುದು
ಜನ್ಯವಾದುದರಿಂದ ಪ್ರತಿಬಿಂ
ಬನ್ನಮಯ ತಾನೆಂದರಿತು ಪೂಜಿಸಲು ಕೈಗೊಂಬ ॥34॥

ಉತ್ತಮರು ಅಧಮರಿಗೆ ಬಿಂಬ

ಬಿಂಬರೆನಿಪರು ಸ್ವೋತ್ತಮರು ಪ್ರತಿ-
ಬಿಂಬರೆನಿಪರು ಸ್ವಾವರರು ಪ್ರತಿ-
ಬಿಂಬ ಬಿಂಬಗಳೊಳಗೆ ಕೇವಲ ಬಿಂಬ ಹರಿಯೆಂದು ॥
ಸಂಭ್ರಮದಿ ಪಾಡುತಲಿ ನೋಡುತ
ಉಂಬುಡುವುದಿಡುವುದು ಕೊಡುವುದೆ-
ಲ್ಲುಂಬುಜಾಂಬಕನಂಘ್ರಿಪೂಜೆಗಳೆಂದು ನಲಿದಾಡು ॥35॥

ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆ

ನದಿಯ ಜಲ ನದಿಗೆರೆದ ತೆರದಂ
ದದಲಿ ಭಗವದ್ದತ್ತ ಕರ್ಮಗ-
ಳುದಧಿಶಯನನಿಗರ್ಪಿಸುತ ವ್ಯಾವೃತ್ತ ನೀನಾಗಿ ॥
ವಿಧಿನಿಷೇಧಾದಿಗಳಿಗೊಳಗಾ-
ಗದಲೆ ಮಾಡುತ ದರ್ವಿಯಂದದಿ
ಪದುಮನಾಭನ ಸಕಲ ಕರ್ಮಗಳಲ್ಲಿ ನೆನೆವುತಿರು ॥36॥

ಫಲಾಪೇಕ್ಷೆಯಿಲ್ಲದ ಕರುಣಾಮೂರ್ತಿಯ ಕ್ರಿಯೆಗಳು

ಅರಿಯದಿರ್ದರು ಎಮ್ಮೊಳಿದ್ದನ-
ವರತ ವಿಷಯಗಳುಂಬ ಜ್ಞಾನೋ-
ತ್ತರದಿ ತನಗರ್ಪಿಸಲು ಚಿತ್ಸುಖವಿತ್ತು ಸಂತೈಪ ॥
ಸರಿತು ಕಾಲಪ್ರವಹಗಳು ಕಂ-
ಡರೆಯು ಸರಿ ಕಾಣದಿರೆ ಪರಿವವು
ಮರಳಿ ಮಜ್ಜನ ಪಾನ ಕರ್ಮಗಳಿಂದ ಸುಖವಿಹವು॥37॥

ಪ್ರಯೋಜನವಿಲ್ಲದ ಕರ್ಮ ಉಂಡು ಮೋಕ್ಷ ಕೊಡುವ ಕಾಮಧೇನು

ಏನು ಮಾಡುವ ಕರ್ಮಗಳು ಲಕು-
ಮೀನಿವಾಸನಿಗರ್ಪಿಸನುಸಂ-
ಧಾನಪೂರ್ವಕದಿಂದ ಸಂದೇಹಿಸದೆ ದಿನದಿನದಿ ॥
ಮಾನನಿಧಿ ಕೈಕೊಂಡು ಸುಖವಿ-
ತ್ತಾನತರ ಸಂತೈಪ ತೃಣ ಜಲ-
ಧೇನು ತಾನುಂಡನವರತ ಪಾಲ್ಗರೆವ ತೆರದಂತೆ ॥38॥

ಅಷ್ಟದಿಕ್ಕುಗಳಲ್ಲಿ ಹಂಸ, ಎಲ್ಲರಲ್ಲಿ ಆತ್ಮ

ಪೂರ್ವದಕ್ಷಿಣಪಶ್ಚಿಮೋತ್ತರ
ಪಾರ್ವತೀಪತಿಯಗ್ನಿವಾಯುಸು
ಶಾರ್ವರೀಕರ ದಿಗ್ವಲಯದೊಳು ಹಂಸನಾಮಕನು ॥
ಸರ್ವಕಾಲದಿ ಸರ್ವರೊಳು ಸುರ
ಸಾರ್ವಭೌಮನು ಸ್ವೇಚ್ಛೆಯಲಿ ಮ-
ರ್ತ್ಯೋರ್ವರಿಗೆ ಗೋಚರಿಸದವ್ಯಕ್ತಾತ್ಮನೆಂದೆನಿಸಿ ॥39॥

5 ಬಗೆಯ ಸಂವತ್ಸರಗಳಲ್ಲಿ ಇರುವ 5 ಭಗವದ್ರೂಪಗಳು

ಪರಿ ಇಡಾವತ್ಸರನು ಸಂವ-
ತ್ಸರದೊಳನಿರುದ್ಧಾದಿರೂಪವ
ಧರಿಸಿ ಬಾರ್ಹಸ್ಪತ್ಯ ಸೌರಭ ಚಾಂದ್ರಮನು ಎನಿಸಿ ॥
ಇರುತಿಹ ಜಗನ್ನಾಥವಿಟ್ಠಲ
ಸ್ಮರಿಸುವವರನು ಸಂತೈಪನೆಂ-
ದುರುಪರಾಕ್ರಮನುಚಿತಸಾಧನ ಯೋಗ್ಯತೆಯನರಿತು॥40॥

॥ ಇಲ್ಲಿಗೆ ಐದನೆಯ ವಿಭೂತಿಸಂಧಿ ಮುಗಿಯಿತು ॥

ಪಂಚಮಹಾಯಜ್ಞಸಂಧಿ-6

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಪಂಚಾಗ್ನಿಯಲಿ ನಾರಾಯಣನ 30 ರೂಪಗಳ ವ್ಯಾಪಾರಗಳು

ಜನನಿ ಪಿತ ಭೂ ವಾರಿದಾಂಬರ-
ವೆನಿಪ ಪಂಚಾಗ್ನಿಯಲಿ ನಾರಾ-
ಯಣನ ತ್ರಿಂಶತಿ ಮೂರ್ತಿಗಳ ವ್ಯಾಪಾರ ವ್ಯಾಪ್ತಿಗಳ ||
ನೆನೆದು ದಿವಸಗಳೆಂಬ ಸಮಿಧೆಗ-
ಳನು ನಿರಂತರ ಹೋಮಿಸುತ ಪಾ-
ವನಕೆ ಪಾವನನೆನಿಪ ಪರಮನ ಬೇಡು ಪರಮಸುಖ||1||

ಪ್ರಪಂಚದ ಪದಾರ್ಥದಿಂದ ಪಂಚಯಜ್ಞ

ಗಗನ ಪಾವಕ ಸಮಿಧೆ ರವಿ ರ-
ಶ್ಮಿಗಳೆ ಧೂಮವು ಅರ್ಚಿಯೆನಿಪುದೆ
ಹಗಲು ನಕ್ಷತ್ರಗಳೆ ಕಿಡಿಗಳು ಚಂದ್ರಮಾಂಗಾರ ॥
ಮೃಗವರೋದರನೊಳಗೆ ಐರೂ-
ಪಗಳ ಚಿಂತಿಸಿ ಭಕ್ತಿರಸ ಮಾ-
ತುಗಳ ಮಂತ್ರವ ಮಾಡಿ ಹೋಮಿಸುವರು ವಿಪಶ್ಚಿತರು
॥2॥

ಮಳೆ ಮೋಡಗಳಲ್ಲಿ ಯಜ್ಞಾನುಸಂಧಾನ

ಪಾವಕನು ಪರ್ಜನ್ಯ ಸಮಿಧೆಯು
ಪ್ರಾವಹೀಪತಿ ಧೂಮಗಳೆ ಮೇ-
ಘಾವಳಿಗಳರ್ಚಿ ಕ್ಷಣಪ್ರಭೆ ಗರ್ಜನವೆ ಕಿಡಿಯು ॥
ಭಾವಿಸುವುದಂಗಾರ ಸಿಡಿಲೆಂ-
ದೀವಿಧಾಗ್ನಿಯೊಳಬ್ಧಿಜಾತನ
ಕೋವಿದರು ಹೋಮಿಸುವರನುದಿನ ಪರಮಭಕುತಿಯಲಿ
॥3॥

ಭೂಮಿಯೆಂಬ ಅಗ್ನಿಯಲಿ ಸಂವತ್ಸರದ ಆಹುತಿ.

ಧರಣಿಯೆಂಬುದೆ ಅಗ್ನಿ ಸಂವ-
ತ್ಸರವೆ ಸಮಿಧೆ ವಿಹಾಯಸವೆ ಹೊಗೆ
ಇರುಳುರಿ ದಿಶಾಂಗಾರವಾಂತರ ದಿಗ್ವಲಯ ಕಿಡಿಯು ॥
ವರುಷವೆಂಬಾಹುತಿಗಳಿಂದಲಿ
ಹರಿಯ ಮೆಚ್ಚಿಸಿ ಸಕಲರೊಳಗ-
ಧ್ವರಿಯನಾಗಿರು ಸರ್ವರೂಪಾತ್ಮಕನ ಚಿಂತಿಸುತ ॥4॥

ಪುರುಷಾಗ್ನಿಯಲಿ ಮಾತುಗಳ ಆಹುತಿ

ಪುರುಷ ಶಿಖಿ ವಾಕ್ಸಮಿಧೆ ಧೂಮವು
ಕರಣವರ್ಚಿಯು ಜಿಹ್ವೆ ಶ್ರೋತ್ರಗ-
ಳೆರಡು ಕಿಡಿಗಳು ಲೋಚನಗಳಂಗಾರವೆನಿಸುವವು ॥
ನಿರುತ ಭುಂಜಿಸುವನ್ನ ಯದುಕುಲ
ವರನಿಗವದಾನಗಳು ಎಂದೀ-
ಪರಿ ಸಮರ್ಪಣೆ ಗೈಯೆ ಕೈಗೊಂಡನುದಿನದಿ ಪೊರೆವ
॥5॥

ಸ್ತ್ರೀ-ಪುರುಷ ಸಮಾಗಮವು ಒಂದು ಯಜ್ಞ

ಮತ್ತೆ ಯೋಷಾಗ್ನಿಯೊಳು ತಿಳಿವದು
ಪಸ್ಥತತ್ವವೆ ಸಮಿಧೆ ಕಾಮೋ-
ತ್ಪತ್ತಿಪರಮಾತುಗಳೇ ಧೂಮವು ಯೋನಿ ಮಹದರ್ಚಿ ||
ತತ್ಪ್ರವೇಶಾಂಗಾರ ಕಿಡಿಗಳು
ಉತ್ಸಹಗಳುತ್ಸರ್ಜನವು ಪುರು-
ಷೋತ್ತಮನಿಗವದಾನವೆನೆ ಕೈಗೊಂಡು ಮನ್ನಿಸುವ ||6||

ಮೇಲಿನ 5 ಯಜ್ಞಗಳಲ್ಲಿ 25 ರೂಪಗಳ ಅನುಸಂಧಾನ

ಐದು ಅಗ್ನಿಗಳಲ್ಲಿ ಮರೆಯದೆ
ಐದು ರೂಪಾತ್ಮಕನ ಇಪ್ಪ-
ತ್ತೈದು ರೂಪಗಳನುದಿನದಿ ನೆನೆವರಿಗೆ ಜನುಮಗಳ ||
ಐದಿಸನು ನಳಿನಾಕ್ಷ ರಣದೊಳು
ಮೈದುನನ ಕಾಯ್ದಂತೆ ಸಲಹುವ
ಬೈದವಗೆ ಗತಿಯಿತ್ತ ಭಯಹರ ಭಕ್ತವತ್ಸಲನು ||7||

ಪಂಚನಾರೀತುರಗದಂತೆ ಪಂಚರೂಪಿಯ ಪಂಚರೂಪಗಳ ವರ್ಣನೆ

ಪಂಚನಾರೀತುರಗದಂದದಿ
ಪಂಚರೂಪಾತ್ಮಕನು ತಾ ಷಟ್
ಪಂಚ ರೂಪವ ಧರಿಸಿ ತತ್ತನ್ನಾಮದಿಂ ಕರಿಸಿ ||
ಪಂಚಪಾವಕ ಮುಖದಿ ಗುಣಮಯ
ಪಂಚಭೂತಾತ್ಮಕ ಶರೀರವ
ಪಂಚವಿಧ ಜೀವರಿಗೆ ಕೊಟ್ಟಲ್ಲಲ್ಲೆ ರಮಿಸುವನು ||8||

ಸಕಲ ದೇವತೆಗಳಲ್ಲಿ ಏಕಾತ್ಮನ ಚಿಂತನೆ

ವಿಧಿಭವಾದಿ ಸಮಸ್ತ ಜೀವರ
ಹೃದಯದೊಳಗೇಕಾತ್ಮನೆನಿಸುವ
ಪದುಮನಾಭನು ಅಚ್ಯುತಾದಿಯ ಅನಂತರೂಪದಲಿ ||
ಅಧಿಸುಭೂತಾಧ್ಯಾತ್ಮವಧಿದ್ಯೆ-
ವದೊಳು ಕರೆಸುವ ಪ್ರಾಣ ನಾಗಾ-
ಭಿಧನು ದಶರೂಪದಲಿ ದಶವಿಧ ಪ್ರಾಣರೊಳಗಿದ್ದು ||9||

5 ಯಾಮಗಳಲ್ಲಿ 5 ಸಾಮನ ಚಿಂತನೆ

ಗೋವುಗಳೊಳುದ್ಗೀಥನಿಹ ಪ್ರ-
ಸ್ತಾವ ಹಿಂಕಾರೆರಡು ರೂಪದ
ಲಾವಿಯಜಗಳೊಳಗಿಹನು ಪ್ರತಿಹಾರಾಹ್ವ ಹಯಗಳೊಳು||
ಜೀವನಪ್ರದ ನಿಧನ ಮನುಜರೊ-
ಳೀ ವಿಧದಲಿಹ ಪಂಚಸಾಮವ
ಜಾವಜಾವಕೆ ನೆನೆವರಿಗೆ ಐದಿಸನು ಜನುಮಗಳ ||14||

4 ಯುಗಾದಿಗಳಲ್ಲಿ 4 ರೂಪಗಳ ಚಿಂತನೆ

ಯುಗಚತುಷ್ಟಯಗಳಲಿ ತಾನಿ-
ದ್ಯುಗಪ್ರವರ್ತಕ ಧರ್ಮಕರ್ಮಗ-
ಳಿಗೆ ಪ್ರವರ್ತಕ ವಾಸುದೇವಾದೀರೆರಡು ರೂಪ ||
ತೆಗೆದುಕೊಂಡು ಯುಗಾದಿಕೃತು ತಾ
ಯುಗಪ್ರವರ್ತಕನೆನಿಸಿ ಧರ್ಮ
ಪ್ರಘಟಕನು ತಾನಾಗಿ ಭಕುತಗೀವ ಸಂಪದವ ||15||

ದೇಹದಲ್ಲಿ ವಾಸುದೇವಾದಿ ಐದು ರೂಪಗಳ ಚಿಂತನೆ

ತಲೆಯೊಳಿಹ ನಾರಾಯಣನು ಗಂ-
ಟಲೆಡೆ ಒಡಲೊಳು ವಾಸುದೇವನು
ಬಲದಲಿಹ ಪ್ರದ್ಯುಮ್ನ ಎಡಭಾಗದೊಳಗನಿರುದ್ಧ ॥
ಕೆಳಗಿನಂಗದಿ ಸಂಕರ್ಷಣನ
ತಿಳಿದು ಈ ಪರಿ ಸಕಲ ದೇಹಗ-
ಳೊಳಗೆ ಪಂಚಾತ್ಮಕನ ರೂಪವ ನೋಡು ಕೊಂಡಾಡು
॥16॥

ದೇಹದಲ್ಲಿ ಪಂಚರೂಪಗಳ ಚಿಂತನೆಯ ಕ್ರಮ ಮತ್ತು ಫಲ

ತನುವಿಶಿಷ್ಟದಿ ಇಪ್ಪ ನಾರಾ-
ಯಣನು ಕಟಿಪಾದಾಂತ ಸಂಕರು-
ಷಣನು ಶಿರಜಘನಾಂತವಾಗಿಹ ವಾಸುದೇವಾಖ್ಯ ॥
ಅನಿಮಿಷೇಶಾನಿರುದ್ಧ ಪ್ರದ್ಯು-
ಮ್ನನು ಎಡದಿ ಬಲಭಾಗದಲಿ ಚಿಂ-
ತನೆಯು ಮಾಳ್ಪರಿಗುಂಟೆ ಮೈಲಿಗೆ ವಿಧಿನಿಷೇಧಗಳು ॥17॥

24 ತತ್ವಗಳಲ್ಲಿ 24 ಭಗವದ್ರೂಪಗಳು

ಪದುಮನಾಭನು ಪಾಣಿಯೊಳಗಿಹ
ವದನದಲಿ ಹೃಷಿಕೇಶ ನಾಸಿಕ
ಸದನದಲಿ ಶ್ರೀಧರನು ಜಿಹ್ವೆಯೊಳಿಪ್ಪ ವಾಮನನು ॥
ಮೃದುಳ ತ್ವಗ್ದೇಶದಿ ತ್ರಿವಿಕ್ರಮ
ಮಧುವಿರೋಧಿಯು ಲೋಚನದಿ ಕರ-
ಣದಲಿ ಇಪ್ಪನು ವಿಷ್ಣುನಾಮಕ ಶ್ರವಣನೆಂದೆನಿಸಿ ॥18॥

ಪಿಂಡಾಂಡದಲ್ಲಿ ಬ್ರಹ್ಮಾಂಡ ಚಿಂತಿಸುವರೆ ಭೂಸುರರು

ಮನದೊಳಿಹ ಗೋವಿಂದ ಮಾಧವ
ಧನಪಸಖತತ್ವದಲಿ ನಾರಾ-
ಯಣ ಮಹತ್ತತ್ವದಲಿ ಅವ್ಯಕ್ತದೊಳು ಕೇಶವನು ॥
ಇನಿತು ರೂಪವ ದೇಹದೊಳು ಚಿಂ
ತನೆ ಗೈಯುವ ಮಹಾತ್ಮರಿಳೆಯೊಳು
ಮನುಜರವರಲ್ಲಮರರೇ ಸರಿ ಹರಿಕೃಪಾಬಲದಿ ॥19॥

ಪಂಚಭೂತ ಮತ್ತು ಪಂಚತನ್ಮಾತ್ರಗಳಲ್ಲಿ ಪರುಶುರಾಮಾದಿ ರೂಪಗಳು

ನೆಲದೊಳಿಪ್ಪನು ಕೃಷ್ಣರೂಪದಿ
ಜಲದೊಳಿಪ್ಪನು ಹರಿಯೆನಿಸಿ ಶಿಖಿ-
ಒಳಗೆ ಇಪ್ಪನು ಪರಶುರಾಮನುಪೇಂದ್ರನೆಂದೆನಿಸಿ ॥
ಎಲರೊಳಿಪ್ಪ ಜನಾರ್ದನನು ಬಾಂ-
ದಳದೊಳಚ್ಯುತ ಗಂಧ ನರಹರಿ
ಪೊಳೆವಧೋಕ್ಷಜ ರಸಗಳೊಳು ರಸರೂಪ ತಾನಾಗಿ॥20॥

ದೇಹದಲ್ಲಿರುವ ಮತ್ತೂ ಐದು ರೂಪಗಳು

ರೂಪ ಪುರುಷೋತ್ತಮನು ಸ್ಪರ್ಶ
ಪ್ರಾಪಕನು ಅನಿರುದ್ಧ ಶಬ್ದದಿ
ವ್ಯಾಪಿಸಿಹ ಪ್ರದ್ಯುಮ್ನುಪಸ್ಥದಿ ವಾಸುದೇವನಿಹ ॥
ತಾ ಪೊಳೆವ ಪಾಯುಸ್ಥನಾಗಿ ಜ-
ಯಾಪತಿಯು ಸಂಕರುಷಣನು ಸು-
ಸ್ಥಾಪಕನು ಆಹ ಪಾದದೊಳು ದಾಮೋದರನು ಪೊಳೆವ
॥21॥

ಪಿತೃಗಳಿಗೆ ತೃಪ್ತಿ ಪಡಿಸುವ ಷಣ್ಣವತಿ ರೂಪಗಳು

ಚತುರವಿಂಶತಿ ತತ್ವದೊಳು ಶ್ರೀ-
ಪತಿಯು ಅನಿರುದ್ಧಾದಿ ರೂಪದಿ
ವಿತತನಾಗಿದ್ದಖಿಳ ಜೀವರ ಸಂಹನನದೊಳಗೆ ॥
ಪ್ರತತಿಯಂದದಿ ಸುತ್ತಿ ಸುತ್ತುತ
ಪಿತೃಗಳಿಗೆ ತರ್ಪಕನೆನಿಸಿಕೊಂಡ-
ಡತುಳಮಹಿಮನು ಷಣ್ಣವತಿನಾಮದಲಿ ನೆಲಸಿಹನು॥22॥

24 ತತ್ವಾಭಿಮಾನಿ ದೇವತೆಗಳಲ್ಲಿ 1,152 ರೂಪಗಳು

ಚತುರವಿಂಶತಿ ತತ್ವದೊಳು ತ-
ತ್ಪತಿಗಳೆನಿಸುವ ಬ್ರಹ್ಮಮುಖ ದೇ-
ವತೆಗಳೊಳು ಹನ್ನೊಂದುನೂರೈವತ್ತೆರಡು ರೂಪ ॥
ವಿತತನಾಗಿದ್ದೆಲ್ಲ ಜೀವರ
ಜತನ ಮಾಡುವಗೋಸುಗ ಜಗ-
ತ್ಪತಿಗೆ ಏನಾದರು ಪ್ರಯೋಜನವಿಲ್ಲವಿದರಿಂದ ॥23॥

ಶಕ್ತಿ, ಪ್ರತಿಷ್ಠಾದಿ ರೂಪಗಳಿಂದ ಪರಮಾಪ್ತನಾಗಿರುವನು

ಇಂದಿರಾಧವ ಶಕ್ತಿ ಮೊದಲಾ-
ದೊಂದಧಿಕ ದಶರೂಪದಿಂದಲಿ
ಪೊಂದಿಹನು ಸಕಲೇಂದ್ರಿಯಗಳಲಿ ಪುರುಷನಾಮಕನು ॥
ಸುಂದರಪ್ರದ ಪೂರ್ಣಜ್ಞಾನಾ-
ನಂದಮಯ ಚಿದ್ದೇಹದೊಳು ತಾ-
ವಂದರೆಕ್ಷಣವಗಲದಲೆ ಪರಮಾಪ್ತನಾಗಿಪ್ಪ ॥24॥

ಲಿಂಗ ಶರೀರದಲಿ 16 ಭಗವದ್ರೂಪಗಳು

ಆರಧಿಕ ದಶರೂಪದಿಂದಲಿ
ತೋರುತಿಪ್ಪನು ವಿಶ್ವಲಿಂಗ ಶ-
ರೀರದೊಳು ತೈಜಸನು ಪ್ರಾಜ್ಞನು ತುರ್ಯನಾಮಕನು ॥
ಮೂರೈದು ರೂಪಗಳಿಂದಲಿ
ಈರೈದು ಕರಣದೋಳು ಮಾತ್ರದಿ
ಖೇರ ಶಿಖಿ ಜಲಭೂಮಿಯೊಳಗಿಹನಾತ್ಮನಾಮದಲಿ॥25॥

ಎಲ್ಲೆಡೆ ಆತ್ಮಾದಿರೂಪಗಳ ಹಾಗೂ ಅಜಾದಿರೂಪಗಳ ಉಪಾಸನೆ

ಮನದೊಳಹಂಕಾರದಲಿ ಚಿಂ-
ತನೆಯ ಮಾಳ್ಪದು ಅಂತರಾತ್ಮನ
ಘನ ಸುತತ್ವದಿ ಪರಮವ್ಯಕ್ತದಲಿ ಜ್ಞಾನಾತ್ಮಾ ॥
ಇನಿತು ಪಂಚಾಶದ್ವರಣ ವೇ-
ದ್ಯನ ಅಜಾದ್ಯೆವತ್ತು ಮೂರ್ತಿಗ-
ಳನು ಸದಾ ಸರ್ವತ್ರ ದೇಹಗಳಲ್ಲಿ ಪೂಜಿಪುದು ॥26॥

ಸ್ಥೂಲ ಶರೀರದಲ್ಲಿ ಇರುವ ಒಟ್ಟು ಭಗವದ್ರೂಪಗಳು 13,824

ಚತುರವಿಂಶತಿ ತತ್ವದೊಳು ತ-
ತ್ಪತಿಗಳೆನಿಸುವ ಬ್ರಹ್ಮಮುಖ ದೇ-
ವತೆಗಳೊಳು ಹದಿಮೂರು ಸಾವಿರದೆಂಟು ನೂರಧಿಕ ॥
ಚತುರವಿಂಶತಿ ರೂಪದಿಂದಲಿ
ವಿತತನಾಗಿದ್ದೆಲ್ಲರೊಳು ಪ್ರಾ-
ಕೃತ ಪುರುಷನಂದದಲಿ ಪಂಚಾತ್ಮಕನು ರಮಿಸುವನು॥27॥

12 ಪುಂಡ್ರ, 12 ಮಾಸ ಹಾಗೂ 6 ಋತು 30 ತಿಥಿಗಳಲ್ಲಿ ಇರುವ ಭಗವದ್ರೂಪಗಳು

ಕೇಶವಾದಿ ಸುಮೂರ್ತಿ ದ್ವಾದಶ
ಮಾಸ ಪುಂಡ್ರಗಳಲ್ಲಿ ವೇದ-
ವ್ಯಾಸ ಅನಿರುದ್ಧಾದಿ ರೂಪಗಳಾರು ಋತುಗಳಲಿ ॥
ವಾಸವಾಗಿಹನೆಂದು ತ್ರಿಂಶತಿ
ವಾಸರದಿ ಸತ್ಕರ್ಮ ಧರ್ಮ ನಿ-
ರಾಶೆಯಿಂದಲಿ ಮಾಡು ಕರುಣವ ಬೇಡು ಕೊಂಡಾಡು
॥28॥

ಚೇತನಾಚೇತನಗಳ ಕ್ರಿಯೆ ಶ್ರೀಹರಿಯ ಅಧೀನ

ಲೋಷ್ಟ ಕಾಂಚನ ಲೋಹ ಶೈಲಜ
ಕಾಷ್ಠ ಮೊದಲಾದಖಿಳ ಜಡ ಪರ-
ಮೇಷ್ಠಿ ಮೊದಲಾದೆಲ್ಲ ಚೇತನರೊಳಗೆ ಅನುದಿನವು ॥
ಚೇಷ್ಟೆಗಳ ಮಾಡಿಸುವ ತಿಳಿಸದೆ
ಪ್ರೇಷ್ಠನಾಗಿದ್ದೆಲ್ಲರಿಗೆ ಸ-
ರ್ವೇಷ್ಟದಾಯಕ ಸಂತೈಸುವನು ಸರ್ವಜೀವರನು ॥29॥

ಸ್ತ್ರೀ-ಪುರುಷರ ಶರೀರದಲ್ಲಿರುವ ವಾಸುದೇವಾದಿ ರೂಪಗಳು

ವಾಸುದೇವನಿರುದ್ಧರೂಪದಿ
ಪುಂಶರೀರದೊಳಿಹನು ಸರ್ವದ
ಸ್ತ್ರೀಶರೀರದೊಳಿಹನು ಸಂಕರುಷಣನು ಪ್ರದ್ಯುಮ್ನ ॥
ದ್ವಾಸುಪರ್ಣಶ್ರುತಿವಿನುತ ಸ-
ರ್ವಾಸುನಿಲಯ ನಾರಾಯಣನ ಸದು-
ಪಾಸನೆಯ ಗೈವವರು ಜೀವನ್ಮುಕ್ತರೆನಿಸುವರು ॥30॥

ದೇವತೆಗಳಲ್ಲಿ ಕರುಣಾಸಮುದ್ರನ ವ್ಯಾಪಾರ

ತನ್ನನಂತಾನಂತರೂಪ ಹಿ-
ರಣ್ಯಗರ್ಭಾದಿಗಳೊಳಗೆ ಕಾ-
ರುಣ್ಯಸಾಗರ ಹರಿಹಿ ಅವರವರಖಿಳ ವ್ಯಾಪಾರ ॥
ಬನ್ನಬಡದಲೆ ಮಾಡಿ ಮಾಡಿಸಿ
ಧನ್ಯರೆನಿಸಿ ಸಮಸ್ತ ದಿವಿಜರ
ಪುಣ್ಯಕರ್ಮವ ಸ್ವೀಕರಿಸಿ ಫಲವಿತ್ತು ಪಾಲಿಸುವ ॥31॥

ಜೀವ ಪರಮಾತ್ಮರ ಭೇದ ಅಜ್ಞಾನಿಗಳಿಗೆ ತಿಳಿಯದು

ಸಾಗರದೊಳಿಹ ನದಿಯ ಜಲಭೇ-
ದಾಗಸದೊಳಿಪ್ಪಬ್ದ ಬಲ್ಲವು
ಕಾಗೆಗುಬ್ಬಿಗಳರಿಯಬಲ್ಲವೆ ನದಿಯ ಜಲಸ್ಥಿತಿಯ ॥
ಭೋಗಿವರ ಪರಿಯಂಕ ಶಯನನೊ-
ಳೀಗುಣತ್ರಯಬದ್ಧ ಜಗವಿಹ
ದಾಗಮಜ್ಞರು ತಿಳಿವರಜ್ಞಾನಿಗಳಿಗಳವಡದು ॥32॥

ಚತುರೂಪಗಳ ಉಪಾಸಕರಿಗೆ ದೊರೆಯುವ ಫಲ

ಕರಣಗುಣಭೂತಗಳೊಳಗೆ ತ-
ದ್ವರರೆನಿಪ ಬ್ರಹ್ಮಾದಿ ದಿವಿಜರೊ-
ಳರಿತು ರೂಪಚತುಷ್ಟಯಗಳನು ದಿನದಿ ಸರ್ವತ್ರ ॥
ಸ್ಮರಿಸುತನು ಮೋದಿಸುತ ಹಿಗ್ಗುತ
ಪರವಶದಿ ಪಾಡುವವರಿಗೆ ತ-
ನ್ನಿರವ ತೋರಿಸಿ ಭವವಿಮುಕ್ತರ ಮಾಡಿ ಪೋಷಿಸುವ
॥33॥

ಇಂದ್ರಿಯಗಳಲ್ಲಿ ದಶಾವತಾರಗಳ ಚಿಂತನೆ

ಮೂಲರೂಪನು ಮನದೊಳಿಹ ಶ್ರವ-
ಣಾಲಿಯೊಳಗಿಹ ಮತ್ಸ್ಯ ಕೂರ್ಮನು
ಕೋಲರೂಪನು ತ್ವಗ್ರಸನದೊಳಗಿಪ್ಪ ನರಸಿಂಹ ॥
ಬಾಲವಟು ವಾಮನನು ನಾಸಿಕ
ನಾಳದೊಳು ವದನದಲಿ ಭಾರ್ಗವ
ವಾಲಿಭಂಜನ ಹಸ್ತದೊಳು ಪಾದದಲಿ ಶ್ರೀಕೃಷ್ಣ ॥34॥

ಇಂದ್ರಿಯಗಳಲ್ಲಿ ಇರುವ ದಶಾವತಾರಗಳಿಗೆ ಸರ್ವಸಮರ್ಪಣೆ

ಜಿನ ವಿಮೋಹಕ ಬುದ್ಧ ಪಾಯುಗ
ದನುಜಮರ್ದನ ಕಲ್ಕಿ ಮೇಢ್ರದಿ
ಇನಿತು ದಶರೂಪಗಳ ದಶಕರಣಂಗಳಲಿ ತಿಳಿದು ॥
ಅನುಭವಿಪ ವಿಷಯಗಳ ಕೃಷ್ಣಾ-
ರ್ಪಣವೆನಲು ಕೈಗೊಂಬ ವೃಜಿನಾ-
ರ್ದನ ವರಜಗನ್ನಾಥವಿಟ್ಠಲ ವಿಶ್ವವ್ಯಾಪಕನು ॥35॥

॥ ಇಲ್ಲಿಗೆ ಆರನೆಯ ಪಂಚಮಹಾಯಜ್ಞಸಂಧಿ ಮುಗಿಯಿತು॥

ಪಂಚತನ್ಮಾತ್ರಸಂಧಿ-7

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಶರೀರದಲ್ಲಿ ಅಜಾದಿ 51 ರೂಪಗಳ ಚಿಂತಿಸು

ಭೂ ಸಲಿಲ ಶಿಖಿ ಪವನ ಭೂತಾ-
ಕಾಶದೊಳಗೈದೈದು ತನ್ಮಾ-
ತ್ರಾಸಹಿತ ಒಂದಧಿಕ ಪಂಚಾಶದ್ವರ್ಣವೇದ್ಯ ॥
ಈ ಶರೀರದಿ ವ್ಯಾಪಿಸಿದ್ದು ಸು-
ರಾಸುರರಿಗೆ ನಿರಂತರದಲಿ ಸು-
ಖಾಸುಖಪ್ರದನಾಗಿ ಆಡುವ ದ್ವೇಷಿಪರ ಬಡಿವ ॥1॥

ದೇಹದಲ್ಲಿ ಮತ್ತು ನಾಡಿಗಳಲ್ಲಿರುವ ಭಗವದ್ರೂಪಗಳು

ಪ್ರಣವಪ್ರತಿಪಾದ್ಯ ತ್ರಿನಾಮದಿ
ತನುವಿನೊಳು ತ್ರಿಸ್ಥಾನಗಳಿರು-
ದ್ದನು ತ್ರಿಪಂಚಕ ಏಕವಿಂಶತಿ ಚತುರವಿಂಶತಿಗ- ॥
ಎನಿಸಿ ಎಪ್ಪತ್ತೆರಡು ಸಾವಿರ-
ಇನಿತು ನಾಡಿಗಳೊಳು ನಿಯಾಮಿಸು
ತಿನಗಭಸ್ತಿಗ ಲೋಕದೊಳು ಸರ್ವತ್ರ ಬೆಳಗುವನು ॥2॥

ನಾಕು ಶರೀರಗಳಲ್ಲಿ 19 ಭಗವದ್ರೂಪಗಳು

ಜೀವಲಿಂಗಾನಿರುದ್ಧ ಸ್ಥೂಲ ಕ-
ಳೇವರಗಳಲಿ ವಿಶ್ವ ತುರಗ
ಗ್ರೀವ ಮೂಲೇಶಾಚ್ಯುತತ್ರಯ ಹಂಸಮೂರ್ತಿಗಳ ॥
ಈ ವಿಧ ಚತುಃಸ್ಥಾನದಲಿ ಶಾಂ-
ತೀವರನ ಈರೆರಡು ರೂಪದಿ
ಭಾವಿಸುವುದೇಕೋನವಿಂಶತಿಮೂರ್ತಿ ಸರ್ವತ್ರ ॥3॥

ಬಿಂಬ-ಪ್ರತಿಬಿಂಬಭಾವದಿಂದ ಭಗವದುಪಾಸನಕ್ರಮ

ಕಲುಷವಿಲ್ಲದ ದರ್ಪಣಾದಿ ಪ್ರತಿ-
ಫಲಿಸಿ ಸರ್ವ ಪದಾರ್ಥಗಳು ಕಂ-
ಗೊಳಿಸುವಂದದಿ ಬಿಂಬಜಡಚೇತನಗಳೊಳಗಿದ್ದು ||
ಪೊಳೆವ ಬಹುರೂಪದಲಿ ಸಜ್ಜ-
ದೊಳಗೆ ಮನದರ್ಪಣದಿ ತಾ ನಿ-
ಶ್ಚಲ ನಿರಾಮಯ ನಿರ್ವಿಕಾರ ನಿರಾಶ್ರಯಾನಂತ ||4||

ನಾಕು ದೇಹಗಳಲ್ಲಿರುವ ಮುಖ್ಯಪ್ರಾಣದೇವರು ನಡೆಸುವ ವ್ಯಾಪಾರ

ಈ ಶರೀರಚತುಷ್ಟಯಗಳೊಳು
ಕೋಶಧಾತುಗ ಭಾರತಿಪ ಪ್ರಾ-
ಣೇಶನಿಪ್ಪತ್ತೊಂದು ಸಾವಿರದಾರುನೂರೆನಿಪ ||
ಶ್ವಾಸರೂಪಕ ಹಂಸಭಾಸ್ಕರ
ಭೇಶರೊಳಗಿದ್ದವರ ಕೈಪಿಡಿ-
ದೀ ಸರೋಜಭವಾಂಡದೊಳು ಸರ್ವತ್ರ ತುಂಬಿಹನು||5||

ವಾಙ್ಮನೋಮಯರೂಪಿ ಭಗವಂತನ ಉಪಾಸನೆ

ಶಿರಗಳೈದ್ವೆದೆರಡು ಬಾಹುಗ-
ಳೆರಡು ಪಾದಗಳೊಂದು ಮಧ್ಯೋ-
ದರದಿ ಶೋಭಿಪ ವಾಙ್ಮನೋಮಯನೆನಿಪ ನಿತ್ಯದಲಿ ॥
ಕರಣಧಾತುಗಳಲ್ಲಿ ಎಪ್ಪ-
ತ್ತೆರಡುಸಾವಿರ ನಾಡಿಗಳಲಿ-
ಪ್ಪರವಿದೂರನು ಭಾರತಪ್ರತಿಪಾದ್ಯನೆಂದೆನಿಸಿ ॥6॥

ಚತುಃಷಷ್ಟಿಕಲಾವಿದ್ಯಾಧಾರಕನಾದ ಚತುಷ್ಪಾದನ ಉಪಾಸನೆ

ಈರೆರಡು ದೇಹೋರ್ಮಿಭೂತಗ-
ಳಾರಧಿಕದಶಋಗ್ವಿನುತ ಲ-
ಕ್ಷ್ಮೀರಮಣ ವಿಷ್ವಾಖ್ಯರೂಪದಿ ಚತುಃಷಷ್ಟಿಕಲಾ- ॥
ಧಾರಕನು ತಾನಾಗಿ ಬ್ರಹ್ಮ ಪು-
ರಾರಿ ಮುಖ್ಯರೊಳಿದ್ದು ಸತತ ವಿ-
ಹಾರ ಮಾಳ್ಪನು ಚತುಷ್ಪಾದಾಹ್ವಯದಿ ಲೋಕದೊಳು ॥7॥

ಘೃಣಿ, ಸೂರ್ಯ, ಆದಿತ್ಯ ಎಂದು ನಿತ್ಯ ಜಪಿಸಬೇಕು.

ತೃಣ ಮೊದಲು ಬ್ರಹ್ಮಾಂತ ಜೀವರ
ತನುಚತುಷ್ಟಯಗಳಲಿ ನಾರಾ-
ಯಣನ ಸಾವಿರದ್ವೈದು ನೂರಿಪ್ಪತ್ತು ಮೇಲಾರು ॥
ಗಣನೆ ಮಾಳ್ಪರು ಬುಧರು ರೂಪವ
ಘೃಣಿಃ ಸೂರ್ಯಾದಿತ್ಯನಾಮಗ-
ಳನುದಿನದಿ ಜಪಿಸುವರಿಗೀವಾರೋಗ್ಯಸಂಪದವ ॥8॥

ಆಧಿಭೌತಿಕದಲ್ಲಿ 574, ಆಧ್ಯಾತ್ಮದಲ್ಲಿ 121, ಅಧಿದ್ವೈವದಲ್ಲಿ 231 ರೂಪಗಳು

ಐದುನೂರೆಪ್ಪತ್ತನಾಲಕು
ಆಧಿಭೌತಿಕದಲ್ಲಿ ತಿಳಿವುದು
ಐದೆರಡು ಶತಏಕವಿಂಶತಿ ರೂಪವಧ್ಯಾತ್ಮ ॥
ಭೇದಗಳಲಿನ್ನೂರ ಮೂವ-
ತ್ತಾದ ಮೇಲೊಂದಧಿಕ ಮೂರ್ತಿಗ-
ಳಾದರರದಲಧಿದ್ವೈವದೊಳು ಚಿಂತಿಪುದು ಭೂಸುರರು ॥9॥

ಚಂದ್ರಸೂರ್ಯಗತ ಸುರುಚಿ ಶಾರ್ವರಿಕರ ರೂಪಗಳ ಉಪಾಸನೆ

ಸುರುಚಿ ಶಾರ್ವರಿಕರನೆನಿಸಿ ಸಂ-
ಕರುಷಣ ಪ್ರದ್ಯುಮ್ನ ಶಶಿ ಭಾ-
ಸ್ಕರರೊಳಗೆ ಅರವತ್ತಧಿಕ ಮುನ್ನೂರು ರೂಪದಲಿ ॥
ಕರೆಸಿಕೊಂಬನು ಅಹಸ್ಸಂವ-
ತ್ಸರನೆನಿಪನು ವಿಶಿಷ್ಟನಾಮದ-
ಲರಿತವರಿಗಾರೋಗ್ಯಭಾಗ್ಯವನೀವಾನಂದಮಯ ॥10॥

51 ವರ್ಣಗತನಾದ ಶ್ರೀಹರಿ ಎಲ್ಲೆಡೆ ವ್ಯಾಪ್ತನಾಗಿ ಸರ್ವಶಬ್ದವಾಚ್ಯನಾಗಿ ಮನೋವಾಙ್ಮಯನೆನಿಸುವ

ಏಕಪಂಚಾಶದ್ವರಣಗತ
ಮಾಕಳತ್ರನು ಸರ್ವರೊಳಗ-
ವ್ಯಾಕೃತಾಕಾಶಾಂತ ವ್ಯಾಪಿಸಿ ನಿಗಮತತಿಗಳನು ॥
ವ್ಯಾಕರಣ ಭಾರತ ಮುಖಾದ್ಯ-
ನೇಕಶಾಸ್ತ್ರಪುರಾಣ ಭಾಷ್ಯಾ
ನೀಕಗಳ ಕಲ್ಪಿಸಿ ಮನೋವಾಙ್ಮಯನೆನಿಸಿಕೊಂಬ ॥11॥

ಚರಾಚರಗಳಲ್ಲಿ ಭಾರಭೃನ್ನಾಮಕನ 1624 ರೂಪಗಳು

ಭಾರಭೃನ್ನಾಮಕನ ಸಾವಿರ-
ದಾರುನೂರಿಪ್ಪತ್ತುನಾಲಕು
ಮೂರುತಿಗಳು ಚರಾಚರದಿ ಸರ್ವತ್ರ ತುಂಬಿಹವು ॥
ಆರುನಾಲಕು ಜಡಗಳಲಿ ಹದಿ-
ನಾರು ಚೇತನಗಳಲಿ ಚಿಂತಿಸೆ
ತೋರಿಕೊಂಬನು ತನ್ನ ರೂಪವ ಸಕಲ ಠಾವಿನಲಿ ॥12॥

ಬ್ರಹ್ಮಾಂಡದಲ್ಲಿ ಆಧಾರ ರೂಪಗಳು 242, ಆಧೇಯ ರೂಪಗಳು 142

ಮಿಸುನಿ ಮೇಲಿನ ಮಣಿಯವೋಲ್ ರಾ-
ಜಿಸುವ ಬ್ರಹ್ಮಾದಿಗಳ ಮನದಲಿ
ಬಿಸಜಜಾಂಡಾಧಾರಕನು ಆಧೇಯನೆಂದೆನಿಸಿ ॥
ದ್ವಿಶತ ನಾಲ್ವತ್ತೆರಡು ರೂಪದಿ
ಶಶಿಯೊಳಿಪ್ಪನು ಶರದೊಳಗೆ ಶೋ-
ಭಿಸುವ ನಾಲ್ವತ್ತೆರಡಧಿಕ ಶತರೂಪದಲಿ ಬಿಡದೆ ॥1

ಸರ್ವಪದಾರ್ಥಗಳಲ್ಲಿ 2008 ರೂಪಗಳ ಕೊಂಡಾಡು

ಎರಡುಸಾವಿರದೆಂಟು ರೂಪವ
ನರಿತು ಸರ್ವಪದಾರ್ಥದಲಿ ಸಿರಿ
ವರನ ಪೂಜೆಯ ಮಾಡು ವರಗಳ ಬೇಡು ಕೊಂಡಾಡು ||
ಬರಿದೆ ಜಲದಲಿ ಮುಳುಗಿ ಬಿಸಿಲೊಳು
ಬೆರಳನೆಣಿಸಿದರೇನು ಸದ್ಗುರು
ಹಿರಿಯರನನುಸರಿಸಿದರದೆ ಮರ್ಮವನರಿಯದಿಹ ನರನು
||14||

ಸ್ವರೂಪ ಶರೀರದಲ್ಲಿರುವ 80,725 ನೃಸಿಂಹದೇವರ ರೂಪಗಳು

ಮತ್ತೆ ಚಿದ್ದೇಹದ ಒಳಗೆ ಎಂ-
ಭತ್ತು ಸಾವಿರದೇಳುನೂರಿ-
ಪ್ಪತ್ತ ಐದು ನೃಸಿಂಹ ರೂಪದಲಿದ್ದು ಜೀವರಿಗೆ ||
ನಿತ್ಯದಲಿ ಹಗಲಿರುಳು ಬಪ್ಪಪ
ಮೃತ್ಯುವಿಗೆ ತಾ ಮೃತ್ಯುವೆನಿಸುವ
ಭೃತ್ಯವತ್ಸಲ ಭಯವಿನಾಶನ ಭಾಗ್ಯಸಂಪನ್ನ ||15||

ಜ್ವರಹರಾಹ್ವಯ ನರಸಿಂಹನ ರೂಪಗಳು 2,827

ಜ್ವರನೊಳಿಪ್ಪತ್ತೇಳು ಹರನೊಳ-
ಗಿರುವನಿಪ್ಪತ್ತೆಂಟು ರೂಪದಿ
ಎರಡುಸಾವಿರದೆಂಟುನೂರಿಪ್ಪತ್ತರೇಳೆನಿಪ ॥
ಜ್ವರಹರಾಹ್ವಯ ನಾರಸಿಂಹನ
ಸ್ಮರಣೆ ಮಾತ್ರದಿ ದುರಿತರಾಶಿಗ
ಳಿರದೆ ಪೋಪವು ತರಣಿಬಿಂಬವ ಕಂಡ ಹಿಮದಂತೆ॥16॥

ನೃಸಿಂಹ ಮಂತ್ರ ಜಪದಿಂದ ದುರಿತ ಪರಿಹಾರ

ಮಾಸಪರಿಯಂತರವು ಬಿಡದೆ ನೃ-
ಕೇಸರಿಯ ಶುಭನಾಮ ಮಂತ್ರ ಜಿ-
ತಾಸನದಲೇಕಾಗ್ರಚಿತ್ತದಿ ನಿಷ್ಕಪಟದಿಂದ ॥
ಬೇಸರದೆ ಜಪಿಸಲು ವೃಜಿನಗಳ
ನಾಶಗೈಸಿ ಮನೋರಥಗಳ ಪ-
ರೇಶ ಪೂರ್ತಿಯ ಮಾಡಿಕೊಡುವನು ಕಡೆಗೆ ಪರಗತಿಯ
॥17॥

ನೂರು ವರುಷಗಳಲ್ಲಿ ಚಿಂತಿಸಬೇಕಾದ ದೇವತಾಂತರ್ಯಾಮಿ ರೂಪಗಳು

ಚತುರಮೂರ್ತ್ಯಾತ್ಮಕ ಹರಿಯು ತ್ರಿಂ-
ಶತಿಸ್ವರೂಪದಿ ಬ್ರಹ್ಮನೊಳು ಮಾ-
ರುತನೊಳಿಪ್ಪತ್ತೇಳು ರೂಪದಲಿಪ್ಪ ಪ್ರದ್ಯುಮ್ನ ॥
ಸುತರೊಳಿಪ್ಪತ್ತೈದು ಹದಿನೆಂ-
ಟತುಳರೂಪಗಳರಿತು ವತ್ಸರ
ಶತಗಳಲಿ ಪೂಜಿಸುತಲಿರು ಚತುರಾತ್ಮಕನ ಪದವ ॥18॥

36000 ದಿವಸದ ಕಾರ್ಯಗಳನ್ನು ಆಯಾ ನಾಡೀಗತ ರೂಪಗಳಿಗೆ ಅರ್ಪಿಸು

ನೂರು ವರುಷಕೆ ದಿವಸ ಮೂವ-
ತ್ತಾರು ಸಾವಿರವಹವು ನಾಡಿ ಶ-
ರೀರದೊಳಗಿನಿತಿಹವು ಸ್ತ್ರೀಪುಂಭೇದದಲಿ ಹರಿಯ ॥
ಈರಧಿಕ ಎಪ್ಪತ್ತುಸಾವಿರ
ಮೂರುತಿಗಳನೆ ನೆನೆದು ಸರ್ವಾ-
ಧಾರಕನ ಸರ್ವತ್ರ ಪೂಜಿಸು ಪೂರ್ಣನೆಂದರಿದು ॥19॥

ಎಲ್ಲಾ ತತ್ವಗಳಿಗೆ ಆಶ್ರಯನಾಗಿರುವ ಭಗವಂತ

ಕಾಲಕರ್ಮಗುಣಸ್ವಭಾವಗ-
ಳಾಲಯನು ತಾನಾಗಿ ಲಕುಮೀ
ಲೋಲ ತತ್ತದ್ರೂಪನಾಮದಿ ಕರೆಸುತೊಳಗಿದ್ದು ॥
ಲೀಲೆಯಿಂದಲಿ ಸರ್ವಜೀವರ
ಪಾಲಿಸುವ ಸಂಹರಿಸಿ ಸೃಷ್ಟಿಪ
ಮೂಲಕಾರಣ ಪ್ರಕೃತಿಗುಣಕಾರ್ಯಗಳ ಮನೆಮಾಡಿ

॥20॥

ಜ್ಞಾನ ಭಕ್ತಿ ಕರ್ಮಾನುಸಾರವಾಗಿ ಹರಿ ಒಲಿವ

ತಿಲಜವರ್ತಿಗಳನುಸರಿಸಿ ಪ್ರ-
ಜ್ವಲಿಸಿ ದೀಪಗಳಾಲಯದ ಕ-
ತ್ತಲೆಯ ಭಂಗಿಸಿ ತದ್ಗತಾರ್ಥವ ತೋರುವಂದದಲಿ ॥
ಜಲರುಹೇಕ್ಷಣ ತನ್ನವರ ಮನ-
ದೊಳಗೆ ಭಕ್ತಿಜ್ಞಾನಕರ್ಮಕೆ
ಒಲಿದು ಪೊಳೆವುತ ತೋರುವನು ಗುಣರೂಪಕ್ರಿಯೆಗಳನು

॥21॥

ಎಲ್ಲಿದ್ದರೂ ಹೇಗಿದ್ದರೂ ವಿಷ್ಣುಭಕ್ತಿ ಆರದಿರಲಿ

ಆವ ದೇಹವ ಕೊಡಲಿ ಹರಿ ಮ-
ತ್ತಾವ ಲೋಕದೊಲಿಡಲಿ ತಾ ಮ-
ತ್ತಾವ ದೇಶದೊಳಿಡಲಿ ಆವಾವಸ್ಥೆಗಳು ಬರಲಿ ॥
ಈ ವಿಧದಿ ಜಡಚೇತನದೊಳು ಪ-
ರಾವರೇಶನ ರೂಪಗುಣಗಳ
ಭಾವಿಸುತ ಸುಜ್ಞಾನ ಭಕುತಿಯ ಬೇಡು ಕೊಂಡಾಡು
॥22॥

ವ್ಯಾಪ್ತೋಪಾಸನೆಯ ಮಜಲುಗಳು

ಒಂದರೊಳಗೊಂದೊಂದು ಬೆರೆದಿಹ
ಇಂದಿರೇಶನ ರೂಪಗಳ ಮನ
ಬಂದ ತೆರದಲಿ ಚಿಂತಿಸಿದಕನುಮಾನವಿನಿತಿಲ್ಲ ॥
ಸಿಂಧುರಾಜನೊಳಂಬರಾಲಯ
ಬಂಧಿಸಲು ಪ್ರತಿತಂತುಗಳೊಳುದ
ಬಿಂದು ವ್ಯಾಪಿಸಿದಂತೆ ಇರುತಿಪ್ಪನು ಚರಾಚರದಿ ॥23॥

ಅನಂತಕೋಟಿ ಬ್ರಹ್ಮಾಂಡನಾಯಕನ ಮಹಿಮೆ ಅದ್ಭುತ ಅತ್ಯದ್ಭುತ !!

ಒಂದು ರೂಪದೊಳೊಂದವ ಯವದೊ-
ಳೊಂದು ರೋಮದೊಳೊಂದು ದೇಶದಿ
ಪೊಂದಿ ಇಪ್ಪವಜಾಂಡನಂತಾನಂತ ಕೋಟಿಗಳು ॥
ಹಿಂದೆ ಮಾರ್ಕಾಂಡೇಯ ಕಾಣನೆ
ಒಂದು ರೂಪದಿ ಸೃಷ್ಟಿ ಪ್ರಳಯವ
ಇಂದಿರೇಶನೊಳೇನಿದಚ್ಚರಿಯ ಅಪ್ರಮೇಯ ಸದಾ ॥24॥

ಭಗವಂತನ ಪ್ರತಿವೊಂದು ರೂಪದಲ್ಲಿ ಅನಂತಾನಂತ ರೂಪಗಳು

ಒಂದನಂತಾನಂತ ರೂಪಗ-
ಳೊಂದು ರೂಪದೊಳಿಹವು ಲೋಕದೊ-
ಳೊಂದೆ ರೂಪದಿ ಸೃಷ್ಟಿ ಸ್ಥಿತಿ ಮೊದಲಾದ ವ್ಯಾಪಾರ ॥
ಒಂದೆ ಕಾಲದಿ ಮಾಡಿ ತಿಳಿಸದೆ
ಸಂದಣಿಸಿಕೊಂಡಿಪ್ಪ ಜಗದೊಳು
ನಂದನಂದನ ರಣದೊಳಿಂದ್ರಾತ್ಮಜಗೆ ತೋರಿಸನೆ ॥25॥

ನವನಾರಿಕುಂಜರದಂತೆ ಶರೀರದಲಿ ಭಗವಂತನ ರೂಪ

ಶ್ರೀರಮೇಶನ ಮೂರ್ತಿಗಳು ನವ
ನಾರಿಕುಂಜರದಂತೆ ಏಕಾ-
ಕಾರ ತೋರ್ಪುವು ಅವಯವಾಹ್ವಯ ಅವಯವಗಳಲ್ಲಿ
ಬೇರೆಬೇರೇ ಕಂಗೊಳಿಸುವ ಶ-
ರೀರದೊಳು ನಾನಾಪ್ರಕಾರ ವಿ-
ಕಾರಶೂನ್ಯ ವಿರಾಟನೆನಿಸುವ ಪದುಮಜಾಂಡದೊಳು
॥26॥

ಹತ್ತು ವಿಭೂತಿರೂಪಗಳು ಅಲೆಗಳಂತೆ ವ್ಯಕ್ತಾವ್ಯಕ್ತ

ವಾರಿಜಭವಾಂಡದೊಳು ಲಕುಮೀ
ನಾರಸಿಂಹನ ರೂಪಗುಣಗಳು
ವಾರಿಧಿಯೊಳಿಹ ತೆರೆಗಳಂದದಿ ಸಂದಣಿಸಿ ಇಹವು ॥
ಕಾರಣಾಂಶಾವೇಶವ್ಯಾಪ್ತವ-
ತಾರಕಾರ್ಯಾವ್ಯಕ್ತಾವ್ಯಕ್ತವು
ಆರು ನಾಲ್ಕು ವಿಭೂತಿಯಂತರ್ಯಾಮಿ ರೂಪಗಳು
॥27॥

ಸೂತ್ರನಾಮಕನಾಗಿ ಜಗತ್ತನ್ನು ನಿಯಮಿಸುವನು

ಮಣಿಗಳೊಳಗಿಹ ಸೂತ್ರದಂದದಿ
ಪ್ರಣವಪಾದ್ಯನು ಚೇತನಾಚೇ-
ತನ ಜಗತ್ತಿನೊಳನುದಿನದೊಳಾಡುವನು ಸುಖಪೂರ್ಣ॥
ದಣಿವಿಕೆಯು ಇವಗಿಲ್ಲ ಬಹು ಕಾ-
ರುಣಿಕಾನಂತಾನಂತ ಜೀವರ
ಗಣದೊಳೇಕಾಂಶಾಂಶ ರೂಪದಿ ನಿಂತು ನೇಮಿಸುವ
॥28॥

ಸರ್ವಭಿನ್ನಳಾದ ಲಕುಮಿಯ ಜೊತೆ ಹರಿಯ ಭಜಿಸು

ಜೀವಜೀವರ ಭೇದ ಜಡಜಡ
ಜೀವಜಡ ಜಡಜೀವರಿಂದಲಿ
ಶ್ರೀವರನು ಅತ್ಯಂತ ಭಿನ್ನ ವಿಲಕ್ಷಣನು ಲಕ್ಷ್ಮೀ ॥
ಮೂವರಿಂದಲಿ ಪದುಮಜಾಂಡದಿ
ತಾ ವಿಲಕ್ಷಣಳೆನಿಸುತಿಪ್ಪಳು
ಸಾವಧಿಕ ಸಮಶೂನ್ಯಳೆಂದರಿತೀರ್ವರನು ಭಜಿಸು ॥29॥

ಸಕಲ ದೇವತೆಗಳಿಗಿಂತ ಮಿಗಿಲಾದ ಗುಣೋಪಾಸಕಳು ಶ್ರೀರಮೆ

ಆದಿತೇಯರು ತಿಳಿಯದಿಹ ಗುಣ
ವೇದಮಾನಿಗಳೆಂದೆನಿಪ ವಾ-
ಣ್ಯಾದಿಗಳು ಬಲ್ಲರವರರಿಯದ ಗುಣಗಣಂಗಳನು ॥
ವೇಧ ಬಲ್ಲನು ಬೊಮ್ಮನರಿಯದ
ಗಾಧಗುಣಗಳ ಲಕುಮಿ ಬಲ್ಲಳು
ಶ್ರೀಧರೊಬ್ಬನುಪಾಸ್ಯ ಸದ್ಗುಣಪೂರ್ಣ ಹರಿಯೆಂದು॥30॥

ಒಂದು ಗುಣದ ಕೊನೆಯನ್ನೂ ಕಾಣದೆ ದೂತಳಾದಳು ಶ್ರೀರಮೆ

ಇಂತನಂತಾನಂತ ಗುಣಗಳ
ಪ್ರಾಂತಗಾಣದೆ ಮಹಾಲಕುಮಿ ಭಗ-
ವಂತಗಾಭರಣಾಯುಧಾಂಬರವಾಲಯಗಳಾಗಿ ॥
ಸ್ವಾಂತದಲಿ ನೆಲೆಗೊಳಿಸಿ ಪರಮದು
ರಂತಮಹಿಮನ ದೌತ್ಯಕರ್ಮ ನಿ-
ರಂತರದಿ ಮಾಡುತಲಿ ತದಧೀನತ್ವವೈದಿಹಳು ॥31॥

ರಮೆಯನ್ನೇ ಬೆರಗಾಗಿಸುವ ಗುಣಚಿಂತನೆ ಸಾಮಾನ್ಯರಿಂದ ಸಾಧ್ಯವೇ !!

ಪ್ರಲಯ ಜಲಧಿಯೊಳುಳ್ಳ ನಾವೆಯು
ಹೊಲಬುಗಾಣದೆ ಸುತ್ತುವಂದದಿ
ಜಲರುಹೇಕ್ಷಣನಮಲ ಗುಣರೂಪಗಳ ಚಿಂತಿಸುತ ॥
ನೆಲೆಯ ಕಾಣದೆ ಮಹಲಕುಮಿ ಚಂ-
ಚಲವನೈದಿಹಳಲ್ಲ ಜೀವರಿ-
ಗಳವಡುವದೇನಿವನ ಮಹಿಮೆಗಳೀ ಜಗತ್ತ್ರಯದಿ ! ॥32॥

ಇಂಥ ಮಹಾಮಹಿಮನ ನಂಬಿ ಕೆಟ್ಟವರಿಲ್ಲ !!

ಶ್ರೀನಿಕೇತನ ಸಾತ್ವತಾಂಪತಿ
ಜ್ಞಾನಗಮ್ಯ ಗಯಾಸುರಾರ್ದನ
ಮೌನಿಕುಲಸನ್ಮಾನ್ಯ ಮಾನದ ಮಾತುಳಧ್ವಂಸೀ ॥
ದೀನಜನಮಂದಾರ ಮಧುರಿಪು
ಪ್ರಾಣದ ಜಗನ್ನಾಥವಿಟ್ಠಲ
ತಾನೆ ಗತಿಯೆಂದನುದಿನದಿ ನಂಬಿದವರನು ಪೊರೆವ॥33॥

॥ ಇಲ್ಲಿಗೆ ಏಳನೆಯ ಪಂಚತನ್ಮಾತ್ರಸಂಧಿ ಮುಗಿಯಿತು ॥

ಮಾತೃಕಾಸಂಧಿ-8

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಪಾದಾರಭ್ಯ ಭಗವಂತನ ಮಾತೃಕಾರೂಪಗಳು

ಪಾದಮಾನಿ ಜಯಂತನೊಳಗೆ ಸು-
ಮೇಧನಾಮಕನಿಪ್ಪ ದಕ್ಷಿಣ
ಪಾದದುಂಗುಟದಲ್ಲಿ ಪವನನು ಭಾರಭೃದ್ರೂಪ ||
ಕಾದುಕೊಂಡಿಹ ಟಂಕಿ ತರ ಮೊದ-
ಲಾದ ನಾಮದಿ ಸಂಧಿಗಳಲೀ
ರೈದುರೂಪದಲಿದ್ದು ಸಂತತ ನಡೆದು ನಡೆಸುತಲಿ ||1||

ಕಟಿಯಿಂದ ಮೇಲ್ಭಾಗದಲ್ಲಿ ಇರುವ ರೂಪಗಳು

ಕಪಿಲ ಚಾರ್ವಾಂಗಾದಿ ರೂಪದಿ
ವಪುಗಳೊಳು ಹಸ್ತಗಳ ಸಂಧಿಯೊ-
ಳಪರಿಮಿತ ಕರ್ಮಗಳ ಮಾಡುತಲಿಪ್ಪ ದಿನದಿನದಿ ॥
ಕೃಪಣವತ್ಸಲ ಪಾರ್ಶ್ವದೊಳು ಪರ
ಸುಫಲಿಯೆನಿಸುವ ಗುದ ಉಪಸ್ಥದಿ
ವಿಪುಲ ಬಲಿ ಭಗ ಮನವೆನಿಸಿ ತುಂದಿಯೊಳಗಿರುತಿಹನು
॥2॥

ದೇಹದಲ್ಲಿ ಒಟ್ಟು ಐದು ಪದ್ಮಗಳ ಚಿಂತನೆ

ಐದು ಮೇಲೊಂದಧಿಕ ದಳವು-
ಳ್ಳೈದು ಪದ್ಮವು ನಾಭಿಮೂಲದಿ
ಐದು ಮೂರ್ತಿಗಳಿಹವು ಅನಿರುದ್ಧಾದಿ ನಾಮದಲಿ ॥
ಐದಿಸುತ ಗರ್ಭವನು ಜೀವರ
ನಾದಿಕರ್ಮಪ್ರಕೃತಿಗುಣಗಳ
ಹಾದಿ ತಪ್ಪಲಿಗೊಡದೆ ವ್ಯಾಪಾರಗಳ ಮಾಡುತಿಹ ॥3॥

ನಾಭಿಯ ಷಟ್ಕೋಣ ಮಂಡಲದಲ್ಲಿ ಪಾಪಪುರುಷನ ಶೋಷಣೆ

ನಾಭಿಯಲಿ ಷಟ್ಕೋಣಮಂಡಲ-
ದೀ ಭವಿಷ್ಯದ್ ಬ್ರಹ್ಮನೊಳು ಮು-
ಕ್ತಾಭ ಶ್ರೀ ಪ್ರದ್ಯುಮ್ನನಿಪ್ಪನು, ವಿಬುಧಗಣಸೇವ್ಯ ॥
ಶೋಭಿಸುತ ಕೌಸ್ತುಭವೆ ಮೊದಲಾ-
ದಾಭರಣವಾಯುಧಗಳಿಂದ ಮ-
ಹಾಭಯಂಕರ ಪಾಪಪುರುಷನ ಶೋಷಿಸುತ ನಿತ್ಯ ॥4॥

ಉದರ ಮಧ್ಯದಲ್ಲಿ ಸೂರ್ಯ ಚಂದ್ರ ನಿಯಾಮಕ 360 ರೂಪಗಳು

ದ್ವಾದಶಾರ್ಕರ ಮಂಡಲವು ಮ-
ಧ್ಯೋದರದೊಳು ಸುಷುಮ್ನದೊಳಗಿಹ
ದೈದು ರೂಪಾತ್ಮಕನು ಅರವತ್ತಧಿಕ ಮುನ್ನೂರು ॥
ಈ ದಿವಾರಾತ್ರಿಗಳ ಮಾನಿಗ-
ಳಾದ ದಿವಿಜರ ಸಂತೈಸುತ ನಿ-
ಷಾದ ರೂಪಕ ದೈತ್ಯರನು ಸಂಹರಿಪ ನಿತ್ಯದಲಿ ॥5॥

ಅಷ್ಟದಳ ಹೃದಯ ಕಮಲದಲ್ಲಿರುವ ಪ್ರಾದೇಶ ಮೂರ್ತಿ

ಹೃದಯದೊಳಗಿಹುದಷ್ಟದಳ ಕಮ-
ಲದರೊಳಗೆ ಪ್ರಾದೇಶನಾಮಕ
ನುದಿತ ಭಾಸ್ಕರನಂತೆ ತೋರ್ಪನು ಬಿಂಬನೆಂದೆನಿಸಿ ॥
ಪದುಮ ಚಕ್ರ ಸುಶಂಖಸುಗದಾಂ-
ಗದ ಕಟಕ ಮುಕುಟಾಂಗುಲೀಯಕ
ಪದಕ ಕೌಸ್ತುಭ ಹಾರ ಗ್ರೈವೇಯಾದಿಭೂಷಿತನು ॥6॥

ಕಂಠಸ್ಥ ದ್ವಿದಳ ಪದ್ಮದಲಿ ಪ್ರಾಣ ಹಾಗೂ ಈಶನ ವ್ಯಾಪಾರ

ದ್ವಿದಳಪದ್ಮವು ಶೋಭಿಪುದು ಕಂ-
ಠದಲಿ ಮುಖ್ಯಪ್ರಾಣ ತನ್ನಯ
ಸುದತಿಯಿಂದೊಡಗೂಡಿ ಹಂಸೋಪಾಸನೆಯ ಮಾಳ್ಪ ॥
ಉದಕವನ್ನಾದಿಗಳಿಗವಕಾ-
ಶದನು ತಾನಾಗಿದ್ದುದಾನಾ-
ಭಿಧನು ನುಡಿನುಡಿಸುವ ಸರ್ವಜೀವರೊಳು ॥7॥

ಮೂಗು ಮತ್ತೆ ಕಣ್ಣಿನಲ್ಲಿರುವ ದೇವತಾಂತರ್ಯಾಮಿ ರೂಪಗಳು

ನಾಸಿಕದಿ ನಾಸತ್ಯದಸ್ರರು
ಶ್ವಾಸಮಾನಿ ಪ್ರಾಣಭಾರತಿ
ಹಂಸಧನ್ವಂತ್ರಿಗಳು ಅಲ್ಲಲ್ಲಿಪ್ಪರವರೊಳಗೆ ॥
ಭೇಶ ಭಾಸ್ಕರರಕ್ಷಿಯುಗಳಕ
ಧೀಶರೆನಿಪರು ಅವರೊಳಗೆ ಲ-
ಕ್ಷ್ಮೀಶದಧಿವಾಮನರು ನಿಯಾಮಿಸುತಲಿರುತಿಹರು ॥8॥

ಕಣ್ಣಿನಲ್ಲಿ ಗೋವತ್ಸಪ್ರಾಣ ಚಿಂತನೆ

ಸ್ತಂಭರೂಪದಲಿಪ್ಪ ದಕ್ಷಿಣ
ಅಂಬಕದಿ ಪ್ರದ್ಯುಮ್ನ ಗುಣರೂ-
ಪಾಂಭೃಣಿಯು ತಾನಾಗಿ ಇಪ್ಪಳು ವತ್ಸರೂಪದಲಿ ॥
ಪೊಂಬಸುರಪದಯೋಗ್ಯ ಪವನ ತ್ರಿ-
ಯಂಬಕಾದಿ ಸಮಸ್ತ ದಿವಿಜಕ-
ದಂಬಸೇವಿತನಾಗಿ ಸರ್ವಪದಾರ್ಥಗಳ ತೋರ್ಪ ॥9॥

ನೇತ್ರಗಳಲ್ಲಿ ಸಪ್ತಋಷಿಕನಾಮಕ ದೇವತೆಗಳ ಚಿಂತನೆ

ನೇತ್ರಗಳಲಿ ವಸಿಷ್ಠ ವಿಶ್ವಾ-
ಮಿತ್ರ ಭಾರದ್ವಾಜ ಗೌತಮ
ಅತ್ರಿಂ ಆಜಮದಗ್ನಿ ನಾಮಗಳಿಂದ ಕರೆಸುತಲಿ ॥
ಪತ್ರತಾಪಕ ಶಕ್ರ ಸೂರ್ಯ ಧ-
ರಿತ್ರಿ ಪರ್ಜನ್ಯಾದಿ ಸುರರು ಜ-
ಗತ್ರಯೇಶನ ಭಜಿಪರನುದಿನ ಪರಮಭಕುತಿಯಲಿ ॥10॥

ಬಲಗಣ್ಣಿನಲ್ಲಿ ವಿಶ್ವಂಭರನ ಉಪಾಸನೆ

ಜ್ಯೋತಿಯೊಳಗಿಪ್ಪನು ಕಪಿಲ ಪುರು-
ಹೂತಮುಖದಿಕ್ಪತಿಗಳಿಂದ ಸ-
ಮೇತನಾಗಿಹ ದಕ್ಷಿಣಾಕ್ಷಿಯ ಮುಖದೊಳಿಹ ವಿಶ್ವ ॥
ಶ್ವೇತವರ್ಣ ಚತುರ್ಭುಜನು ಸಂ-
ಪ್ರೀತಿಯಿಂದಲಿ ಸ್ಥೂಲ ವಿಷಯವ
ಚೇತನರಿಗುಂಡುಣಿಪ ಜಾಗ್ರತೆಯಿತ್ತು ನೃಗಜಾಸ್ಯ ॥11॥

ಬಲಕಿವಿಯಲ್ಲಿ ಗಂಗಾಂತರ್ಗತ ತ್ರಿವಿಕ್ರಮನ ನೆನೆದು ಶುಚಿಯಾಗಿರಿ

ನೆಲೆಸಿಹರು ದಿಗ್ದೇವತೆಗಳಿ-
ಕ್ಕೆಲದಿ ಕರ್ಣಂಗಳಲಿ ತೀರ್ಥಂ-
ಗಳಿಗೆ ಮಾನಿಗಳಾದ ಸುರನದಿಮುಖ್ಯ ನಿರ್ಜರರು ॥
ಬಲದ ಕಿವಿಯಲಿ ಇರುತಿಹರು ಬಾಂ-
ಬೊಳೆಯ ಜನಕ ತ್ರಿವಿಕ್ರಮನು ನಿ-
ರ್ಮಲಿನರನು ಮಾಡುವನು ಈ ಪರಿ ಚಿಂತಿಸುವ ಜನರ
॥12॥

ಸ್ವಪ್ನಾವಸ್ಥೆ ನಿಯಾಮಕನಾದ ತೈಜಸನ ವರ್ಣನೆ

ಚಿತ್ತಜೇಂದ್ರರು ಮನದೊಳಿಪ್ಪರು
ಕೃತ್ತಿವಾಸನು ಅಹಂಕಾರದಿ
ಚಿತ್ತಚೇತನಮಾನಿಗಳು ವಿಹಗೇಂದ್ರಫಣಿಪರೊಳು ॥
ನಿತ್ಯದಲಿ ನೆಲೆಗೊಂಡು ಹತ್ತೊಂ-
ಭತ್ತು ಮೊಗ ತೈಜಸನು ಸ್ವಪ್ನಾ-
ವಸ್ಥೆಯೈದಿಸಿ ಜೀವರನು ಪ್ರವಿವಿಕ್ತಭುಕುವೆನಿಪ ॥13॥

ಸುಪ್ತಿ ಅವಸ್ಥೆಯಲ್ಲಿ ಸ್ವರೂಪಸುಖ ಅನುಭವ ನೀಡುವ ಪ್ರಾಜ್ಞನಾಮಕ

ಜ್ಞಾನಮಯ ತೈಜಸನು ಹೃದಯ
ಸ್ಥಾನವೈದಿಸಿ ಪ್ರಾಜ್ಞನೆಂಬಭಿ-
ಧಾನದಿಂ ಕರೆಸುತ್ತ ಚಿತ್ಸುಖವ್ಯಕ್ತಿಯನೆ ಕೊಡುತ ॥
ಆನತೇಷ್ಟಪ್ರದನು ಅನುಸಂ-
ಧಾನವೀಯದೆ ಸುಪ್ತಿಯೈದಿಸಿ
ತಾನೆ ಪುನರಪಿ ಸ್ವಪ್ನ ಜಾಗ್ರತೆ ಈವ ಚೇತನಕೆ ॥14॥

ಮುಖದಲ್ಲಿರುವ ಭಗವದ್ರೂಪಗಳು

ನಾಲಿಗೆಯೊಳಿಹ ವರುಣ ಮತ್ಸ್ಯನು
ನಾಲಿಗೆಯೊಳು ಉಪೇಂದ್ರರಿಂದ್ರರು
ತಾಲು ಪರ್ಜನ್ಯಾಖ್ಯ ಸೂರ್ಯನು ಅರ್ಧಗರ್ಭನಿಹ ॥
ಆಲಿಯೊಳು ವಾಮನ ಸುಭಾಮನ
ಫಾಲದೊಳು ಶಿವಕೇಶವನು ಸುಕ-
ಪೋಲದೊಳಗೆ ರತೀಶಕಾಮನು ಅಲ್ಲೆ ಪ್ರದ್ಯುಮ್ನ ॥15॥

ದೇಹದ ವಿವಿಧ ಭಾಗಗಳಲ್ಲಿ ವಿವಿಧ ಭಗವದ್ರೂಪಗಳು

ರೋಮಗಳೊಳು ವಸಂತ ತ್ರಿಕಕುಬ್ಧಾಮ
ಮುಖದೊಳಗಗ್ನಿ ಭಾರ್ಗವ
ತಾಮರಸಭವ ವಾಸುದೇವರು ಮಸ್ತಕದೊಳಿಹರು ॥
ಈ ಮನದೊಳಿಹ ವಿಷ್ಣು ಶಿಖದೊಳು
ಮಾಮಹೇಶ್ವರ ನಾರಸಿಂಹ
ಸ್ವಾಮಿ ತನ್ನನುದಿನದಿ ನೆನೆವರಪಮೃತ್ಯು ಪರಿಹರಿಪ ॥16॥

ಮುಖದಲ್ಲಿರುವ ಅಜಾದಿ 16 ರೂಪಗಳು

ಮೌಳಿಯಲ್ಲಿಹ ವಾಸುದೇವನು
ಏಳಧಿಕನವಜಾದಿ ರೂಪವ
ತಾಳಿ ಮುಖದೊಳು ನಯನಶ್ರವಣಾದ್ಯವಯವಗಳಲ್ಲಿ ॥
ಆಳರಸು ತಾನಾಗಿ ಸತತ ಸು-
ಲೀಲೆಗೈಯುತಲಿಪ್ಪ ಸುಖಮಯ
ಕೇಳಿ ಕೇಳಿಸಿ ನೋಡಿ ನೋಡಿಸಿ ನುಡಿದು ನುಡಿಸುವನು ॥
॥17॥

ಪ್ರದಾನ 101 ನಾಡಿಗಳಲ್ಲಿ 101 ಕಲಶನಾಮಕನನ್ನು ಪೂಜಿಸು

ಎರಡಧಿಕವೆಪ್ಪತ್ತೆನಿಪ ಸಾ-
ವಿರದ ನಾಡಿಗೆ ಮುಖ್ಯವೇಕೋ-
ತ್ತರ ಶತಗಳಲ್ಲಿಹವು ನೂರಾ ಒಂದು ಮೂರ್ತಿಗಳು ॥
ಅರಿತು ದೇಹದಿ ಕಲಶನಾಮಕ
ಹರಿಗೆ ಕಲೆಗಳಿವೆಂದು ನೈರಂ-
ತರದಿ ಪೂಜಿಸುತಿಹರು ಪರಮಾದರದಿ ಭೂಸುರರು॥18॥

12 ನಾಡಿಗಳಲ್ಲಿ 12 ನದಿಗಳನ್ನು ಚಿಂತಿಸಿ ಧ್ಯಾನಸ್ನಾನ ಮಾಡು

ಇದಕೆ ಕಾರಣವೆನಿಸುವವು ಎರ-
ಡಧಿಕದಶ ನಾಡಿಗಳೊಳಗೆ ಸುರ-
ನದಿಯು ಮೊದಲಾದಖಿಲ ತೀರ್ಥಗಳಿಹವು ಕರಣದಲಿ ॥
ಪದುಮನಾಭನು ಕೇಶವಾದಿ
ದ್ವಿದಶರೂಪದಲಿಪ್ಪ ನಲ್ಲತಿ
ಮೃದುಳವಾದ ಸುಷುಮ್ನದೊಳಗೇಕಾತ್ಮನೆನಿಸುವನು ॥19॥

ಸುಷುಮ್ನಾದಿ ಮೂರು ನಾಡಿಗಳಲ್ಲಿ ಋಜ್ವಂತರ್ಗತ ವಿಶ್ವಾದಿರೂಪಗಳು

ಆಮ್ನಯಪ್ರತಿಪಾದ್ಯ ಶ್ರೀಪ್ರ-
ದ್ಯುಮ್ನದೇವನು ದೇಹದೊಳಗೆ ಸು-
ಷುಮ್ನದೀಡಾಪಿಂಗಳದಿ ವಿಶ್ವಾದಿ ರೂಪದಲಿ ॥
ನಿರ್ಮಲಾತ್ಮನು ವಾಣಿ ವಾಯು ಚ-
ತುರ್ಮುಖರೊಳಿದ್ದಖಿಳ ಜೀವರ
ಕರ್ಮಗುಣವನನುಸರಿಸಿ ನಡೆವನು ವಿಶ್ವವ್ಯಾಪಕನು॥20॥

ಕಾಲಾಂತರ್ಯಾಮಿ ದೇವರ 45 ರೂಪಗಳು

ಅಬ್ದಯನ ಋತು ಮಾಸ ಪಕ್ಷ ಸು-
ಶಬ್ದದಿಂದಲಿ ಕರೆಸುತಲಿ ನೀ-
ಲಾಬ್ಜವರ್ಣನಿರುದ್ಧ ಮೊದಲಾದೈದು ರೂಪದಲಿ ॥
ಹಬ್ಬಿಹನು ಸರ್ವತ್ರದಲಿ ಕರು-
ಣಾಬ್ಧಿ ನಾಲ್ವತ್ತೈದು ರೂಪದಿ
ಲಭ್ಯನಾಗುವನೀ ಪರಿಯ ಧೇನಿಸುವ ಭಕುತರಿಗೆ ॥21॥

ದಿವಸ, ಮಾಸ, ಸಂವತ್ಸರಗಳಲಿ ಭಗವದ್ರೂಪಗಳು

ಐದು ರೂಪಾತ್ಮಕನು ಇಪ್ಪ-
ತ್ತೈದು ರೂಪದಲಿಪ್ಪ ಮತ್ತೈದಿ-
ನೈದು ತಿಥಿಯಿಪ್ಪತ್ತುನಾಲಕರಿಂದ ಪೆಚ್ಚಿಸಲು ॥
ಐದುವುದು ಅರವತ್ತಧಿಕ ಆ-
ರೈದು ದಿವಸಾಹ್ವಯದೊಳಗೆ ಮನ
ತ್ಯೊಯ್ದವಗೆ ತಾಪತ್ರಯದ ಮಹದೋಷವೆಲ್ಲಿಹವು॥22॥

ಘಟಿಕ ಯಾಮಾದಿ ಕ್ಷಣಕಾಲಗಳಲ್ಲಿ ತುಂಬಿದ ಭಗವಂತನ ರೂಪ ಪ್ರವಾಹ

ದಿವಸ ಯಾಮ ಮುಹೂರ್ತ ಘಟಿಕಾ
ದ್ಯವಯವಗಳೊಳಗಿದ್ದು ಗಂಗಾ
ಪ್ರವಹದಂದದಿ ಕಾಲನಾಮಕ ಪ್ರವಹಿಸುತಲಿಪ್ಪ ॥
ಇವನ ಗುಣರೂಪಕ್ರಿಯಂಗಳ
ನಿವಹದೊಳು ಮುಳುಗ್ಯಾಡುತಲಿ ಭಾ-
ರ್ಗವಿ ಸದಾನಂದಾತ್ಮಳಾಗಿಹಳೆಲ್ಲ ಕಾಲದಲಿ ॥23॥

ಸ್ವರಮಣನಾದರೂ ರಮೆಯ ಔತಣ ಸ್ವೀಕರಿಸುವ

ವೇದತತಿಗಳ ಮಾನಿ ಲಕ್ಷ್ಮಿ ಧ-
ರಾಧರನ ಗುಣರೂಪಕ್ರಿಯೆಗಳ
ಆದಿಮಧ್ಯಾಂತವನು ಕಾಣದೆ ಮನದಿ ಯೋಚಿಸುತ ॥
ಆದಪೆನೆ ಈತನಿಗೆ ಪತ್ನಿ ಕೃ-
ಪೋದಧಿಯು ಸ್ವೀಕರಿಸಿದನು ಲೋ-
ಕಾಧಿಪನು ಭಿಕ್ಷುಕನ ಮನೆಯೌತಣವ ಕೊಂಬಂತೆ ॥24॥

ಪ್ರತಿಕ್ಷಣವೂ ಅನಂತ ಗುಣೋಪಾಸಕಳಾದ ರಮೆಗೂ ಸಿಗದವ ನರಗೆ ಸಿಗುವನೆ !

ಕೋವಿದರು ಚಿತ್ತೈಸುವುದು ಶ್ರೀ-
ದೇವಿಯೊಳಗಿಹ ನಿಖಿಲಗುಣ ತೃಣ
ಜೀವರಲಿ ಕಲ್ಪಿಸಿ ಯುಕುತಿಯಲಿ ಮತ್ತು ಕ್ರಮದಿಂದ ॥
ದೇವಿದೇವಿಯು ಇಪ್ಪಳೆಂದರಿ-
ದಾ ವಿರಿಂಚಿಯ ಜನನಿ ಈತನ
ಆವ ಕಾಲದಲರಿಯಳಂತನೆ ನರರ ಪಾಡೇನು ॥25॥

ಕ್ಷೀರದ ಪ್ರಕಾರಗಳಲ್ಲಿ ಭಗವಂತನ ಸೌರಭಾದಿ ರೂಪಗಳು

ಕ್ಷೀರ ದಧಿ ನವನೀತ ಘೃತದೊಳು
ಸೌರಭರಸಾಹ್ವಯನೆನಿಸಿ ಶಾಂ-
ತೀರಮಣ ಜ್ಞಾನಕ್ರಿಯೇಚ್ಛಾಶಕ್ತಿಯೆಂದೆಂಬ ॥
ಈರೆರಡು ನಾಮದಲಿ ಕರೆಸುವ
ಭಾರತೀ ವಾಗ್ದೇವಿ ವಾಯು ಸ-
ರೋರುಹಾಸನರಲ್ಲಿ ನೆಲೆಸಿಹರೆಲ್ಲ ಕಾಲದಲಿ ॥26॥

ವಸ್ವಾದಿ 90 ದೇವತೆಗಳೊಳಗೆ ಅನಿರುದ್ಧಾದಿ 4 ರೂಪಗಳು

ವಸುಗಳೆಂಟು ನವಪ್ರಜೇಶರು
ಶ್ವಸನಗಣವೈವತ್ತು ಏಕಾ-
ದಶ ದಿವಾಕರರನಿತು ರುದ್ರರು ಅಶ್ವಿನಿಗಳೆರಡು ॥
ದಶವಿಹೀನ ಶತಾಖ್ಯ ಈ ಸುಮ-
ನಸರೊಳಗೆ ಚತುರಾತ್ಮ ನಿಯಾ-
ಮಿಸುವ ಬ್ರಹ್ಮ ಸಮೀರ ಖಗಪ ಫಣೀಂದ್ರರೊಳಗಿದ್ದು
॥27॥

ಭಗವಂತನ ಹಿಂಕಾರಾದಿ 5 ರೂಪಗಳನ್ನು ನೆನೆದು ಮುದ್ರೆ ಧರಿಸಿರಿ

ತೋರುತಿಪ್ಪನು ಚಕ್ರದಲಿ ಹಿಂ-
ಕಾರನಾಮಕ ಶಂಖದಲಿ ಪ್ರತಿ-
ಹಾರ ಗದೆಯಲಿ ನಿಧನ ಪದ್ಮದಲಿಪ್ಪ ಪ್ರಸ್ತಾವ ॥
ಕಾರುಣಿಕನುದ್ಗೀಥ ನಾಮದಿ
ಮಾರಮಣನ್ಯರೂಪಗಳ ಶಂ-
ಖಾರಿ ಮೊದಲಾದಾಯುಧಗಳಲಿ ಸ್ಮರಿಸಿ ಧರಿಸುತಿರು
॥2

ಈ ದೇಹವು ರಥ, ದೇವರು ರಥಿಕ

ತನುವೆ ರಥ ವಾಗಾಭಿಮಾನಿಯೆ
ಗುಣವೆನಿಸುವಳು ಶ್ರೋತ್ರದಲಿ ರೋ-
ಹಿಣಿ ಶಶಾಂಕರು ಪಾಶಪಾಣಿಗಳಶ್ವವೆಂದೆನಿಸಿ ॥
ಇನನು ಸಂಜ್ಞಾದೇವಿಯರು ಇಹ-
ರನಲಲೋಚನ ಸೂತನೆನಿಸುವ
ಪ್ರಣವಪಾದ್ಯ ಪ್ರಾಣನಾಮಕ ರಥಿಕನೆನಿಸುವನು ॥29

ತನ್ನ ವಿಷಯದಲ್ಲಿ ದೇವರೊಬ್ಬನೇ ಸರ್ವಜ್ಞ ಉಳಿದವರು ಯಾರೂ ಅಲ್ಲ

ಅಮಿತಮಹಿಮನಪಾರಗುಣಗಳ
ಸಮಿತವರ್ಣಾತ್ಮಕ ಶ್ರುತಿ ಸ್ಮೃತಿ
ಗಮಿಸಲಾಪವೆ ತದಭಿಮಾನಿಗಳೆಂದೆನಿಸಿಕೊಂಬ ॥
ಕಮಲಸಂಭವ ಭವ ಸುರೇಂದ್ರಾ-
ದ್ಯಮರರನುದಿನ ತಿಳಿಯಲರಿಯರು
ಸ್ವಮಹಿಮೆಗಳಾದ್ಯಂತಮಧ್ಯಗಳರಿವ ಸರ್ವಜ್ಞ ॥30॥

ಆತ್ಮೀಯರಲ್ಲಿ ದೇವರ ಅನುಸಂಧಾನ ಬಹಳ ಮುಖ್ಯ

ವಿತ್ತ ದೇಹಾಗಾರ ದಾರಾ-
ಪತ್ಯ ಮಿತ್ರಾದಿಗಳೊಳಗೆ ಹರಿ
ಪ್ರತ್ಯಗಾತ್ಮನು ಎಂದೆನಿಸಿ ನೆಲೆಸಿಪ್ಪನೆಂದರಿದು ॥
ನಿತ್ಯದಲಿ ಸಂತೃಪ್ತಿಬಡಿಸುತ
ಉತ್ತಮಾಧಮಮಧ್ಯಮರ ಕೃತ-
ಕೃತ್ಯನಾಗುನ್ಮತ್ತನಾಗದೆ ಭೃತ್ಯ ನಾನೆಂದು ॥31॥

ಉತ್ತಮ, ಮಧ್ಯಮ, ಅಧಮರಲ್ಲಿ ದೇವರ ಚಿಂತನೆಯಿಂದ ಸುಖವಾಗಿ ಜೀವಿಸು

ದೇವದೇವೇಶನ ಸುಮೂರ್ತಿ ಕ-
ಳೇವರಗಳೊಳಗನವರತ ಸಂ-
ಭಾವಿಸುತ ಪೂಜಿಸುತ ನೋಡುತ ಸುಖಿಸುತಿರು ಬಿಡದೆ ॥
ಶ್ರೀವರ ಜಗನ್ನಾಥವಿಟ್ಠಲನು
ತಾ ಒಲಿದು ಕಾರುಣ್ಯದಲಿ ಭವ
ನೋವ ಪರಿಹರಿಸುವನು ಪ್ರವಿತತ ಪತಿತಪಾವನನು॥31॥

॥ ಇಲ್ಲಿಗೆ ಎಂಟನೆಯ ಮಾತೃಕಾಸಂಧಿ ಮುಗಿಯಿತು ॥

ಉದಾತ್ತಾನುದಾತ್ತ / ಜೀವಪ್ರಕರಣಸಂಧಿ-9

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಉದಾತ್ತಾನುದಾತ್ತಾ, ಸ್ವರಿತ, ಪ್ರಚಯ, ಬಿಂದು ಇತ್ಯಾದಿಗಳಿಂದ ಪ್ರತಿಪಾದ್ಯನಾಗಿ ವೇದಪ್ರತಿಪಾದ್ಯನಾಗುವ

ಹರಿಯೆ ಪಂಚಾಶದ್ವರಣ ಸು-
ಸ್ವರವುದಾತ್ತಾನುದಾತ್ತ ಪ್ರಚಯ
ಸ್ವರಿತ ಸಂಧಿ ವಿಸರ್ಗ ಬಿಂದುಗಳೊಳಗೆ ತದ್ವಾಚ್ಯ ||
ಇರುವ ತತ್ತನ್ನಾಮರೂಪಗಳ-
ರಿತುಪಾಸನೆಗೈವರಿಳೆಯೊಳು
ಸುರರೆ ಸರಿ ನರರಲ್ಲ ಅವರಾಡುವುದೆ ವೇದಾರ್ಥ ||1||

ಹರಿಭಕ್ತರಲ್ಲಿ ಭಕ್ತಿ, ಹರಿದ್ವೇಷಿಗಳಲ್ಲಿ ದ್ವೇಷ ! ಇದೇ ನಿನ್ನ ಕರ್ತವ್ಯ

ಈಶನಲಿ ವಿಜ್ಞಾನ ಭಗವ-
ದ್ದಾಸರಲಿ ಸದ್ಭಕ್ತಿ ವಿಷಯ ನಿ-
ರಾಶೆ ಮಿಥ್ಯಾವಾದಿಯಲಿ ಪ್ರದ್ವೇಷ ನಿತ್ಯದಲಿ ॥
ಈ ಸಮಸ್ತ ಪ್ರಾಣಿಗಳಲಿ ರ-
ಮೇಶನಿಹನೆಂದರಿತು ಅವರಭಿ-
ಲಾಷೆಗಳ ಪೂರೈಸುವುದೆ ಮಹಯಜ್ಞ ಹರಿಪೂಜೆ ॥2

ವಿಷಯೇಂದ್ರಿಗಳಲ್ಲಿ ನಿಧನನಾಮಕ ಸಂಕರ್ಷಣ

ತ್ರಿದಶ ಏಕಾತ್ಮಕನೆನಿಸಿ ಭೂ
ಉದಕ ಶಿಖಿಯೊಳು ಹತ್ತು ಕರಣದ
ಅಧಿಪರೆನಿಸುವ ಪ್ರಾಣಮುಖ್ಯಾದಿತ್ಯರೊಳು ನೆಲೆಸಿ ॥
ವಿದಿತನಾಗಿದ್ದನವರತ ನಿರ-
ವಧಿಕಮಹಿಮನು ಸಕಲ ವಿಷಯವ
ನಿಧನನಾಮಕ ಸಂಕರುಷಣಾಹ್ವಯನು ಸ್ವೀಕರಿಪ ॥3

ನಿಷ್ಕಾಮಿಯಾಗಿ ಮೂರುವಿಧ ಕರ್ಮಗಳನ್ನು ಬೃಹತಿನಾಮಕನಿಗೆ ಅರ್ಪಿಸು

ದಹಿಂಕ ದೈಶಿಕ ಕಾಲಿಕತ್ರಯ
ಗಹನ ಕರ್ಮಗಳುಂಟು ಇದರೊಳು
ವಿಹಿತ ಕರ್ಮಗಳರಿತು ನಿಷ್ಕಾಮಕನು ನೀನಾಗಿ ॥
ಬೃಹತಿನಾಮಕ ಭಾರತೀಶನ
ಮಹಿತರೂಪವ ನೆನೆದು ಮನದಲಿ
ಅಹರಹರ್ಭಗವಂತಗರ್ಪಿಸು ಪರಮ ಭಕುತಿಯಲಿ ॥4॥

ತ್ರಿವಿಧ ಕರ್ಮಗಳ ಪ್ರೇರಕರಾದ 9 ಭಗವದ್ರೂಪಗಳು

ಮೂರು ವಿಧ ಕರ್ಮಗಳೊಳಗೆ ಕಂ-
ಸಾರಿ ಭಾರ್ಗವ ಹಯವದನ ಸಂ-
ಪ್ರೇರಕನು ತಾನಾಗಿ ನವರೂಪಗಳನೆ ಧರಿಸಿ ॥
ಸೂರಿ ಮಾನವ ದಾನವರೊಳು ವಿ-
ಕಾರಶೂನ್ಯನು ಮಾಡಿ ಮಾಡಿಸಿ
ಸಾರಭೋಕ್ತನು ಸ್ವೀಕರಿಸಿ ಕೊಡುತಿಪ್ಪ ಜೀವರಿಗೆ ॥5॥

ದೇವರು ಮಾಡಿಸಿದ ಕರ್ಮಗಳನ್ನು ಅವನಿಗೆ ಅರ್ಪಿಸಿ ಫಲಭೋಕ್ತೃಗಳಾಗಿ

ಅನಲ ಪಕ್ವವ ಗೈಸಿದನ್ನವ
ಅನಲನೊಳು ಹೋಮಿಸುವ ತೆರದಂ-
ತನಿಮಿಷೇಶನು ಮಾಡಿ ಮಾಡಿಸಿದಖಿಳ ಕರ್ಮಗಳ ||
ಮನವಚನಕಾಯದಲಿ ತಿಳಿದನು
ದಿನದಿ ಕೊಡು ಶಂಕಿಸದೆ ವೃಜಿನಾ-
ರ್ದನ ಸದಾ ಕೈಗೊಂಡು ಸಂತೈಸುವನು ತನ್ನವರ ||

ಜೀವನ ಸ್ವರೂಪದೇಹದ ಪರಿಮಾಣ

ಕುದುರೆ ಬಾಲದ ಕೊನೆಯ ಕೂದಲ
ತುದಿ ವಿಭಾಗವ ಮಾಡಿ ಶತವಿಧ
ವದರೊಳೊಂದನು ನೂರುಭಾಗವ ಮಾಡಲೆಂತಿಹುದೊ |
ವಿಧಿಭವಾದಿ ಸಮಸ್ತ ದಿವಿಜರ
ಮೊದಲುಮಾಡಿ ತೃಣಾಂತಜೀವರೊ-
ಳಧಿಕ ನ್ಯೂನತೆ ಇಲ್ಲವೆಂದಿಗು ಜೀವ ಪರಿಮಾಣ ||

ಜೀವ ಸ್ವರೂಪದಲ್ಲಿರುವ ಭಗವಂತನ ಅಣುರೂಪಗಳ ಮಹಿಮೆ

ಜೀವನಂಗುಷ್ಠಾಗ್ರಮೂರುತಿ
ಜೀವನಂಗುಟಮಾತ್ರ ಮೂರುತಿ
ಜೀವನ ಪ್ರಾದೇಶ ಜೀವಾಕಾರ ಮೂರ್ತಿಗಳು ॥
ಏವಮಾದಿ ಅನಂತ ರೂಪದಿ
ಯಾವದವಯವಗಳೊಳು ವ್ಯಾಪಿಸಿ
ಕಾವ ಕರುಣಾಳುಗಳ ದೇವನು ಈ ಜಗತ್ರಯವ ॥8॥

ಹೃದಯಾಕಾಶದಲ್ಲಿ ಇರುವ ಬಿಂಬನ ವರ್ಣನೆ

ಬಿಂಬ ಜೀವಾಂಗುಷ್ಠಮಾತ್ರದಿ
ಇಂಬುಗೊಂಡಿಹ ಸರ್ವರೊಳು ಸೂ-
ಕ್ಷ್ಮಾಂಬರದಿ ಹೃತ್ಕಮಲಮಧ್ಯನಿವಾಸಿಯೆಂದೆನಿಸಿ ॥
ಎಂಬರೀತಗೆ ಕೋವಿದರು ವಿ-
ಶ್ವಂಭರಾತ್ಮಕ ಪ್ರಾಜ್ಞ ಭಕ್ತಕು-
ಟುಂಬಿ ಸಂತೈಸುವನು ಈ ಪರಿ ಬಲ್ಲ ಭಜಕರನು ॥9॥

ಸ್ವರೂಪದೇಹ, ಇಂದ್ರಿಯ, ನಾಡಿಗಳಲ್ಲಿ ಪುರುಷ ಹೃಷೀಕೇಶ ತುರ್ಯನಾಮಕ ಭಗವಂತ

ಪುರುಷನಾಮಕ ಸರ್ವಜೀವರೊ-
ಳಿರುವ ದೇಹಾಕಾರ ರೂಪದಿ
ಕರಣನಿಯಾಮಕ ಹೃಷೀಕಪನಿಂದ್ರಿಯಂಗಳಲಿ ॥
ತುರಿಯನಾಮಕ ವಿಶ್ವ ತಾ ಹ-
ನ್ನೆರಡು ಬೆರಳುಳಿದುತ್ತಮಾಂಗದಿ
ಎರಡಧಿಕ ಎಪ್ಪತ್ತು ಸಾವಿರ ನಾಡಿಯೊಳಗಿಪ್ಪ ॥10॥

ಸ್ವರೂಪದೇಹದ ಒಳಹೊರಗೆ ಸರ್ವದೇವ ವಂದ್ಯನಾದ ಶ್ರೀಹರಿ

ವ್ಯಾಪಕನು ತಾನಾಗಿ ಜೀವ ಸ್ವ-
ರೂಪದೇಹದ ಒಳಹೊರಗೆ ನಿ-
ರ್ಲೇಪನಾಗಿಹ ಜೀವಕೃತ ಕರ್ಮಗಳನಾಚರಿಸಿ ॥
ಶ್ರೀಪಯೋಜಭವೇರರಿಂದ ಪ್ರ-
ದೀಪವರ್ಣ ಸ್ವಮೂರ್ತಿ ಮಧ್ಯಗ
ತಾ ಪೊಳೆವ ವಿಶ್ವಾದಿರೂಪದಿ ಸೇವೆ ಕೈಕೊಳುತ ॥11॥

ಭಗವಂತನ ಅನುಗ್ರಹದಿಂದ ಮುಖ್ಯಪ್ರಾಣನಿಗೂ ಸ್ವರೂಪದೇಹದಲ್ಲಿ ಪ್ರವೇಶವಿದೆ

ಗರುಡ ಶೇಷ ಭವಾದಿ ನಾಮವ
ಧರಿಸಿ ಪವನ ಸ್ವರೂಪದೇಹದಿ
ಕರಣನಿಯಾಮಕನು ತಾನಾಗಿಪ್ಪ ಹರಿಯಂತೆ ||
ಸರಸಿಜಾಸನ ವಾಣಿ ಭಾರತಿ
ಭರತನಿಂದೊಡಗೂಡಿ ಲಿಂಗದಿ
ಇರುತಿಹರು ಮಿಕ್ಕಾದಿತೇಯರಿಗಿಲ್ಲವಾಸ್ಥಾನ ||12||

ಅನಾದಿಕಾಲದಿಂದ ಬಂಧಕವಾದ ಲಿಂಗಶರೀರದ ವಿಚಾರ

ಜೀವನಿಗೆ ತುಷದಂತೆ ಲಿಂಗವು
ಸಾವಕಾಶದಿ ಪೊಂದಿ ಸುತ್ತಲು
ಪ್ರಾವರಣ ರೂಪದಲಿ ಇಪ್ಪುದು ಭಗವದಿಚ್ಛೆಯಲಿ ||
ಕೇವಲ ಜಡಪ್ರಕೃತಿಯಿದಕಧಿ-
ದೇವತೆಯು ಮಹಾಲಕುಮಿಯೆನಿಪಳು
ಆ ವಿರಜೆಯ ಸ್ನಾನಪರಿಯಂತರದಿ ಹತ್ತಿಹುದು ||13||

ಲಿಂಗದೇಹ ಅನಿರುದ್ಧದೇಹ ಮಧ್ಯ ಇರುವ ಜೀವಾಚ್ಛಾದಿಕಾ ಪರಮಾಚ್ಛಾದಿಕಾ

ಆರಧಿಕ ದಶಕಲೆಗಳುಳ್ಳ ಶ-
ರೀರವನಿರುದ್ಧಗಳ ಮಧ್ಯದಿ
ಸೇರಿ ಇಪ್ಪವು ಜೀವ ಪರಮಾಚ್ಛಾದಿಕ ದ್ವಯವು ॥
ಬಾರದಂದದಿ ದಾನವರನತಿ
ದೂರಗೈಸುತ ಶ್ರೀಜನಾರ್ದನ
ಮೂರು ಗುಣದೊಳಗಿಪ್ಪನೆಂದಿಗು ತ್ರಿವೃತುವೆಂದೆನಿಸಿ॥

ಅನಿರುದ್ಧ ದೇಹದಲ್ಲಿ ರುದ್ರಾದಿ ದೇವತೆಗಳ ವ್ಯಾಪಾರ

ರುದ್ರಮೊದಲಾದಮರರಿಗೆ ಅನಿ-
ರುದ್ಧ ದೇಹವೆ ಮನೆಯೆನಿಸುವುದು
ಇದ್ದು ಕೆಲಸವ ಮಾಡರಲ್ಲಿಂದಿತ್ತ ಸ್ಥೂಲದಲಿ ॥
ಕ್ರುದ್ಧಖಿಳ ದಿವಿಜರು ಪರಸ್ಪರ
ಸ್ಪರ್ಧೆಯಿಂದಲಿ ದ್ವಂದ್ವಕರ್ಮ ಸ-
ಮೃದ್ಧಿಗಳನಾಚರಿಸುವರು ಪ್ರಾಣೇಶನಾಜ್ಞೆಯಲಿ ॥

ಸ್ಥೂಲಶರೀರದಲ್ಲಿ ಸಕಲ ದೇವತೆಗಳ ವ್ಯಾಪಾರ

ಮಹಿಯೊಳಗೆ ಸುಕ್ಷೇತ್ರತೀರ್ಥಾದಿ
ತುಹಿನ ವರುಷ ವಸಂತಕಾಲದಿ
ದಹಿಕ ದೈಶಿಕ ಕಾಲಿಕತ್ರಯ ಧರ್ಮಕರ್ಮಗಳ ॥
ದ್ರುಹಿಣ ಮೊದಲಾದಮರರೆಲ್ಲರು
ವಹಿಸಿ ಗುಣಗಳನನುಸರಿಸಿ ಸ-
ನ್ನಿಹಿತರಾಗಿದ್ದೆಲ್ಲರೊಳು ಮಾಡುವರು ವ್ಯಾಪಾರ ॥16॥

ಸುಷುಮ್ನಾ ನಾಡಿಯ ಪರಿಮಾಣ ಹಾಗೂ ಪಂಚನಾಡಿಯ ವರ್ಣನೆ

ಕೇಶ ಸಾಸಿರವಿಧ ವಿಭಾಗವ
ಗೈಸಲೆನಿತನಿತಿಹ ಸುಷುಮ್ನವು
ಆ ಶಿರಾಂತದಿ ವ್ಯಾಪಿಸಿಹುದೀ ದೇಹಮಧ್ಯದಲಿ ॥
ಆ ಸುಷುಮ್ನಕೆ ವಜ್ರಕಾರ್ಯ ಪ್ರ-
ಕಾಶಿನೀ ವೈದ್ಯುತಿಗಳಿಹವು ಪ್ರ-
ದೇಶದಲಿ ಪಶ್ಚಿಮಕೆ ಉತ್ತರ ಪೂರ್ವ ದಕ್ಷಿಣಕೆ ॥17॥

ತ್ರಿಕೋಣಾಕಾರ ಅಗ್ನಿಮಂಡಲದಲ್ಲಿ ಸಂಕರ್ಷಣನಿಂ ಪಾಪಪುರುಷನ ದಹನ

ಆ ನಳಿನಭವ ನಾಡಿಯೊಳಗೆ ತ್ರಿ-
ಕೋಣಚಕ್ರವು ಇಪ್ಪುದಲ್ಲಿ ಕೃ-
ಶಾನುಮಂಡಲಮಧ್ಯಗನು ಸಂಕರುಷಣಾಹ್ವಯನು ॥
ಹೀನ ಪಾಪಾತ್ಮಕ ಪುರುಷನ ದ-
ಹನಗೈಸುತ ದಿನದಿನದಿ ವಿ-
ಜ್ಞಾನಮಯ ಶ್ರೀವಾಸುದೇವನ ಐದಿಸುವ ಕರುಣಿ ॥18॥

ಈ ಸ್ಥೂಲದೇಹದಲ್ಲಿ ಜೀವನು ಇರುವ ಸ್ಥಳ

ಮಧ್ಯನಾಡಿಯ ಮಧ್ಯದಲಿ ಹೃ-
ತ್ಪದ್ಮಮೂಲದಿ ಮೂಲಪತಿ ಪದ
ಪದ್ಮಮೂಲದಲಿಪ್ಪ ಪವನನ ಪಾದಮೂಲದಲಿ ॥
ಪೊಂದಿಕೊಂಡಿಹ ಜೀವಲಿಂಗನಿ-
ರುದ್ಧ ದೇಹವಿಶಿಷ್ಟನಾಗಿ ಕ-
ಪರ್ದಿ ಮೊದಲಾದಮರರೆಲ್ಲರು ಕಾದುಕೊಂಡಿಹರು॥19॥

ಸುಷುಮ್ನಾ ಮಧ್ಯದಲಿ ಇರುವ ಅಷ್ಟದಳ ಕಮಲ

ನಾಳಮಧ್ಯದಲಿಪ್ಪ ಹೃತ್ಕೀ-
ಲಾಲಜದೊಳಿಪ್ಪಷ್ಟದಳದಿ ಕು-
ಲಾಲಚಕ್ರದ ತೆರದಿ ಚರಿಸುತ ಹಂಸನಾಮಕನು ॥
ಕಾಲಕಾಲಗಳಲ್ಲಿ ಎಣ್ದೆಶೆ
ಪಾಲಕರ ಕೈಸೇವೆಕೊಳುತ ಕೃ-
ಪಾಳು ಅವರಭಿಲಾಷೆಗಳ ಪೂರೈಸಿಕೊಡುತಿಪ್ಪ ॥20॥

ಅಷ್ಟದಳದಲ್ಲಿ ಬಿಂಬನ ಧ್ಯಾನ

ವಾಸವಾನುಜ ರೇಣುಕಾತ್ಮಜ
ದಾಶರಥಿ ವೃಜಿನಾರ್ದನಮಲಜ-
ಲಾಶಯಾಲಯ ಹಯವದನ ಶ್ರೀಕಪಿಲ ನರಸಿಂಹಾ ॥
ಈ ಸುರೂಪದಿ ಅವರವರ ಸಂ-
ತೋಷಪಡಿಸುತ ನಿತ್ಯಸುಖಮಯ
ವಾಸವಾಗಿಹ ಹೃತ್ಕಮಲದೊಳು ಬಿಂಬನೆಂದೆನಿಸಿ ॥21॥

ಹಂಸನಾಮಕ ದಳಗಳಲ್ಲಿ ಸಂಚರಿಸುವಾಗ ಆಗುವ ಮನೋವಿಕಾರಗಳು

ಸುರಪನಾಲಯಕೈದಿದೊಡೆ ಮನ-
ವೆರಗುವುದು ಸತ್ಪುಣ್ಯಮಾರ್ಗದಿ
ಬರಲು ವಹ್ನಿಯ ಮನೆಗೆ ನಿದ್ರಾಲಸ್ಯ ಹಸಿ ತೃಷೆಯು ॥
ತರಣಿತನಯನಿಕೇತನದಿ ಸಂ-
ಭರಿತ ಕೋಪಾಟೋಪ ತೋರುವು-
ದರವಿದೂರನು ನಿರಋತಿಯಲಿ ಬರೆ ಪಾಪಗಳ ಮಾಳ್ಪ ॥22॥

ಪಶ್ಚಿಮದಿಂದ ಈಶಾನ್ಯ ದಳದಲ್ಲಿ ಸಂಚರಿಸುವಾಗ ಆಗುವ ವ್ಯಾಪಾರಗಳು

ವರುಣನಲ್ಲಿ ವಿನೋದಹಾಸ್ಯವು
ಮರುತನೊಳು ಗಮನಾಗಮನ ಹಿಮ-
ಕರ ಧನಾಧಿಪರಲ್ಲಿ ಧರ್ಮದ ಬುದ್ಧಿ ಜನಿಸುವುದು ॥
ಹರನ ಮಂದಿರದಲ್ಲಿ ಗೋ ಧನ
ಧರಣಿ ಕನ್ಯಾದಾನಗಳು ಒಂ-
ದರಘಳಿಗೆ ತಡೆಯದಲೆ ಕೊಡುತಿಹ ಚಿತ್ತ ಪುಟ್ಟುವುದು ॥23॥

ಹೃದಯದಲ್ಲಿ ಸುಷುಪ್ತಿ, ಸ್ವಪ್ನ, ವಿರಕ್ತಿ, ಜಾಗೃತಿ ಉಂಟಾಗುವ ಸ್ಥಳಗಳು

ಹೃದಯದೊಳಗೆ ವಿರಕ್ತಿ ಕೇಸರ
ಕೊದಗೆ ಸ್ವಪ್ನ ಸುಷುಪ್ತಿ ಲಿಂಗದಿ
ಮಧುಹ ಕರಣಿಕೆಯಲ್ಲಿ ಬರೆ ಜಾಗ್ರತೆಯು ಪುಟ್ಟುವುದು॥
ಸುದರುಶನ ಮೊದಲಾದ ಅಷ್ಟಾ-
ಯುಧವ ಪಿಡಿದಾಶಾಧಿಪತಿಗಳ
ಸದನದಲಿ ಸಂಚರಿಸುತೀಪರಿ ಬುದ್ಧಿಗಳ ಕೊಡುವ ॥24॥

ಮಾನಸಿಕ ತೀರ್ಥಯಾತ್ರೆ ಇಲ್ಲದೆ ಬಾಹ್ಯತೀರ್ಥಯಾತ್ರೆ ವ್ಯರ್ಥ

ಸೂತ್ರನಾಮಕ ಪ್ರಾಣಪತಿ ಗಾ-
ಯತ್ರಿ ಸಂಪ್ರತಿಪಾದ್ಯನಾಗೀ-
ಗಾತ್ರದೊಳು ನೆಲೆಸಿರಲು ತಿಳಿಯದೆ ಕಂಡಕಂಡಲ್ಲಿ ॥
ಧಾತ್ರಿಯೊಳು ಸಂಚರಿಸಿ ಪುತ್ರ ಕ-
ಳತ್ರ ಸಹಿತನುದಿನದಿ ತೀರ್ಥ-
ಕ್ಷೇತ್ರಯಾತ್ರೆಯ ಮಾಡಿದೆವು ಎಂದೆನುತ ಹಿಗ್ಗುವರು॥25॥

4 ಶರೀರಗಳಲ್ಲಿ ನರಸಿಂಹ, ಪುರುಷ, ಅನಿರುದ್ಧ ಪ್ರದ್ಯುಮ್ನರು

ನಾರಸಿಂಹ ಸ್ವರೂಪದೊಳಗೆ ಶ-
ರೀರನಾಮದಿ ಕರೆಸುವನು ಹದಿ-
ನಾರು ಕಲೆಗಳುಳ್ಳ ಲಿಂಗದಿ ಪುರುಷನಾಮಕನು ॥
ತೋರುವನು ಅನಿರುದ್ಧದೊಳು ಶಾಂ-
ತೀರಮಣನನಿರುದ್ಧ ರೂಪದಿ
ಪ್ರೇರಿಸುವ ಪ್ರದ್ಯುಮ್ನ ಸ್ಥೂಲಕಳೇವರದೊಳಿದ್ದು ॥26॥

ದೇಹದ ಸಪ್ತಧಾತುಗತ ಭಗವದ್ರೂಪಗಳು

ಮೊದಲು ತ್ವಕ್ಚರ್ಮಗಳು ಮಾಂಸವು
ರುಧಿರ ಮೇದೋ ಮಜ್ಜವಸ್ಥಿಗ-
ಳದರೊಳಗೆ ಏಕೋನಪಂಚಾಶನ್ಮರುದ್ಗಣವು ॥
ನಿಧನಹಿಂಕಾರಾದಿ ಸಾಮಗ
ಆದರ ನಾಮದಿ ಕರೆಸುತೊಂಬ-
ತ್ತಧಿಕನಾಲ್ವತ್ತೆನಿಪ ರೂಪದಿ ಧಾತುಗಳೊಳಿಪ್ಪ ॥27॥

7 ಧಾತು, 5 ಕೋಶ, 3 ಅವಸ್ಥೆಗಳ ನಿಯಾಮಕ ರೂಪಗಳು

ಸಪ್ತಧಾತುಗಳೊಳಹೊರಗೆ ಸಂ-
ತಪ್ತಲೋಹಗತಾಗ್ನಿಯಂದದಿ
ಸಪ್ತಸಾಮಗನಿಪ್ಪನನ್ನಮಯಾದಿಕೋಶದೊಳು ॥
ಲಿಪ್ತನಾಗದೆ ತತ್ತದಾಹ್ವಯ
ಕ್ಲೃಪ್ತಭೋಗವ ಕೊಡುತ ಸ್ವಪ್ನ ಸು-
ಷುಪ್ತಿ ಜಾಗ್ರತೆಯೀವ ತೈಜಸ ಪ್ರಾಜ್ಞ ವಿಶ್ವಾಖ್ಯ ॥28॥

ಭಗವಂತನ ಪರ್ವರೂಪದ ಮಹಿಮೆ ಹಾಗೂ ಚಿಂತನೆಯ ಫಲ

ತೀವಿಕೊಂಡಿಹವಲ್ಲಿ ಮಜ್ಜ ಕ-
ಳೇವರದಿ, ಅಂಗುಲಿಯ ಪರ್ವದ
ಠಾವಿನಲಿ ಮುನ್ನೂರು ಅರವತ್ತೆನಿಪ ತ್ರಿಸ್ಥಳದಿ ॥
ಸಾವಿರದ ಎಂಭತ್ತು ರೂಪದಿ
ಕೋವಿದರು ಪೇಳುವರು ದೇಹದಿ
ದೇವತೆಗಳೊಡಗೂಡಿ ಕ್ರೀಡಿಸುವನು ರಮಾರಮಣ॥29॥

ಭಗವದ್-ರೂಪಗಳ ನಿತ್ಯಚಿಂತನೆಯಿಂದ ಸಾರೂಪ್ಯಾದಿಪದವಿಪ್ರಾಪ್ತಿ

ಕೀಟ ಪೇಶಸ್ಕಾರ ನೆನವಿಲಿ
ಕೀಟಭಾವವ ತೊರೆದು ತದ್ವತ್
ಖೇಟರೂಪವನೈದಿಯಾಡುವ ತೆರದಿ ಭಕುತಿಯಲಿ ॥
ಕೈಟಭಾರಿಯ ಧ್ಯಾನದಿಂದ ಭ-
ವಾಟವಿಯನತಿಶೀಘ್ರದಿಂದಲಿ
ದಾಟಿ ಸಾರೂಪ್ಯವನು ಐದುವರಲ್ಪ ಜೀವಿಗಳು ॥30॥

ಹೀಗೆ ಅಪರೋಕ್ಷಜ್ಞಾನ ಪಡೆಯುವುದು ಬಲು ಸುಲಭ

ಈ ಪರಿಯ ದೇಹದೊಳು ಭಗವ-
ದ್ರೂಪಗಳ ಮರೆಯದಲೆ ಮನದಿ ಪ-
ದೇಪದೇ ಭಕುತಿಯಲಿ ಸ್ಮರಿಸುತಲಿಪ್ಪ ಭಕುತರನು ॥
ಗೋಪತಿ ಜಗನ್ನಾಥವಿಟ್ಠಲ ಸ-
ಮೀಪಗನು ತಾನಾಗಿ ಸಂತತ
ಸಾಪರೋಕ್ಷಿಯ ಮಾಡಿ ಪೊರೆವನು ಎಲ್ಲ ಕಾಲದಲಿ ॥31॥

॥ ಇಲ್ಲಿಗೆ ಒಂಬತ್ತನೆಯ ಉದಾತ್ತಾನುದಾತ್ತ/ ಜೀವಪ್ರಕರಣಸಂಧಿ
ಮುಗಿಯಿತು ॥

ಸರ್ವಪ್ರತೀಕಸಂಧಿ-10

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ದೇವರ ದಾಸರಿಗೆ ಎಂದಿಗೂ ಅಪಜಯವಿಲ್ಲ

ಆವ ಪರಬೊಮ್ಮನತಿವಿಮಲಾಂ
ಗಾವ ಬದ್ಧರು ಎಂದೆನಿಪ ರಾ-
ಜೀವಭವ ಮೊದಲಾದಮರರನುದಿನದಿ ಹರಿಪದವ ||
ಸೇವಿಪರಿಗನುಕೂಲರಲ್ಲದೆ
ತಾವು ಇವರನ ಕೆಡಿಸಬಲ್ಲರೆ
ಶ್ರೀವಿಲಾಸಾಸ್ಪದನ ದಾಸರಿಗುಂಟೆ ಅಪಜಯವು ! ||1||

ಹರಿಭಜಕರಿಗೆ ಯಾವ ಗ್ರಹಗಳ ಭಯ ಬೇಡ

ಶ್ರೀದನಂಘ್ರಿಸರೋಜಯುಗಳೇ
ಕಾದಶಸ್ಥಾನಾತ್ಮದೊಳಗಿ-
ಟ್ಟಾದರದಿ ಸಂತುತಿಸುವವರಿಗೆ ಈ ನವಗ್ರಹವು ॥
ಆದಿತೇಯರು ಸಂತತಾಧಿ
ವ್ಯಾಧಿಗಳ ಪರಿಹರಿಸುತವರನು
ಕಾದುಕೊಂಡಿಹರೆಲ್ಲರೊಂದಾಗೀಶನಾಜ್ಞೆಯಲಿ ॥2॥

ಹರಿನಿಷ್ಠನಿಗೆ ಎಲ್ಲವೂ ತೀರ್ಥ ಎಲ್ಲವೂ ಕ್ಷೇತ್ರ

ಮೇದಿನಿಯ ಮೇಲುಳ್ಳ ಗೋಷ್ಪಾ-
ದೋದಕಗಳೆಲ್ಲಮಲತೀರ್ಥವು
ಪಾದಪಾದ್ರಿ ಧರಾತಳವೆ ಸುಕ್ಷೇತ್ರ ಜೀವಗಣ ॥
ಶ್ರೀದನ ಪ್ರತಿಮೆಗಳು ಅವರುಂ
ಬೋದನವೆ ನೈವೇದ್ಯ ನಿತ್ಯದಿ
ಹಾದಿ ನಡೆವುದೇ ನರ್ತನಾಗಳೆಂದರಿತವನೆ ಯೋಗಿ ॥3॥

ಭಗವದಾರಾಧಕರಿಂಗೆ ದೇಶ, ಕಾಲ, ಪಾತ್ರಗಳ ನೆಪ ಬೇಡ

ಸರ್ವದೇಶವು ಪುಣ್ಯದೇಶವು
ಸರ್ವಕಾಲವು ಪುಣ್ಯಕಾಲವು
ಸರ್ವಜೀವರು ದಾನಪಾತ್ರರು ಮೂರು ಲೋಕದೊಳು ॥
ಸರ್ವಮಾತುಗಳೆಲ್ಲ ಮಂತ್ರವು
ಸರ್ವ ಕೆಲಸಗಳೆಲ್ಲ ಪೂಜೆಯು
ಶರ್ವವಂದ್ಯನ ವಿಮಲಮೂರ್ತಿಧ್ಯಾನವುಳ್ಳವಗೆ ॥4॥

ರೋಮನಾಡಿಗಳಲ್ಲಿ ತುಂಬಿ ತೀರ್ಥನದಿಗಳಲ್ಲಿ ಮಿಂದು ಮಡಿಯಾಗಿ

ದೇವಖಾತ ತಟಾಕ ವಾಪಿ ಸ-
ರೋವರಗಳಭಿಮಾನಿ ಸುರರು ಕ-
ಳೇವರದೊಳಿಹ ರೋಮಕೂಪಗಳೊಳಗೆ ತುಂಬಿಹರು ॥
ಆವಿಯದ್ಗಂಗಾದಿ ನದಿಗಳು
ಭಾವಿಸುವುದೆಪ್ಪತ್ತೆರಡೆನಿಪ
ಸಾವಿರ ಸುನಾಡಿಗಳೊಳಗೆ ಪ್ರವಹಿಸುತಲಿಹವೆಂದು ॥5॥

ತೀರ್ಥಗಳಲ್ಲಿ 3 ಕೋಟಿ 72 ಸಾವಿರ ವಾಯುರೂಪಗಳು ಮತ್ತು ಹರಿರೂಪಗಳು

ಮೂರು ಕೋಟಿಯು ಮೇಲೆ ಶೋಭಿಪ
ಈರಧಿಕ ಎಪ್ಪತ್ತುಸಾವಿರ
ಮಾರುತಾಂತರ್ಯಾಮಿ ಮಾಧವ ಪ್ರತಿದಿವಸದಲ್ಲಿ ॥
ತಾ ರಮಿಸುತಿಹನೆಂದು ತಿಳಿದಿಹ
ಸೂರಿಗಳೆ ದೇವತೆಗಳವರ ಶ-
ರೀರಗಳೆ ಸುಕ್ಷೇತ್ರ ಅವರರ್ಚನೆಯೆ ಹರಿಪೂಜೆ ॥

ಗಂಗಾದಿ ತೀರ್ಥಾಭಿಮಾನಿಗಳೇ ಜ್ಞಾನಿಗಳ ಬಳಿ ಬರುವರು

ಶ್ರೀವರನಿಗಭಿಷೇಕವೆಂದರಿ-
ದೀ ವಸುಂಧರೆಯೊಳಗೆ ಬಲ್ಲವ-
ರಾವ ಜಲದಲಿ ಮಿಂದರೆಯು ಗಂಗಾದಿ ತೀರ್ಥಗಳು ॥
ತಾ ಒಲಿದು ಬಂದಲ್ಲೆ ನೆಲೆಗೊಂ-
ಡೀವವಖಿಲಾರ್ಥಗಳನರಿಯದ
ಜೀವರಮರತರಂಗಿಣಿಯನ್ನೈದಿದರು ಫಲವೇನು ॥

ಶ್ರೀಹರಿಯಲ್ಲಿ ತನ್ಮಯನಾದವಗೆ ಕಟ್ಟುಪಾಡುಗಳಿಲ್ಲ

ನದನದಿಗಳಳಿಯೊಳಗೆ ಪರಿವವು
ಉದಧಿವರಿಯಂತರದಿ, ತರುವಾ-
ಯದಲಿ ರಮಿಸುವವಲ್ಲಿ ತನ್ಮಯವಾಗಿ ತೋರದಲೆ ॥
ವಿಧಿನಿಷೇಧಗಳಾಚರಿಸುವರು
ಬುಧರು ಭಗವದ್ರೂಪ ಸರ್ವ-
ತ್ರದಲಿ ಚಿಂತನೆ ಬರಲು ತ್ಯಜಿಸುವರಖಿಲ ಕರ್ಮಗಳ॥8॥

ದೈತ್ಯರ ಪಾಪಪ್ರೇರಣೆಯಿಂದ ಯಾವುದೇ ಲೇಪವಿಲ್ಲ

ಕಲಿಯೆ ಮೊದಲಾದಖಿಳ ದಾನವ
ರೊಳಗೆ ಬ್ರಹ್ಮಭವಾದಿ ದೇವ-
ರ್ಕಳು ನಿಯಾಮಕರಾಗಿ ಹರಿಯಾಜ್ಞೆಯಲಿ ಅವರವರ ॥
ಕಲುಷಕರ್ಮವ ಮಾಡಿ ಮಾಡಿಸಿ
ಜಲರುಹೇಕ್ಷಣಗರ್ಪಿಸುತ ನಿ-
ಶ್ಚಲ ಸುಭಕ್ತಿಜ್ಞಾನಪೂರ್ಣರು ಸುಖಿಪರವರೊಳಗೆ ॥9॥

ದೈತ್ಯರಲ್ಲೂ ಕರ್ಮನೇತಾರರು ದೇವತೆಗಳೇ

ಆವ ಜೀವರೊಳಿದ್ದರೇನಿ
ನ್ನಾವ ಕರ್ಮವ ಮಾಡಲೇನಿ-
ನ್ನಾವ ಗುಣರೂಪಗಳುಪಾಸನೆ ಮಾಡಲೇನವರು ॥
ಕಾವನಯ್ಯನ ಪರಮ ಸತ್ಕರು-
ಣಾವಲೋಕನಬಲದಿ ಚರಿಸುವ
ದೇವತೆಗಳನು ಮುಟ್ಟಲಾಪವೆ ಪಾಪಕರ್ಮಗಳು ॥10॥

ಸಂಸಾರಿ ಹರಿಭಕ್ತರೆ ! ಪಾಪಕ್ಕೆ ಹೆದರದಿರಿ

ಪತಿಯೊಡನೆ ಮನಬಂದ ತೆರದಲಿ
ಪ್ರತಿದಿವಸದಲಿ ರಮಿಸಿ ಮೋದಿಸಿ
ಸುತರ ಪಡೆದಿಳೆಯೊಳು ಜಿತೇಂದ್ರಿಯಳೆಂದು ಕರೆಸುವಳು ॥
ಕೃತಿಪತಿ ಕಥಾಽಮೃತ ಸುಭೋಜನ
ರತ ಮಹಾತ್ಮರಿಗಿತರ ದೋಷ
ಪ್ರತತಿಗಳು ಸಂಬಂಧಿಸುವುವೇಽಚ್ಯುತನ ದಾಸರಿಗೆ ॥11॥

ಅನ್ಯದೇವತೆಯ ಉಪಾಸನೆ ಬಲು ದುಃಖಪ್ರದ

ಸೂಸಿ ಬಹ ನದಿಯೊಳಗೆ ತನ್ನ ಸ-
ಹಾಸ ತೋರುವೆನೆಂದು ಜಲಕೆದು-
ರೀಸಿದರೆ ಕೈಸೋತು ಮುಳುಗುವ ಹರಿಯ ಬಿಟ್ಟವನು ॥
ಕ್ಲೇಶ ಐದುವನಾದಿಯಲಿ ಸ-
ರ್ವೇಶ ಕ್ಲೃಪ್ತಿಯ ಮಾಡಿದುದ ಬಿ-
ಟ್ಟಾಶೆಯಿಂದಲಿ ಅನ್ಯರಾರಾಧಿಸುವ ಮಾನವನು ॥12॥

ಅಹಂಕಾರದಿಂದ ಮಾಡಿದ ಕರ್ಮ ವ್ಯರ್ಥ

ನಾನು ನನ್ನದು ಎಂಬ ಜಡಮತಿ
ಮಾನವನು ದಿನದಿನದಿ ಮಾಡುವ
ಸ್ನಾನಜಪದೇವಾರ್ಚನೆಯು ಮೊದಲಾದ ಕರ್ಮಗಳ ॥
ದಾನವರು ಸೆಳೆದೊಯ್ವರಲ್ಲದೆ
ಶ್ರೀನಿವಾಸನು ಸ್ವೀಕರಿಸ ಮ-
ದ್ಯಾನೆ ಪಕ್ವಕಪಿತ್ಥಫಲ ಭಕ್ಷಿಸಿದವೋಲಹುದು ॥13॥

ಸರ್ವತ್ರ ಹರಿ ಕಾಣದೆ ಅಹಂ ಕರ್ತಾ ಎನುವವನು ಮೂರ್ಖ

ಧಾತ್ರಿಯೊಳಗುಳ್ಳಖಿಳ ತೀರ್ಥ-
ಕ್ಷೇತ್ರ ಚರಿಸಿದರೇನು ಪಾತ್ರಾ-
ಪಾತ್ರವರಿತನ್ನಾದಿದಾನವ ಮಾಡಿ ಫಲವೇನು ॥
ಗಾತ್ರ ನಿರ್ಮಲನಾಗಿ ಮಂತ್ರ
ಸ್ತೋತ್ರ ಪಠಿಸಿದರೇನು ಹರಿ ಸ-
ರ್ವತ್ರಗತನೆಂದರಿಯದಲೆ ತಾ ಕರ್ತೃ ಎಂಬುವನು ॥14॥

ಹರಿಸ್ಮರಣೆ ಇಲ್ಲದೆ ಧರ್ಮದ ಮುಖವಾಡ ಬೇಡ

ಕಂಡ ನೀರೊಳು ಮುಳುಗಿ ದೇಹವ
ದಂಡಿಸಿದ ಫಲವೇನು ದಂಡ ಕ-
ಮಂಡಲುಗಳನೆ ಧರಿಸಿ ಯತಿಯೆಂದೆನಿಸಿ ಫಲವೇನು ॥
ಅಂಡಜಾಧಿಪನಂಸಗನ ಪದ
ಪುಂಡರೀಕದಿ ಮನವಹರ್ನಿಶಿ
ಬಂಡುಣಿಯವೋಲಿರಿಸಿ ಸುಖಬಡದಿಪ್ಪ ಮಾನವನು ॥15॥

ಅಹಂಕಾರ ಬಿಡದವನ ಸತ್ಕರ್ಮಗಳ ಬೂಟಾಟಿಕೆ

ವೇದಶಾಸ್ತ್ರಪುರಾಣ ಕಥೆಗಳ
ಓದಿ ಪೇಳಿದರೇನು ಸಕಲ ನಿ-
ಷೇಧ ಕರ್ಮವ ತೊರೆದು ಸತ್ಕರ್ಮಗಳ ಮಾಡೇನು ॥
ಓದನಂಗಳ ಜರಿದು ಶ್ವಾಸ ನಿ-
ರೋಧಗೈಸಿದರೇನು ಕಾಮ
ಕ್ರೋಧವಳಿಯದೆ ನಾನು ನನ್ನದು ಎಂಬ ಮಾನವನು
॥16॥

ಎಲ್ಲರಲ್ಲಿ ಎಲ್ಲ ವಿಧದಲ್ಲಿ ಹರಿಚಿಂತನೆ ಮಾಡು

ಏನು ಕೇಳಿದರೇನು ನೋಡಿದ-
ರೇನು ಓದಿದರೇನು ಪೇಳಿದ -
ರೇನು ಪಾಡಿದರೇನು ಮಾಡಿದರೇನು ದಿನದಿನದಿ ॥
ಶ್ರೀನಿವಾಸನ ಜನ್ಮ ಕರ್ಮ ಸ-
ದಾನುರಾಗದಿ ನೆನೆದು ತತ್ತ-
ತ್ಸ್ಥಾನದಲಿ ತದ್ರೂಪ ತನ್ನಾಮಕನ ಸ್ಮರಿಸದವ ॥17॥

ಈ ಹರಿಕಥಾಮೃತಸಾರ ನುಡಿದವನು ಮಧ್ವವಲ್ಲಭ, ನಾನಲ್ಲ

ಬುದ್ಧಿವಿದ್ಯಾಬಲದಿ ಪೇಳಿದ
ಶುದ್ಧಕಾವ್ಯವಿದಲ್ಲ ತತ್ತ್ವ ಸು-
ಪದ್ಧತಿಗಳನು ತಿಳಿದ ಮಾನವನಲ್ಲ ಬುಧರಿಂದ ॥
ಮಧ್ವವಲ್ಲಭ ತಾನೆ ಹೃದಯದೊ-
ಳಿದ್ದು ನುಡಿದಂದದಲಿ ನುಡಿದೆನ
ಪದ್ಯಗಳ ನೋಡದಲೆ ಕಿವಿಗೊಟ್ಟಾಲಿಪುದು ಬುಧರು ॥18॥

ಈ ಹರಿಕಥಾಮೃತಸಾರ ಕೊಬ್ಬಿದವರಿಗಲ್ಲ

ಕಬ್ಬಿನೊಳಗಿಹ ರಸವಿದಂತಿರೆ
ಗಬ್ಬಿಗಲ್ಲದೆ ಭಾಗ್ಯ ಯೌವನ
ಮಬ್ಬಿನಲಿ ಮೈಮರೆದವಗೆ ಹರಿಸುಚರಿತಾಽಮೃತವು ॥
ಲಭ್ಯವಾಗಲು ಹರಿಪದಾಬ್ಜದಿ
ಹಬ್ಬಿದರೆ ಸದ್ಭಕ್ತಿರಸವುಂ-
ಡುಬ್ಬಿ ಕೊಬ್ಬಿ ಸುಖಾಬ್ಧಿಯೊಳಗಾಡುವವಗಲ್ಲದಲೆ ॥19॥

ಅಭಕ್ತರಿಗೆ ಈ ಗ್ರಂಥ ಉತ್ತರವಿಲ್ಲದ ಒಗಟು

ಖಗವರಧ್ವಜನಂಘ್ರಿ ಭಕುತಿಯು
ಬಗೆಯನರಿಯದ ಮಾನವರಿಗಿದು
ಒಗಟಿನಂದದಿ ತೋರುತಿಪ್ಪುದು ಎಲ್ಲ ಕಾಲದಲಿ ॥
ತ್ರಿಗುಣವರ್ಜಿತನಮಲಗುಣಗಳ
ಪೊಗಳಿ ಹಿಗ್ಗುವ ಭಾಗವತರಿಗೆ
ಮಿಗೆ ಭಕುತಿ ವಿಜ್ಞಾನ ಸುಖವಿತ್ತವರ ರಕ್ಷಿಪುದು ॥20॥

ಪರಮರಹಸ್ಯವಾದ ಈ ಗ್ರಂಥವನ್ನು ಅಯೋಗ್ಯರಿಗೆ ಬೋಧಿಸದಿರಿ

ಪರಮತತ್ವರಹಸ್ಯವಿದು ಭೂ-
ಸುರರು ಕೇಳ್ವುದು ಸಾದರದಿ ನಿ-
ಷ್ಠುರಿಗಳಿಗೆ ಮೂಢರಿಗೆ ಪಂಡಿತಮಾನಿ ಪಿಶುನರಿಗೆ ॥
ಅರಸಿಕರಿಗಿದು ಪೇಳ್ವುದಲ್ಲನ-
ವರತ ಭಗವತ್ಪಾದಯುಗಳಾಂ-
ಬುರುಹ ಮಧುಕರರೆನಿಸುವರಿಗಿದನರುಪು ಮೋದದಲಿ
॥21॥

ಹರಿಕಥಾಮೃತಸಾರದ ರಸಾಸ್ವಾದನೆ ಕೂಪಮಂಡೂಕರಿಗೆಲ್ಲಿ ಸಾಧ್ಯ ?

ಲೋಕವಾರ್ತೆಯಿದಲ್ಲ ಪರಲೋ-
ಕೈಕನಾಥನ ವಾರ್ತೆ ಕೇಳ್ವರೆ
ಕಾಕುಮನುಜರಿಗಿದು ಸಮರ್ಪಕವಾಗಿ ಸೊಗಸುವುದೇ ॥
ಕೋಕನದ ಪರಿಮಳವು ಷಟ್ಪದ
ಸ್ವೀಕರಿಸುವಂದದಲಿ ಜಲಚರ
ಭೇಕ ಬಲ್ಲುದೆ ಇದರ ರಸ ಹರಿಭಕುತಗಲ್ಲದಲೆ ॥22॥

ಗುಣಪೂರ್ಣನನ ನಿರ್ದುಷ್ಟ ಮಹಿಮೆಗಳು

ಸ್ವಪ್ರಯೋಜನರಹಿತ ಸಕಲೇ
ಷ್ಟಪ್ರದಾಯಕ ಸರ್ವಗುಣ ಪೂ-
ರ್ಣ ಪ್ರಮೇಯ ಜರಾಮರಣವರ್ಜಿತ ವಿಗತಕ್ಲೇಶ ॥
ವಿಪ್ರತಮ ವಿಶ್ವಾತ್ಮ ಘೃಣಿ ಸೂ-
ರ್ಯಪ್ರಕಾಶಾನಂತಮಹಿಮ ಘೃ-
ತಪ್ರತೀಕಾರಾಧಿತಾಂಘ್ರಿಸರೋಜ ಸುರರಾಜ ॥23॥

ದಶಾವತಾರಿಗೆ ಜಯವಾಗಲಿ

ವನಚರಾದ್ರಿಧರಾಧರನೆ ಜಯ
ಮನುಜಮೃಗವರವೇಷ ಜಯ ವಾ-
ಮನ ತ್ರಿವಿಕ್ರಮದೇವ ಜಯ ಭೃಗುರಾಮ ಭೂಮ ಜಯ ॥
ಜನಕಜಾವಲ್ಲಭನೆ ಜಯ ರು-
ಗ್ಮಿಣಿಮನೋರಥ ಸಿದ್ಧಿದಾಯಕ
ಜಿನವಿಮೋಹಕ ಕಲಿವಿದಾರಣ ಜಯ ಜಯಾರಮಣ
॥24॥

ತನ್ನನ್ನು ನಿಶ್ಚಲವಾಗಿ ಆಶ್ರಯಿಸಿದವರನ್ನು ಯಾವ ಕಾಲಕ್ಕೂ ಬಿಡನು

ಸಚ್ಚಿದಾನಂದಾತ್ಮ ಬ್ರಹ್ಮಕ-
ರಾರ್ಚಿತಂಘ್ರಿಸರೋಜ ಸುಮನಸ-
ಪ್ರೋಚ್ಚ ಸನ್ಮಂಗಳದ ಮಧ್ವಾಂತಃಕರಣರೂಢ ॥
ಅಚ್ಯುತ ಜಗನ್ನಾಥ ವಿಟ್ಠಲ
ನಿಚ್ಚ ಮೆಚ್ಚಿದ ಜನರ ಬಿಡ ಕಾ-
ಡ್ಕಿಚ್ಚನುಂಡಾರಣ್ಯದೊಳು ಗೋಗೋಪರನು ಕಾಯ್ದ॥25॥

॥ ಇಲ್ಲಿಗೆ ಹತ್ತನೆಯ ಸರ್ವಪ್ರತೀಕಸಂಧಿ ಮುಗಿಯಿತು ॥

11. ಧ್ಯಾನಪ್ರಕ್ರಿಯಾಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಹರಿಧ್ಯಾನದಲ್ಲಿ ತಲ್ಲೀನರಾದವರಿಗೆ ಅಪರಾಧಗಳ ಭಯವಿಲ್ಲ

ಪಾದುಕೆಯ ಕಂಟಕ ಸಿಕತ ಮೊದ-
ಲಾದವನುದಿನ ಬಾಧಿಸವವೇ-
ಕಾದಶೇಂದ್ರಿಯಗಳಲಿ ಬಿಡದೆ ಹೃಷೀಕಪನ ಮೂರ್ತಿ ||
ಸಾದರದಿ ನೆನೆವವನು ಏನಪ-
ರಾಧಗಳ ಮಾಡಿದರು ಸರಿಯೆ ನಿ-
ರೋಧಗೈಸವು ಮೋಕ್ಷಮಾರ್ಗಕೆ ದುರಿತರಾಶಿಗಳು ||1||

ಮಡದಿ ಮಕ್ಕಳ ಅಭಿಮಾನತ್ಯಾಗವೇ ಧ್ಯಾನಕ್ಕೆ ಸೋಪಾನ

ಹಗಲ ನಂದಾದೀಪದಂದದಿ
ನಿಗಮವೇದ್ಯನ ಪೂಜಿಸುತ ಕೈ-
ಮುಗಿದು ನಾಲ್ಕರೊಳೊಂದು ಪುರುಷಾರ್ಥವನು ಬೇಡದಲೆ॥
ಜಗದುದರ ಕೊಟ್ಟುದನು ಭುಂಜಿಸು
ಮಗಮಡದಿ ಪ್ರಾಣೇಂದ್ರಿಯಾತ್ಮಾ-
ದಿಗಳು ಭಗವದಧೀನವೆಂದಡಿಗಡಿಗೆ ನೆನೆವುತಿರು ॥2॥

"ನೀನು ಸ್ವತಂತ್ರ ನಾನು ಅಸ್ವತಂತ್ರ" ಇದು ಧ್ಯಾನದ ಮೊದಲ ಮಜಲು

ಅಸ್ವತಂತ್ರನು ಜೀವ ಹರಿ ಸ-
ರ್ವಸ್ವತಂತ್ರನು ನಿತ್ಯಸುಖಮಯ
ನಿಃಸ್ವಬದ್ಧಾಲ್ಪಜ್ಞಶಕ್ತ ಸದುಃಖ ನಿರ್ವಿಣ್ಣ ॥
ಹ್ರಸ್ವದೇಹಿ ಸನಾಥಜೀವನು
ವಿಶ್ವವ್ಯಾಪಕಕರ್ತೃ ಬ್ರಹ್ಮ ಸ-
ರಸ್ವತೀಶಾದ್ಯಮರನುತ ಹರಿಯೆಂದು ಕೊಂಡಾಡು ॥3॥

72000 ನಾಡಿಗಳಲ್ಲಿ ವಿಶ್ವಾದಿ 8 ರೂಪಗಳ ಚಿಂತ್ಯ

ಮತ್ತೆ ವಿಶ್ವಾದ್ಯೆಂಟು ರೂಪೊಂ-
ಭತ್ತರಿಂದಲಿ ಪೆಚ್ಚಿಸಲು ಎ-
ಪ್ಪತ್ತೆರಡು ರೂಪಗಳಹವು ಒಂದೊಂದೆ ಸಾಹಸ್ರ ॥
ಪೃಥ್‌ಕ್‌ಪೃಥಕ್‌ ನಾಡಿಗಳೊಳಗೆ ಸ-
ರ್ವೊತ್ತಮನ ತಿಳಿಯೆಂದು ಭೀಷ್ಮನು
ಬಿತ್ತರಿಸಿದನು ಧರ್ಮತನಯಗೆ ಶಾಂತಿಪರ್ವದಲಿ ॥4॥

ಪೃಥಿವ್ಯಾದಿ 8 ತತ್ವಗಳಲ್ಲಿ ಇದೇ ವಿಶ್ವಾದಿ 8 ರೂಪಗಳು

ಎಂಟು ಪ್ರಕೃತಿಗಳೊಳಗೆ ವಿಶ್ವಾ-
ದ್ಯೆಂಟು ರೂಪದಲಿದ್ದು ಭಕುತರ
ಕಂಟಕವ ಪರಿಹರಿಸುತಲಿ ಪಾಲಿಸುವ ಪ್ರತಿದಿನದಿ ॥
ನೆಂಟನಂದದಿ ಎಡಬಿಡದೆ ವೈ-
ಕುಂಠರಮಣನು ತನ್ನವರ ನಿ-
ಷ್ಕಂಟಕ ಸುಮಾರ್ಗದಲಿ ನಡೆಸುವ ದುರ್ಜನರ ಬಡಿವ
॥5॥

ಶಕ್ತ್ಯಾದಿ 11 ರೂಪಗಳಿಂದ ಕೂಡಿದ ಪುರುಷರೂಪನ ಸ್ವರಮಣತ್ವ ಚಿಂತನೆ

ಸ್ವರಮಣನು ಶಕ್ತ್ಯಾದಿರೂಪದಿ
ಕರಣಮಾನಿಗಳೊಳಗೆ ನೆಲಸಿ-
ದ್ದರವಿದೂರನು ಸ್ಥೂಲವಿಷಯಗಳುಂಡುಣಿಪ ನಿತ್ಯ ॥
ಅರಿಯದಲೆ ನಾನುಂಬೆನೆಂಬುವ
ನಿರಯಗಳನುಂಬುವನು ನಿಶ್ಚಯ
ಮರಳಿ ಮರಳಿ ಭವಾಟವಿಯ ಸಂಚರಿಸಿ ಬಳಲುವನು
॥6॥

ಪ್ರತಿಯೊಂದು ರಸಗಳಲ್ಲಿ ಸುರುಚಿ, ರುಚಿರ, ಸುಗಂಧ, ಶುಚಿ ಎಂಬ 4 ರೂಪಗಳು

ಸುರುಚಿ ರುಚಿರ ಸುಗಂಧ ಶುಚಿಯೆಂ-
ದಿರುತಿಹನು ಷಡ್ರಸಗಳೊಳು ಹ-
ನ್ನೆರಡು ರೂಪದಲಿಪ್ಪ ಶ್ರೀಭೂದುರ್ಗೆಯರ ಸಹಿತ ॥
ಸ್ವರಮಣನು ಎಪ್ಪತ್ತೆರಡು ಸಾ-
ವಿರ ಸಮೀರನ ರೂಪದೊಳಗಿ-
ದ್ದುರು ಪರಾಕ್ರಮ ಕರ್ತೃ ಎನಿಸುವ ನಾಡಿಗಳೊಳಿದ್ದು॥7॥

ಹರಿಸ್ಮರಣೆ ಇಲ್ಲದ ಧರ್ಮವೂ ಅಧರ್ಮವಾಗುತ್ತ...

ನಿನ್ನ ಸರ್ವತ್ರದಲಿ ನೆನೆವವ-
ರನ್ಯಕರ್ಮವ ಮಾಡಿದರು ಸರಿ
ಪುಣ್ಯಕರ್ಮಗಳೆನಿಸುವುವು ಸಂದೇಹವಿನಿತಿಲ್ಲ ॥
ನಿನ್ನ ಸ್ಮರಿಸದೆ ಸ್ನಾನ ಜಪ ಹೋ-
ಮಾನ್ನ ವಸ್ತ್ರಗಜಾಶ್ವಭೂಧನ
ಧಾನ್ಯ ಮೊದಲಾದಖಿಳ ಧರ್ಮವ ಮಾಡಿ ಫಲವೇನು ॥8॥

ಶಿಪಿವಿಷ್ಟನಿಂದ ಪದಾರ್ಥಸುಖ

ಇಷ್ಟ ಭೋಗ್ಯ ಪದಾರ್ಥದೊಳು ಶಿಪಿ-
ವಿಷ್ಟನಾಮದಿ ಸರ್ವಜೀವರ
ತುಷ್ಟಿ ಬಡಿಸುವ ದಿನದಿನದಿ ಸಂತುಷ್ಟ ತಾನಾಗಿ ॥
ಕೋಷ್ಟದೊಳು ನೆಲೆಸಿದ್ದು ರಸಮಯ
ಪುಷ್ಟಿಗೈದಿಸುತಿಂದ್ರಿಯಗಳೊಳು
ಪ್ರೇಷ್ಠನಾಗಿದ್ದೆಲ್ಲ ವಿಷಯಗಳುಂಬ ತಿಳಿಸದಲೆ ॥9॥

ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಲ್ಲಿ ''ಕಾರಣ'' ಎಂಬ ಭಗವದ್ರೂಪದ ವ್ಯಾಪಾರ

ಕಾರಣಾಹ್ವಯ ಜ್ಞಾನ ಕರ್ಮ-
ಪ್ರೇರಕನು ತಾನಾಗಿ ಕ್ರಿಯೆಗಳ
ತೋರುವನು ಕರ್ಮೇಂದ್ರಿಯಾಧಿಪರೊಳಗೆ ನೆಲೆಸಿದ್ದು ॥
ಮೂರು ಗುಣಮಯ ದ್ರವ್ಯಗ ತದಾ-
ಕಾರ ತನ್ನಾಮದಲಿ ಕರೆಸುವ
ತೋರಿಕೊಳ್ಳದೆ ಜನರ ಮೋಹಿಪ ಮೋಹಕಲ್ಪಕನು॥10॥

ದ್ರವ್ಯ, ಅವ್ಯಯ, ಕುಶಲ, ಸಕ್ರಿಯೆ ರೂಪಗಳ ಚಿಂತನೆ

ದ್ರವ್ಯನೆನಿಸುವ ಭೂತಮಾತ್ರದೊ-
ಳವ್ಯಯನು ಕರ್ಮೇಂದ್ರಿಯಗಳೊಳು
ಭವ್ಯ ಸತ್ಕ್ರಿಯನೆನಿಪ ಜ್ಞಾನೇಂದ್ರಿಯಗಳೊಳಗಿದ್ದು ॥
ಸ್ತವ್ಯ ಕಾರಕನೆನಿಸಿ ಸುಖಮಯ
ಸೇವ್ಯ ಸೇವಕನೆನಿಸಿ ಜಗದೊಳು
ಹವ್ಯವಾಹನನರಣಿಯೊಳಗಿಪ್ಪಂತೆ ಇರುತಿಪ್ಪ ॥11॥

ಶುಚಿ, ಶುಚಿಷತ್, ಹೋತ, ವಾಮನ, ಹೃಷೀಕೇ ರೂಪಗಳ ಚಿಂತನೆ

ಮನವೆ ಮೊದಲಾದಿಂದ್ರಿಯಗಳೊಳ-
ಗನಿಲದೇವನು ಶುಚಿಯೆನಿಸಿಕೊಂ-
ಡನವರತ ನೆಲೆಸಿಪ್ಪ ಶುಚಿಷದ್ಧೋತನೆಂದೆನಿಸಿ ॥
ತನುವಿನೊಳಗಿಪ್ಪನು ಸದಾ ವಾ-
ಮನ ಹೃಷೀಕೇಶಾಖ್ಯರೂಪದ-
ಲನುಭವಕೆ ತಂದೀವ ವಿಷಯಜ ಸುಖವ ಜೀವರಿಗೆ॥12

ಪ್ರೇರ್ಯಪ್ರೇರಕನ ನಿರ್ವೈರ ವ್ಯಾಪಾರ

ಪ್ರೇರಕ ಪ್ರೇರ್ಯರೊಳು ಪ್ರೇರ್ಯ
ಪ್ರೇರಕನು ತಾನಾಗಿ ಹರಿ ನಿ-
ರ್ವೈರದಿಂದ ವರ್ತಿಸುವ ತನ್ನಾಮರೂಪದಲಿ ॥
ತೋರಿಕೊಳ್ಳದೆ ಸರ್ವರೊಳು ಭಾ-
ಗೀರಥೀಜನಕನು ಸಕಲ ವ್ಯಾ-
ಪಾರಗಳ ತಾ ಮಾಡಿ ಮಾಡಿಸಿ ನೋಡಿ ನಗುತಿಪ್ಪ॥13॥

ಪುಣ್ಯ, ಪಾಪ, ಹರ್ಷ, ಲಾಭ, ಅಲಾಭ, ದುಃಖಾದಿ ಎಲ್ಲವನ್ನು ಸಮರ್ಪಿಸು

ಹರಿಯೆ ಮುಖ್ಯನಿಯಾಮಕನು ಎಂ-
ದರಿದು ಪುಣ್ಯಾಪುಣ್ಯ ಹರುಷಾ-
ಮರುಷ ಲಾಭಾಲಾಭ ಸುಖದುಃಖಾದಿ ದ್ವಂದ್ವಗಳ ॥
ನಿರುತ ಅವನಂಘ್ರಿಗೆ ಸಮರ್ಪಿಸಿ
ನರಕಭೂಸ್ವರ್ಗಾಪವರ್ಗದಿ
ಕರಣನೀಯಾಮಕನ ಸರ್ವತ್ರದಲಿ ನೆನೆವುತಿರು ॥14॥

ಬಾಲಕನಂತೆ ಫಲದ ಆಸೆ ತೊರೆದು ಭಕ್ತಿ ಮಾಡು

ಮಾಣವಕ ತತ್ಫಲಗಳನುಸಂ-
ಧಾನವಿಲ್ಲದೆ ಕರ್ಮಗಳ ಸ್ವೇ-
ಚ್ಛಾನುಸಾರದಿ ಮಾಡಿ ಮೋದಿಸುವಂತೆ ಪ್ರತಿದಿನದಿ ॥
ಜ್ಞಾನಪೂರ್ವಕ ವಿಧಿನಿಷೇಧಗ-
ಳೇನು ನೋಡದೆ ಮಾಡು ಕರ್ಮಪ್ರ-
ಧಾನ ಪುರುಷೇಶನಲಿ ಭಕುತಿಯ ಬೇಡು ಕೊಂಡಾಡು
॥15॥

ಬಂದದ್ದನ್ನು ಅನುಭವಿಸಿ
ಹರಿಕಾರುಣ್ಯವನ್ನು ಹೊಂದು

ಹಾನಿವೃದ್ಧಿ ಜಯಾಪಜಯಗಳು
ಏನು ಕೊಟ್ಟರು ಭುಂಜಿಸುತ ಲ-
ಕ್ಷ್ಮೀನಿವಾಸನ ಕರುಣವನೆ ಸಂಪಾದಿಸನುದಿನದಿ ॥
ಜ್ಞಾನಸುಖಮಯ ತನ್ನವರ ಪರ-
ಮಾನುರಾಗದಿ ಸಂತೈಪ ದೇ-
ಹಾನುಬಂಧಿಗಳಂತೆ ಒಳಹೊರಗಿದ್ದು ಕರುಣಾಳು ॥16॥

ತಿಳಿಸದೆ ಸ್ವೀಕರಿಪ
ಇಂದ್ರಿಯಾಂತರ್ಯಾಮಿಯ ಕಾರುಣ್ಯ

ಆ ಪರಮ ಸಕಲೇಂದ್ರಿಯಗಳೊಳು
ವ್ಯಾಪಕನು ತಾನಾಗಿ ವಿಷಯವ
ತಾ ಪರಿಗ್ರಹಿಸುವನು ತಿಳಿಸದೆ ಸರ್ವಜೀವರೊಳು ॥
ಪಾಪರಹಿತ ಪುರಾಣಪುರುಷ ಸ-
ಮೀಪದಲಿ ನೆಲೆಸಿದ್ದು ನಾನಾ-
ರೂಪಧಾರಕ ತೋರಿಕೊಳ್ಳದೆ ಕರ್ಮಗಳ ಮಾಳ್ಪ ॥17॥

ನಾಕು ವಿಧ ಚೇತನರಲ್ಲಿ ಅವರಂತೆ ಚಲಿಸುವ ಭಗವಂತ

ಖೇಚರರು ಭೂಚರರು ವಾರಿನಿ-
ಶಾಚರರೊಳಿದ್ದವರ ಕರ್ಮಗ-
ಳಾಚರಿಸುವನು ಘನಮಹಿಮ ಪರಮಾಲ್ಪನೋಪಾದಿ ॥
ಗೋಚರಿಸನು ಬಹುಪ್ರಕಾರಾ-
ಲೋಚನೆಯ ಮಾಡಿದರು ಮನಸಿಗೆ
ಕೀಚಕಾರಿಪ್ರಿಯ ಕವಿಜನಗೇಯ ಮಹರಾಯ ॥18॥

ದೇಹದಲ್ಲಿ ಜೀವ ಪರಮಾತ್ಮರ ಕರ್ಮ ಒಂದೇ ವಿಧವಾದರೂ ಫಲ ಬೇರೆ ಬೇರೆ

ಒಂದೆ ಗೋತ್ರ ಪ್ರವರ ಸಂಧ್ಯಾ-
ವಂದನೆಗಳನು ಮಾಡಿ ಪ್ರಾಂತಕೆ
ತಂದೆ ತನಯರು ಬೇರೆ ತಮ್ಮಯ ಪೆಸರುಗೊಂಬಂತೆ ॥
ಒಂದೆ ದೇಹದೊಳಿದ್ದು ನಿಂದ್ಯಾ-
ನಿಂದ್ಯ ಕರ್ಮವ ಮಾಡಿ ಮಾಡಿಸಿ
ಇಂದಿರೇಶನು ಸರ್ವಜೀವರೊಳೀಶನೆನಿಸುವನು ॥19॥

ತುಕ್ಕು ಹಿಡಿದ ಪಾಪವ ಅಟ್ಟಲು "ವಿಟ್ಠಲ" ಎನ್ನಿರಿ

ಕಿಟ್ಟಗಟ್ಟಿದ ಲೋಹ ಪಾವಕ
ಸುಟ್ಟು ವಿಂಗಡ ಮಾಡುವಂತೆ ಘ-
ರಟ್ಟ ವ್ರೀಹಿಯೊಳಿಪ್ಪ ತಂಡುಲ ಕಡೆಗೆ ತೆಗೆವಂತೆ ॥
ವಿಟ್ಠಲಾ ಎಂದೊಮ್ಮೆ ಮೈಮರೆ-
ದಟ್ಟಹಾಸದಿ ಕರೆಯೆ ದುರಿತಗ-
ಳಟ್ಟುಳಿಯ ಬಿಡಿಸೆವನ ತನ್ನೊಳಗಿಟ್ಟು ಸಲಹುವನು ॥20॥

ಸಮಸ್ತ ಜೀವರಾಶಿಗಳು ಭಗವದುದರದಲ್ಲಿ

ಜಲಧಿಯೊಳು ಸ್ವೇಚ್ಛಾನುಸಾರದಿ
ಜಲಚರಪ್ರಾಣಿಗಳು ತತ್ತತ್
ಸ್ಥಳಗಳಲಿ ಸಂತೋಷಪಡುತಲಿ ಸಂಚರಿಸುವಂತೆ ॥
ನಳಿನನಾಭನೊಳಬ್ಜಭವ ಮು-
ಪ್ಪೊಳಲುರಿಗ ಮೈಗಣ್ಣ ಮೊದಲಾ-
ದ್ದಲವು ಜೀವರಗಣವು ವರ್ತಿಸುತಿಹುದು ನಿತ್ಯದಲಿ ॥21॥

'ಜಗದಂತರ್ಯಾಮಿಯೇ ಮಮ ಸ್ವಾಮಿ' ಎಂಬ ಉಪಾಸನೆ

ವಾಸುದೇವನು ಒಳಹೊರಗೆ ಆ-
ಭಾಸಕನು ತಾನಾಗಿ ಬಿಂಬ ಪ್ರ-
ಕಾಶಿಸುವ ತದ್ರೂಪ ತನ್ನಾಮದಲಿ ಸರ್ವತ್ರ ॥
ಈ ಸಮನ್ವಯವೆಂದೆನಿಪ ಸದು-
ಪಾಸನೆಯ ಗೈವವನು ಮೋಕ್ಷಾ-
ನ್ವೇಷಿಗಳೊಳುತ್ತಮನು ಜೀವನ್ಮುಕ್ತನವನಿಯೊಳು ॥22॥

ಭಾಗ್ಯ ಬಡತನಗಳಲ್ಲಿ ಸಮಾನವಾಗಿ ಸಮರ್ಪಿಸು

ಭೋಗ್ಯವಸ್ತುಗಳೊಳಗೆ ಯೋಗ್ಯಾ-
ಯೋಗ್ಯರಸಗಳನರಿತು ಯೋಗ್ಯಾ-
ಯೋಗ್ಯರಲಿ ನೆಲೆಸಿಪ್ಪ ಹರಿಗೆ ಸಮರ್ಪಿಸನುದಿನದಿ ॥
ಭಾಗ್ಯ ಬಡತನ ಬರಲು ಹಿಗ್ಗದೆ
ಕುಗ್ಗಿ ಸೊರಗದೆ ಸದ್ಭಕುತಿ ವೈ-
ರಾಗ್ಯಗಳನೇ ಮಾಡು ನಿರ್ಭಾಗ್ಯನೆನಿಸದಲೆ ॥23॥

ಚರಾಚರಗಳೆಲ್ಲದರ ಸಮರ್ಪಣೆಯೇ ವ್ಯತಿರೇಕಪೂಜೆ

ಸ್ಥಲಜಲಾದ್ರಿಗಳಲ್ಲಿ ಜನಿಸುವ
ಫಲಸುಪುಷ್ಪಜಗಂಧರಸ ಶ್ರೀ-
ತುಳಸಿ ಮೊದಲಾದಖಿಳಪೂಜಾಸಾಧನಪದಾರ್ಥ ॥
ಹಲವು ಬಗೆಯಿಂದರ್ಪಿಸುತ ಬಾಂ-
ಬೊಳೆಯ ಜನಕಗೆ ನಿತ್ಯನಿತ್ಯದಿ
ತಿಳಿವುದಿದು ವ್ಯತಿರೇಕಪೂಜೆಗಳೆಂದು ಕೋವಿದರು ॥24॥

ಎಲ್ಲೆಡೆ ಇರುವ ಸನ್ನಿಧಾನದಲ್ಲಿ ವೈಷಮ್ಯವಿಲ್ಲವೆಂದು ಬಿಂಬನ ಚಿಂತನೆ

ಶ್ರೀಕರನ ಸರ್ವತ್ರದಲಿ ಅವ-
ಲೋಕಿಸುತ ಗುಣರೂಪಕ್ರಿಯ ವ್ಯತಿ-
ರೇಕ ತಿಳಿಯದಲನ್ವಯಿಸು ಬಿಂಬನಲಿ ಮರೆಯದಲೆ ॥
ಸ್ವೀಕರಿಸುವನು ಕರುಣದಿಂದ ನಿ-
ರಾಕರಿಸದೆ ಕೃಪಾಳು ಭಕ್ತರ
ಶೋಕಗಳ ಪರಿಹರಿಸಿ ಸುಖವಿತ್ತನವರತ ಪೊರೆವ ॥25॥

ಅನ್ವಯವ್ಯತಿರೇಕ ಪೂಜೆ ಮಾಡಿ ಸಂಸಾರದಿಂದ ಪಾರಾಗು

ಇನಿತು ವ್ಯತಿರೇಕಾನ್ವಯಗಳೆಂ-
ದೆನಿಪ ಪೂಜಾವಿಧಿಗಳನೆ ತಿಳಿ-
ದನಿಮಿಶೇಷನ ತೃಪ್ತಿಪಡಿಸುತಲಿರು ನಿರಂತರದಿ ॥
ಘನಮಹಿಮ ಕೈಗೊಂಡು ಸ್ಥಿತಿಮೃತಿ
ಜನುಮಗಳ ಪರಿಹರಿಸಿ ಸೇವಕ-
ಜನರೊಳಿಟ್ಟಾನಂದಪಡಿಸುವ ಭಕ್ತವತ್ಸಲನು ॥26॥

ಚಲಾಚಲಪ್ರತೀಕಗಳಲ್ಲಿ ಗೋಳಕತ್ರಯ ಚಿಂತನೆ

ಜಲಜನಾಭನಿಗೆರಡು ಪ್ರತಿಮೆಗ-
ಳಿಳೆಯೊಳಗೆ ಜಡಚೇತನಾತ್ಮಕ
ಚಲದೊಳೀರ್ಬಗೆ ಸ್ತ್ರೀಪುರುಷಭೇದದಲಿ ಜಡದೊಳಗೆ ॥
ತಿಳಿವುದಾಹಿತಪ್ರತಿಮೆ ಸಹಜಾ-
ಚಲದೊಳಿಂದೀರ್ಬಗೆ ಪ್ರತೀಕದಿ
ಲಲಿತ ಪಂಚತ್ರಯ ಸುಗೋಳಕವರಿತು ಭಜಿಸುತಿರು
॥27॥

ಪುರುಷರಲ್ಲಿ ನಿಯಮಿಸುವ ದೇವತೆಗಳು ಹಾಗೂ ಅಂತರ್ಯಾಮಿ ರೂಪಗಳು

ವಾರಿಜಾಸನ ವಾಯು ವೀಂದ್ರ ಉ-
ಮಾರಮಣ ನಾಕೇಶ ಸ್ಮರಹಂ-
ಕಾರಿಕಪ್ರಾಣಾದಿಗಳು ಪುರುಷರ ಕಳೇವರದಿ ॥
ತೋರಿಕೊಳದನಿರುದ್ಧ ದೋಷ ವಿ-
ದೂರ ನಾರಾಯಣನ ರೂಪ ಶ-
ರೀರಮಾನಿಗಳಾಗಿ ಭಜಿಸುತ ಸುಖವ ಕೊಡುತಿಹರು ॥28॥

ಸ್ತ್ರೀಯರಲ್ಲಿ ನಿಯಮಿಸುವ ದೇವತೆಗಳು ಹಾಗೂ ಅಂತರ್ಯಾಮಿ ರೂಪಗಳು

ಸಿರಿ ಸರಸ್ವತಿ ಭಾರತೀ ಸೌ-
ಪರಣಿ ವಾರುಣಿ ಪಾರ್ವತೀಮುಖ-
ರಿರುತಿಹರು ಸ್ತ್ರೀಯರೊಳಗಭಿಮಾನಿಗಳು ತಾವೆನಿಸಿ ॥
ಅರುಣವರ್ಣನಿಭಾಂಗ ಶ್ರೀ ಸಂ-
ಕರುಷಣ ಪ್ರದ್ಯುಮ್ನ ರೂಪಗ-
ಳಿರುಳು ಹಗಲು ಉಪಾಸನವ ಗೈವುತಲಿ ಮೋದಿಪರು ॥29॥

ಪಂಚಲೋಹ ಪ್ರತಿಮೆಗಳಲ್ಲಿ ಟಂಕಿ ಭಾರ್ಗವ ರೂಪಗಳ ಚಿಂತನೆ

ಕೃತಪ್ರತೀಕದಿ ಟಂಕಿ ಭಾರ್ಗವ
ಹುತವಹಾನಿಲ ಮುಖ್ಯ ದಿವಿಜರು
ತುತಿಸಿಕೊಳುತಭಿಮಾನಿಗಳು ತಾವಾಗಿ ನೆಲೆಸಿದ್ದು ॥
ಪ್ರತಿದಿವಸ ಶ್ರೀತುಳಸಿ ಗಂಧಾ-
ಕ್ಷತೆ ಕುಸುಮ ಫಲ ದೀಪ ಪಂಚಾ-
ಮೃತದಿ ಪೂಜಿಪ ಭಕುತರಿಗೆ ಕೊಡುತಿಹರು ಪುರುಷಾರ್ಥ ॥30॥

ಶಾಲಗ್ರಾಮದಲ್ಲಿ ಪರ್ವತಾಭಿಮಾನಿಗಳ ಹಾಗೂ ವಾಸುದೇವ ರೂಪದ ಚಿಂತನೆ

ನಗಗಳಭಿಮಾನಿಗಳೆನಿಪ ಸುರ- ।
ರುಗಳು ಸಹಜಾಚಲಗಳಿಗೆ ಮಾ-
ನಿಗಳೆನಿಸಿ ಶ್ರೀವಾಸುದೇವನ ಪೂಜಿಸುತಲಿಹರು ॥
ಸ್ವಗತಭೇದವಿವರ್ಜಿತನ ನಾಲ್
ಬಗೆ ಪ್ರತೀಕದಿ ತಿಳಿದು ಪೂಜಿಸೆ
ವಿಗತ ಸಂಸಾರಾಬ್ಧಿ ದಾಟಿಸಿ ಮುಕ್ತರನು ಮಾಳ್ಪ ॥31॥

ಸರ್ವಪ್ರತೀಕಗಳಲ್ಲಿ ಧ್ಯಾನಪ್ರಕ್ರಿಯೆ ತಿಳಿಯದವನ ಕರ್ಮಗಳು ವ್ಯರ್ಥ

ಆವ ಕ್ಷೇತ್ರಕೆ ಪೋದರೇನಿ-
ನ್ನಾವ ತೀರ್ಥದಿ ಮುಳುಗಲೇನಿ-
ನ್ನಾವ ಜಪ ತಪ ಹೋಮ ದಾನವ ಮಾಡಿ ಫಲವೇನು ॥
ಶ್ರೀವರ ಜಗನ್ನಾಥವಿಟ್ಠಲನ
ಈ ವಿಧದಿ ಜಂಗಮ ಸ್ಥಾವರ
ಜೀವರೊಳು ಪರಿಪೂರ್ಣನೆಂದರಿಯದಿಹ ಮಾನವನು !
॥32॥

॥ ಇಲ್ಲಿಗೆ ಹನ್ನೊಂದನೆಯ ಧ್ಯಾನಪ್ರಕ್ರಿಯಾಸಂಧಿ ಮುಗಿಯಿತು ॥

12. ನಾಡೀಪ್ರಕರಣಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

36000 ನಾಡಿಗಳಲ್ಲಿ ಶ್ರೀಭೂಸಹಿತ ವಾಸುದೇವ

ವಾಸುದೇವನು ಪ್ರಾಣಮುಖ ತ-
ತತ್ವೇಶರಿಂದಲಿ ಸೇವೆ ಕೈಕೊಳು-
ತೀ ಶರೀರದೊಳಿಪ್ಪ ಮೂವತ್ತಾರು ಸಾಹಸ್ರ ||
ಈ ಸುನಾಡಿಗಳೊಳಗೆ ಶ್ರೀ ಭೂ-
ಮೀಸಮೇತ ವಿಹಾರಗೈವ ಪ-
ರೇಶನಮಲ ಸುಮೂರ್ತಿಗಳ ಚಿಂತಿಸುತ ಹಿಗ್ಗುತಿರು ||1||

ಕಾಲುಗಳಲ್ಲಿ 12000, ಮಧ್ಯದೇಹದಲ್ಲಿ 14000, ಕೈಗಳಲ್ಲಿ 4000, ತಲೆಯಲ್ಲಿ 6000 ನಾಡಿಗಳು

ಚರಣಗಳೊಳಿಹ ನಾಡಿಗಳು ಹ-
ನ್ನೆರಡುಸಾವಿರ ಮಧ್ಯದೇಹದೊ-
ಳಿರುತಿಹವು ಹದಿನಾಲ್ಕು ಬಾಹುಗಳೊಳಗೆ ಈರೆರಡು ||
ಶಿರದೊಳಾರುಸಹಸ್ರ ಚಿಂತಿಸಿ
ಇರುಳುಹಗಲಭಿಮಾನಿ ದಿವಿಜರ
ನರಿತುಪಾಸನೆಗೈವರಿಳೆಯೊಳು ಸ್ವರ್ಗವಾಸಿಗಳು ||2||

72000 ನಾಡಿಗಳಲ್ಲಿ ಬೃಹತಿರೂಪದ ಚಿಂತನೆ

ಬೃಹತಿನಾಮಕ ವಾಸುದೇವನು
ವಹಿಸಿ ಸ್ತ್ರೀಪುರುಷಗಳ ದೋಷವಿ-
ರಹಿತ ಎಪ್ಪತ್ತೆರಡುಸಾವಿರ ನಾಡಿಗಳೊಳಿದ್ದು ||
ದ್ರುಹಿಣ ಮೊದಲಾದಮರಗಣ ಸ-
ನ್ಮಹಿತ ಸರ್ವಪ್ರಾಣಿಗಳ ಮಹಾ-
ಮಹಿಮ ಸಂತೈಸುವನು ಸಂತತ ಪರಮಕರುಣಾಳು ||3||

36000 ರೂಪಗಳೇ 100 ವರ್ಷದ ರೂಪಗಳು

ನೂರು ವರುಷಕೆ ದಿವಸ ಮೂವ-
ತ್ತಾರುಸಾವಿರವಹವು ನಾಡಿ ಶ-
ರೀರದೊಳಗಿನಿತಿಹವು ಎಂದರಿತೊಂದು ದಿವಸದಲಿ ॥
ಸೂರಿಗಳ ಸತ್ಕರಿಸಿದವ ಪ್ರತಿ-
ವಾರದಲಿ ದಂಪತಿಗಳರ್ಚನೆ
ತಾ ರಚಿಸಿದವ ಸತ್ಯ ಸಂಶಯವಿಲ್ಲವೆಂದೆಂದು ॥4॥

72000 ನಾಡಿಗಳಲ್ಲಿ 25 ತತ್ವಾಭಿಮಾನಿಗಳ ಚಿಂತನೆ

ಚತುರವಿಂಶತಿ ತತ್ವಗಳು ತ-
ತ್ಪತಿಗಳೆನಿಸುವ ಬ್ರಹ್ಮಮುಖದೇ-
ವತೆಗಳನುದಿನ ಪ್ರತಿಪ್ರತಿ ನಾಡಿಯೊಳಗಿರುತಿದ್ದು ॥
ಚತುರದಶ ಲೋಕದೊಳು ಜೀವ-
ಪ್ರತತಿಗಳ ಸಂರಕ್ಷಿಸುವ ಶಾ-
ಶ್ವತನ ತತ್ತತ್‌ಸ್ಥಾನದಲಿ ನೋಡುತಲೆ ಮೋದಿಪರು ॥5॥

ನಾಡಿಗತ ತತ್ವಾಭಿಮಾನಿಗಳಲ್ಲಿ 34 ಲಕ್ಷದ 56 ಸಾವಿರ ಲಕ್ಷ್ಮೀನಾರಾಯಣರ ರೂಪ

ಸತ್ಯಸಂಕಲ್ಪನು ಸದಾ ಏ-
ಪ್ಪತ್ತೆರಡು ಸಾಹಸ್ರದೊಳು ಮೂ-
ವತ್ತುನಾಲಕು ಲಕ್ಷದೈವತ್ತಾರು ಸಾಹಸ್ರ ॥
ಚಿತ್ರ ಕೃತಿ ಒಡಗೂಡಿ ಪರಮ ಸು-
ನಿತ್ಯಮಂಗಳಮೂರ್ತಿ ಭಕ್ತರ
ತೆತ್ತಿಗನು ತಾನಾಗಿ ಸರ್ವತ್ರದಲಿ ಸಂತೈಪ ॥6॥

ಮಣಿಗಳಿಗೆ ಸೂತ್ರ ಆಧಾರ ಸಕಲ ಜೀವರಿಗೆ ಭಗವಂತ ಆಧಾರ

ಮಣಿಗಳೊಳಗಿಹ ಸೂತ್ರದಂದದಿ
ಪ್ರಣವಪಾದ್ಯನು ಸರ್ವಚೇತನ
ಗಣದೊಳಿದ್ದನವರತ ಸಂತೈಸುವನು ತನ್ನವರ ॥
ಪ್ರಣತಕಾಮದ ಭಕ್ತಚಿಂತಾ-
ಮಣಿ ಚಿದಾನಂದೈಕದೇಹನು
ಅಣುಮಹದ್ಗತನಲ್ಪಶೋಣಾದಿಯಲಿ ನೆಲೆಸಿಪ್ಪ ॥7॥

ಸುಷುಮ್ನಾದಿನಾಡಿಗಳ ಮೂಲಸ್ಥಾನ ಹಾಗೂ ದೇವತೋಪಾಸನೆ

ಈ ಸುಷುಮ್ನಾದ್ಯಖಿಳ ನಾಡೀ-
ಕೋಶ ನಾಭೀಮೂಲದಲಿ ವೃಷ-
ಣಾಸನದ ಮಧ್ಯದಲಿ ಇಪ್ಪುದು ತುಂದಿನಾಮದಲಿ ॥
ಆ ಸರೋಜಾಸನಮುಖರು ಮೂ-
ಲೇಶನಾನಂದಾದಿ ಸುಗುಣೋ-
ಪಾಸನೆಯ ಗೈವುತಲಿ ದೇಹದಲೊಳಗೆ ಇರುತಿಹರು ॥8॥

ನಾಡಿಗಳಲ್ಲಿ ಗಂಗಾದಿತೀರ್ಥಗಳ ಅನುಸಂಧಾನ

ಸೂರಿಗಳು ಚಿತ್ಯೈಸುವುದು ಭಾ-
ಗೀರಥಿಯೆ ಮೊದಲಾದ ತೀರ್ಥಗ-
ಳೀರಧಿಕ ಎಪ್ಪತ್ತುಸಾವಿರ ನಾಡಿಯೊಳಗಿಹವು ॥
ಈ ರಹಸ್ಯವನಲ್ಪಜನರಿಗೆ
ತೋರಿ ಪೇಳದೆ ನಾಡಿನದಿಯೊಳು
ಧೀರರನುದಿನ ಮಜ್ಜನವ ಮಾಡುತಲೆ ಸುಖಿಸುವರು ॥9॥

ಎಡ ಬಲ ನಾಡಿಗಳಲ್ಲಿರುವ ದೇವತೆಗಳು

ತಿಳಿವುದೀ ದೇಹದೊಳಗಿಹ ಎಡ
ಬಲದ ನಾಡಿಗಳೊಳಗೆ ದಿವಿಜರು
ಜಲಜಸಂಭವ ವಾಯು ವಾಣ್ಯಾದಿಗಳು ಬಲದಲ್ಲಿ ॥
ಎಲರುಣಿಗ ವಿಹಗೇಂದ್ರ ಛಳಿಬೆ-
ಟ್ಟಳಿಯ ಷಣ್ಮಹಿಷಿಯರು ವಾರುಣಿ
ಕುಲಿಶಧರ ಕಾಮಾದಿಗಳು ಎಡಭಾಗದೊಳಗಿಹರು ॥10॥

ನಾಡಿಯಲ್ಲಿರುವ ಭಗವಂತನು ತ್ರಿವಿಧಜೀವರ ಯೋಗ್ಯತೆಗೆ ತಕ್ಕ ಫಲ ನೀಡುವ

ಇಕ್ಕೆಲದೊಳಿಹ ನಾಡಿಯೊಳು ದೇ-
ವಕ್ಕಳಿಂದೊಡನಾಡುತಲಿ ಪೊಂ-
ಬಕ್ಕಿದೇರನು ಜೀವರಧಿಕಾರಾನುಸಾರದಲಿ ॥
ತಕ್ಕ ಸಾಧನ ಮಾಡಿ ಮಾಡಿಸು
ತಕ್ಕರದಿ ಸಂತೈಪ ಭಕ್ತರ
ದಕ್ಕಗೊಡನಸುರರ್ಗೆ ಸತ್ಪುಣ್ಯಗಳನಪಹರಿಪ ॥11॥

ಪ್ರಧಾನವಾದ ಸುಷುಮ್ನಾನಾಡಿ ಮತ್ತು ಅದರ ಪ್ರಭೇದ

ತುಂದಿವಿಡಿದಾಶಿರದ ಪರಿಯಂ-
ತೊಂದೆ ವ್ಯಾಪಿಸಿ ಇಹುದು ತಾವರೆ-
ಕಂದನಿಹನದರೊಳಗೆ ಇದಕೀರ್ಬೈದು ಶಾಖೆಗಳು ॥
ಒಂದಧಿಕ ದಶ ಕರಣಗಳು ಸಂ-
ಬಂಧಗೈದಿಹವಲ್ಲಿ ರವಿಶಶಿ
ಸಿಂಧುನಾಸತ್ಯಾದಿಗಳು ನೆಲೆಗೊಂಡಿಹರು ಸತತ ॥12॥

ಋಜುನಾಡಿಯ 10 ದಿಕ್ಕುಗಳಲ್ಲಿ ಋಜುಗಳ ವ್ಯಾಪಾರ

ಪೊಕ್ಕಳಡಿವಿಡಿದೊಂದೆ ನಾಡಿಯು
ಸುಕ್ಕದಲೆ ಧಾರಾಳರೂಪದಿ
ಸಿಕ್ಕಿಹುದು ನಡುದೇಹದೊಳಗೆ ಸುಷುಮ್ನನಾಮದಲಿ ॥
ರಕ್ಕಸರನೊಳ ಪೊಗಗೊಡದೆ ದಶ
ದಿಕ್ಕಿನೊಳಗೆ ಸಮೀರದೇವನು
ಲೆಕ್ಕಿಸದೆ ಮತ್ತೊಬ್ಬರನು ಸಂಚರಿಪ ದೇಹದೊಳು ॥13॥

ಲಕ್ಷ್ಮೀನಾರಾಯಣರ 72000
ವಿಭೂತಿರೂಪದ ಚಿಂತನೆ

ಇನಿತು ನಾಡೀಶಾಖೆಗಳು ಈ
ತನುವಿನೊಳಗಿಹವೆಂದು ಏಕಾ-
ತ್ಮನು ದ್ವಿಸಪ್ತತಿಸಾವಿರಾತ್ಮಕನಾಗಿ ನಾಡಿಯೊಳು ॥
ವನಿತೆಯಿಂದೊಡಗೂಡಿ ನಾರಾ-
ಯಣ ದಿವಾರಾತ್ರಿಯೊಳಗೀ ಪರಿ
ವನಜಜಾಂಡದೊಳಖಿಲಜೀವರೊಳಿದ್ದು ಮೋಹಿಸುವ
॥14॥

ಭಕ್ತರಿಗೆ ಮಾತ್ರ ಈ ಉಪಾಸನೆಯ ಅಧಿಕಾರ

ದಿನದಿನದಿ ವರ್ಧಿಸುವ ಕುಮುದಾ-
ಪ್ತನ ಮಯೂಖದ ಸೊಬಗ ಗತಲೋ-
ಚನ ವಿಲೋಕಿಸಿ ಮೋದಪಡಬಲ್ಲನೆ ನಿರಂತರದಿ ॥
ಕುನರಗೀ ಸುಕಥಾಽಮೃತದ ಭೋ-
ಜನದ ಸುಖ ದೊರಕುವುದೆ ಲಕುಮೀ-
ಮನೋಹರನ ಸದ್ಗುಣವ ಕೀರ್ತಿಪ ಭಕುತಗಲ್ಲದಲೆ !
॥15॥

ದಾನವರನ್ನು ಭೀತಿಗೊಳಿಸುವ ಸಂಘಾತನಾಮಕನ ಉಪಾಸನೆ

ಈ ತನುವಿನೊಳಗಿಹವು ಓತ-
ಪ್ರೋತರೂಪದಿ ನಾಡಿಗಳು ಪುರು-
ಹೂತಮುಖರಲ್ಲಿಹರು ತಮ್ಮಿಂದಧಿಕರೊಡಗೂಡಿ ॥
ಭೀತಿಗೊಳಿಸುತ ದಾನವರ ಸಂ-
ಘಾತನಾಮಕ ಹರಿಯ ಗುಣ ಸಂ-
ಪ್ರೀತಿಯಲಿ ಸದುಪಾಸನೆಯ ಗೈವುತಲೆ ಮೋದಿಪರು
॥16॥

ಖೇಚರ, ಭೂಚರ, ಜಲಚರಗಳಲ್ಲಿ ಶ್ರೀಹರಿಯ ನಿರ್ಲಿಪ್ತ ವ್ಯಾಪಾರ

ಜಲಚಕುಕ್ಕುಟಖೇಟಜೀವರ
ಕಲೆವರಗಳೊಳಗಿದ್ದು ಕಾಣಿಸಿ-
ಕೊಳದೆ ತತ್ತದ್ರೂಪ ತನ್ನಾಮದಲಿ ಕರೆಸುತಲಿ ॥
ಜಲರುಹೇಕ್ಷಣ ವಿವಿಧ ಕರ್ಮಂ-
ಗಳ ನಿರಂತರ ಮಾಡಿ ಮಾಡಿಸಿ ತ-
ತ್ಫಲಗಳುಣ್ಣದೆ ಸಂಚರಿಸುವನು ನಿತ್ಯಸುಖಪೂರ್ಣ ॥17॥

ಅಂತರುಪಾಸನೆ ಅಳವಡಿಸಿಕೊಂಡು ಮದ್ದಾನೆಯಂತೆ ಸಂಚರಿಸು

ತಿಳಿದುಪಾಸನೆಗೈವುತೀಪರಿ
ಮಲಿನನಂತಿರು ದುರ್ಜನರ ಕಂ-
ಗಳಿಗೆ ಗೋಚರಿಸದೆ, ವಿಪಶ್ಚಿತ್ತರೊಡನೆ ಗರ್ವಿಸದೆ ॥
ಮಳೆಬಿಸಿಲುಹಸಿತೃಷೆ ಜಯಾಜಯ
ಖಳರ ನಿಂದಾನಿಂದೆ ಭಯಗಳಿ-
ಗಳುಕದಲೆ ಮದ್ದಾನೆಯಂದದಿ ಚರಿಸು ಧರೆಯೊಳಗೆ॥

ಪ್ರಾಣಿಗಳ ವ್ಯಾಪಾರವನ್ನು ಶ್ರೀನಿವಾಸನಿಗೆ ಅರ್ಪಿ ನಲಿದಾಡು

ಕಾನನ ಗ್ರಾಮಸ್ಥ ಸರ್ವ-
ಪ್ರಾಣಿಗಳು ಪ್ರತಿದಿವಸದಲಿ ಏ-
ನೇನು ಮಾಡುವ ಕರ್ಮಗಳು ಹರಿಪೂಜೆಯೆಂದರಿದು ।
ಧೇನಿಸುತ ಸದ್ಭಕ್ತಿಯಲಿ ಪವ-
ಮಾನಮುಖದೇವಾಂತರಾತ್ಮಕ
ಶ್ರೀನಿವಾಸನಿಗರ್ಪಿಸುತ ಮೋದಿಸುತ ನಲಿಯುತಿರು॥

ಸರ್ವೋತ್ತಮನಾಗಿದ್ದರೂ ಬಹುರೂಪಗಳಿಂದ ಹೀನಪ್ರಾಣಿಗಳಲ್ಲಿ ವ್ಯಾಪಾರ ಮಾಳ್ಪ

ನೋಕನೀಯನು ಲೋಕದೊಳು ಶುನಿ-
ಸೂಕರಾದಿಗಳೊಳಗೆ ನೆಲೆಸಿ-
ದ್ದೇಕಮೇವಾದ್ವಿತೀಯ ಬಹುರೂಪಾಹ್ವಯಗಳಿಂದ ॥
ತಾ ಕರೆಸುತೊಳಗಿದ್ದು ತಿಳಿಸದೆ
ಶ್ರೀಕಮಲಭವಮುಖ್ಯ ಸಕಲ ದಿ-
ವೌಕಸಗಣಾರಾಧ್ಯ ಕೈಗೊಂಡನುದಿನದಿ ಪೊರೆವ ॥20॥

ಈ ಉಪಾಸನೆ ಉಳ್ಳವನು ಭಗವತ್ಪ್ರಸಾದವನ್ನು ಹೊಂದುವುದರಲ್ಲಿ ಸಂಶಯವಿಲ್ಲ

ಇನಿತುಪಾಸನೆಗೈಯುತಿಹ ಸ-
ಜ್ಜನರು ಸಂಸಾರದಲಿ ಪ್ರತಿಪ್ರತಿ-
ದಿನಗಳಲಿ ಏನೇನು ಮಾಡುವುದೆಲ್ಲ ಹರಿಪೂಜೆ ॥
ಎನಿಸಿಕೊಂಬುವು ಸತ್ಯವೀ ಮಾ-
ತಿನಲಿ ಸಂಶಯಪಡುವ ನರನ-
ಲ್ಪನು ಸುನಿಶ್ಚಯ ಬಾಹ್ಯಕರ್ಮವ ಮಾಡಿ ಫಲವೇನು
॥21॥

ಭೋಗ್ಯ ಭೋಕ್ತೃಗಳ ವಿಭಾಗ ಹಾಗೂ ಫಲಪ್ರದಾನವಿಚಾರ

ಭೋಗ್ಯಭೋಕ್ತೃಗಳೊಳಗೆ ಹರಿ ತಾ
ಭೋಗ್ಯಭೋಕ್ತನು ಎನಿಸಿ ಯೋಗ್ಯಾ-
ಯೋಗ್ಯರಸಗಳ ದೇವದಾನವಗಣಕೆ ಉಣಿಸುವನು ॥
ಭಾಗ್ಯನಿಧಿ ಭಕ್ತರಿಗೆ ಸದ್ವೈ-
ರಾಗ್ಯಭಕ್ತಿಜ್ಞಾನವೀವಾ-
ಯೋಗ್ಯರಿಗೆ ದ್ವೇಷಾದಿಗಳ ತನ್ನಲ್ಲಿ ಕೊಡುತಿಪ್ಪ ॥22॥

14 ಲೋಕದಲ್ಲಿರುವವರೆಲ್ಲರು ಬೇಡುವಂತೆ ಮಾಡುವವನು ವಾಮನ

ಈ ಚತುರ್ದಶಭುವನದೊಳಗೆ ಚ-
ರಾಚರಾತ್ಮಕ ಜೀವರಲ್ಲಿ ವಿ-
ರೋಚನಾತ್ಮಜವಂಚಕನು ನೆಲೆಸಿದ್ದು ದಿನದಿನದಿ ॥
ಯಾಚಕನು ಎಂದೆನಿಸಿಕೊಂಬ ಮ-
ರೀಚಿದಮನ ಸುಹಂಸರೂಪಿ ನಿ-
ಷೇಚಕಾಹ್ವಯನಾಗಿ ಜನರಭಿಲಾಷೆ ಪೂರೈಪ ॥23॥

ಸೃಷ್ಟಿಯಲ್ಲಿ ಅನ್ನ-ಅನ್ನಾದ 5 ರೂಪಗಳ ಚಿಂತನೆ

ಅನ್ನದನ್ನಾದನ್ನಮಯ ಸ್ವಯ-
ಮನ್ನ ಬ್ರಹ್ಮಾದ್ಯಖಿಳಚೇತನ-
ಕನ್ನಕಲ್ಪಕನಾಹನನಿರುದ್ಧಾದಿ ರೂಪದಲಿ ॥
ಅನ್ಯರನಪೇಕ್ಷಿಸದೆ ಗುಣಕಾ-
ರುಣ್ಯಸಾಗರ ಸೃಷ್ಟಿಸುವನು ಹಿ-
ರಣ್ಯಗರ್ಭನೊಳಿದ್ದು ಪಾಲಿಸುವನು ಜಗತ್ತ್ರಯವ ॥24॥

ಗಾಯತ್ರಿಯ ತ್ರಿಪದಪ್ರತಿಪಾದ್ಯನೇ ತ್ರಿನಾಡೀಗತ ಭಗವಂತ

ತ್ರಿಪದ ತ್ರಿದಶಾಧ್ಯಕ್ಷ ತ್ರಿಸ್ಥ
ತ್ರಿಪಥಗಾಮಿನಿಪಿತ ತ್ರಿವಿಕ್ರಮ
ಕೃಪಣವತ್ಸಲ ಕುವಲಯದಲಶ್ಯಾಮ ನಿಸ್ಸೀಮ ॥
ಅಪರಿಮಿತಚಿತ್ಸುಖಗುಣಾತ್ಮಕ-
ವಪುಷ ವೈಕುಂಠಾದಿಲೋಕಾ-
ಧಿಪ ತ್ರಯೀಮಯ ತನ್ನವರ ನಿಷ್ಕಪಟದಿಂ ಪೊರೆವ
॥25॥

ದೇವರ ವ್ಯಾಪ್ತತ್ವ ಗುಣವನ್ನು ಯಾರೂ ಚಿಂತಿಸಲು ಸಾಧ್ಯವಿಲ್ಲ

ಲವಣಮಿಶ್ರಿತ ಜಲವು ತೋರ್ಪುದು
ಲವಣದೋಪಾದಿಯಲಿ ಜಿಹ್ವೆಗೆ
ವಿವರಗೈಸಲು ಶಕ್ಯವಾಗುವುದೇನೋ ನೋಳ್ಪರಿಗೆ ॥
ಸ್ವವಶವ್ಯಾಪಿಯೆನಿಸಿ ಲಕ್ಷ್ಮೀ-
ಧವ ಚರಾಚರದೊಳಗೆ ತುಂಬಿಹ
ನವಿದಿತನ ಸಾಕಲ್ಯ ಬಲ್ಲವರಾರು ಸುರರೊಳಗೆ ॥26॥

ಮನದಲ್ಲಿ ಶ್ರೀಹರಿಯನ್ನಿಟ್ಟು ಎಲ್ಲವೂ ನಿನ್ನದೇ ಎಂದು ಪೂಜಿಸು

ವ್ಯಾಪ್ತನಂದದಿ ಸರ್ವಜೀವರೊ-
ಳಿಪ್ಪ ಚಿನ್ಮಯ, ಘೋರಭವ ಸಂ-
ತಪ್ತಮಾನರು ಭಜಿಸೆ ಭಕುತಿಗಳಿಂದಲಿಹಪರದಿ ॥
ಪ್ರಾಪ್ತನಾಗುವನವರವಗುಣಗ-
ಳೊಪ್ಪುಗೊಂಬನು ಭಕ್ತವತ್ಸಲ
ತಪ್ಪಿಸುವ ಬಹುಜನ್ಮದೋಷಗಳವರಿಗನವರತ ॥27॥

ಹರಿಪಾದಚಿಂತನೆಯ ವೈಭವ

ಹಲವು ಬಗೆಯಲಿ ಹರಿಯ ಮನದಲಿ
ಒಲಿಸಿ ನಿಲ್ಲಿಸಿ ಏನು ಮಾಡುವ
ಕೆಲಸಗಳು ಅವನಂಘ್ರಿಪೂಜೆಗಳೆಂದು ನೆನೆವುತಿರು ॥
ಜಲಧರಾನುಜ ತಾನೆ ಸರ್ವ-
ಸ್ಥಲಗಳಲಿ ನೆಲೆಸಿದ್ದು ನಿಶ್ಚಂ-
ಚಲ ಭಕುತಿ ಸುಜ್ಞಾನ ಭಾಗ್ಯವ ಕೊಟ್ಟು ಸಂತೈಪ ॥28॥

"ದೋಷಗಂಧವಿದೂರ" ಎಂಬ ಚಿಂತನೆಯಿಂದ ಇಷ್ಟಪ್ರದ ಪ್ರಾಪ್ತಿ

ದೋಷಗಂಧವಿದೂರ ನಾನಾ-
ವೇಷಧಾರಕ ಈ ಜಗತ್ತ್ರಯ-
ಪೋಷಕ ಪುರಾತನಪುರುಷ ಪುರುಹೂತಮುಖವಿನುತ ॥
ಶೇಷವರಪರಿಯಂಕಶಯನ ವಿ-
ಭೀಷಣಪ್ರಿಯ ವಿಜಯಸಖ ಸಂ-
ತೋಷ ಪಡಿಸುವ ಸುಜನರಿಷ್ಟಾರ್ಥಗಳ ಪೂರೈಸಿ ॥29॥

ಬ್ರಹ್ಮಾದಿವಂದ್ಯನೆ ! ಭಗವದ್ರೋಗ ಭೇಷಜನೆ ಎಂದರೆ ಕರುಣಾಳು ಒದಗುವ

ಶ್ರೀಮಹೀಸೇವಿತಪದಾಂಬುಜ
ಭೂಮ ಸದ್ಭಕ್ತೈಕಲಭ್ಯ ಪಿ-
ತಾಮಹಾದ್ಯಮರಾಸುರಾರ್ಚಿತಪಾದಪಂಕೇಜ ॥
ವಾಮವಾಮನ ರಾಮ ಸಂಸಾ-
ರಾಮಯೌಷಧ ಹೇ ಮಮ ಕುಲ-
ಸ್ವಾಮಿ ಸಂತೈಸೆನಲು ಬಂದೊದಗುವನು ಕರುಣಾಳು
॥30॥

ಶ್ರೀಹರಿಯು ಸಂಪತ್ತನ್ನು ಕಾಯುವ ಸರ್ಪದಂತೆ ಅನಿಮಿತ್ತ ಬಂಧು

ದನುಜದಿವಿಜರೊಳಿದ್ದು ಅವರವ-
ರನುಸರಿಸಿ ಕರ್ಮಗಳ ಮಾಳ್ಪನು
ಜನನಮರಣಾದ್ಯಖಿಲದೋಷವಿದೂರ ಎಮ್ಮೊಡನೆ ॥
ಜನಿಸುವನು ಜೀವಿಸುವ ಸಂರ-
ಕ್ಷಣೆಯ ಮಾಡುವ ಎಲ್ಲ ಕಾಲದಿ
ಧನವ ಕಾಯ್ದಿಹ ಸರ್ಪನಂತನಿಮಿತ್ತ ಬಾಂಧವನು ॥31॥

ಸೃಷ್ಟಿಯಲ್ಲಿ ಕರ್ಮಗಳ ಅಭಿವ್ಯಕ್ತಿಗೆ ಉದಾಹರಣೆ

ಬಿಸರುಹಾಪ್ತಾಗಸದಿ ತಾನುದ-
ಯಿಸಲು ವೃಕ್ಷಂಗಳಿಗೆ ನೆಳಲು ಪಸ-
ರಿಸುವವಿಳೆಯೊಳು ಅಸ್ತಮಿಸಲಲ್ಲಲ್ಲೆ ಲೀನಿಪವು ॥
ಶ್ವಸನಮುಖ್ಯಮರಾಂತರಾತ್ಮಕ
ನೊಶದೊಳಿರುತಿಪ್ಪವು ಜಗತ್ರಯ
ಬಸುರೊಳಿಂಬಿಟ್ಟೆಲ್ಲ ಕರ್ಮವ ತೋರ್ಪ ನೋಳ್ಪರಿಗೆ
॥32॥

ಲಕ್ಷ್ಯಾಲಿಂಗಿತನ ಸೌಂದರ್ಯ ವರ್ಣನೆ

ತ್ರಿಭುವನೈಕಾರಾಧ್ಯ ಲಕ್ಷ್ಮೀ-
ಸುಭುಜಯುಗಳಾಲಿಂಗಿತಾಂಗ
ಸ್ವಭು ಸುಖಾತ್ಮ ಸುವರ್ಣವರ್ಣ ಸುಪರ್ಣವರವಹನ ॥
ಅಭಯದಾನಂತಾರ್ಕಶಶಿಸ-
ನ್ನಿಭ ನಿರಂಜನ ನಿತ್ಯದಲಿ ತನ-
ಗಭಿನಮಿಸುವರಿಗೀವ ಸರ್ವಾರ್ಥಗಳ ತಡೆಯದಲೆ ॥33॥

ಮನುಷ್ಯನ ಆಯುಷ್ಯದಲ್ಲಿ ಸವನತ್ರಯ ಯಜ್ಞ

ಕವಿಗಳಿಂದಲಿ ತಿಳಿದು ಪ್ರಾತಃ
ಸವನ ಮಾಧ್ಯಂದಿನವು ಸಾಯಮ-
ಸವನಗಳ ವಸುರುದ್ರರಾದಿತ್ಯರೊಳು ರಾಜಿಸುವ ॥
ಪವನನೊಳು ಕೃತಿ ಜಯ ಸುಮಾಯಾ-
ಧವನ ಮೂರ್ತಿತ್ರಯವ ಚಿಂತಿಸಿ
ದಿವಸವೆಂಬಾಹುತಿಗಳಿಂದರ್ಚಿಸುತ ಸುಖಿಸುತಿರು ॥34॥

ಜೀವನ ಯಜ್ಞದಲ್ಲಿ ದೇವತೆಗಳು ಹಾಗೂ ಭಗವದ್ರೂಪಗಳು

ಚತುರವಿಂಶತ್ಯಬ್ದ ವಸುದೇ-
ವತೆಗಳೊಳು ಪ್ರದ್ಯುಮ್ನನಿಪ್ಪನು
ಚತುಶ್ಚತ್ವಾರಿಂಶತಿಗಳಲಿ ಸಂಕರುಷಣಾಖ್ಯ ॥
ಹುತವಹಾಕ್ಷನೊಳಿಹನು ಮಾಯಾ-
ಪತಿಯು ಹದಿನಾರಧಿಕ ದ್ವಾತ್ರಿಂ-
ಶತಿ ವರುಷಗಳಲಿಪ್ಪನಾದಿತ್ಯನೊಳು ಸಿತಕಾಯ ॥35॥

116 ವರ್ಷಗಳಲ್ಲಿ 116 ಹರಿರೂಪಗಳಿಗೆ ಆಹುತಿ

ಷೋಡಶೋತ್ತರಶತ ವರುಷದಲಿ
ಷೋಡಶೋತ್ತರಶತ ಸುರೂಪದಿ
ಕ್ರೀಡಿಸುವ ವಸುರುದ್ರರಾದಿತ್ಯರೊಳು ಸತಿಸಹಿತ ॥
ವ್ರೀಡವಿಲ್ಲದೆ ಭಜಿಪ ಭಕರ
ಪೀಡಿಸುವ ದುರಿತೌಘಗಳ ದೂ-
ರೋಡಿಸುತ ಬಳಿಯಲಿ ಬಿಡದೆ ನೆಲೆಸಿಪ್ಪ ಭಯಹಾರಿ
॥36॥

116 ವರ್ಷಗಳಲ್ಲಿ ಹಗಲು, ಇರುಳು ಭಗವದ್ರೂಪ ಗಣನೆ

ಮೂರಧಿಕ ಎಂಭತ್ತು ಸಹಸ್ರೈ-
ನೂರು ಇಪ್ಪತ್ತೆನಿಪರೂಪದಿ
ತೋರುತಿಪ್ಪ ದಿವಾನಿಶಾಧಿಪರೊಳಗೆ ನಿತ್ಯದಲಿ ॥
ಭಾರತೀ ಪ್ರಾಣರೊಳಗಿದ್ದು ನಿ-
ವಾರಿಸುತ ಭಕ್ತರ ದುರಿತ ಹಿಂ-
ಕಾರ ನಿಧನ ಪ್ರಥಮರೂಪದಿ ಪಿತೃಗಳನೆ ಪೊರೆವ ॥37॥

ತ್ರಿಗುಣಬದ್ಧರಲ್ಲಿರುವ ಶ್ರೀಹರಿಯು ರೇಷ್ಮೆಯಂತೆ ನಿರ್ಲಿಪ್ತ

ಬುದ್ಧಿಪೂರ್ವಕ ಉತ್ತಮೋತ್ತಮ
ಶುದ್ಧ ಊರ್ಣಾಂಬರವ ಪಂಕದೊ-
ಳದ್ದಿ ತೆಗೆಯಲು ಲೇಪವಾಗುವುದೇ ಪರೀಕ್ಷಿಸಲು ॥
ಪದ್ಮನಾಭನು ಸರ್ವಜೀವರೊ-
ಳಿದ್ದರೇನು ಗುಣತ್ರಯಗಳಿಂ-
ಬದ್ಧನಾಗುವನೇನೊ ನಿತ್ಯಸುಖಾತ್ಮ ಚಿನ್ಮಯನು ॥38॥

ಸೂರ್ಯ ಚಂದ್ರ ಅಗ್ನಿಯನ್ನು ಮೀರಿದವನು ಶ್ರೀಹರಿ

ಸಕಲದೋಷವಿದೂರ ಶಶಿ ಪಾ-
ವಕ ಸಹಸ್ರಾನಂತಸೂರ್ಯ-
ಪ್ರಖರಸನ್ನಿಭಗಾತ್ರ ಲಕುಮಿಕಳತ್ರ ಸುರಮಿತ್ರ ॥
ವಿಖನಸಾಂಡದೊಳಿಪ್ಪ ಬ್ರಹ್ಮಾ-
ದ್ಯಖಿಳ ಚೇತನಗಣಕೆ ತಾನೇ
ಸಖನೆನಿಸಿಕೊಂಡಕುಟಿಲಾತ್ಮಕನಿಪ್ಪನವರಂತೆ ॥39॥

ಶ್ರೀಹರಿ ಎಲ್ಲೆಡೆ ತುಂಬಿದ್ದು ಎಲ್ಲರಿಗೂ ಆಶ್ರಯ ನೀಡುವನು

ದೇಶಭೇದಗಳಲ್ಲಿ ಇಪ್ಪಾ-
ಕಾಶದೋಪಾದಿಯಲಿ ಚೇತನ-
ರಾಶಿಯೊಳು ನೆಲೆಸಿಪ್ಪನವ್ಯವಧಾನದಲಿ ನಿರುತ ॥
ಶ್ರೀಸಹಿತ ಸರ್ವತ್ರ ನಿರವಾ-
ಕಾಶ ಕೊಡುವಂದದಲಿ ಕೊಡುತ ನಿ-
ರಾಶೆಯಲಿ ಸರ್ವಾಂತರಾತ್ಮಕ ಶೋಭಿಸುವ ಸುಖದ॥40॥

ಎಲ್ಲರನ್ನು ತನ್ನೊಳಗಿಟ್ಟು ಸಲಹುವನು

ಶ್ರೀವಿರಿಂಚ್ಯಾದ್ಯಮರಗಣಸಂ-
ಸೇವಿತಾಂಘ್ರಿಸರೋಜ ಈ ಜಡ-
ಜೀವರಾಶಿಗಳೊಳಹೊರಗೆ ನೆಲೆಸಿದ್ದು ನಿತ್ಯದಲಿ ॥
ಸಾವಕಾಶನು ಎನಿಸಿ ತನ್ನ ಕ-
ಳೇವರದಲಿಂಬಿಟ್ಟು ಸಲಹುವ
ದೇವ ದೇವಕಿರಮಣ ದಾನವಹರಣ ಜಿತಮರಣ ॥41॥

ಪ್ರತೀ ಮಾಸದಲ್ಲಿ 648000 ಶ್ವಾಸ ಮಂತ್ರವನ್ನು ಶ್ರೀಹರಿಗೆ ಅರ್ಪಿಸು

ಮಾಸ ಒಂದಕೆ ಪ್ರತಿದಿವಸದಲಿ
ಶ್ವಾಸಗಳು ಅಹವಷ್ಟಚತ್ವಾ-
ರಿಂಶತಿಸಹಸ್ರಾಧಿಕಾರು ಸುಲಕ್ಷ ಸಂಖ್ಯೆಯಲಿ ॥
ಹಂಸನಾಮಕ ಹರಿಯ ಷೋಡಶ
ಈ ಶತಾಬ್ದದಿ ಭಜಿಸೆ ಒಲಿವ ದ-
ಯಾಸಮುದ್ರ ಕುಚೇಲಗೊಲಿದಂದದಲಿ ದಿನದಿನದಿ ॥42॥

ಸ್ಥೂಲದೇಹದಲ್ಲಿ ವರ್ಷಕ್ಕೆ 77,76000 ಜಪಗಳನ್ನು ಮಾಡುವ ಗಾಳಿದೇವ

ಸ್ಥೂಲದೇಹದೊಳಿದ್ದು ವರುಷಕೆ
ಏಳಧಿಕ ಎಪ್ಪತ್ತುಲಕ್ಷದ
ಮೇಲೆ ಎಪ್ಪತ್ತಾರುಸಾವಿರ ಶ್ವಾಸಜಪಗಳನು ॥
ಗಾಳಿದೇವನು ಕರುಣದಲಿ ಈ-
ರೇಳುಲೋಕದೊಳುಳ್ಳ ಚೇತನ-
ಜಾಲದೊಳು ಮಾಡುವನು ತ್ರಿಜಗದ್ವ್ಯಾಪ್ತ ಪರಮಾಪ್ತ ॥43॥

4 ದೇಹಗಳಲ್ಲಿ ದಿವಸಕ್ಕೆ 86,400 ಹಂಸಮಂತ್ರ ಜಪಗಳು

ಈರೆರಡು ದೇಹಗಳೊಳಿದ್ದು ಸ-
ಮೀರದೇವನು ಶ್ವಾಸಜಪ ನಾ-
ನೂರಧಿಕವಾಗಿಪ್ಪ ಎಂಭತ್ತಾರುಸಾಹಸ್ರ ॥
ತಾ ರಚಿಸುವನು ದಿವಸ ಒಂದಕೆ
ಮೂರುವಿಧ ಜೀವರೊಳಗಿದ್ದು ಖ-
ರಾರಿ ಕರುಣಾಬಲವದೆಂತುಟೊ ಪವನರಾಯನೊಳು ॥44॥

ಜಗನ್ನಾಥವಿಟ್ಠಲ ನುಡಿಸಿದನ್ನು ನುಡಿದಿರುವೆನು ಎನ್ನಪರಾಧವೇನು?

ಶ್ರೀಧವ ಜಗನ್ನಾಥವಿಟ್ಠಲನು
ತಾ ದಯದಿ ವದನದೊಳು ನುಡಿದೋ-
ಪಾದಿಯಲಿ ನಾ ನುಡಿದೆನಲ್ಲದೆ ಕೇಳಿ ಬುಧಜನರು ॥
ಸಾಧುಲಿಂಗಪ್ರದರ್ಶಕರು ನಿ-
ಷೇಧಿಸಿದರೇನಹುದು ಎನ್ನಪ-
ರಾಧವೇನಿದರೊಳಗೆ ಪೇಳ್ವುದು ತಿಳಿದ ಕೋವಿದರು॥45॥

॥ ಇಲ್ಲಿಗೆ ಹನ್ನೆರಡನೆಯ ನಾಡೀಪ್ರಕರಣಸಂಧಿ ಮುಗಿಯಿತು ॥

13. ನಾಮಸ್ಮರಣಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಸದಾ ಹರಿಸ್ಮರಣೆ ಮಾಡುವವರಿಗೆ ಯಮದೂತರ ಭಯ ಉಂಟೆ !

ಮಕ್ಕಳಾಡಿಸುವಾಗ ಮಡದಿಯೊ-
ಳಕ್ಕರದಿ ನಲಿವಾಗ ಹಯಪ-
ಲ್ಲಕ್ಕಿಗಜ ಮೊದಲಾದ ವಾಹನವೇರಿ ಮೆರೆವಾಗ ||
ಬಿಕ್ಕುವಾಗಾಕಳಿಸುತಲಿ ದೇ-
ವಕ್ಕಿತನಯನ ನೆನೆವುತಿಹ ನರ
ಸಿಕ್ಕನು ಯಮದೂತರಿಗೆ ಆವಾವಲ್ಲಿ ನೋಡಿದರು ||1||

ಹರಿನಾಮಸ್ಮರಣೆಯ ಮಹಿಮೆ

ಸರಿತಪ್ರವಹಗಳಲ್ಲಿ ದಿವ್ಯಾಂ-
ಬರದಿ ಪತ್ರಾದಿಯಲಿ ಹರ್ಷಾ-
ಮರ್ಷ ವಿಸ್ಮೃತಿಯಿಂದಲಾಗಲಿ ಒಮ್ಮೆ ಬಾಯ್ದೆರೆದು ॥
ಹರಿ ಹರೀ ಹರಿಯೆಂಬ ಎರಡ-
ಕ್ಷರ ನುಡಿದಮಾತ್ರದಲಿ ದುರಿತಗ-
ಳಿರದೆ ಪೋಪವು ತೂಲರಾಶಿಯೊಳನಲ ಪೊಕ್ಕಂತೆ ॥2॥

ಆಯಾ ಕಾಲ ಆಯಾ ದೇಶಗಳ ಅನುಗುಣವಾಗಿ ನಾಮರೂಪ ಸ್ಮರಣೆ ಮಾಡು

ಮಲಗುವಾಗಲು ಏಳುವಾಗಲು
ಕುಳಿತು ಮಾತಾಡುತಲು ಮನೆಯೊಳು
ಕೆಲಸಗಳ ಮಾಡುತಲೇ ಮೈತೊಳೆವಾಗ ಮೆಲುವಾಗ ॥
ಕಲುಷದೂರನ ಸಕಲಠಾವಿಲಿ
ತಿಳಿಯೆ ತತ್ತನ್ನಾಮರೂಪವ
ಬಳಿಯಲಿಪ್ಪನು ಒಂದರೆಕ್ಷಣ ಬಿಟ್ಟಗಲನವರ ॥3॥

ಹರಿಭಕ್ತರಿಗೆ ಕುಲ, ದೇಶ, ಕರ್ಮ ದೋಷಗಳ ಭಯವಿಲ್ಲ

ಆವ ಕುಲದವನಾದರೇನಿ-
ನ್ನಾವ ದೇಶದೊಳಿದ್ದರೇನಿ-
ನ್ನಾವ ಕರ್ಮವ ಮಾಡಲೇನಿನ್ನಾವ ಕಾಲದಲಿ ॥
ಶ್ರೀವರನ ಸರ್ವತ್ರದಲಿ ಸಂ-
ಭಾವಿಸುತ ಪೂಜಿಸುತ ಮೋದಿಪ
ಕೋವಿದರಿಗುಂಟೇನೊ ಭಯದುಃಖಾದಿದೋಷಗಳು॥

ಭವಸಮುದ್ರವನು ದಾಟಲು ಗುಣಸಮುದ್ರದಲ್ಲಿ ಮುಳುಗು

ವಾಸುದೇವನ ಗುಣಸಮುದ್ರದೊ-
ಳೀಸಬಲ್ಲವ ಭವಸಮುದ್ರಾ-
ಯಾಸವಿಲ್ಲದೆ ದಾಟುವನು ಶೀಘ್ರದಲಿ ಜಗದೊಳಗೆ ॥
ಬೇಸರದೆ ದುರ್ವಿಷಯಗಳ ಅಭಿ-
ಲಾಷೆಯಲಿ ಬಳಲುವವ ನಾನಾ-
ಕ್ಲೇಶಗಳನನುಭವಿಪ ಭಕ್ತಿಸುಮಾರ್ಗ ಕಾಣದಲೆ ॥

ಪ್ರತಿಯೊಂದು ಆಚಾರ-ವಿಚಾರಗಳು ಶ್ರೀಹರಿಯ ಪೂಜೆಯಾಗಲಿ

ಸ್ನಾನ ಜಪ ದೇವಾರ್ಚನೆಯು ವ್ಯಾ-
ಖ್ಯಾನ ಭಾರತಮುಖ ಮಹೋಪಪು-
ರಾಣ ಕಥೆಗಳ ಪೇಳಿ ಕೇಳಿದರೇನು ದಿನದಿನದಿ ||
ಜ್ಞಾನಕರ್ಮೇಂದ್ರಿಯಗಳಿಂದೇ-
ನೇನು ಮಾಡುವ ಕರ್ಮಗಳು ಲ-
ಕ್ಷ್ಮೀನಿವಾಸನ ಪೂಜೆಯೆಂದರ್ಪಿಸದ ಮಾನವನು ||6||

ಸ್ವತಂತ್ರಕರ್ತೃವಿಗೆ ಕರ್ಮಸಮರ್ಪಣೆ ಮಾಡಿ ಪಾಪದಿಂದ ನಿರ್ಲಿಪ್ತನಾಗು

ದೇವಗಂಗೆಯೊಳುಳ್ಳವಗೆ ದುರಿ-
ತಾವಳಿಗಳುಂಟೇ ವಿಚಾರಿಸೆ
ಪಾವುಗಳ ಭಯ ಉಂಟೆ ವಿಹಗಾಧಿಪನ ಮಂದಿರದಿ ||
ಜೀವಕರ್ತೃತ್ವವನು ಮರೆದು ಪ-
ರಾವರೇಶನೆ ಕರ್ತೃ ಎಂದರಿ-
ದಾವ ಕರ್ಮವ ಮಾಡಿದರು ಲೇಪಿಸವು ಕರ್ಮಗಳು
||7||

ಶ್ರೀಹರಿಯೆ ಸ್ವತಂತ್ರಕರ್ತೃ ಜೀವರು ಅಸ್ವತಂತ್ರಕರ್ತೃ

ಏನು ಮಾಡುವ ಪುಣ್ಯ ಪಾಪಗ-
ಳಾನೆ ಮಾಡುವೆನೆಂಬುವಾಧಮ
ಹೀನಕರ್ಮಕೆ ಪಾತ್ರನಾ ಪುಣ್ಯಕ್ಕೆ ಹರಿಯೆಂಬ ॥
ಮಾನವನು ಮಧ್ಯಮನು ದ್ವಂದ್ವಕೆ
ಶ್ರೀನಿವಾಸನೆ ಕರ್ತೃವೆಂದು ಸ-
ದಾನುರಾಗದಿ ನೆನೆದು ಸುಖಿಸುವನೇ ನರೋತ್ತಮರು
॥8॥

ಶ್ರೀಹರಿಯ ಸ್ವತಂತ್ರಕರ್ತೃ ಎಂದು ಅನುಸಂಧಾನ ಮಾಡುವವರೇ ದೇವತೆಗಳು

ಈ ಉಪಾಸನೆಗೈವರಿಳೆಯೊಳು
ದೇವತೆಗಳಲ್ಲದಲೆ ನರರ-
ಲ್ಲಾವಬಗೆಯಿಂದಾದರಿವರರ್ಚನೆಯು ಹರಿಪೂಜೆ ॥
ಕೇವಲ ಪ್ರತಿಮೆಗಳೆನಿಪರು ರ-
ಮಾವಿನೋದಗೆ ಇವರನುಗ್ರಹ-
ವೇ ವರಾನುಗ್ರಹವೆನಿಸುವುದು ಮುಕುತಿಯೋಗ್ಯರಿಗೆ ॥9॥

ದೇಹ, ಮನೆ, ಮಡದಿ ಎಲ್ಲವೂ ಶ್ರೀಹರಿಯ ಅಧೀನ

ತನುವೆ ನಾನೆಂಬುವನು ಸತಿಸುತ-
ಮನೆಧನಾದಿಗಳೆನ್ನದೆಂಬುವ
ದ್ಯುನದಿ ಮೊದಲಾದವುಗಳೇ ಸತ್ತೀರ್ಥವೆಂಬುವನು ॥
ಅನಲಲೋಹಾದಿಪ್ರತೀಕಾ-
ರ್ಚನವೆ ದೇವರಪೂಜೆ ಸುಜನರೆ
ಮನುಜರಹುದೆಂಬುವನು ಗೋಖರನೆನಿಪ ಬುಧರಿಂದ
॥10॥

ಹರಿಯ ಅಧಿಷ್ಠಾನ ಚಿಂತಿಸದೆ ಇತರ ದೇವತಾರಾಧನೆ ಮಾಡಬಾರದು

ಅನಲಸೋಮಾರ್ಕೇಂದು ತಾರಾ-
ವನಿ ಸುರಾಪಗ ಮುಖ್ಯತೀರ್ಥಗ-
ಳನಿಲಗಗನಮನಾದಿ ಇಂದ್ರಿಯಗಳಿಗೆ ಅಭಿಮಾನಿ ॥
ಎನಿಪ ಸುರರ ವಿಪಶ್ಚಿತರ ಸ-
ನ್ಮನದಿ ಭಜಿಸದಲಿಪ್ಪವರ ಪಾ-
ವನವ ಮಾಡರು ತಮ್ಮ ಪೂಜೆಯ ಮಾಡಿದರು ಸರಿಯೆ
॥11॥

ಹರಿಪಾದಭಜಕನ ಸಂಘದಿಂದ ಸಕಲಪಾಪ ಪರಿಹಾ

ಕಂಡ ಕಾಣದೆ ಮುಟ್ಟಿದರು ಸರಿ
ಕಂಡು ಮುಟ್ಟಲು ದಹಿಸದಿಪ್ಪುದೆ
ಪುಂಡರೀಕದಳಾಯತಾಕ್ಷನ ವಿಮಲಪದಪದ್ಮ ॥
ಬಂಡುಣಿಗಳೆಂದೆನಿಪ ಭಕ್ತರ
ಹಿಂಡು ನೋಡಿದ ಮಾತ್ರದಲಿ ತನು-
ದಿಂಡು ಗೆಡಹಿದ ನರನ ಪಾವನಮಾಳ್ಪರಾಕ್ಷಣದಿ ॥12॥

ಲೌಕಿಕ ಸಹವಾಸ ಬಿಟ್ಟು ಸುಜ್ಞಾನಿಗಳ ಸಹವಾಸ ಮಾಡು

ಈ ನಿಮಿತ್ತ ಪುನಃಪುನಃ ಸು-
ಜ್ಞಾನಿಗಳ ಸಹವಾಸ ಮಾಡು ಕು-
ಮಾನವರ ಕೂಡಾಡದಿರು ಲೌಕಿಕಕೆ ಮರುಳಾಗಿ ॥
ವೈನತೇಯಾಂಸಗನ ಸರ್ವ-
ಸ್ಥಾನದಲಿ ತನ್ನಾಮರೂಪವ
ಧೇನಿಸುತ ಸಂಚರಿಸು ಇತರಾಲೋಚನೆಯ ಬಿಟ್ಟು ॥13॥

ಹರಿಯೇ ಸ್ವತಂತ್ರಕರ್ತೃ ಎಂದವನು ಮುಕ್ತಿಯೋಗ್ಯ

ಈ ನಲಿನಜಾಂಡದೊಳು ಸರ್ವ-
ಪ್ರಾಣಿಗಳೊಳಿದ್ದನವರತ ವಿ-
ಜ್ಞಾನಮಯ ವ್ಯಾಪಾರಗಳ ಮಾಡುವನು ತಿಳಿಸದಲೆ ॥
ಏನು ಕಾಣದೆ ಸಕಲ ಕರ್ಮಗ-
ಳಾನೆ ಮಾಡುವೆನೆಂಬ ನರನು ಕು-
ಯೋನಿ ಐದುವ ಕರ್ತೃ ಹರಿ ಎಂದವನೆ ಮುಕ್ತನಹ॥14॥

ಶ್ರೀಹರಿಯ ಗುಣಸಮುದ್ರದಲ್ಲಿ ಮುಳುಗಿರುವ ದೇವತೆಗಳಿಗೂ ಪೂರ್ಣ ಅರಿವಿಲ್ಲ

ಕಲಿಮಲಾಪಹಳೆನಿಸುತಿಹ ಬಾಂ-
ಬೊಳೆಯೊಳಗೆ ಸಂಚರಿಸಿ ಬದುಕುವ
ಜಲಚರಪ್ರಾಣಿಗಳು ಬಲ್ಲವೆ ತೀರ್ಥಮಹಿಮೆಯನು ॥
ಹಲವು ಬಗೆಯಲಿ ಹರಿಯ ಕರುಣಾ-
ಬಲದಿ ಬಲ್ಲಿದರಾದ ಬ್ರಹ್ಮಾ-
ನಿಲವಿಪೇಶಾದ್ಯಮರರರಿಯರನಂತನಮಲಗುಣ ॥15॥

ಜೀವ ಸಮೂಹವನ್ನು ತ್ರಿಗುಣಬದ್ಧರನ್ನಾಗಿ ಮೋಹಿಸುವ ಶ್ರೀಹರಿ

ಶ್ರೀಲಕುಮಿವಲ್ಲಭನು ಹೃತ್ಕೀ-
ಲಾಲಜದೊಳಿದ್ದಖಿಳಚೇತನ-
ಜಾಲವನು ಮೋಹಿಸುವ ತ್ರಿಗುಣದಿ ಬದ್ಧರನು ಮಾಡಿ ||
ಸ್ಥೂಲಕರ್ಮದಿ ರತರ ಮಾಡಿ ಸು-
ಲೀಲೆಗಳ ತಿಳಿಸದಲೆ ಭವದಿ ಕು-
ಲಾಲಚಕ್ರದ ತೆರದಿ ತಿರುಗಿಸುತಿಹನು ಮಾನವರ ||16||

ರಾಜಸ ತಾಮಸರಿಗಾಗುವ ಗತಿ

ವೇದಶಾಸ್ತ್ರವಿಚಾರಗೈದು ನಿ-
ಷೇಧಕರ್ಮವ ತೊರೆದು ನಿತ್ಯದಿ
ಸಾಧುಕರ್ಮವ ಮಾಳ್ಪರಿಗೆ ಸ್ವರ್ಗಾದಿಸುಖವೀವ ||
ಐದಿಸುವ ಪಾಪಿಗಳ ನಿರಯುವ
ಖೇದಮೋದ ಮನುಷ್ಯರಿಗೆ ದು-
ರ್ವಾದಿಗಳಿಗಂಧಂತಮದಿ ಮಹದುಃಖಗಳನುಣಿಪ ||17||

ಅಪ್ರಾಕೃತ ಗುಣೋಪಾಸಕರಿಗೆ ಮುಕ್ತಿ

ನಿರ್ಗುಣೋಪಾಸಕಗೆ ಗುಣಸಂ-
ಸರ್ಗದೋಷಗಳೀಯದಲೆ ಅಪ-
ವರ್ಗದಲಿ ಸುಖವಿತ್ತು ಪಾಲಿಸುವನು ಕೃಪಾಸಾಂದ್ರ ॥
ದುರ್ಗಮನು ಎಂದೆನಿಪ ತ್ರೈವಿ-
ಧ್ಯರ್ಗೆ ತ್ರಿಗುಣಾತೀತ ಸಂತತ
ಸ್ವರ್ಗಭೂನರಕದಲಿ ಸಂಚಾರವನೆ ಮಾಡಿಸುವ ॥18॥

ಶ್ರೀಹರಿಯು ತ್ರಿವಿಧ ಜೀವರಲ್ಲಿ ತತ್ತದಾಕಾರದಲ್ಲಿದ್ದರೂ ಲೇಪವಿಲ್ಲ

ಮೂವರೊಳಗಿದ್ದರು ಸರಿಯೆ ಸುಖ-
ನೋವುಗಳು ಸಂಬಂಧವಾಗವು
ಪಾವನಕೆ ಪಾವನ ಪರಾತ್ಪರ ಪೂರ್ಣಸುಖವನಧಿ ॥
ಈ ವನರುಹಭವಾಂಡದೊಳು ಸ್ವಕ-
ಳೇವರ ತದಾಕಾರ ಮಾಡಿ ಪ-
ರಾವರೇಶ ಚರಾಚರಾತ್ಮಕ ಲೋಕಗಳ ಪೊರೆವ ॥19॥

ಹರಿಯೇ ಸ್ವತಂತ್ರ ಕರ್ತೃ ಎಂದರಿತು ಮದ್ದಾನೆಯಂತೆ ಸಂಚರಿಸು

ಅನಿಮಿತ್ತ ನಿರಂತರದಿ ಸ್ವಾ-
ಧೀನಕರ್ತೃತ್ವವನು ಮರೆದೇ-
ನೇನು ಮಾಡುವುದೆಲ್ಲ ಹರಿ ಒಳಹೊರಗೆ ನೆಲೆಸಿದ್ದು ॥
ತಾನೆ ಮಾಡುವನೆಂದರಿದು ಮ-
ದ್ದಾನೆಯಂದದಿ ಸಂಚರಿಸು ಪವ-
ಮಾನವಂದಿತ ಒಂದರೆಕ್ಷಣ ಬಿಟ್ಟಗಲ ನಿನ್ನ ॥20॥

ಬಿಂಬಪೂಜೆ ಮಾಡದವನಿಗೆ ಬಾಹ್ಯಪೂಜೆಯ ಅಧಿಕಾರವಿಲ್ಲ

ಹಲವು ಕರ್ಮವ ಮಾಡಿ ದೇಹವ
ಬಳಲಿಸದೆ ದಿನದಿನದಿ ಹೃದಯಾ-
ಮಲಸದನದಿ ವಿರಾಜಿಸುವ ಹರಿಮೂರ್ತಿಯನೆ ಭಜಿಸು॥
ತಿಳಿಯದೀ ಪೂಜಾಪ್ರಕರಣವ
ಫಲಸುಪುಷ್ಪಾರ್ಘ್ಯೋದಕ ಶ್ರೀ-
ತುಳಸಿದಳವರ್ಪಿಸಲು ಒಪ್ಪನು ವಾಸುದೇವ ಸದಾ ॥21॥

ಪಂಚಭೂತಗಳಲ್ಲಿ ನಾರಾಯಣಾದಿ ಪಂಚರೂಪಗಳು

ಧರಣಿ ನಾರಾಯಣನು ಉದಕದಿ
ತುರಿಯನಾಮಕ ಅಗ್ನಿಯೊಳು ಸಂ-
ಕರುಷಣಾಹ್ವಯ ವಾಯುಗ ಪ್ರದ್ಯುಮ್ನ ಅನಿರುದ್ಧ ॥
ಇರುತಿಹನು ಆಕಾಶದೊಳು ಮೂ-
ರೆರಡು ರೂಪವ ಧರಿಸಿ ಭೂತಗ
ಕರೆಸುವನು ತನ್ನಾಮರೂಪದಿ ಪ್ರಜರ ಸಂತೈಪ ॥22॥

ಮಳೆಯಲ್ಲಿ ಭಗವಂತನ 5 ರೂಪಗಳ ಅನುಸಂಧಾನ

ಘನಗತನು ತಾನಾಗಿ ನಾರಾ-
ಯಣನು ತನ್ನಾಮದಲಿ ಕರೆಸುವ
ವನದ ಗರ್ಭೋದಕದಿ ನೆಲೆಸಿಹ ವಾಸುದೇವ ಸದಾ ॥
ಧ್ವನಿ ಸಿಡಿಲು ಸಂಕರ್ಷಣನು ಮಿಂ-
ಚಿನೊಳು ಶ್ರೀಪ್ರದ್ಯುಮ್ನ ವೃಷ್ಟಿಯ
ಹನಿಗಳೊಳಗನಿರುದ್ಧನಿಪ್ಪನು ವರುಷವೆಂದೆನಿಸಿ ॥23॥

ಬಿಂಬರೂಪಿ ವ್ಯಾಪಾರವನ್ನು ತಿಳಿಯದೇ ಬಾಹ್ಯ ಕರ್ಮದಿಂದ ಫಲವೇನು?

ಗೃಹ ಕುಟುಂಬ ಧನಾದಿಗಳ ಸ-
ನ್ನಹಗಳುಳ್ಳವರಾಗಿ ವಿಹಿತಾ-
ವಿಹಿತಧರ್ಮ ಸುಕರ್ಮಗಳ ತಿಳಿಯದಲೆ ನಿತ್ಯದಲಿ ॥
ಅಹರ ಮೈಥುನ ನಿದ್ರೆಗೊಳಗಾ-
ಗಿಹರು ಸರ್ವಪ್ರಾಣಿಗಳು ಹೃ-
ದ್ಗುಹನಿವಾಸಿಯನರಿಯದಲೆ ಭವದೊಳಗೆ ತೊಳಲುವರು ॥24॥

ಅಡವಿಯಲ್ಲಿ ಮೃಗಗಳನ್ನು ರಕ್ಷಿಸುವ 'ಗೋಜ' ಹಾಗೂ ಅದ್ರಿಜಾ ನಾಮಕ ಭಗವಂತ

ಜಡಜಸಂಭವ ಖಗ ಫಣಿಪ ಕೆಂ-
ಜಡೆಯರಿಂದೊಡಗೂಡಿ ರಾಜಿಸು-
ತಡವಿಯೊಳಗಿಪ್ಪನು ಸದಾ ಗೋಜಾದ್ರಿಜನು ಎನಿಸಿ ॥
ಉಡುಪನಿಂದಭಿವೃದ್ಧಿಗಳ ತಾ
ಕೊಡುತ ಪಕ್ಷಿ ಮೃಗಾಹಿಗಳ ಕಾ-
ರೊಡಲ ಕಾವನು ತತ್ತದಾಹ್ವಯನಾಗಿ ಜೀವರನು ॥25॥

ನರಸಿಂಹ, ವಾಮನ, ಕೇಶವ, ತ್ರಿವಿಕ್ರಮ, ಮತ್ಸ್ಯನಿಂದ ಭಕ್ತರ ರಕ್ಷಣೆ

ಅಪರಿಮಿತಸನ್ಮಹಿಮ ನರಹರಿ
ವಿಪಿನದೊಳು ಸಂತೈಸುವನು ಕಾ-
ಶ್ಯಪಿಯನಳೆದವ ಸ್ಥಳಗಳಲಿ ಸರ್ವತ್ರ ಕೇಶವನು ॥
ಖಪತಿ ಗಗನದಿ ಜಲಗಳಲಿ ಮಹ
ಶಫರನಾಮಕ ಭಕ್ತರನು ನಿ-
ಷ್ಕಪಟದಿಂದಲಿ ಸಲಹುವನು ಕರುಣಾಳು ದಿನದಿನದಿ ॥26॥

ಕಾರಣಾದಿ 5 ರೂಪಗಳಿಗೆ ಸಾರಾದಿ 6 ರಸಗಳನ್ನು ಅರ್ಪಿಸಿ ಸುಖಿಯಾಗು

ಕಾರಣಾಂತರ್ಯಾಮಿ ಸ್ಥೂಲವ-
ತಾರ ವ್ಯಾಪ್ತಂಶಾದಿರೂಪಕ
ಸಾರ ಶುಭಪ್ರವಿವಿಕ್ತನಂದ ಸ್ಥೂಲ ನಿಸ್ಸಾರ ॥
ಆರು ರಸಗಳನರ್ಪಿಸಲ್ಪರಿ-
ಗೀ ರಹಸ್ಯವ ಪೇಳದೆ ಸದಾ-
ಪಾರಮಹಿಮನ ರೂಪಗುಣಗಳ ನೆನೆದು ಸುಖಿಸುತಿರು
॥27॥

ಭಗವದ್ರೂಪಗಳಿಗೆ ರಸಗಳನ್ನು ಅರ್ಪಿಸಲರಿಯದ ಜನರು, ಚಂದ್ರನ ಪ್ರತಿಬಿಂಬವನ್ನು ಹಂಬಲಿಸುವ ಮೀನಿನಂತೆ

ಜಲಗತೋಡುಪನಮಲ ಬಿಂಬವ
ಮೆಲುವೆವೆಂಬತಿಹರುಷದಿಂದಲಿ
ಜಲಚರಪ್ರಾಣಿಗಳು ನಿತ್ಯದಿ ಯತ್ನಗೈವಂತೆ ॥
ಹಲಧರಾನುಜ ಭೋಗ್ಯರಸಗಳ
ನೆಲೆಯನರಿಯದೆ ಪೂಜಿಸುತ ಹಂ-
ಬಲಿಸುವರು ಪುರುಷಾರ್ಥಗಳ ಸತ್ಕುಲಜರಾವೆಂದು ॥28॥

ದೇವಾದಿ ಸಕಲ ಜೀವರಿಗೆ ಅವರ ಯೋಗ್ಯತಾನುಸಾರ ರಸಗಳನೀವ

ದೇವ ಋಷಿ ಗಂಧರ್ವ ಪಿತೃ ನರ
ದೇವ ಮಾನವ ದನುಜ ಗೋಜ ಖ-
ರಾವಿ ಮೊದಲಾದಖಿಳಚೇತನಭೋಗ್ಯರಸಗಳನು ॥
ಯಾವದವಯವಗಳೊಳಗಿದ್ದು ರ-
ಮಾವರನು ಸ್ವೀಕರಿಪ ಯಾವ-
ಜ್ಜೀವಗಣಕೆ ಸ್ವಯೋಗ್ಯರಸಗಳನೀವನೆಂದೆಂದು ॥29॥

ಒರಟು ಬುದ್ಧಿ, ಲೌಕಿಕ ಹರಟೆ ಕಾಮನೆಗಳನ್ನು ಬಿಟ್ಟು, ಹರಿಸರ್ವೋತ್ತಮನು, ಸರ್ವಕರ್ಮನಿಯಾಮಕನೆಂದು ನೆನೆ

ಒರಟುಬುದ್ಧಿಯ ಬಿಟ್ಟು ಲೌಕಿಕ
ಹರಟೆಗಳನೀಡಾಡಿ ಕಾಂಚನ
ಪರಟಲೋಷ್ಟಾದಿಗಳು ಸಮವೆಂದರಿತು ನಿತ್ಯದಲಿ ॥
ಪುರಟಗರ್ಭಾಂಡೋದರನು ಸ-
ತ್ಪುರುಟನೆಂದೆನಿಸೆಲ್ಲರೊಳಗಿ-
ದ್ದುರುಟುಕರ್ಮವ ಮಾಳ್ಪನೆಂದಡಿಗಡಿಗೆ ನೆನೆವುತಿರು॥30॥

ದೋಷದೂರನಾದ ದೇವರು ಭಕ್ತರ ನಿಂದಾಸ್ತುತಿಯಿಂದಲೂ ಪ್ರೀತನಾಗಿ ಸಂತೈಪ

ಭೂತಲದಿ ಜನರುಗಳು ಮರ್ಮಕ
ಮಾತುಗಳನಾಡಿದರೆ ಸಹಿಸದೆ
ಘಾತಿಸುವರತಿಕೋಪದಿಂದಲಿ ಎಚ್ಚರಿಪ ತೆರದಿ ॥
ಮಾತುಳಾಂತಕ ಜಾರ ಹೇ ನವ-
ನೀತ ಚೋರನೆ ಎನಲು ತನ್ನ ನಿ-
ಕೇತನದೊಳಿಟ್ಟವರ ಸಂತೈಸುವನು ಕರುಣಾಳು ॥31॥

ರಹಸ್ಯವಾದ ಹರಿಕಥೆ ಎಂಬ ಅಮೃತವು ಪರಮಭ
ಮಾತ್ರ ಅಮೃತದ ಅಧಿಕಾರಿಗಳು ಭಕ್ತರು ಮಾತ್ರ

ಹರಿಕಥಾಽಮೃತಸಾರವಿದು ಸಂ-
ತರು ಸದಾ ಚಿತ್ತೈಸುವುದು ನಿ-
ಷ್ಠುರಿಗಳಿಗೆ ಪಿಶುನರಿಗಯೋಗ್ಯರಿಗಿದನು ಪೇಳದಲೆ ॥
ನಿರುತ ಸದ್ಭಕ್ತಿಯಲಿ ಭಗವ-
ಚ್ಚರಿತೆಗಳ ಕೊಂಡಾಡಿ ಹಿಗ್ಗುವ
ಪರಮ ಭಗವದ್ದಾಸರಿಗೆ ತಿಳಿಸುವುದು ಈ ರಹಸ್ಯ ॥32॥

ಭಗವತ್ ಸಂಕಲ್ಪದಿಂದ ಲಬ್ಧವಾದ ಎಲ್ಲವೂ
ಪುರುಷಾರ್ಥವೆಂದು ಭಜಿಸು

ಸತ್ಯಸಂಕಲ್ಪನು ಸದಾ ಏ-
ನಿತ್ತುದೇ ಪುರುಷಾರ್ಥವೆಂದರಿ-
ತತ್ಯಧಿಕ ಸಂತೋಷದಿಂ ನೆನೆವುತ್ತ ಭುಂಜಿಪುದು ॥
ನಿತ್ಯಸುಖಸಂಪೂರ್ಣ ಪರಮ ಸು-
ಹೃತ್ತಮ ಜಗನ್ನಾಥವಿಟ್ಠಲ
ಬತ್ತಿಸಿ ಭವಾಂಬುಧಿಯ ಚಿತ್ಸುಖವ್ಯಕ್ತಿ ಕೊಡುತಿಪ್ಪ ॥33॥

॥ ಇಲ್ಲಿಗೆ ಹದಿಮೂರನೆಯ ನಾಮಸ್ಮರಣಸಂಧಿ ಮುಗಿಯಿತು॥

14. ಪಿತೃಗಣಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಪ್ರದ್ಯುಮ್ನನ 24 ಭೋಜ್ಯರೂಪ ಮತ್ತು ಸಂಕರ್ಷಣನ 33 ಭೋಕ್ತೃ ರೂಪ

ಕೃತಿರಮಣ ಪ್ರದ್ಯುಮ್ನ ವಸುದೇ-
ವತೆಗಳಾಹಂಕಾರತ್ರಯದೊಳು
ಚತುರವಿಂಶತಿ ರೂಪದಿಂದಲಿ ಭೋಜ್ಯನೆನಿಸುವನು ॥
ಹುತವಹಾಕ್ಷಂತರ್ಗತ ಜಯಾ-
ಪತಿಯು ತಾನೇ ಮೂರಧಿಕ ತ್ರಿಂ-
ಶತಿ ಸುರೂಪದಿ ಭೋಕ್ತೃ ಎನಿಸುವ ಭೋಕ್ತೃಗಳೊಳಿದ್ದು
॥1॥

ವಾಸುದೇವನ ಕಾಲನಾಮಕ 36 ರೂಪಗಳು ತ್ರಿವಿಧಪಿತೃಗಳಲ್ಲಿ ಅನಿರುದ್ಧನ ಕರ್ತೃ, ಕರ್ಮ, ಕ್ರಿಯಾರೂಪ

ಆರಧಿಕಮೂವತ್ತು ರೂಪದಿ
ವಾರಿಜಾಪ್ತನೊಳಿರುತಿಹನು ಮಾ-
ಯಾರಮಣ ಶ್ರೀವಾಸುದೇವನು ಕಾಲನಾಮದಲಿ ॥
ಮೂರುವಿಧ ಪಿತೃಗಳೊಳು ತ್ರಿಪು-
ರಾರಿಯಾದಿತ್ಯಗನಿರುದ್ಧನು
ತೋರಿಕೊಳ್ಳದೆ ಕರ್ತೃಕರ್ಮಕ್ರಿಯವೆನಿಸಿಕೊಂಬ ॥2॥

ಕರ್ತೃ, ಕರ್ಮ, ಕ್ರಿಯೆಗಳಲ್ಲಿ ಷಣ್ಣವತಿನಾಮಕ ನಾರಾಯಣ

ಸ್ವವಶ ನಾರಾಯಣನು ತಾ ಷ-
ಣ್ಣವತಿನಾಮದಿ ಕರೆಸುತಲಿ ವಸು
ಶಿವ ದಿವಾಕರ ಕರ್ತೃಕರ್ಮಕ್ರಿಯೆಗಳೊಳಗಿದ್ದು ॥
ನೆವನವಿಲ್ಲದೆ ನಿತ್ಯದಲಿ ತ-
ನ್ನವರು ಮಾಡುವ ಸೇವೆ ಕೈಗೊಂ-
ಡವರ ಪಿತೃಗಳಿಗೀವನಂತಾನಂತ ಸುಖಗಳನು ॥3॥

ಶ್ರಾದ್ಧದಲ್ಲಿ ಪಂಚರೂಪಾತ್ಮಕನ ಅನುಸಂಧಾನದಿಂದ ಪುರುಷಾರ್ಥಗಳ ಪ್ರಾಪ್ತಿ

ತಂತುಪಟದಂದದಲಿ ಲಕುಮೀ-
ಕಾಂತ ಪಂಚಾತ್ಮಕನೆನಿಸಿ ವಸು-
ಕಂತುಹರ ರವಿ ಕರ್ತೃಗಳೊಳಿದ್ದನವರತ ತನ್ನ ॥
ಚಿಂತಿಸುವ ಸಂತರನು ಗುರು ಮ-
ಧ್ವಾಂತರಾತ್ಮಕ ಸಂತೈಸುವನು
ಸಂತತಾಖಿಳಾರ್ಥಗಳ ಪಾಲಿಸಿ ಇಹಪರಂಗಳಲಿ ॥4॥

ತಂದೆ ತಾಯಿಗಳು ಭಗವಂತನ ಮುಖ್ಯಾಧಿಷ್ಠಾನವೆಂದು ತಿಳಿ

ತಂದೆತಾಯ್ಗಳ ಪ್ರೀತಿಗೋಸುಗ
ನಿಂದ್ಯಕರ್ಮವ ತೊರೆದು ವಿಹಿತಗ-
ಳೊಂದು ಮೀರದೆ ಸಾಂಗಕರ್ಮಗಳಾಚರಿಸುವವರು ॥
ವಂದನೀಯರಾಗಿಳೆಯೊಳಗೆ ದೈ-
ನಂದಿನದಿ ದೈಶಿಕ ದಹಿಕ ಸುಖ-
ದಿಂದ ಬಾಳ್ವರು ಬಹು ದಿವಸದಲಿ ಕೀರ್ತಿಯುತರಾಗಿ
॥5॥

96 ರೂಪಗಳಿಂದ ಶ್ರಾದ್ಧ ಕರ್ಮ ಸ್ವೀಕರಿಸುವ ಜನಾರ್ದನನ ಸ್ಮರಿಸು

ಅಂಶಿ ಅಂಶಾಂತರ್ಗತತ್ರಯ
ಹಂಸವಾಹನ ಮುಖ್ಯದಿವಿಜರಾ
ಸಂಶಯದಲಿ ತಿಳಿದಂತರಾತ್ಮಕ ಶ್ರೀಜನಾರ್ದನನ ॥
ಸಂಸ್ಮರಣೆಪೂರ್ವಕದಿ ಷಡಧಿಕ
ತ್ರಿಂಶತಿತ್ರಯರೂಪವರಿತು ವಿ-
ಪಾಂಸಗನ ಪೂಜಿಸುವರೇ ಕೃತಾರ್ಥರೆನಿಸುವರು ॥6॥

3555 ರೂಪದಿಂದ ಜನಾರ್ದನನು ವಿಘ್ನನಾಶಕನು

ಮೂರುವರೆ ಸಾವಿರದ ಮೇಲರೆ
ನೂರೈದು ರೂಪದಿ ಜನಾರ್ದನ
ಸೂರಿಗಳು ಮಾಡುವ ಸಮಾರಾಧನೆಗೆ ವಿಘ್ನಗಳು ॥
ಬಾರದಂತೆ ಬಹುಪ್ರಕಾರ ಖ-
ರಾರಿ ಕಾಪಾಡುವನು ಸರ್ವ ಶ-
ರೀರಗಳೊಳಿದ್ದವರವರ ಪೆಸರಿಂದ ಕರೆಸುತಲಿ ॥7॥

ಪಿತೃಯಜ್ಞದಲ್ಲಿ ಪ್ರಾರ್ಥನಾಕ್ರಮ

ಜಯ ಜಯ ಜಯಾಕಾಂತ ದತ್ತಾ-
ತ್ರೇಯ ಕಪಿಲ ಮಹಿದಾಸ ಭಕ್ತ-
ಪ್ರಿಯ ಪುರಾತನಪುರುಷ ಪೂರ್ಣಾನಂದಜ್ಞಾನಘನ ॥
ಹಯವದನ ಹರಿ ಹಂಸ ಲೋಕ-
ತ್ರಯವಿಲಕ್ಷಣ ನಿಖಿಲಜಗದಾ-
ಶ್ರಯ ನಿರಾಮಯ ದಯದಿ ಸಂತೈಸೆಂದು ಪ್ರಾರ್ಥಿಪುದು
॥8॥

ಷಣ್ಣವತಿನಾಮಕನ 96 ರೂಪಗಳಿಗೆ ಪಿತೃಕರ್ಮಗಳ ಸಮರ್ಪಣೆ

ಷಣ್ಣವತಿಯೆಂಬಕ್ಷರೇಡ್ಯನು
ಷಣ್ಣವತಿ ನಾಮದಲಿ ಕರೆಸುತ
ತನ್ನವರು ಸದ್ಭಕ್ತಿಪೂರ್ವಕದಿಂದ ಮಾಡುತಿಹ ॥
ಪುಣ್ಯಕರ್ಮವ ಸ್ವೀಕರಿಸಿ ಕಾ-
ರುಣ್ಯಸಾಗರ ಸಲಹುವನು ಬ್ರ-
ಹ್ಮಣ್ಯದೇವ ಭವಾಬ್ಧಿಪೋತ ಬಹುಪ್ರಕಾರದಲಿ ॥9॥

ದೇಹ ಕೊಟ್ಟವನು ಅನ್ನ ಉಣಿಸದಿರುವನೆ !

ದೇಹಗಳ ಕೊಡುವವನು ಅವರವ-
ರಹರವನು ಕೊಡದಿಹನೆ ಸುಮನಸ-
ಮಹಿತ ಮಂಗಳಚರಿತ ಸದ್ಗುಣಭರಿತನನವರತ ॥
ಐಹಿಕ ಪಾರತ್ರಿಕ ಸುಖಪ್ರದ
ವಹಿಸಿ ಬೆನ್ನಲಿ ಬೆಟ್ಟವಮೃತವ
ದ್ರುಹಿಣ ಮೊದಲಾದವರಿಗುಣಿಸಿದ ಮುರಿದನಹಿತರನ
॥10॥

ವಾಸುದೇವನು ಬ್ರಹ್ಮಾದಿಗಳಿಗೆ ಸ್ವಾಹಾನೆನಿಸಿ ಪಿತೃಗಳಿಗೆ ಸ್ವಧಾನೆನಿಸಿ ಸಂಕರ್ಷಣನು ತರ್ಪಕನಾಗಿರುವನು

ದ್ರುಹಿಣ ಮೊದಲಾದಮರರಿಗೆ ಸ-
ನ್ಮಹಿತ ಮಾಯಾರಮಣ ತಾನೇ
ಸ್ವಹನೆನಿಸಿ ಸಂತೃಪ್ತಿಬಡಿಸುವ ಸರ್ವಕಾಲದಲಿ ॥
ಪ್ರಹಿತ ಸಂಕರುಷಣನು ಪಿತೃಗಳಿ-
ಗಹರನೆನಿಪ ಸ್ವಧಾಖ್ಯರೂಪದಿ
ಮಹಿಜ ಫಲತೃಣ ಪೆಸರಿನಲಿ ಪ್ರದ್ಯುಮ್ನನನಿರುದ್ಧ ॥11॥

"ಅನ್ನನಾಮಕನು ಸರ್ವ ಜೀವರ ಅನ್ನಕಲ್ಪಕನು" ಎಂದು ಉಪಾಸನೆ ಮಾಡು

ಅನ್ನನೆನಿಸುವ ನೃಪಶುಗಳಿಗೆ ಹಿ-
ರಣ್ಯಗರ್ಭಾಂಡದೊಳು ಸಂತತ
ತನ್ನನೀಪರಿಯಿಂದುಪಾಸನೆಗೈವ ಭಕುತರನು ॥
ಬನ್ನಬಡಿಸದೆ ಭವಸಮುದ್ರ ಮ-
ಹೋನ್ನತಿಯ ದಾಟಿಸಿ ಚತುರ್ವಿಧ
ಅನ್ನಮಯನಾತ್ಮಪ್ರದರ್ಶನ ಸುಖವನೀವ ಹರಿ ॥12॥

ಸಕಲ ಮನೋವಾಕ್ಕಾಯಿಕ ಕರ್ಮಗಳ ಸಮರ್ಪಣೆ ನಾರಾಯಣನಿಗೆ

ಮನವಚನಕಾಯಗಳ ದೆಶೆಯಿಂ-
ದನುದಿನದಿ ಬಿಡದಾಚರಿಸುತಿ-
ಪ್ಪನುಚಿತೋಚಿತ ಕರ್ಮಗಳ ಸದ್ಭಕ್ತಿಪೂರ್ವಕದಿ ॥
ಅನಿಳದೇವನೊಳಿಪ್ಪ ನಾರಾ-
ಯಣಗಿದನ್ನವು ಎಂದು ಕೃಷ್ಣಾ-
ರ್ಪಣವೆನುತ ಕೊಡೆ ಸ್ವೀಕರಿಸಿ ಸಂತೈಪ ಕರುಣಾಳು
॥13॥

ಸಪ್ತಾನ್ನವನ್ನು ಸಪ್ತಾನ್ನಮಯನಾದ ಅನಿರುದ್ಧಾದಿಗಳಿಗೆ ಸಮರ್ಪಿಸು

ಏಳುವಿಧದನ್ನಪ್ರಕರಣವ
ಕೇಳಿ ಕೋವಿದರಾಸ್ಯದಿಂದಲಿ
ಆಲಸವ ಮಾಡದಲೆ ಅನಿರುದ್ಧಾದಿರೂಪಗಳ ॥
ಕಾಲಕಾಲದಿ ನೆನೆದು ಪೂಜಿಸು
ಸ್ಥೂಲಮತಿಗಳಿಗಿದನು ಪೇಳದೆ
ಶ್ರೀಲಕುಮಿವಲ್ಲಭನೆ ಅನ್ನಾದನ್ನ ಅನ್ನದನು ॥14॥

ಸಪ್ತಾನ್ನೋಪಾಸನೆಯಿಂದ ಮೋಕ್ಷಫಲ

ಎಂದರಿತು ಸಪ್ತಾನ್ನಗಳ ದೈ-
ನಂದಿನದಿ ಮರೆಯದೆ ಸದಾ ಗೋ-
ವಿಂದಗರ್ಪಿಸು ನಿರ್ಭಯದಿ ಮಹಯಜ್ಞವಿದುಯೆಂದು ॥
ಇಂದಿರೇಶನು ಸ್ವೀಕರಿಸಿ ದಯ-
ದಿಂದ ಬೇಡಿಸಿಕೊಳದೆ ತವಕದಿ
ತಂದುಕೊಡುವನು ಪರಮಮಂಗಳ ತನ್ನ ದಾಸರಿಗೆ ॥15॥

ಭಕ್ತಿಜ್ಞಾನವಿಲ್ಲದೆ ಪ್ರಾರ್ಥಿಸುವುದು ವ್ಯರ್ಥ

ಸೂಜಿ ಕರದಲಿ ಪಿಡಿದು ಸಮರವ
ನಾ ಜಯಿಸುವೆನು ಎಂಬ ನರನಂ-
ತೀ ಜಗತ್ತಿನೊಳುಳ್ಳ ಅಜ್ಞಾನಿಗಳು ನಿತ್ಯದಲಿ ॥
ಶ್ರೀಜಗತ್ಪತಿ ಚರಣಯುಗಳ ಸ-
ರೋಜ ಭಕ್ತಿಜ್ಞಾನಪೂರ್ವಕ
ಪೂಜಿಸದೆ ಧರ್ಮಾರ್ಥಕಾಮವ ಬಯಸಿ ಬಳಲುವರು
॥16॥

ಕಾಣಿಸದೆ ಕಾಯುವ ಮಹಾಮಹಿಮ !

ಶಕಟಭಂಜನ ಸಕಲ ಜೀವರ
ನಿಕಟಗನು ತಾನಾಗಿ ಲೋಕಕೆ
ಪ್ರಕಟನಾಗದೆ ಸಕಲಕರ್ಮವ ಮಾಡಿ ಮಾಡಿಸುತ ॥
ಅಕುಟಿಲಾತ್ಮಕ ಭಕುತ ಜನರಿಗೆ
ಸುಖದನೆನಿಸುವ ಸರ್ವಕಾಲದಿ
ಅಕಟಕಟ ಈತನ ಮಹಾಮಹಿಮೆಗಳಿಗೇನೆಂಬೆ ! ॥17॥

ಶ್ರೀಹರಿಯ ಮೂಲರೂಪ, ಕಾರಣರೂಪ ಅಂಶರೂಪಗಳು

ಶ್ರೀಲಕುಮಿವಲ್ಲಭನು ವೈಕುಂ-
ಠಾಲಯದಿ ಪ್ರಣವ ಪ್ರಕೃತಿ ಕೀ-
ಲಾಲಜಾಸನಮುಖ್ಯ ಚೇತನರೊಳಗೆ ನೆಲೆಸಿದ್ದು ॥
ಮೂಲಕಾರಣ ಅಂಶನಾಮದಿ
ಲೀಲೆಗೈಸುತ ತೋರಿಕೊಳ್ಳದೆ
ಪಾಲಿನೊಳು ಘೃತವಿದ್ದತೆರದಂತಿಪ್ಪ ತ್ರಿಸ್ಥಳದಿ ॥18॥

ಧರ್ಮಸ್ಥಾಪನೆಗಾಗಿ ಅವತರಿಸುವ ಮೂಲರೂಪಿಯ ಕಾರುಣ್ಯ

ಮೂರುಯುಗದಲಿ ಮೂಲರೂಪನು
ಸೂರಿಗಳ ಸಂತೈಸಿ ದಿತಿಯ ಕು-
ಮಾರಕನು ಸಂಹರಿಸಿ ಧರ್ಮವನುಳುಹಬೇಕೆಂದು ॥
ಕಾರುಣಿಕ ಭೂಮಿಯೊಳು ನಿಜಪರಿ-
ವಾರಸಹಿತವತರಿಸಿ ಬಹುವಿಧ
ತೋರಿದನು ನರವತ್ಪ್ರವೃತ್ತಿಯ ಸಕಲ ಚೇತನಕೆ ॥19॥

ಶಾಲಗ್ರಾಮಾದಿಗಳಲಿ ಜಗದಾಕಾರನಾಗಿರುವ ಕಾರಣರೂಪ

ಕಾರಣಾಹ್ವಯ ಪ್ರಕೃತಿಯೊಳಗಿ-
ದ್ದಾರಧಿಕ ಹದಿನೆಂಟು ತತ್ವವ
ತಾ ರಚಿಸಿ ತದ್ರೂಪ ತನ್ನಾಮಂಗಳನೆ ಧರಿಸಿ ॥
ನೀರಜಭವಾಂಡವನು ನಿರ್ಮಿಸಿ
ಕಾರುಣಿಕ ಕಾರ್ಯಾಖ್ಯ ರೂಪದಿ
ತೋರುವನು ಸಹಜಾಹಿತಾಚಲಗಳಲಿ ಪ್ರತಿದಿನದಿ ॥20॥

ಜೀವರಂತರ್ಯಾಮಿಯಾದ ಅಂಶರೂಪ

ಜೀವರಂತರ್ಯಾಮಿ ಅಂಶಿ ಕ-
ಳೇವರಗಳೊಳಗಿಂದ್ರಿಯಗಳಲಿ
ತಾ ವಿಹಾರವಗೈವುತನುದಿನ ಅಂಶನಾಮದಲಿ ॥
ಈ ವಿಷಯಗಳನುಂಡು ಸುಖಮಯ
ಈವ ಸುಖ ಸಂಸಾರದುಃಖವ
ದೇವಮಾನವದಾನವರಿಗವಿರತ ಸುಧಾಮಸುಖ ॥21॥

ಕಾಮ್ಯಕರ್ಮ ತ್ಯಜಿಸಿ, ಪ್ರಪಂಚವು ಭಗವಂತನ ಅಧಿಷ್ಠಾನವೆಂದು ಪೂಜಿಸು

ದೇಶದೇಶವ ಸುತ್ತಿ ದೇಹಾ-
ಯಾಸಗೊಳಿಸದೆ ಕಾಮ್ಯಕರ್ಮದು-
ರಾಸೆಗೊಳಗಾಗದಲೆ ಬ್ರಹ್ಮಾದ್ಯಖಿಲ ಚೇತನರು ||
ಭೂ ಸಲಿಲ ಪಾವಕ ಸಮೀರಾ-
ಕಾಶ ಮೊದಲಾದಖಿಳ ತತ್ವ ಪ-
ರೇಶಗಿವಧಿಷ್ಠಾನವೆಂದರಿತರ್ಚಿಸನವರತ ||22||

ಜೀವ-ಜಡಗಳ ಪ್ರಭೇದಗಳು

ಎರಡು ವಿಧದಲಿ ಲೋಕದೊಳು ಜೀ-
ವರುಗಳಿಪ್ಪರು ಸಂತತ ಕ್ಷರಾ-
ಕ್ಷರ ವಿಲಿಂಗ ಸಲಿಂಗ ಸೃಜ್ಯಾಸೃಜ್ಯಭೇದದಲಿ ||
ಕರೆಸುವದು ಜಡಪ್ರಕೃತಿ ಪ್ರಣವಾ-
ಕ್ಷರ ಮಹದಣುಕಾಲನಾಮದಿ
ಹರಿಸಹಿತ ಭೇದಗಳ ಪಂಚಕ ಸ್ಮರಿಸು ಸರ್ವತ್ರ ||23||

ಪಂಚ ಭೇದಗಳು

ಜೀವಜೀವರ ಭೇದ ಜಡಜಡ
ಜೀವಜಡಗಳ ಭೇದ ಪರಮನು
ಜೀವಜಡ ಸುವಿಲಕ್ಷಣನು ಎಂದರಿತು ನಿತ್ಯದಲಿ ॥
ಈ ವಿರಿಂಚಾಂಡದಲಿ ಎಲ್ಲಾ
ಠಾವಿನಲಿ ತಿಳಿದೈದು ಭೇದ ಕ-
ಳೇವರದೊಳರಿತಚ್ಯುತನ ಪದ ಐದು ಶೀಘ್ರದಲಿ ॥24॥

ಕ್ಷರಾಕ್ಷರಪುರುಷರ ಭೇದ

ಆದಿಯಲಿ ಕ್ಷರಾಕ್ಷರಾಖ್ಯ
ದ್ವೇಧ ಅಕ್ಷರದೊಳು ರಮಾಮಧು-
ಸೂದನರು ಕ್ಷರಗಳೊಳು ಪ್ರಕೃತಿಪ್ರಣವಕಾಲಗಳು ॥
ವೇಧಮುಖ್ಯ ತೃಣಾಂತಜೀವರ
ಭೇದಗಳನರಿತೀ ರಹಸ್ಯವ
ಬೋಧಿಸದೆ ಮಂದರಿಗೆ ಸರ್ವತ್ರದಲಿ ಚಿಂತಿಪುದು ॥25॥

ದೀಪದಂತೆ ದೇವರು ಬಹುರೂಪನಾಮದಿಂದ ವ್ಯಾಪಿಸಿ ಜ್ಞಾನಿಗಳಿಗೆ ತೋರುವನು

ದೀಪದಿಂ ದೀಪಗಳು ಪೊರಮ-
ಟ್ಟಾಪಣಾಲಯುಗತ ತಿಮಿರಗಳ
ತಾ ಪರಿಹರಗೈಸಿ ತದ್ಗತ ಪದಾರ್ಥ ತೋರ್ಪಂತೆ ॥
ಸೌಪರಣಿ ವರವಹನ ತಾ ಬಹು-
ರೂಪನಾಮದಿ ಎಲ್ಲ ಕಡೆಯಲಿ
ವ್ಯಾಪಿಸಿದ್ದು ಯಥೇಷ್ಟ ಮಹಿಮೆಯ ತೋರ್ಪ ತಿಳಿಸದಲೆ
॥26॥

ಜೀವನು ದೇವರ ಅನುಪಾಧಿಕಪ್ರತಿಬಿಂಬ

ನಳಿನಮಿತ್ರಗೆ ಇಂದ್ರಧನು ಪ್ರತಿ-
ಫಲಿಸುವಂತೆ ಜಗತ್ತ್ರಯವು ಕಂ-
ಗೊಳಿಪುದನುಪಾಧಿಯಲಿ ಪ್ರತಿಬಿಂಬಾಹ್ವಯದಿ ಹರಿಗೆ ॥
ತಿಳಿಯೆ ತ್ರಿಕಕುಬ್-ಧಾಮನತಿಮಂ-
ಗಳ ಸುರೂಪವ ಸರ್ವ ಠಾವಿಲಿ
ಪೊಳೆವ ಹೃದಯಕೆ ಪ್ರತಿದಿವಸ ಪ್ರಹ್ಲಾದಪೋಷಕನು॥27॥

ಹರಿಭಕ್ತರಿಗೆ ದುರಿತಗಳ ತಾಪವಿಲ್ಲ

ರಸವಿಶೇಷದೊಳತಿವಿಮಲ ಸಿತ-
ವಸನ ತೋಯಿಸಿ ಅಗ್ನಿಯೊಳಗಿಡೆ
ಪಸರಿಸುವುದು ಪ್ರಕಾಶ ನಸುಗುಂದದಲೆ ಸರ್ವತ್ರ ॥
ತ್ರಿಶಿರದೂಷಣವೈರಿ ಭಕ್ತಿಸು-
ರಸದಿ ತೋಯ್ದ ಮಹಾತ್ಮರನು ಬಾ-
ಧಿಸವು ಭವದೊಳಗಿದ್ದರೆಯು ಸರಿ ದುರಿತರಾಶಿಗಳು॥28॥

ಸಮುದ್ರದಲ್ಲಿ ನದಿಗಳಂತೆ, ಭಗವದ್ರೂಪಗಳಲ್ಲಿ ರಮಾರೂಪಗಳಿರುವುದು

ವಾರಿನಿಧಿಯೊಳಗಖಿಳ ನದಿಗಳು
ಬೇರೆ ಬೇರೆ ನಿರಂತರದಲಿ ವಿ-
ಹಾರಗೈವುತ ಪರಮಮೋದದಲಿಪ್ಪ ತೆರನಂತೆ ॥
ಮೂರು ಗುಣಗಳ ಮಾನಿಯೆನಿಸುವ
ಶ್ರೀರಮಾರೂಪಗಳು ಹರಿಯಲಿ
ತೋರುತಿಪ್ಪುವು ಸರ್ವಕಾಲದಿ ಸಮರಹಿತವೆನಿಸಿ ॥29॥

ಗ್ರಂಥದಲ್ಲಿ ಜಗನ್ನಾಥನಿರಲು, ಕೋವಿದರು ಸುಖಿಸುವರು

ಕೋಕನದಸಖನುದಯ ಘೂಕಾ-
ವಲೋಕನಕೆ ಸೊಗಸದಿರೆ ಭಾಸ್ಕರ
ತಾ ಕಳಂಕನೆ ಈ ಕೃತೀಪತಿ ಜಗನ್ನಾಥನಿರೆ ॥
ಸ್ವೀಕರಿಸಿ ಸುಖಬಡಲರಿಯದವಿ-
ವೇಕಿಗಳು ನಿಂದಿಸಿದರೇನಹು-
ದೀ ಕವಿತ್ವವ ಕೇಳಿ ಸುಖಬಡದಿಹರೆ ಕೋವಿದರು !॥30॥

ಸರ್ವವ್ಯಾಪಿಯಾದ ಶ್ರೀಹರಿಯು ತಮೋಯೋಗ್ಯರಿಗೆ ಮೋಹ ಹುಟ್ಟಿಸುವನು

ಚೇತನಾಚೇತನಗಳಲಿ ಗುರು
ಮಾತರಿಶ್ವಾಂತರ್ಗತ ಜಗ-
ನ್ನಾಥವಿಟ್ಠಲ ನಿರಂತರದಿ ವ್ಯಾಪಿಸಿ ತಿಳಿಸಿಕೊಳದೆ ॥
ಕಾತರವ ಪುಟ್ಟಿಸಿ ವಿಷಯದಲಿ
ಯಾತುಧಾನರ ಮೋಹಿಸುವ ನಿ-
ರ್ಭೀತ ನಿತ್ಯಾನಂದಮಯ ನಿರ್ದೋಷ ನಿರವದ್ಯ ॥31॥

॥ ಇಲ್ಲಿಗೆ ಹದಿನಾಕನೆಯ ಪಿತೃಗಣಸಂಧಿ ಮುಗಿಯಿತು ॥

15. ಶ್ವಾಸಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಒಂದು ಘಳಿಗೆಗೆ 360 ಶ್ವಾಸಜಪ ಮಾಡುವ ವಾಯುದೇವರು

ಭಾರತೀಶನು ಘಳಿಗೆಯೊಳು ಮು-
ನ್ನೂರು ಅರವತ್ತುಸಿರುಜಪಗಳ
ತಾ ರಚಿಸುವನು ಸರ್ವಜೀವರೊಳಿದ್ದು ಬೇಸರದೆ ॥
ಕಾರುಣಿಕನವರವರ ಸಾಧನ
ಪೂರೈಸಿ ಭೂ-ಸ್ವರ್ಗ-ನರಕವ
ಸೇರಿಸುವ ಸರ್ವಜ್ಞ ಸಕಲೇಷ್ಟಪ್ರದಾಯಕನು ॥1॥

ಘಂಟೆಗೆ 900 ಶ್ವಾಸಜಪವನ್ನು ಮೂಲೇಶನ ಪಾದಕಮಲದಲ್ಲಿ ಮಾಡುವ ವಾಯುದೇವರು

ತಾಸಿಗೊಂಭೈನೂರು ಶ್ವಾಸೋ-
ಚ್ಛ್ವಾಸಗಳ ನಡೆಸುತಲಿ ಚೇತನ-
ರಾಶಿಯೊಳು ಹಗಲಿರುಳು ಜಾಗ್ರತನಾಗಿ ನಿತ್ಯದಲಿ ॥
ಈ ಸುಮನಸೋತ್ತಂಸ ಲೇಶಾ-
ಯಾಸವಿಲ್ಲದೆ ಪೋಷಿಸುತ ಮೂ-
ಲೇಶನಂಘ್ರಿಸರೋಜಮೂಲದಲಿಪ್ಪ ಕಾಣಿಸದೆ ॥2॥

ನಾಕು ಯಾಮಗಳಲ್ಲಿ 10800 ಶ್ವಾಸಜಪದ ಗಣನೆ

ಅರಿವುದೊಂದ್ಯಾಮದೊಳು ಶ್ವಾಸಗ-
ಳೆರಡುಸಾವಿರದೇಳುನೂರನು
ಶರಸಹಸ್ರದ ಮೇಲೆ ನಾನೂರಹವು ದ್ವಿತಿಯಕ್ಕೆ ॥
ಮರಳಿ ಯಾಮತ್ರಯಕೆ ವಸುಸಾ-
ವಿರದ ಮೇಲ್ಮೂರೆಣಿಕೆಯಲಿ ಹ-
ನ್ನೆರಡುತಾಸಿಗೆ ಹತ್ತುಸಾವಿರದೆಂಟು ನೂರಹವು ॥3॥

ಒಂದು ದಿನಕ್ಕೆ 21600 ಶ್ವಾಸಜಪ

ಒಂದು ದಿನದೊಳಗನಿಲ ಇಪ್ಪ-
ತ್ತೊಂದುಸಾವಿರದಾರುನೂರು ಮು-
ಕುಂದನಾಜ್ಞದಿ ಮಾಡಿ ಮಾಡಿಸಿ ಲೋಕಗಳ ಪೊರೆವ ॥
ನೆಂದು ಪವನನ ಪೊಗಳುತಿರು ಎಂ-
ದೆಂದು ಮರೆಯದೆ ಈ ಮಹಿಮೆ ಸಂ-
ಕ್ರಂದನಾದ್ಯರಿಗುಂಟೆ ನೋಡಲು ಸರ್ವಕಾಲದಲಿ ॥4॥

ಒಂದು ಪಕ್ಷಕ್ಕೆ 324000 ಶ್ವಾಸಜಪ ಮಾಡುವ ಪವಮಾನ

ಮೂರುಲಕ್ಷದ ಮೇಲೆ ವಿಂಶತಿ
ಈರೆರಡುಸಾವಿರವು ಪಕ್ಷಕೆ
ಆರುಲಕ್ಷದ ಮೇಲೆ ನಾಲ್ವತ್ತೆಂಟುಸಾವಿರವು ॥
ಮಾರುತನು ಮಾಸಕೆ ಜಪಿಸಿ ಸಂ-
ಸಾರಸಾಗರದಿಂದ ಸುಜನರ
ಪಾರುಗಾಣಿಸಿ ಸಲಹುವನು ಬಹುಭೋಗಗಳನಿತ್ತು ॥5॥

ಋತುವಿಗೆ 1296000 ಶ್ವಾಸಜಪ, ಅಯನಕ್ಕೆ 388800 ಶ್ವಾಸಜಪಗಳು

ಎರಡು ತಿಂಗಳಿಗಹವು ಋತು ಭೂ-
ಸುರರು ತಿಳಿವದು ಶ್ವಾಸಜಪ ಹ-
ನ್ನೆರಡುಲಕ್ಷದ ಮೇಲೆ ತೊಂಭತ್ತಾರುಸಾಹಸ್ರ ॥
ಕರೆಸುವದು ಅಯನಾಹ್ವಯದೊಲರೆ
ವರುಷ ಮೂವತ್ತೆಂಟುಲಕ್ಷೋ-
ಪರಿ ತಿಳಿವದೆಂಭತ್ತೆಂಟುಸಹಸ್ರ ಕೋವಿದರು ॥6॥

ಒಂದು ವರ್ಷಕ್ಕೆ 77,76,000 ಶ್ವಾಸಜಪಗಳು

ವರುಷಕಿದರಿಮ್ಮಡಿ ಜಪಂಗಳ
ಗುರುವರ್ಯ ತಾ ಮಾಡಿ ಮಾಡಿಸಿ
ದುರಿತಗಳ ಪರಿಹರಿಸುವನು ಚಿಂತಿಸುವ ಸಜ್ಜನರ ॥
ಸುರವಿರೋಧಿಗಳೊಳಗೆ ನೆಲೆಸಿ-
ದ್ದರವಿದೂರ ತಮೋಧಿಕಾರಿಗ-
ಳಿರವರಿತು ಸೋಽಹಮುಪಾಸನೆ ಮಾಳ್ಪನವರಂತೆ ॥7॥

ಅನಿಲದೇವನ ಹಂಸೋಪಾಸನೆಯನ್ನು ಅರಿಯದೆ ಮಾಡುವ ಕರ್ಮ ನಿಷ್ಫಲ

ಇನಿತುಪಾಸನೆ ಸರ್ವಜೀವರೊ-
ಳನಿಲದೇವನು ಮಾಡುತಿರೆ ಚಿಂ-
ತನೆಯ ಮಾಡದೆ ಕಂಡ ನೀರೊಳು ಮುಳುಗಿ ನಿತ್ಯದಲಿ ॥
ಮನೆಯೊಳಗೆ ಕೃಷ್ಣಾಜಿನಾದ್ಯಾ-
ಸನದಿ ಕುಳಿತು ವಿಶಿಷ್ಟ ಬಹು ಸ-
ಜ್ಜನನೆನಿಸಿ ಜಪಮಣಿಗಳೆಣಿಸಿದರೇನು ಬೇಸರದೆ ॥8॥

ಅನ್ನಪಾನಾದಿಗಳ ಸೇವನೆ ಹಾಗೂ ದಾನಗಳಲ್ಲಿ ಲಯಚಿಂತನೆ

ಓದನೋದಕ ಎರಡು ತೇಜದೊ-
ಳೈದುವುವು ಲಯ, ತದಭಿಮಾನಿಗ-
ಳಾದ ಶಿವಪವನರು ರಮಾಧೀನತ್ವ ಐದುವರು ॥
ಈ ದಿವಿಜರೊಡಗೂಡಿ ಶ್ರೀ ಮಧು-
ಸೂದನನ ಐದುವಳು ಎಂದರಿ-
ದಾದರದಲನ್ನೋದಕವ ಕೊಡುತುಣುತ ಸುಖಿಸುತಿರು॥9॥

ಭಕ್ತರ ಅಲ್ಪಕರ್ಮ ಸಮರ್ಪಣೆಗೆ ಮುಕ್ತಿಯನ್ನೆ ನೀಡುವ ಕರುಣಾಸಂಪನ್ನ

ಜಾಲಿತೊಪ್ಪಲಜಾವಿಗಳು ಮೆ-
ದ್ದಾಲಯದಿ ಸ್ವೇಚ್ಛಾನುಸಾರದಿ
ಪಾಲಗರೆವಂದದಲಿ ಲಕುಮೀರಮಣ ತನ್ನವರ ॥
ಕೀಳುಕರ್ಮವ ಸ್ವೀಕರಿಸಿ ತ-
ನ್ನಾಲಯದೊಳಿಟ್ಟವರ ಪೊರೆವ ಕೃ-
ಪಾಳು ಕಾಮದ ಕೈರವದಳಶ್ಯಾಮ ಶ್ರೀರಾಮ ॥10॥

ಅನ್ನೋದಕಾಗ್ನಿಯಲ್ಲಿ ದೇವತಾಂತರ್ಯಾಮಿ ಭಗವದ್ರೂಪಗಳು

ಶಶಿ ದಿವಾಕರ ಪಾವಕರೊಳಿಹ
ಅಸಿತ ಸಿತ ಲೋಹಿತಗಳಲಿ ಶಿವ
ಶ್ವಸನ ಭಾರ್ಗವಿ ಮೂವರೊಳು ಶ್ರೀಕೃಷ್ಣ ಹಯವದನ ॥
ವಸುಧಿಪಾರ್ದನ ತ್ರಿವೃತ್ ಎನಿಸಿ
ವಸುಮತಿಯೊಳನ್ನೋದಕಾನಲ
ಪೆಸರಿನಿಂದಲಿ ಸರ್ವಜೀವರ ಸಲಹುವನು ಕರುಣಿ ॥11॥

"ಹರಿಯೇ ಸ್ವತಂತ್ರ ಕರ್ತೃ" ಎಂಬ ಅರಿವಿರಲಿ

ದೀಪ ಕರದಲಿ ಪಿಡಿದು ಕಾಣದೆ
ಕೂಪದೊಳು ಬಿದ್ದಂತೆ ವೇದಮ-
ಹೋಪನಿಷದರ್ಥಗಳ ನಿತ್ಯದಿ ಪೇಳುವವರೆಲ್ಲ ॥
ಶ್ರೀಪವನಮುಖವಿನುತನಮಲ ಸು-
ರೂಪಗಳ ವ್ಯಾಪಾರ ತಿಳಿಯದೆ
ಪಾಪಪುಣ್ಯಕೆ ಜೀವ ಕರ್ತೃವಕರ್ತೃ ಹರಿಯೆಂಬ ॥12॥

ಮನೋ ವಾಙ್-ನಿಯಾಮಕ ಮುಖ್ಯಪ್ರಾಣದೇವರು

ಅನಿಲದೇವನು ವಾಙ್ಮನೋಮಯ-
ನೆನಿಸಿ ಪಾವಕ ವರುಣ ಸಂಕ್ರಂ-
ದನಮುಖಾದ್ಯರೊಳಿದ್ದು ಭಗವದ್ರೂಪಗುಣಗಳನು ॥
ನೆನೆನೆನೆದು ಉಚ್ಚರಿಸುತಲಿ ನ-
ಮ್ಮನು ಸದಾ ಸಂತೈಸುವನು ಸ-
ನ್ಮುನಿಗಣಾರಾಧಿತಪದಾಂಬುಜ ಗೋಜ ಸುರರಾಜ ॥13॥

ನರಸಿಂಹ ಸಂಕರ್ಷಣ
ವಾಙ್ಮನೋಮಯರಲ್ಲಿದ್ದು ಸಜ್ಜನರ ಸಲಹುವ

ಪಾದವೆನಿಪವು ವಾಙ್ಮನೋಮಯ
ಪಾದರೂಪದ್ವಯಗಳೊಳು ಪ್ರ-
ಹ್ಲಾದಪೋಷಕ ಸಂಕರುಷಣಾಹ್ವಯದಿ ನೆಲೆಸಿದ್ದು ॥
ವೇದಶಾಸ್ತ್ರಪುರಾಣಗಳ ಸಂ-
ವಾದರೂಪದಿ ಮನನಗೈವುತ
ಮೋದಮಯ ಸುಖವಿತ್ತು ಸಲಹುವ ಸರ್ವಸಜ್ಜನರ
॥14॥

ಗಾಳಿಯ ಗುಣವನ್ನು ಹೊಂದುವ ಸಜ್ಜನರು

ಗಂಧವಹ ದಶದಿಶಗಳೊಳಗರ-
ವಿಂದಸೌರಭ ಪಸರಿಸುತ ಘ್ರಾ-
ಣೇಂದ್ರಿಯಗಳಿಗೆ ಸುಖವನೀವುತ ಸಂಚರಿಸುವಂತೆ ॥
ಇಂದಿರೇಶನ ಸುಗುಣಗಳ ದೈ-
ನಂದಿನದಿ ತುತಿಸುತನುಮೋದಿಸು-
ತಂಧಬಧಿರಸುಮೂಕನಂತಿರು ಮಂದಜನರೊಡನೆ ॥15॥

ವೈಕುಂಠದ ಪೂರ್ವದ್ವಾರದಲ್ಲಿ ಮಾನುಷ್ಯೋತ್ತಮರಿಂದ ಸಂಜ್ಞಾಸೂರ್ಯಾಂತರ್ಗತ ಪ್ರಾಣಸ್ಥ ಲಕ್ಷ್ಮೀನಾರಾಯಣೋಪಾಸನೆ

ಶ್ರೀರಮಣನರಮನೆಯ ಪೂರ್ವ-
ದ್ವಾರದಲ್ಲಿಹ ಸಂಜ್ಞಸೂರ್ಯಗ
ಭಾರತೀಪತಿ ಪ್ರಾಣನೊಳಗಿಹ ಲಕುಮಿನಾರಾಯಣನ ||
ಸೇರಿ ಮನುಜೋತ್ತಮರು ಸರ್ವಶ-
ರೀರಗತ ನಾರಾಯಣನ ಅವ-
ತಾರಗುಣಗಳ ತುತಿಸುತಲಿ ಮೋದಿಪರು ಮುಕ್ತಿಯಲಿ ||16||

ವೈಕುಂಠದ ದಕ್ಷಿಣದ್ವಾರದಲ್ಲಿ ಪಿತೃಗಣದಿಂದ ಶಶಿರೋಹಿಣಿ ಅಂತರ್ಗತ ವ್ಯಾನಸ್ಥ ಕೃತಿಪ್ರದ್ಯುನೋಪಾಸನೆ

ಪ್ರಣವಪ್ರತಿಪಾದ್ಯನ ಪುರದ ದ-
ಕ್ಷಿಣ ಕವಾಟದಲಿಪ್ಪ ಶಶಿರೋ-
ಹಿಣಿಗತ ವ್ಯಾನಸ್ಥ ಕೃತಿಪ್ರದ್ಯುಮ್ನ ರೂಪವನು ||
ಗುಣಗಳನು ಸಂತುತಿಸುತಲಿ ಪಿತೃ-
ಗಣ ಗದಾಧರನತಿವಿಮಲ ಪ-
ಟ್ಟಣದೊಳಗೆ ಸ್ವೇಚ್ಛಾನುಸಾರದಿ ಸಂಚರಿಸುತಿಹರು ||17

ವೈಕುಂಠದ ಪಶ್ಚಿಮದ್ವಾರದಲ್ಲಿ ಋಷಿಗಳಿಂದ ಅಗ್ನಿಸ್ವಾಹಾಂತರ್ಗತ ಅಪಾನಸ್ಥ ಸಂಕರ್ಷಣನ ಚಿಂತ್ನೆ

ಅಮಿತವಿಕ್ರಮನಾಲಯದ ಪ-
ಶ್ಚಿಮಕವಾಟದಿ ಸತಿಸಹಿತ ಸಂ-
ಭ್ರಮದಿ ಭಗವದ್ಗುಣಗಳನೆ ಪೊಗಳುತಲಿ ಮೋದಿಸುವ ||
ಸುಮನಸಾಸ್ಯನೊಳಿಪ್ಪಪಾನಗ
ದಮನ ಸಂಕರುಷಣನ ನಿಜಹೃ-
ತ್ಕಮಲದೊಳು ಧೇನಿಸುವ ಋಷಿಗಣ ಐದಿ ಸುಖಿಸುವರು
||18||

ವೈಕುಂಠದ ಉತ್ತರ ದ್ವಾರದಲ್ಲಿ ಗಂಧರ್ವರಿಂದ ಶಚೀ ಇಂದ್ರಾಂತರ್ಗತ ಸಮಾನಸ್ಥ ಶಾಂತಿ ಅನಿರುದ್ಧನ ಸ್ಮರಣೆ

ಸ್ವರಮಣನ ಗುಣರೂಪ ಸಪ್ತ-
ಸ್ವರಗಳಿಂದಲಿ ಪಾಡುತಿಹ ತುಂ-
ಬುರನೆ ಮೊದಲಾದಖಿಳ ಗಂಧರ್ವರು ರಮಾಪತಿಯ ||
ಪುರದ ಉತ್ತರಬಾಗಿಲಾಧಿಪ
ಸುರಪಶಚಿಗಸಮಾನವಾಯುಗ
ಹರಿನ್ಮಣಿನಿಭ ಶಾಂತಿಪತಿಯನಿರುದ್ಧನೈದುವರು ||19||

ಊರ್ಧ್ವದ್ವಾರದಲ್ಲಿ ಗರುಡ, ಶೇಷ, ಇಂದ್ರ ಪುಷ್ಕರಾದಿ ದೇವತೆಗಳು ಉದಾನಸ್ಥ ವಾಸುದೇವನ ಕೊಂಡಾಡುವರು

ಗರುಡಶೇಷಮರೇಂದ್ರಮುಖ ಪು-
ಷ್ಕರನೆ ಕಡೆಯಾಗಿಪ್ಪಖಿಳ ನಿ-
ರ್ಜರರು ಊರ್ಧ್ವದ್ವಾರಗತ ಭಾರತಿ ಉದಾನದೊಳು ॥
ಮೆರೆವ ಮಾಯಾವಾಸುದೇವನ
ಪರಮಮಂಗಳವಯವಗಳ ಮಂ-
ದಿರವನೈದಿ ಸದಾ ಮುಕುಂದನ ನೋಡಿ ಸುಖಿಸುವರು
॥20॥

ಪಂಚದ್ವಾರಗಳ ಪಾಲಕರ ಅಂತರ್ಗತ ಪ್ರಾಣದೇವರಂತರ್ಗತ ಭಗವದ್ರೂಪಗಳ ಸ್ಮರಣೆ

ದ್ವಾರಪಂಚಕಪಾಲಕರೊಳಿಹ
ಭಾರತೀಪ್ರಾಣಾಂತರಾತ್ಮಕ
ಮಾರಮಣನೈರೂಪ ತತ್ತದ್-ದ್ವಾರದಲಿ ಬಪ್ಪ ॥
ಮೂರೆರಡುವಿಧ ಮುಕ್ತಿಯೋಗ್ಯರ
ತಾರತಮ್ಯವನರಿತವರ ಕಂ-
ಸಾರಿ ಸಂಸಾರಾಬ್ಧಿ ದಾಟಿಸಿ ಮುಕ್ತರನು ಮಾಳ್ಪ

ಮಧ್ವಶಾಸ್ತ್ರದ ಅಂತರ್ಯ ತಿಳಿಯದೆ ನಾಮಮುದ್ರೆಗಳ ಧರಿಸಿ ಏನು ಪ್ರಯೋಜನ ?

ಬೆಳಗಿದ್ದೂಜಿಯು ನೋಳ್ಪರಿಗೆ ಥಳ-
ಥಳಿಸುತಲಿ ಕಂಗೊಳಿಸುವಂದದಿ
ತೊಳೆದು ದೇಹವ ನಾಮ ಮುದ್ರೆಗಳಿಂದಲಂಕರಿಸಿ ॥
ಒಲಿಸಿ ನಿತ್ಯ ಕುತರ್ಕ ಯುಕ್ತಿಗ
ಳಲವಬೋಧರ ಶಾಸ್ತ್ರಮರ್ಮವ
ತಿಳಿಯದಿಹ ನರ ಬರಿದೆ ಇದರೊಳು ಶಂಕಿಸಿದರೇನು
॥22॥

ಮೂಲರೂಪಿಯಾದ ಪದ್ಮನಾಭನೊಳು ವ್ಯಕ್ತಾವ್ಯಕ್ತ ಅವತಾರ ರೂಪಗಳು

ಉದಧಿಯೊಳಗೂರ್ಮಿಗಳು ತೋರ್ಪಂ-
ದದಲಿ ಹಂಸೋದ್ಗೀಥಹರಿಹಯ-
ವದನ ಕೃಷ್ಣಾದ್ಯಮಿತನವತಾರಗಳು ನಿತ್ಯದಲಿ ॥
ಪದುಮನಾಭನೊಳಿರುತಿಹವು ಸ-
ರ್ವದ ಸಮಸ್ತಪ್ರಾಣಿಗಳ ಚಿದ್-
ಹೃದಯಗತ ರೂಪಗಳನವ್ಯವಧಾನದಲಿ ಬಿಡದೆ ॥23॥

ಜಗದೀಶನುದರದೊಳು ಅಡಗಿರುವ ಪ್ರತಿಬಿಂಬಾತ್ಮಕ ತ್ರಿಜಗತ್

ಶರಧಿಯೊಳು ಮಕರಾದಿಜೀವರು
ಇರುಳುಹಗಲೇಕಪ್ರಕಾರದಿ
ಚರಿಸುತನು ಮೋದಿಸುತ ಇಪ್ಪಂದದಿ ಜಗತ್ರಯವು ॥
ಇರುತಿಹುವು ಜಗದೀಶನುದರದಿ
ಕರೆಸುವುದು ಪ್ರತಿಬಿಂಬನಾಮದಿ
ಧರಿಸಿಹುದು ಹರಿನಾಮರೂಪಂಗಳನು ಅನವರತ ॥24॥

ಜೀವರನ್ನು ಮಕ್ಕಳಂತೆ ರಕ್ಷಿಸುವ ಜಗದುದರ

ಜನನಿ ಸೌಷ್ಠಪದಾರ್ಥಗಳ ಭೋ-
ಜನವ ಮಾಡಲು ಗರ್ಭಗತ ಶಿಶು
ದಿನದಿನದಲಭಿವೃದ್ಧಿ ಐದುವ ತೆರದಿ ಜೀವರಿಗೆ ॥
ವನಜನಾಭನು ಸರ್ವರಸ ಉಂ-
ಡುಣಿಸಿ ಸಂರಕ್ಷಿಸುವ ಜಾಹ್ನವಿ-
ಜನಕ ಜನ್ಮಾದ್ಯಖಿಲದೋಷವಿದೂರ ಗಂಭೀರ ॥25॥

ಲೌಕಿಕಸುಖಕೆ ದಾಸನಾಗದೆ, ಹರಿಯ ದಾಸನಾದ
ತನ್ನನ್ನೇ ಕೊಡುವ ಕೃಪಾಳು

ಆಸೆಗೊಳಗಾದವನು ಜನರಿಗೆ
ದಾಸನೆನಿಸುವನಾಸೆಯನು ನಿಜ-
ದಾಸಿಗೈದಿಹ ಪುಂಸರೆಲ್ಲರು ದಾಸರೆನಿಸುವರು ॥
ಶ್ರೀಶನಂಘ್ರಿಸರೋಜಯುಗಳ ನಿ-
ರಾಸೆಯಿಂದಲಿ ಭಜಿಸೆ ಒಲಿದು ರ-
ಮಾಸಹಿತ ತನ್ನನೆ ಕೊಡುವ ಕರುಣಾಸಮುದ್ರ ಹರಿ॥26॥

ಅನಂತಗುಣಪೂರ್ಣನನ್ನು ಏಕಗುಣದಿಂದ
ಉಪಾಸನೆ ಮಾಡಿದರೂ ಕೃತಾರ್ಥನಾಗುವ

ದ್ಯುನದಿಯಾದ್ಯಂತವನು ಕಾಣದೆ
ಮನುಜ ಏಕತ್ರದಲಿ ತಾ ಮ-
ಜ್ಜನವ ಗೈಯೆ ಸಮಸ್ತದೋಷದಿ ಮುಕ್ತನಹ ತೆರದಿ ॥
ಅನಘನಮಲಾನಂತನಂತ ಸು-
ಗುಣಗಳೊಳಗೊಂದೇ ಗುಣೋಪಾ-
ಸನವ ಗೈವ ಮಹಾತ್ಮ ಧನ್ಯ ಕೃತಾರ್ಥನೆನಿಸುವನು ॥27॥

ವಸ್ತ್ರಧಾರಣೆಯಲ್ಲಿ ಚಿಂತಿಸಬೇಕಾದ ಭಗವದ್ರೂಪಗಳು

ವಾಸುದೇವನು ಕರೆಸುವನು ಕಾ-
ರ್ಪಾಸನಾಮದಿ ಸಂಕರುಷಣನು
ವಾಸವಾಗಿಹ ತೂಲದೊಳು ತಂತುಗನು ಪ್ರದ್ಯುಮ್ನ ॥
ವಾಸರೂಪನಿರುದ್ಧದೇವನು
ಭೂಷಣನು ತಾನಾಗಿ ತೋರ್ಪ ಪ-
ರೇಶ ನಾರಾಯಣನು ಸರ್ವದ ಮಾನ್ಯ ಮಾನದನು ॥28॥

ವಸ್ತ್ರರೂಪದಲ್ಲಿ ಪ್ರಾಣಸ್ಥಜಗನ್ನಾಥವಿಟ್ಠಲ ರಕ್ಷಿಸುವನು

ಲಲನೆಯಿಂದೊಡಗೂಡಿ ಚೇಲಗ-
ಳೊಳಗೆ ಓತಪ್ರೋತರೂಪದಿ
ನೆಲೆಸಿಹನು ಚತುರಾತ್ಮಕ ಜಗನ್ನಾಥವಿಟ್ಠಲನು ॥
ಛಳಿ ಬಿಸಿಲು ಮಳೆ ಗಾಳಿಯಿಂದರ-
ಘಳಿಗೆ ಬಿಡದಲೆ ಕಾವನೆಂದರಿ-
ದಿಳೆಯೊಳರ್ಚಿಸುವರು ಸದಾ ಸರ್ವಾಂತರಾತ್ಮಕನ ॥29॥

॥ ಇಲ್ಲಿಗೆ ಹದಿನೈದನೆಯ ಶ್ವಾಸಸಂಧಿ ಮುಗಿಯಿತು ॥

16. ದತ್ತಸ್ವಾತಂತ್ರ್ಯಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಶ್ರೀಹರಿಯು 400 ಗುಣದಲ್ಲಿ,
ತನ್ನಲ್ಲೆ $132^3/_4$ ಇಟ್ಟು, ಲಕ್ಷ್ಮೀಗೆ $67^1/_4$ ಇತ್ತ

ಕಾರುಣಿಕ ಹರಿ ತನ್ನೊಳಿಪ್ಪ -
ಪಾರ ಸ್ವಾತಂತ್ರ್ಯ ಗುಣದಿ ನಾ-
ನೂರು ತೆಗೆದು ಸಪಾದ ಆರೊಂದಧಿಕ ಅರುವತ್ತು ||
ನಾರಿಗಿತ್ತು ದ್ವಿಷೋಡಶಾಧಿಕ
ನೂರು ಪಾದತ್ರಯವ ತನ್ನ ಶ-
ರೀರದೊಳಗೀಪರಿ ವಿಭಾಗವ ಮಾಡ್ದ ತ್ರಿಪದಾಹ್ವ ||1||

ಬ್ರಹ್ಮ-52, ವಾಯು-48,ಶಿವ-20, ಇಂದ್ರ-15, ತಾತ್ವಿಕ ದೇವತೆ -10, ಇತರಜೀವರಲಿ-10 ಭಾಗಗಳು

ಸತ್ಯಲೋಕಾಧಿಪನೊಳಗ್ಗೆ ಐ-
ವತ್ತೆರಡು ಪವಮಾನನೊಳು ನಾ-
ಲ್ವತ್ತು ಮೇಲೆಂಟಧಿಕ ಶಿವನೊಳಗಿಟ್ಟನಿಪ್ಪತ್ತು ॥
ಚಿತ್ತಜೇಂದ್ರರೊಳೈದಧಿಕದಶ
ತತ್ತ್ವಮಾನಿಗಳೆನಿಪ ಸುರರೊಳು
ಹತ್ತು ಈರೈದಖಿಳಜೀವರೊಳಿಟ್ಟ ನಿರವದ್ಯ ॥2॥

ಕಲ್ಯಾದಿ ದಾನವರಲ್ಲಿ 45 ಭಾಗಗಳು

ಕಲಿ ಮೊದಲುಗೊಂಡಖಿಳ ದಾನವ-
ರೊಳಗೆ ನಾಲ್ವತ್ತೈದು ಈ ಪರಿ
ತಿಳಿದುಪಾಸನೆ ಮಾಡು ಮರೆಯದೆ ಪರಮಭಕುತಿಯಲಿ॥
ಇಳೆಯೊಳಗೆ ಸಂಚರಿಸು ಲಕುಮೀ-
ನಿಲಯನಾಳಾಳೆಂದು ಸರ್ವ-
ಸ್ಥಳಗಳಲಿ ಸಂತೈಸುತಿಪ್ಪನು ಗೆಳೆಯನಂದದಲಿ ॥3

ಜೀವಕರ್ತೃತ್ವ ಭಗವದಧೀನ

ಅವನಿಪ ಸ್ವಾಮಿತ್ವ ಧರ್ಮವ
ಸ್ವವಶಮಾತ್ಯರಿಗಿತ್ತು ತಾ ಮ-
ತ್ತವರ ಮುಖದಲಿ ರಾಜಕಾರ್ಯವ ಮಾಡಿಸುವ ತೆರದಿ||
ಕವಿಭಿರೀಡಿತ ತನ್ನ ಕಳೆಗಳ
ದಿವಿಜ ದಾನವ ಮಾನವರೊಳಿ-
ಟ್ಟವಿರತ ಗುಣತ್ರಯಜ ಕರ್ಮವ ಮಾಡಿ ಮಾಡಿಸುವ
||4||

ಅಯೋಗ್ಯರ ಪುಣ್ಯವನ್ನು ದೇವತಾದಿಭಕ್ತರಿಗೆ ನೀಡುವನು

ಪುಣ್ಯಪಾಪಗಳೀ ತೆರದಿ ಕಾ-
ರುಣ್ಯಸಾಗರ ದೇವದಾನವ
ಮಾನವರೊಳಿಟ್ಟವರ ಫಲವ್ಯತ್ಯಾಸವನೆ ಮಾಡಿ ||
ಬನ್ನಬಡಿಸುವ ಭಕ್ತಿಹೀನರ
ಸನ್ನುತ ಸುಕರ್ಮಗಳ ತೆಗೆದು ಪ್ರ-
ಪನ್ನರಿಗೆ ಕೊಟ್ಟವರ ಸುಖಬಡಿಸುವನು ಸುಭುಜಾಹ್ವ||5||

ದೈತ್ಯರಿಗೆ ವಿಷಯಭೋಗಸುಖ ನೀಡುವ ಕ್ರಮ

ಮಾಣಿಕವ ಕೊಂಡಂಗಡಿಯೊಳಜಿ-
ವಾನ ಕೊಟ್ಟಾ ಪುರುಷನ ಸಮಾ-
ಧಾನ ಮಾಡುವ ತೆರದಿ ದೈತ್ಯರು ನಿತ್ಯದಲಿ ಮಾಳ್ಪ ॥
ದಾನಯಜ್ಞಾದಿಗಳ ಫಲ ಯಜ-
ಮಾನ ತಾನಪಹರಿಸಿ ಅಸಮೀ-
ಚೀನ ಸುಖಗಳ ಕೊಟ್ಟು ಅಸುರರ ಮತ್ತರನು ಮಾಳ್ಪ॥6॥

ಭಕ್ತರಿಗೆ ಜ್ಞಾನ ಭಕ್ತ್ಯಾದಿಗಳು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿ ಆಗುವುದು

ಏಣಲಾಂಛನನಮಲಕಿರಣ ಕ್ರ-
ಮೇಣ ವೃದ್ಧಿಯನೈದಿ ಲೋಗರ
ಕಾಣಗೊಡದಿಹ ಕತ್ತಲೆಯ ಭಂಗಿಸುವ ತೆರದಂತೆ ॥
ವೈನತೇಯಾಂಸಗನ ಮೂರ್ತಿ
ಧ್ಯಾನವುಳ್ಳ ಮಹಾತ್ಮರಿಗೆ ಸು-
ಜ್ಞಾನಭಕ್ತ್ಯಾದಿಗಳು ವರ್ಧಿಸಿ ಸುಖವ ಕೊಡುತಿಹವು ॥7॥

ದ್ವಂದ್ವಕರ್ಮ ಸಮರ್ಪಿಸಿ ರಕ್ಷಿತನಾಗು

ಜನಪನರಿಕೆಯ ಚೋರ ಪೊಳಲೊಳು
ಧನವ ಕದ್ದೊಯ್ದೀಯಲವನವ-
ಗುಣಗಳೆಣಿಸದೆ ಪೊರೆವ ಕೊಡದಿರೆ ಶಿಕ್ಷಿಸುವ ತೆರದಿ ॥
ಅನುಚಿತೋಚಿತಕರ್ಮ ಕೃಷ್ಣಾ-
ರ್ಪಣವೆನಲು ಕೈಗೊಂಡು ತನ್ನರ-
ಮನೆಯೊಳಿಟ್ಟಾನಂದಬಡಿಸುವ ಮಾಧವಾನತರ ॥8॥

ಅನ್ನದ, ಅನ್ನಾದ, ಅನ್ನನಾಮಕನೇ ದ್ವಂದ್ವಕರ್ಮಪ್ರೇರಕ

ಅನ್ನದನ್ನಾದನ್ನನಾಮಕ
ಮುನ್ನೆ ಪೇಳ್ದ ಪ್ರಕಾರ ಜೀವರೊ-
ಳನ್ನರೂಪ ಪ್ರವೇಶಗೈದವರವರ ವ್ಯಾಪಾರ ॥
ಬನ್ನಬಡದಲೆ ಮಾಡಿ ಮಾಡಿಸಿ
ಧನ್ಯರಿವರಹುದೆಂದೆನಿಸಿ ತ್ರೈ-
ಗುಣ್ಯವರ್ಜಿತ ತತ್ತದಾಹ್ವಯನಾಗಿ ಕರೆಸುವನು ॥9॥

ಸತ್ಕುಲಜರ ಕುಕರ್ಮವ ಲೆಕ್ಕಿಸದೆ ಪುರುಷಾರ್ಥಗಳ ಕೊಡುವ

ಸಲಿಲಬಿಂದು ಪಯೋಬ್ಧಿಯೊಳು ಬೀ-
ಳಲು ವಿಕಾರವನೈದಬಲ್ಲುದೆ
ಜಲವು ತದ್ರೂಪವನೆ ಐದುವುದೆಲ್ಲ ಕಾಲದಲಿ ॥
ಕಲಿಮಲಾಪಹನರ್ಚಿಸುವ ಸ-
ತ್ಕುಲಜರ ಕುಕರ್ಮಗಳು ತಾನಿ-
ಷ್ಕಲುಷಕರ್ಮಗಳಾಗಿ ಪುರುಷಾರ್ಥಗಳ ಕೊಡುತಿಹವು
॥10॥

"ನಿನ್ನ ಪಾದವೇ ಗತಿ'' ಎಂಬುವರಿಗೆ ಪ್ರಕಟನಾಗುವ

ಮೊಗದೊಳಗೆ ಮೊಗವಿಟ್ಟು ಮುದ್ದಿಸಿ
ಮಗುವಿನಂ ಬಿಗಿದಪ್ಪಿ ಸ್ನೇಹದಿ
ತೆಗೆದು ತನ್ನ ಸ್ತನಗಳುಣಿಸುವ ಜನನಿಯಂದದಲಿ ॥
ಅಗಣಿತಾತ್ಮನು ತನ್ನ ಪಾದಾ-
ಬ್ಜಗಳ ಧೇನಿಪ ಭಕ್ತಜನರಿಗೆ
ಪ್ರಘಟಕನು ತಾನಾಗಿ ಸೌಖ್ಯಗಳೀವ ಸರ್ವತ್ರ ॥11॥

ಸೃಷ್ಟಿಸಿದವರನ್ನು ಯೋಗ್ಯತಾನುಸಾರ ಸಲಹುವ

ತೋಟಿಗನು ಭೂಮಿಯೊಳು ಬೀಜವ
ನಾಟಬೇಕೆಂದೆನುತ ಹಿತದಲಿ
ಮೋಟೆಯಿಂ ನೀರೆತ್ತಿ ಸಸಿಗಳ ಸಂತೈಸುವಂತೆ ॥
ಪಾಟುಬಡದಲೆ ಜಗದಿ ಜೀವರ
ಘೋಟಕಾಸ್ಯನು ಸೃಜಿಸಿ ಯೋಗ್ಯತೆ
ದಾಟಗೊಡದಲೆ ಸಲಹುತಿಪ್ಪನು ಸರ್ವಕಾಲದಲಿ ॥12॥

ಅನ್ಯದೇವತಾರಾಧನೆ ಮಾಡದೆ ಬಿಂಬೋಪಾಸನೆ ಮಾಡು

ಭೂಮಿಯೊಳು ಜಲವಿರೆ ತೃಷಾರ್ತನು
ತಾ ಮರೆದು ಮೊಗವೆತ್ತಿ ಎಣ್ದೆಸೆ
ವ್ಯೋಮಮಂಡಲದೊಳಗೆ ಕಾಣದೆ ಮಿಡುಕುವಂದದಲಿ ॥
ಶ್ರೀಮನೋರಮ ಸರ್ವರಂತ-
ರ್ಯಾಮಿಯಾಗಿರೆ ತಿಳಿಯದನುದಿನ
ಭ್ರಾಮಕರು ಭಜಿಸುವರು ಭಕುತಿಯಲನ್ಯದೇವತೆಯ
॥13॥

ರಕ್ಕಸಾರಿಯ ಭಜನೆಯಿಂದ ದೊರಕುವ ಮುಖ್ಯ, ಮುಖ್ಯಾಮುಖ್ಯ, ಅಮುಖ್ಯ ಫಲಗಳು

ಮುಖ್ಯಫಲ ವೈಕುಂಠ ಮುಖ್ಯಾ-
ಮುಖ್ಯಫಲ ಮಹರಾದಿಲೋಕಾ-
ಮುಖ್ಯಫಲ ವೈಷಯಿಕವೆಂದರಿದತಿಭಕುತಿಯಿಂದ ॥
ರಕ್ಕಸಾರಿಯ ಭಜಿಸುತಲೆ ನಿ-
ರ್ದುಃಖಿನಾಗು ನಿರಂತರದಿ ಮೊರೆ
ಪೊಕ್ಕವರ ಬಿಡ ಭಕ್ತವತ್ಸಲ ಭಾರತೀಶಪಿತಾ ॥14॥

ಸಜ್ಜನರಿಗೆ ನೀಡುವ ವಿಷಯ ಸುಖವು ಮೋಕ್ಷಸುಖಕ್ಕಾಗಿ

ವ್ಯಾಧಿಯಿಂ ಪೀಡಿತ ಶಿಶುವಿಗೆ ಗು-
ಡೋದಕವನೆರದದಕೆ ಔಷಧ
ತೇದು ಕುಡಿಸುವ ತಾಯಿಯೋಪಾದಿಯಲಿ ಸರ್ವಜ್ಞ ॥
ಬಾದರಾಯಣ ಭಕ್ತಜನಕೆ ಪ್ರ-
ಸಾದರೂಪಕನಾಗಿ ಭಾಗವ-
ತಾದಿಯಲಿ ಪೇಳಿದರು ಧರ್ಮಾರ್ಥಗಳೆ ಫಲವೆಂದು
॥1

ದೂರದ ಬೆಟ್ಟ ಕಣ್ಣಿಗೆ ನುಣುಪು

ದೂರದಲ್ಲಿಹ ಪರ್ವತ ಘನಾ-
ಕಾರ ತೋರ್ಪುದು ನೋಳ್ಪ ಜನರಿಗೆ
ಸಾರೆಗೈಯಲು ಸರ್ಪವ್ಯಾಘ್ರಗಳಿಂದ ಭಯವಿಹುದು ॥
ಘೋರತರ ಸಂಸಾರಸೌಖ್ಯಾ-
ಸಾರತರವೆಂದರಿದು ನಿತ್ಯ ರ-
ಮಾರಮಣನಾರಾಧಿಸುವರದರಿಂದ ಬಲ್ಲವರು ॥16॥

ಅಹಂಕಾರದಿಂದ ಮಾಡಿದ ಕರ್ಮಗಳು ಸೋರಿಹೋಗುತ್ತದೆ

ಕೆಸರಘಟಗಳ ಮಾಡಿ ಬೇಸಿಗೆ
ಬಿಸಿಲೊಳಿಟ್ಟೊಣಗಿಸಿದರದು ಘನ-
ರಸವ ತುಂಬಲುಬಹುದೆ ಸರ್ವಸ್ವತಂತ್ರ ತಾನೆಂಬ ॥
ಪಶುಪನರನೇನೇನು ಮಾಳ್ಪಾ
ನಶನದಾನಸ್ನಾನಕರ್ಮಗ-
ಳೊಸರಿ ಪೋಪುವು ಬರಿದೆ ದೇಹಾಯಾಸವನೆ ಕೊಟ್ಟು
॥17॥

ಬಾಹ್ಯ ಹಾಗೂ ಅಂತರ ದೀಕ್ಷೆಗಳು

ಎರಡು ದೀಕ್ಷೆಗಳಿಹವು ಬಾಹ್ಯಾಂ-
ತರವೆನಿಪ ನಾಮದಲಿ ಬುಧರಿಂ-
ದರಿತು ದೀಕ್ಷಿತನಾಗು ದೀರ್ಘದ್ವೇಷಗಳ ಬಿಟ್ಟು ॥
ಹರಿಯೆ ಸರ್ವೋತ್ತಮ ಕ್ಷರಾಕ್ಷರ
ಪುರುಷಪೂಜಿತಪಾದ ಜನ್ಮಾ-
ದ್ಯರವಿದೂರ ಸುಖಾತ್ಮ ಸರ್ವಗನೆಂದು ಸ್ಮರಿಸುತಿರು॥18॥

"ನೇತಿ ನೇತಿ" ಎಂಬ ಉಪಾಸನೆಯೇ ನಿಜವಾದ ದೀಕ್ಷೆ

ಹೇಯ ವಸ್ತುಗಳಿಲ್ಲ ಉಪಾ-
ದೇಯವಸ್ತುಗಳಿಲ್ಲ ನ್ಯಾಯಾ-
ನ್ಯಾಯಧರ್ಮಗಳಿಲ್ಲ ದ್ವೇಷಾಸೂಯೆ ಮೊದಲಿಲ್ಲ ॥
ತಾಯಿತಂದೆಗಳಿಲ್ಲ ಕಮಲದ-
ಳಾಯತಾಕ್ಷನೆ ಎನಲು ಈಸುವ
ಕಾಯಿಯಂದದಿ ಮುಣುಗಗೊಡದೆ ಭವಾಬ್ಧಿ ದಾಟಿಸುವ
॥19॥

ಭಗವತ್ ಚಿಹ್ನೆಗಳನು ಧರಿಸಿ ಸರ್ವೋತ್ತಮನೆನ್ನುವವರ ಪೊರೆವ

ಮಂದನಾದರು ಸರಿಯೆ ಗೋಪೀ-
ಚಂದನ ಶ್ರೀಮುದ್ರೆಗಳ ನಲು-
ವಿಂದೆ ಧರಿಸುತ ಶ್ರೀತುಲಸಿಪದ್ಮಾಕ್ಷ ಸರಗಳನು ॥
ಕಂಧರದ ಮಧ್ಯದಲಿ ಧರಿಸಿ ಮು-
ಕುಂದ ಶ್ರೀ ಭೂರಮಣ ತ್ರಿಜಗ-
ದ್ವಂದ್ಯ ಸರ್ವಸ್ವಾಮಿ ಮಮ ಕುಲದೈವವೆನೆ ಪೊರೆವ ॥20॥

ಸ್ವತಂತ್ರ ಕರ್ತೃ ಶ್ರೀಹರಿ

ಪ್ರಾಯಧನಮದದಿಂದ ಜನರಿಗೆ
ನಾಯಕಪ್ರಭುವೆಂಬಿ ಪೂರ್ವದಿ
ತಾಯಿಪೊಟ್ಟೆಯೊಳಿರಲು ಪ್ರಭುವೆಂದೇಕೆ ಕರೆಯರಲ್ಲೆ ॥
ಕಾಯ ನಿನ್ನನು ಬಿಟ್ಟು ಪೋಗಲು
ರಾಯ ನೀನೆಂಬುವ ಪ್ರಭುತ್ವ ಪ-
ಲಾಯನವನ್ನೈದಿತು ಸಮೀಪದಲಿದ್ದರದು ತೋರು ॥21॥

"ಅಹಂ ಬ್ರಹ್ಮ" ಎನ್ನುವನಿಗೆ ದುಃಖ ಖಚಿತ

ವಾಸುದೇವೈಕಪ್ರಕಾರದಿ
ಈಶನೆನಿಸುವ ಬ್ರಹ್ಮ ರುದ್ರ ಶ-
ಚೀಶ ಮೊದಲಾದಮರರೆಲ್ಲರು ದಾಸರೆನಿಸುವರು ॥
ಈ ಸುಮಾರ್ಗವ ಬಿಟ್ಟು ಸೋऽಹಮು-
ಪಾಸನೆಯ ಗೈವ ನರ ದೇಹಜ
ದೈಶಿಕ ಕ್ಲೇಶಗಳು ಬರಲವನೇಕೆ ಬಿಡಿಸಿಕೊಳ ॥22॥

ದೇವರಲ್ಲಿ ಈಶಿತ್ವ ಜೀವರಲ್ಲಿ ದಾಸತ್ವಗಳು ನಿತ್ಯ

ಆ ಪರಬ್ರಹ್ಮನಲಿ ತ್ರಿಜಗ-
ದ್ವ್ಯಾಪಕತ್ವ ನಿಯಾಮಕತ್ವ
ಸ್ಥಾಪಕತ್ವ ವಶತ್ವ ಈಶತ್ವಾದಿಗುಣಗಳಿಗೆ ॥
ಲೋಪವಿಲ್ಲೇಕಪ್ರಕಾರ ಸ್ವ-
ರೂಪವೆನಿಪವು ಸರ್ವಕಾಲದಿ
ಪೋಪವಲ್ಲವು ಜೀವರಿಗೆ ದಾಸತ್ವದೋಪಾದಿ ॥23॥

ತ್ರಿವಿಧ ಜೀವರನ್ನು ನಿಯಮಿಸುವ ಹರಿಯ ವಿಲಕ್ಷಣ ಗುಣರೂಪಗಳು

ನಿತ್ಯ ನೂತನ ನಿರ್ವಿಕಾರ ಸು-
ಹೃತ್ತಮ ಪ್ರಣವಸ್ಥ ವರ್ಣೋ-
ತ್ಪತ್ತಿಕಾರಣ ವಾಙ್ಮನೋಮಯ ಸಾಮಗಾನರತ ॥
ದತ್ತ ಕಪಿಲ ಹಯಾಸ್ಯರೂಪದಿ
ಪೃಥಕ್‌ಪೃಥಕ್ ಜೀವರೊಳಗಿದ್ದು ಪ್ರ-
ವರ್ತಿಸುವನವರವರ ಯೋಗ್ಯತೆ ಕರ್ಮವನುಸರಿಸಿ ॥24॥

ಶ್ರುತಿ ಸ್ಮೃತಿ ತಿಳಿದು ದೇವರ ನಿಷ್ಕಾಮಪೂಜೆ ಮಾಡು

ಶ್ರುತಿಗಳಾತನ ಮಾತು ವಿಮಲ
ಸ್ಮೃತಿಗಳಾತನ ಶಿಕ್ಷೆ ಜೀವ-
ಪ್ರತತಿ ಪ್ರಕೃತಿಗಳೆರಡು ಪ್ರತಿಮೆಗಳೆನಿಸಿಕೊಳುತಿಹವು ॥
ಇತರ ಕರ್ಮಗಳೆಲ್ಲ ಲಕುಮೀ-
ಪತಿಗೆ ಪೂಜೆಗಳೆಂದು ಸ್ಮರಿಸುತ
ಚತುರವಿಧ ಪುರುಷಾರ್ಥಗಳ ಬೇಡದಿರು ಸ್ವಪ್ನದಲಿ

॥25॥

ಭಕ್ತರ ಸೇವೆಗೆ ಅನುಗುಣವಾದ ಪ್ರಸಾದ

ಭೂತಳಾಧಿಪನಾಜ್ಞಧಾರಕ
ದೂತರಿಗೆ ಸೇವಾನುಸಾರದಿ
ವೇತನವ ಕೊಟ್ಟವರ ಸಂತೋಷಿಸುವ ತೆರದಂತೆ ॥
ಮಾತರಿಶ್ವಪ್ರಿಯನು ಪರಮ-
ಪ್ರೀತಿಪೂರ್ವಕ ಸದ್ಗುಣಂಗಳ
ಗಾಯಕರ ಸಂತೋಷಬಡಿಸುವ ಇಹಪರಂಗಳಲಿ ॥26॥

ಹರಿಭಕ್ತರ ಪಾಪಕರ್ಮವು ಪುಣ್ಯ !
ಅಭಕ್ತರ ಪುಣ್ಯಕರ್ಮವೆಲ್ಲಾ ಪಾಪವೆ !!

ದೀಪ ದಿವದಲಿ ಕಂಡರಾದಡೆ
ಲೋಪಗೈಸುವರಾಕ್ಷಣ ಹರಿ ಸ-
ಮೀಪದಲ್ಲಿರೆ ನಂದನಾಮ ಸುನಂದವೆನಿಸುವುವು ॥
ಔಪಚಾರಿಕವಲ್ಲ ಸುಜನರ
ಪಾಪಕರ್ಮವು ಪುಣ್ಯವೆನಿಪುದು
ಪಾಪಿಗಳ ಸತ್ಪುಣ್ಯಕರ್ಮವು ಪಾಪವೆನಿಸುವುವು ॥27॥

ಸಚ್ಛಾಸ್ತ್ರ ಶ್ರವಣ ಮನನಾದಿಗಳೆ ಭಗವದನುಗ್ರಹಕ್ಕೆ ಕಾರಣ

ಧನವ ಸಂಪಾದಿಸುವ ಪ್ರದ್ರಾ-
ವಣಿಕರಂದದಿ ಕೋವಿದರ ಮನೆ-
ಮನೆಗಳಲಿ ಸಂಚರಿಸು ಶಾಸ್ತ್ರಶ್ರವಣಗೋಸುಗದಿ ॥
ಮನನಗೈದುಪದೇಶಿಸುತ ದು-
ರ್ಜನರ ಕೂಡಾಡದಿರು ಸ್ವಪ್ನದಿ
ಪ್ರಣತಕಾಮದ ಕೊಡುವ ಸೌಖ್ಯವನಿಹಪರಂಗಳಲಿ ॥28॥

ಸಂಸಾರಕ್ಕೆ ಕಾರಣವಾಗುವ ಕಾರಕ, ಕ್ರಿಯೆ, ದ್ರವ್ಯಗಳ ಭ್ರಮೆಗಳು

ಕಾರಕಕ್ರಿಯದ್ರವ್ಯವಿಭ್ರಮ
ಮೂರುವಿಧ ಜೀವರಿಗೆ ಬಹು ಸಂ-
ಸಾರಕಿವು ಕಾರಣವೆನಿಸುವವು ಎಲ್ಲ ಕಾಲದಲಿ ॥
ದೂರ ಓಡಿಸಿ ಭ್ರಾಮಕತ್ರಯ
ಮಾರಿಗೊಳಗಾಗದಲೆ ಸರ್ವಾ-
ಧಾರಕನ ಚಿಂತಿಸುತಲಿರು ಸರ್ವತ್ರ ಮರಿಯದಲೆ ॥29॥

ಜೀವನಿಗೆ ಸ್ವತಂತ್ರಕರ್ತೃತ್ವವು ಕೇವಲ ಭ್ರಮೆ

ಕರಣಕರ್ಮವ ಮಾಡಿದರೆ ವಿ-
ಸ್ಮರಣಕಾಲದಿ ಮಾತುಗಳಿಗು-
ತ್ತರವ ಕೊಡದಲೆ ಸುಮ್ಮನಿಪ್ಪನು ಜಾಗರಾವಸ್ಥೆ ॥
ಕರುಣಿಸಲು ವ್ಯಾಪಾರ ಮಾಡುವ
ಬರಲು ನಾಲ್ಕಾವಸ್ಥೆಗಳು ಪರಿ-
ಹರಿಸಿಕೊಳನೇತಕೆ ಸ್ವತಂತ್ರನು ತಾನೆ ಎಂಬುವನು ॥30॥

ಈ ಪದ್ಯಗಳ ಅನುಕರಣೆಯು ಮುಕ್ತಿಗೆ ಸೋಪಾನ

ಯುಕ್ತಿಮಾತುಗಳಲ್ಲ ಶ್ರುತಿಸ್ಮೃ-
ತ್ಯುಕ್ತಮಾತುಗಳಿವು ವಿಚಾರಿಸೆ
ಮುಕ್ತಿಗಿವು ಸೋಪಾನವೆನಿಪವು ಪ್ರತಿಪ್ರತೀ ಪದವು ॥
ಭಕ್ತಿಪೂರ್ವಕ ಪಠಿಸುವವರಿಗೆ
ವ್ಯಕ್ತಿ ಕೊಡುವ ಸ್ವರೂಪಸುಖ ಪ್ರವಿ-
ವಿಕ್ತರನೆ ಮಾಡುವನು ಭವಭಯದಿಂದ ಬಹುರೂಪ
॥31॥

ಈ ಗ್ರಂಥವು ಜ್ಞಾನಿಗಳಿಗೆ ಮಾತ್ರ ರುಚಿಕರ !

ಶ್ರೀನಿವಾಸನ ಸುಗುಣಮಣಿಗಳ
ಪ್ರಾಣಮತ ವಯುನಾಖ್ಯಸೂತ್ರದಿ
ಪೋಣಿಸಿದ ಮಾಲಿಕೆಯ ವಾಙ್ಮನರೀಶಗರ್ಪಿಸಿದ ॥
ಜ್ಞಾನಿಗಳ ದೃಗ್ವಿಷಯವಹುದ-
ಜ್ಞಾನಿಗಳಿಗೆ ಅಸಹ್ಯ ತೋರ್ಪುದು
ಮಾಣಿಕವ ಮರ್ಕಟನ ಕೈಯೊಳು ಕೊಟ್ಟ ತೆರನಂತೆ ॥32॥

ಭಕ್ತರನ್ನು ಎಂದೂ ರಕ್ಷಿಸದೆ ಬಿಡನು

ಶ್ರೀವಿಧೀರವಿಪಾಹಿಪೇಶ ಶ-
ಚೀವರಾತ್ಮಭವಾರ್ಕ ಶಶಿ ದಿ-
ಗ್ದೇವ ಋಷಿ ಗಂಧರ್ವ ಕಿನ್ನರಸಿದ್ಧಸಾಧ್ಯಗಣ ॥
ಸೇವಿತಪದಾಂಭೋಜ ತತ್ಪಾ-
ದಾವಲಂಬಿಗಳಾದ ಭಕುತರ
ಕಾವ ಕರುಣಾಸಾಂದ್ರ ಲಕ್ಷ್ಮೀಹೃತ್ಕುಮುದಚಂದ್ರ ॥33॥

ಮಾಧವನ ಗುಣಗಾನಕ್ಕೆ ಭಾಷೆಯ ಮಿತಿ ಇಲ್ಲ

ಆದರ್ಶವ ಗತಾಕ್ಷ ಭಾಷಾ-
ಭೇದದಿಂದಲಿ ಕರೆಯಲದನು ನಿ-
ಷೇಧಗೈದವಲೋಕಿಸದೆ ಬಿಡುವರೆ ವಿವೇಕಿಗಳು ॥
ಮಾಧವನ ಗುಣ ಪೇಳ್ವ ಪ್ರಾಕೃತ
ವಾದರೆಯು ಸರಿ ಕೇಳಿ ಪರಮಾ-
ಹ್ಲಾದಬಡದಿಪ್ಪರೆ ನಿರಂತರ ಬಲ್ಲ ಕೋವಿದರು ||34||

ಗ್ರಂಥವು ಸಂಸ್ಕೃತದಲ್ಲಿಲ್ಲವೆಂದು ತಿರಸ್ಕರಿಸುವವ ಅಜ್ಞಾನಿ

ಭಾಸ್ಕರನ ಮಂಡಲವ ಕಂಡು ನ-
ಮಸ್ಕರಿಸಿ ಮೋದಿಸದೆ ದ್ವೇಷದಿ
ತಸ್ಕರನು ನಿಂದಿಸಲು ಕುಂದಹುದೇ ದಿವಾಕರಗೆ ॥
ಸಂಸ್ಕೃತವಿದಲ್ಲೆಂದು ಕುಹಕ ತಿ-
ರಸ್ಕರಿಸಲೇನಹುದು ಭಕ್ತಿಪು-
ರಸ್ಕರದಿ ಕೇಳ್ವರಿಗೆ ಒಲಿವನು ಪುಷ್ಕರಾಕ್ಷ ಸದಾ ||35

ಹರಿಕಥೆ ಹೇಳುವ ಭಾಷೆಯು ಪ್ರಕೃತವಾದರೂ ಕೂಡ ಸಂಸ್ಕೃತವೆನಿಸುವುದು

ಪತಿತನ ಕಪಾಲದೊಳು ಭಾಗೀ-
ರಥಿಯ ಜಲವಿರೆ ಪೇಯವೆನಿಪುದೆ
ಇತರ ಕವಿನಿರ್ಮಿತ ಕುಕಾವ್ಯಶ್ರಾವ್ಯ ಬುಧರಿಂದ ॥
ಕೃತಿಪತಿಕಥಾನ್ವಿತವೆನಿಪ ಪ್ರಾ-
ಕೃತವೆ ತಾ ಸಂಸ್ಕೃತವೆನಿಸಿ ಸ-
ದತಿಯನೀವುದು ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ ॥36॥

ಆತ್ಮಪ್ರಶಂಸೆಯನ್ನು ಖಂಡಿಸಿ ಜಗನ್ನಾಥವಿಟ್ಠಲನಿಗೆ ಅರ್ಪಣೆ

ವೇದಶಾಸ್ತ್ರ ಸಯುಕ್ತಿಗ್ರಂಥಗ-
ಳೋದಿ ಕೇಳ್ದವನಲ್ಲ ಸಂತತ
ಸಾಧುಗಳ ಸಹವಾಸಸಲ್ಲಾಪಗಳು ಮೊದಲಿಲ್ಲ ॥
ಮೋದತೀರ್ಥಾರ್ಯರ ಮತಾನುಗ-
ರಾದವರ ಕರುಣದಲಿ ಪೇಳ್ದೆ ರ-
ಮಾಧವ ಜಗನ್ನಾಥವಿಟ್ಠಲ ತಿಳಿಸಿದದರೊಳಗೆ ॥37॥

॥ ಇಲ್ಲಿಗೆ ಹದಿನಾರನೆಯ ದತ್ತಸ್ವಾತಂತ್ರ್ಯಸಂಧಿ ಮುಗಿಯಿತು ॥

17. ಸ್ವಗತಸ್ವಾತಂತ್ರ್ಯಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಸ್ವಾತಂತ್ರ್ಯದ ವಿಭಾಗವನ್ನು ಭೃಗು ಋಷಿಗಳು ಇಂದ್ರದ್ಯುಮ್ನನಿಗೆ ಪೇಳಿದರು

ಸ್ವಗತಸ್ವಾತಂತ್ರಿಯ ಗುಣವ ಹರಿ ।
ತೆಗೆದು ಬ್ರಹ್ಮಾದ್ಯರಿಗೆ ಕೊಟ್ಟದು ।
ಭೃಗುಮುನಿಪ ಪೇಳಿದನು ಇಂದ್ರದ್ಯುಮ್ನ ಕ್ಷಿತಿಪನಿಗೆ
||ಸಂಧಿಸೂಚನೆ||

ಪರಮವಿಷ್ಣು ಸ್ವತಂತ್ರ ಮಾಯಾ
ತರುಣಿ ವಕ್ಷಃಸ್ಥಳನಿವಾಸಿನಿಯು
ಸರಸಿಜೋದ್ಭವಪ್ರಾಣರೀರ್ವರು ಸಚಿವರೆನಿಸುವರು ||
ಸರ್ವಕರ್ಮಗಳಲ್ಲಿ ತತ್ಪ್ರಿಯ-
ರುರಗಭೂಷಣಹಂಕೃತಿತ್ರಯ
ಕರೆಸುವಮರೇಂದ್ರಾರ್ಕಮುಖರಿಂದ್ರಿಯಪರೆನಿಸುವರು||1||

ಮನಸ್ಸಿನಲ್ಲಿ ದೈತ್ಯರ ವ್ಯಾಪಾರ

ಈ ದಿವೌಕಸರಂತೆ ಕಲಿ ಮೊದ-
ಲಾದ ದೈತ್ಯರು ಸರ್ವದೇಹದಿ
ತೋದಕರು ತಾವಾಗಿ ವ್ಯಾಪಾರಗಳ ಮಾಡುವರು ॥
ವೇಧನಂದದಿ ಕಲಿಯಹಂಕಾ-
ರಾಧಿಪಾಧಮ ಮಧುಕುಕೈಟಭ
ಕ್ರೋಧಿಶಂಬರಮುಖರು ಮನಸಿಗೆ ಸ್ವಾಮಿಯೆನಿಸುವರು
॥2॥

ಇಂದ್ರಿಯಗಳಲ್ಲಿ ದೈತ್ಯರ ವ್ಯಾಪಾರ

ದೇವತೆಗಳೋಪಾದಿ ನಿತ್ಯದಿ
ಏವಮಾದಿ ಸ್ವನಾಮದಿಂದಲಿ
ಯಾವದಿಂದ್ರಿಯಗಳೊಳು ವ್ಯಾಪಾರಗಳ ಮಾಡುವರು ॥
ಸೇವಕರ ಸೇವಾನುಗುಣ ಫಲ-
ವೀವ ನೃಪನಂದದಲಿ ತನ್ನ ಸ್ವ-
ಭಾವಸ್ವಾತಂತ್ರ್ಯಯ ವಿಭಾಗವ ಮಾಡಿ ಕೊಟ್ಟ ಹರಿ ॥3॥

ಬ್ರಹ್ಮ ವಾಯು ಹಾಗೂ ರುದ್ರದೇವರಲ್ಲಿ ಸ್ವಾತಂತ್ರ್ಯದ ಗುಣವಿಭಜನೆ

ಅಗಣಿತ ಸ್ವಾತಂತ್ರಿಯವ ನಾಲ್-
ಬಗೆ ವಿಭಾಗವ ಮಾಡಿ ಒಂದನು
ತೆಗೆದು ದಶವಿಧಗೈಸಿ ಪಾದರೆ ಪಂಚಪ್ರಾಣನಲಿ ॥
ಮೊಗಚತುಷ್ಟಯನೊಳ್ ಸಪಾದೈ-
ದುಗುಣವಿರಿಸಿದ ಮತ್ತೆ ದಶವಿಧ
ಯುಗಳ ಗುಣವನು ಮಾಡಿ ಎರಡು ಸದಾಶಿವನೊಳಿಟ್ಟ
॥4॥

ದೇವತೆಗಳು ದೈತ್ಯರು ಮಾನವರಲ್ಲಿ ಮಿಕ್ಕ ಎಂಟು ಭಾಗದ ಹಂಚಿಕೆ

ಪಾಕಶಾಸನಕಾಮರೊಳು ಸಾ-
ರ್ಧೈಕವಿಟ್ಟ ದಶೇಂದ್ರಿಯರ ಸುದಿ-
ವೌಕಸಾದ್ಯರೊಳೊಂದು ಯಾವಜ್ಜೀವರೊಳಗೊಂದು ॥
ನಾಲ್ಕುವರೆ ಕಲ್ಯಾದಿದೈತ್ಯಾ-
ನೀಕಕಿತ್ತನು ಎರಡು ತ್ರಿವಿಧ ವಿ-
ವೇಕಗೈಸಿಂದಿರೆಗೆ ಒಂದೆರಡಾತ್ಮ ತನ್ನೊಳಗೆ ।

ಯೋಗ್ಯತಾನುಸಾರ ಸ್ವಾತಂತ್ರ್ಯ ಕೊಟ್ಟು ನಿಜಗತಿ ಕೊಡುವ

ಈ ವಿಧದಿ ಸ್ವಾತಂತ್ರಿಯ ತತ್ವವ
ದೇವಮಾನವದಾನವರೊಳು ರ-
ಮಾವಿನೋದಿ ವಿಭಾಗ ಮಾಡಿಟ್ಟಲ್ಲೆ ರಮಿಸುವನು ॥
ಮೂವರೊಳಗಿದ್ದವರ ಕರ್ಮವ
ತಾ ವಿಕಾರವಗೈಸದಲೆ ಕ-
ಲ್ಪಾವಸಾನಕೆ ಕೊಡುವನಾಯಾಸವರವರ ಗತಿಯ ॥6॥

ಅಧಿಷ್ಠಾನದ ಯೋಗ್ಯತಾನುಸಾರ ಹರಿಯು ತೋರುವ

ಆಲಯಗಳೊಳಗಿಪ್ಪ ದೀಪ-
ಜ್ವಾಲೆವರ್ತಿಗಳನುಸರಿಸಿ ಜನ-
ರಾಲಿಗಳಿಗೊಪ್ಪುವತೆರದಿ ಹರಿತೋರ್ಪ ಸರ್ವತ್ರ ॥
ಕಾಲಕಾಲದಿ ಶ್ರೀಧರಾದು-
ರ್ಗಾಲಲನೆಯರ ಕೂಡಿ ಸುಖಮಯ
ಲೀಲೆಗೈಯಲು ತ್ರಿಗುಣಕಾರ್ಯಗಳಹವು ಜೀವರಿಗೆ ॥7॥

ದ್ವಂದ್ವಕರ್ಮಸಮರ್ಪಣೆಯಿಂದ ಸಜ್ಜನರ ಪುಣ್ಯ ಕೊಂಡು ಪಾಪ ಭಸ್ಮ ಮಾಡುವನು

ಇಂದ್ರಿಯಗಳಿಂ ಮಾಳ್ಪ ಕರ್ಮ-
ದ್ವಂದ್ವಗಳ ತನಗರ್ಪಿಸಲು ಗೋ-
ವಿಂದ ಪುಣ್ಯವ ಕೊಂಡು ಪಾಪವ ಭಸ್ಮವನೆ ಮಾಳ್ಪ ||
ಇಂದಿರೇಶನು ಭಕ್ತಜನರನು
ನಿಂದಿಸುವರೊಳಗಿಪ್ಪ ಪುಣ್ಯವ
ತಂದು ತನ್ನವಗೀವ ಪಾಪಗಳವರಿಗುಣಿಸುವನು ||8||

ದುಷ್ಟಜನರ ನಿಂದನೆ, ಶಿಷ್ಟಜನರ ಸ್ತೋತ್ರವು ನಿತ್ಯಕರ್ಮವಾಗಲಿ

ಹೊತ್ತುಹೊತ್ತಿಗೆ ಪಾಪಕರ್ಮ ಪ್ರ-
ವರ್ತಕರ ನಿಂದಿಸದೆ ತನಗಿಂ-
ದುತ್ತಮರ ಗುಣಕರ್ಮಗಳ ಕೊಂಡಾಡದಲೆ ಇಪ್ಪ ||
ಮರ್ತ್ಯರಿಗೆ ಗೋಬ್ರಾಹ್ಮಣಸ್ತ್ರೀ- |
ಹತ್ಯ ಮೊದಲಾದಖಿಳದೋಷಗ-
ಳಿತ್ತಪನು ಸಂದೇಹಪಡಸಲ್ಲಖಿಳಶಾಸ್ತ್ರಮತ

ಅಶಕ್ತರಿಗೂ ಶಕ್ತಿ ನೀಡಿ ಫಲ ಉಣಿಸುವ ದೇವರ ಮಹಿಮೆ

ತನ್ನ ಸ್ವಾತಂತ್ರ್ಯಗುಣಗಳ ಹಿ-
ರಣ್ಯಗರ್ಭಾದ್ಯರಿಗೆ ಕಲಿಮುಖ
ದಾನವರ ಸಂತತಿಗೆ ಅವರಧಿಕಾರವನುಸರಿಸಿ ॥
ಪುಣ್ಯಪಾಪಗಳೀವ ಬಹುಕಾ-
ರುಣ್ಯಸಾಗರನಲ್ಪಶಕ್ತಗ-
ಳುಣ್ಣಲರಿಯದೆ ಇರಲು ಉಣಗಲಿಸಿದನು ಸರ್ವರಿಗೆ॥10॥

ಪರಮಾಣುವಿಗೂ ಸಾಮರ್ಥ್ಯ ಕೊಟ್ಟು ಸ್ಥೂಲಪದಾರ್ಥ ಉಣಿಸುವ

ಸತ್ಯವಿಕ್ರಮ ಪುಣ್ಯಪಾಪ ಸ-
ಮಸ್ತರಿಗೆ ಕೊಡಲೋಸುಗದಿ ನಾ-
ಲ್ವತ್ತು ಭಾಗವ ಮಾಡಿ ಲೇಶಾಂಶವನು ಜನಕೀವ ॥
ಅತ್ಯಲ್ಪ ಪರಮಾಣುವಿಗೆ ಸಾ-
ಮರ್ಥ್ಯವನು ತಾ ಕೊಟ್ಟು ಸ್ಥೂಲಪ-
ದಾರ್ಥಗಳ ಉಂಡುಣಿಪ ಸರ್ವದ ಸರ್ವಜೀವರಿಗೆ॥11॥

ಜೀವರಲ್ಲಿ ಕಮಲದೆಲೆಯಂತೆ ಹರಿಯ ನಿರ್ಲಿಪ್ತ ವ್ಯಾಪಾರ

ತಿಮಿರತರಣಿಗಳೇಕದೇಶದಿ
ಸಮನಿಸಿಪ್ಪವೆ ಎಂದಿಗಾದರು
ಭ್ರಮಣಭಳಿಬಿಸಿಲಂಜಿಕೆಗಳುಂಟೇನೊ ಪರ್ವತಕೆ ||
ಅಮಿತಜೀವರೊಳಿದ್ದು ಲಕುಮೀ-
ರಮಣ ವ್ಯಾಪಾರಗಳ ಮಾಡುವ
ಕಮಲಪತ್ರ ಸರೋವರಗಳೊಳಗಿಪ್ಪ ತೆರನಂತೆ ||12||

ಯೋಗ್ಯತಾನುಸಾರ ಫಲವೀವ

ಅಂಬುಜೋದ್ಭವಮುಖ್ಯಸುರ ಕಲಿ-
ಶಂಬರಾದಿ ಸಮಸ್ತದೈತ್ಯಕ-
ದಂಬಕನುದಿನ ಪುಣ್ಯಪಾಪವಿಭಾಗವನೆ ಮಾಡಿ ||
ಅಂಬುಧಿಯ ಜಲವನು ಮಹಾಘಟ
ಬಿಂಬರಿತು ತುಂಬುವ ತೆರದಿ ಪ್ರತಿ-
ಬಿಂಬರೊಳು ತಾನಿದ್ದು ಯೋಗ್ಯತೆಯಂತೆ ಫಲವೀವ
||1

ವಿದ್ವಜ್ಜನರಲ್ಲಿ ವಿನಯಪೂರ್ವಕ ವಿಜ್ಞಾಪನೆ

ಇನಿತು ವಿಷ್ಣುರಹಸ್ಯದೊಳು ಭೃಗು
ಮುನಿಪ ಇಂದ್ರದ್ಯುಮ್ನಗರುಪಿದ
ದನು ಬುಧರು ಕೇಳುವುದು ನಿತ್ಯದಿ ಮತ್ಸರವ ಬಿಟ್ಟು ||
ಅನುಚಿತೋಕ್ತಿಗಳಿದ್ದರೆಯು ಸರಿ
ಗಣನೆ ಮಾಡದಿರೆಂದು ವಿದ್ವ-
ಜ್ಜನಕೆ ವಿಜ್ಞಾಪನೆಯ ಮಾಡುವೆ ವಿನಯಪೂರ್ವಕದಿ||14||

ಅನಾಥರಕ್ಷಕ ಜಗನ್ನಾಥವಿಟ್ಠಲ ಭಕ್ತರನು ಪೊರೆವ

ವೀತಭಯ ವಿಶ್ವೇಶ ವಿಧಿಪಿತ
ಮಾತುಳಾಂತಕ ಮಧ್ವವಲ್ಲಭ
ಭೂತಭಾವನನಂತಭಾಸ್ಕರತೇಜ ಮಹರಾಜ ||
ಗೌತಮರ ಮಡದಿಯನು ಕಾಯ್ದಾ-
ನಾಥರಕ್ಷಕ ಗುರುತಮ ಜಗ-
ನ್ನಾಥವಿಟ್ಠಲ ತನ್ನ ನಂಬಿದ ಭಕುತರನೆ ಪೊರೆವ ||15||

|| ಇಲ್ಲಿಗೆ ಹದಿನೇಳನೆಯ ಸ್ವಗತಸ್ವಾತಂತ್ರ್ಯಸಂಧಿ ಮುಗಿಯಿತು ||

ಸರ್ವಸ್ವಾತಂತ್ರ್ಯಸಂಧಿ-18

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಶೌನಕಾದಿಗಳಿಗೆ ಸೂತರ ಉಪದೇಶ ॥

ಶ್ರೀನಿವಾಸನ ಚರಿತೆಗಳ ಪರ -
ಮಾನುರಾಗದಿ ಬೆಸಗೊಳಲು ಮುನಿ
ಶೌನಕಾದ್ಯರಿಗರುಪಿದನು ಸೂತಾರ್ಯ ದಯದಿಂದ

ಪಚನಾದಿಸರ್ವಕರ್ಮಪ್ರೇರಕ ಭಗವಂತ

**ಪಚನ ಭಕ್ಷಣ ಗಮನ ಭೋಜನ
ವಚನ ಮೈಥುನ ಶಯನ ವೀಕ್ಷಣ
ಅಚಲನಾಚಲನ ಪ್ರಯತ್ನವು ಸಾಧ್ಯವೇ ಜನಕೆ ॥
ಶುಚಿಸದನ ದಯದಿಂದ ಜೀವರ
ನಿಚಯದೊಳು ತಾನಿಂತು ಮಾಡುವ-
ನುಚಿತನೋಚಿತ ಕರ್ಮಗಳನೆಂದರಿದು ಕೊಂಡಾಡು॥1॥**

ಜೀವರಲ್ಲಿ ಭಗವಂತನ ಅಸ್ತಿತ್ವದ ಸಮರ್ಥನೆ

ವಿಷ್ಟರಶ್ರವ ದೇಹದೊಳಗೆ ಪ್ರ-
ವಿಷ್ಟನಾಗಿ ನಿರಂತರದಿ ಬಹು-
ಚೇಷ್ಟೆಗಳ ಮಾಡುತಿರೆ ಕಂಡು ಸಜೀವಿ ಎನುತಿಹರು ||
ಹೃಷ್ಟರಾಗುವರವನ ನೋಡಿ ಕ-
ನಿಷ್ಠರೆಲ್ಲರು ಸೇವೆ ಮಾಳ್ಪರು
ಬಿಟ್ಟ ಕ್ಷಣದಲಿ ಕುಣಪವೆಂದರಿದದನುಪೇಕ್ಷಿಪರು ||2||

ಸೃಷ್ಟ್ಯಾದಿಲೀಲೆಗಳು ಜೀವರ ಉದ್ಧಾರಕ್ಕಾಗಿ, ಸ್ವಪ್ರಯೋಜನಕ್ಕಲ್ಲ

ಕ್ರೀಡೆಗೋಸುಗ ಅವರವರ ಗತಿ
ನೀಡಲೋಸುಗ ದೇಹಗಳ ಕೊ-
ಟ್ಟಾಡುವನು ಸ್ವೇಚ್ಛೆಯಲಿ ಬ್ರಹ್ಮೇಶಾದ್ಯರೊಳು ಪೊಕ್ಕು ||
ಮಾಡುವನು ವ್ಯಾಪಾರ ಬಹುವಿಧ
ಮೂಢದೈತ್ಯರೊಳಿದ್ದು ಪ್ರತಿದಿನ
ಕೇಡುಲಾಭಗಳಿಲ್ಲವಿದರಿಂದಾವಕಾಲದಲಿ ||3||

ಪರಾಪೇಕ್ಷೆ ಇಲ್ಲದೆ ಲೋಕ ರಕ್ಷಿಪ

ಅಕ್ಷರೇಡ್ಯನು ಬ್ರಹ್ಮವಾಯು
ತ್ರ್ಯಕ್ಷ ಸುರಪಸುರಾಸುರರೊಳ-
ಧ್ಯಕ್ಷನಾಗಿದ್ದೆಲ್ಲರೊಳು ವ್ಯಾಪಾರ ಮಾಡುತಿಹ ॥
ಅಕ್ಷಯನು ಸತ್ಯಾತ್ಮಕ ಪರಾ-
ಪೇಕ್ಷೆಯಿಲ್ಲದೆ ಸರ್ವರೊಳಗೆ ವಿ-
ಲಕ್ಷಣನು ತಾನಾಗಿ ಲೋಕವ ರಕ್ಷಿಸುತಲಿಪ್ಪ ॥4॥

ಸ್ತ್ರೀಯರಲ್ಲಿ ದೇವರ ಸ್ತ್ರೀರೂಪದ ವ್ಯಾಪಾರ

ಶ್ರೀ ಸರಸ್ವತಿ ಭಾರತೀ ಗಿರಿ-
ಜಾ ಶಚೀ ರತಿ ರೋಹಿಣೀ ಸಂ-
ಜ್ಞಾಶತರೂಪಾದ್ಯಖಿಳಸ್ತ್ರೀಯರೊಳು ಸ್ತ್ರೀರೂಪ ॥
ವಾಸವಾಗಿದ್ದೆಲ್ಲರಿಗೆ ವಿ-
ಶ್ವಾಸ ತನ್ನಲಿ ಕೊಟ್ಟು ಅವರಭಿ-
ಲಾಷೆಗಳ ಪೂರೈಸುತಿಪ್ಪನು ಯೋಗ್ಯತೆಗಳರಿತು ॥5॥

ಶಿಷ್ಟರಿಗೆ ಅನುಕೂಲ ದುಷ್ಟರಿಗೆ ಪ್ರತಿಕೂಲ

ಕೋಲು ಕುದುರೆಯ ಮಾಡಿ ಆಡುವ
ಬಾಲಕರ ತೆರನಂತೆ ಲಕುಮೀ-
ಲೋಲ ಸ್ವಾತಂತ್ರ್ಯಗುಣವ ಬ್ರಹ್ಮಾದ್ಯರೊಳಗಿಟ್ಟು ॥
ಲೀಲೆಗೈವನು ತನ್ನವರಿಗನು-
ಕೂಲನಾಗಿದ್ದೆಲ್ಲಕಾಲದಿ
ಖೂಳರಿಗೆ ಪ್ರತಿಕೂಲನಾಗಿಹ ಪ್ರಕಟನಾಗದಲೆ ॥6॥

ಶ್ರೀಹರಿಯ ವ್ಯಾಪಾರ ವೈಷಮ್ಯರಹಿತ

ಸೌಪರ್ಣಿವರವಹನ ನಾನಾ-
ರೂಪನಾಮದಿ ಕರೆಸುತವರ ಸ-
ಮೀಪದಲ್ಲಿದ್ದಖಿಳವ್ಯಾಪಾರಗಳ ಮಾಡುವನು ॥
ಪಾಪಪುಣ್ಯಗಳೆರಡು ಅವರ ಸ್ವ-
ರೂಪಗಳನನುಸರಿಸಿ ಉಣಿಪ ಪ-
ರೋಪಕಾರಿ ಪರೇಶ ಪೂರ್ಣಾನಂದಜ್ಞಾನಘನ ॥7॥

ಐಹಿಕಸುಖವ ಉಪೇಕ್ಷಿಸಿ ಭಗವನ್ಮಹಿಮೆಯ ಕೊಂಡಾಡು

ಆಹರನಿದ್ರಾಮೈಥುನಗಳಹ
ರಹರ್ಬಯಸಿ ಬಳಲುವವ ಲಕ್ಷ್ಮೀ-
ಮಹಿತನ ಮಹಾಮಹಿಮೆಗಳನೆಂತರಿವ ನಿತ್ಯದಲಿ ॥
ಆಹಿಕಸೌಖ್ಯವ ಮರೆದು ಮನದಲಿ
ಗ್ರಹಿಸಿ ಶಾಸ್ತ್ರಾರ್ಥಗಳ ಪರಮೋ-
ತ್ಸಹದಿ ಕೊಂಡಾಡುತಲಿ ಮೈಮರೆದವರಿಗಲ್ಲದಲೆ ॥8॥

ಅನ್ಯದೇವತಾರಾಧನೆಯಿಂದ ಮುಕ್ತಿ ಅಸಾಧ್ಯ

ಬಂಧಮೋಕ್ಷಪ್ರದನ ಜ್ಞಾನವು
ಮಂದಮತಿಗಳಿಗೆಂತು ದೊರೆವುದು
ಬಿಂದುಮಾತ್ರ ಸುಖಾನುಭವ ಪರ್ವತಕೆ ಸಮದುಃಖ ॥
ಎಂದು ತಿಳಿಯದಲನ್ಯದೈವಗ-
ಳಿಂದ ಸುಖವಾಪೇಕ್ಷಿಸುವರು ಮು-
ಕುಂದನಾರಾಧನೆಯ ಬಿಟ್ಟವಗುಂಟೆ ಮುಕ್ತಿಸುಖ ॥9॥

ಅರಸನಾದ ಜನಾರ್ದನನು ಜೀವರಿಗೆ ಕಾರ್ಯನಿಯೋಜಿಸಿ ಫಲವೀವ

ರಾಜ ತನ್ನಾಮಾತ್ಯ ಕರುಣದಿ
ನೈಜಜನರಿಗೆ ಕೊಟ್ಟು ಕಾರ್ಯ ನಿ-
ಯೋಜಿಸುವ ಮಾನಾಪಮಾನವ ಮಾಳ್ಪ ತೆರನಂತೆ ||
ಶ್ರೀಜನಾರ್ದನ ಸಕಲರೊಳಗಪ-
ರಾಜಿತನು ತಾನಾಗಿ ಸರ್ವಪ್ರ-
ಯೋಜನವ ಮಾಡಿಸುತ ಮಾಡುವ ಫಲಕೆ ಗುರಿಮಾಡಿ
||10||

ಪರಶುಕ್ಲತ್ರಯರಲ್ಲಿ ಸ್ವಾತಂತ್ರ್ಯದ ವಿಭಾಗ

ವಾಸುದೇವ ಸ್ವತಂತ್ರವ ಸರೋ-
ಜಾಸನಾದ್ಯಮರಾಸುರರಿಗೀಯ
ಲೋಸುಗರ್ಧವ ತೆಗೆದದರೊಳರ್ಧವ ಚತುರ್ಭಾಗ ||
ಗೈಸಿ ಒಂದನು ಶತವಿಧದ್ವಿಪಂ-
ಚಾಶತಾಬ್ಜಜಗಷ್ಟಚತ್ವಾ-
ರಿಂಶದನಿಲನಿಗಿತ್ತ ವಾಣೀಭಾರತೀಗರ್ಧ ||11||

ರುದ್ರಾದಿ ಸಕಲ ಜೀವರಲ್ಲಿ ಸ್ವಾತಂತ್ರ್ಯದ ವಿಭಜನೆ

ದ್ವಿತೀಯಪಾದವ ತೆಗೆದುಕೊಂಡದ
ಶತವಿಭಾಗವ ಮಾಡಿ ತಾ ವಿಂ-
ಶತಿ ಉಮೇಶನೊಳಿಟ್ಟು ಇಂದ್ರನೊಳೈದಧಿಕ ಹತ್ತು ॥
ರತಿಪನೊಳಗಿನಿತಿಟ್ಟಖಿಳ ದೇ-
ವತೆಗಳೊಳಗೀರೈದು ಜೀವ
ಪ್ರತತಿಯೊಳು ದಶವೈದಧಿಕನಾಲ್ವತ್ತು ದೈತ್ಯರೊಳು ॥12॥

ದತ್ತಸ್ವಾತಂತ್ರ್ಯದಿಂದ ತ್ರಿಗುಣಗಳ ಅಭಿವ್ಯಕ್ತಿ

ಕಾರುಣಿಕ ಸ್ವಾತಂತ್ರ್ಯತ್ವವ
ಮೂರುವಿಧಗೈಸೆರಡು ತನ್ನೊಳು
ನಾರಿಗೊಂದನು ಕೊಟ್ಟ ಸ್ವಾತಂತ್ರ್ಯಯವ ಸರ್ವರಿಗೆ ॥
ಧಾರುಣಿಪ ತನ್ನನುಗರಿಗೆ ವ್ಯಾ-
ಪಾರ ಕೊಟ್ಟು ಗುಣಾಗುಣಗಳ ವಿ-
ಚಾರ ಮಾಡುವ ತೆರದಿ ತ್ರಿಗುಣವ ವ್ಯಕ್ತಿಯನೆ ಮಾಳ್ಪ
॥13॥

ದೈತ್ಯರ ಪುಣ್ಯವನ್ನು ದೇವತೆಗಳಿಗೆ ಹಂಚುವನು

ಪುಣ್ಯಕರ್ಮಕೆ ಸಹಾಯವಾಗುವ
ಧನ್ಯರಿಗೆ ಕಲ್ಯಾದಿದೈತ್ಯರ
ಪುಣ್ಯಫಲಗಳನೀವ ದಿವಿಜರ ಪಾಪಕರ್ಮಫಲ ॥
ಅನ್ಯಕರ್ಮವ ಮಾಳ್ಪರಿಗೆ ಅನು-
ಗುಣ್ಯ ಜನರಿಗೆ ಕೊಡುವ ಬಹುಕಾ-
ರುಣ್ಯಸಾಗರನೀ ತೆರದಿ ಭಕ್ತರನು ಸಂತೈಪ ॥14॥

ತಮೋಯೋಗ್ಯರ ಲಕ್ಷಣಗಳು

ನಿರುಪಮಗೆ ಸರಿಯುಂಟು ಎಂದು-
ಚ್ಚರಿಸುವವ ತದ್ಭಕ್ತರೊಳು ಮ-
ತ್ಸರಿಸುವವ ಗುಣಿಗುಣಗಳಿಗೆ ಭೇದಗಳ ಪೇಳುವವ ॥
ದರಸುದರ್ಶನ ಊರ್ಧ್ವ ಪುಂಡ್ರವ
ಧರಿಸಿದವರೊಳು ದ್ವೇಷಿಸುವ ಹರಿ-
ಚರಿತೆಗಳ ಕೇಳದಲೆ ಲೋಕರವಾರ್ತೆ ಕೇಳುವವ ॥15॥

ದೈತರ ಲಕ್ಷಣಗಳು

ಏವಮಾದಿ ದ್ವೇಷವುಳ್ಳ ಕು-
ಜೀವರೆಲ್ಲರು ದೈತ್ಯರೆಂಬರು
ಕೋವಿದರ ವಿಜ್ಞಾನಕರ್ಮವ ನೋಡಿ ನಿಂದಿಪರು ॥
ದೇವದೇವನ ಬಿಟ್ಟು ಯಾವ-
ಜ್ಜೀವಪರಿಯಂತರದಿ ತುಚ್ಛರ
ಸೇವೆಯಿಂದುಪಜೀವಿಸುವರ್ಜ್ಞಾನನಕೊಳಗಾಗಿ ॥16॥

ತಮೋಯೋಗ್ಯರ ಸಂಗದಿಂದ ತಮೋಗುಣದ ವೃದ್ಧಿ

ಕಾಮಲೋಭಕ್ರೋಧಮದಹಿಂ-
ಸಾಮಯಾನೃತ ದಂಭಕಪಟ ತ್ರಿ-
ಧಾಮನವತಾರಗಳ ಭೇದ ಅಪೂರ್ಣಸುಖಬದ್ಧ ॥
ಆಮಿಷನಿವೇದಿತವಭೋಜ್ಯತಿ-
ತಾಮಸಸ್ನಾನವನುಂಬ ತಾಮಸ
ಶ್ರೀಮದಾಂಧರ ಸಂಗದಿಂದಲಿ ತಮವೆ ವರ್ಧಿಪುದು॥17॥

ಸಜ್ಜನರ ಲಕ್ಷಣಗಳು

ಜ್ಞಾನಭಕ್ತಿವಿರಕ್ತಿವಿನಯ ಪು-
ರಾಣಶಾಸ್ತ್ರಶ್ರವಣ ಚಿಂತನ
ದಾನಶಮದಮ ಯಜ್ಞಸತ್ಯಾಹಿಂಸ ಭೂತದಯಾ ॥
ಧ್ಯಾನ ಭಗವನ್ನಾಮಕೀರ್ತನ
ಮೌನ ಜಪತಪವ್ರತ ಸುತೀರ್ಥ
ಸ್ನಾನ ಮಂತ್ರಸ್ತೋತ್ರ ವಂದನ ಸಜ್ಜನರ ಗುಣವು ॥18॥

ಜೀವರಲ್ಲಿರುವ ಅಲ್ಪ ಸ್ವಾತಂತ್ರ್ಯದ ಕಾರ್ಯವೇ ಶ್ವಾಸಾದಿ ಸಕಲವು

ಲೇಶ ಸ್ವಾತಂತ್ರ್ಯ ಗುಣವನು ಪ್ರ-
ವೇಶಗೈಸಿದ ಕಾರಣದಿ ಗುಣ-
ದೋಷಗಳು ತೋರುವವು ಸತ್ವಾಸತ್ವ ಜೀವರೊಳು ॥
ಶ್ವಾಸ ಭೋಜನ ಪಾನ ಶಯನ ವಿ-
ಲಾಸ ಮೈಥುನ ಗಮನ ಹರ್ಷ
ಕ್ಲೇಶ ಸ್ವಪ್ನ ಸುಷುಪ್ತಿ ಜಾಗ್ರತಿಯಹವು ಚೇತನಕೆ ॥19॥

ಬ್ರಹ್ಮಾದಿ ದೇವತೆಗಳೊಳಿದ್ದು ಯೋಗ್ಯತಾನುಸಾರ ಆನಂದ ನೀಡುವನು

ಅರ್ಧ ತನ್ನೊಳಗಿರಿಸಿ ಉಳಿದೊಂ-
ದರ್ಧವ ವಿಭಾಗಗೈಸಿ ವೃಜಿ-
ನಾರ್ದನನು ಪೂರ್ವದಲಿ ಸ್ವಾತಂತ್ರ್ಯವ ಕೊಟ್ಟಂತೆ ॥
ಸ್ವರ್ಧುನೀಪಿತ ಕೊಡುವವರ ಸುಖ-
ವೃದ್ಧಿಗೋಸುಗ ಬ್ರಹ್ಮವಾಯುಕ-
ಪರ್ದಿ ಮೊದಲಾದವರೊಳಿದ್ದವರಯೋಗ್ಯತೆಯನರಿತು
॥20॥

ಅಹಂಕರ್ತೃತ್ವದಿಂದ ಮಾಡಿದ ಪುಣ್ಯವನ್ನು ಭಕ್ತರಿಗೆ ಕೊಡುವ

ಹಲಧರಾನುಜ ಮಾಳ್ಪ ಕೃತ್ಯವ
ತಿಳಿಯದಹಂಕಾರದಿಂದೆ-
ನ್ನಳಿದು ವಿಧಿಯು ನಿಷೇಧಪಾತ್ರರು ಇಲ್ಲ ಎಂಬುವಗೆ ।
ಫಲಗಳದ್ವಯ ಕೊಡುವ ದೈತ್ಯರ
ಕಲುಷಕರ್ಮವ ಬಿಟ್ಟು ಪುಣ್ಯವ
ಸೆಳೆದು ತನ್ನೊಳಗಿಟ್ಟು ಕ್ರಮದಿಂ ಕೊಡುವ ಭಕ್ತರಿಗೆ ॥21॥

ಭಗವಂತನ ಅಸ್ತಿತ್ವದಿಂದ ಜೀವರ ಸಾಧನೆಗಳು

ತೋಯಜಾಪ್ತನ ಕಿರಣ ವೃಕ್ಷ-
ಚ್ಛಾಯ ವರ್ತಿಸುವಂತೆ ಕಮಲದ
ಳಾಯತಾಕ್ಷನು ಸರ್ವರೊಳು ವ್ಯಾಪಿಸಿದ ಕಾರಣದಿ ॥
ಹೇಯ ಸದ್ಗುಣ ಕರ್ಮ ತೋರ್ಪವು
ನ್ಯಾಯಕೋವಿದರಿಗೆ ನಿರಂತರ
ಶ್ರೀಯರಸ ಸರ್ವೋತ್ತಮೋತ್ತಮನೆಂದು ಪೇಳುವರು॥22॥

ಲಕುಮಿಯು ಜೀವರ ದ್ವಂದ್ವಕರ್ಮಗಳನ್ನು ಪತಿಗರ್ಪಿಸುವಳು

ಮೂಲಕಾರಣ ಪ್ರಕೃತಿಯೆನಿಪ ಮ-
ಹಾಲಕುಮಿ ಎಲ್ಲರೊಳಗಿದ್ದು ಸು-
ಲೀಲೆ ಗೈಯುತ ಪುಣ್ಯಪಾಪಗಳರ್ಪಿಸಲು ಪತಿಗೆ ॥
ಪಾಲಗಡಲೊಳು ಬಿದ್ದ ಜಲ ಕೀ-
ಲಾಲವೆನಿಪುದೆ ಜೀವಕೃತ ಕ-
ರ್ಮಾಲಿ ತದ್ವತು ಶುಭವು ಎನಿಪವು ಎಲ್ಲ ಕಾಲದಲಿ
॥23॥

ನಿರ್ದುಷ್ಟನಾಗಿ ಪ್ರಜ್ವಲಿಸುವ ಭಗವಂತನಿಗೆ ಪಾಪಗಳ ಭಯವಿಲ್ಲ

ಜ್ಞಾನ ಸುಖಬಲಪೂರ್ಣ ವಿಷ್ಣುವಿ-
ಗೇನು ಮಾಳ್ಪವು ತ್ರಿಗುಣಕಾರ್ಯ ಕೃ-
ಶಾನುವಿನ ಕ್ರಿಮಿಕವಿದು ಭಕ್ಷಿಪುದುಂಟೆ ಲೋಕದೊಳು ॥
ಈ ನಳಿನಜಾಂಡವನು ಬ್ರಹ್ಮೇ-
ಶಾನಮುಖ್ಯಸುರಾಸುರರ ಕಾ-
ಲಾನಳನವೋಲ್ ನುಂಗುವವಗೀ ಪಾಪಗಳ ಭಯವೆ

॥24॥

ಮೋದನಾಮಕನಿಂದ ವಿಷಯಸುಖ, ಪ್ರಮೋದನಾಮಕನಿಂದ ಪಾರಮಾರ್ಥಿಕಸುಖ

ಮೋದಶಿರ ದಕ್ಷಿಣಪಕ್ಷ ಪ್ರ-
ಮೋದ ಉತ್ತರಪಕ್ಷವೆಂದು ಋ-
ಗಾದಿ ಶ್ರುತಿಗಳು ಪೇಳುವವು ಆನಂದಮಯ ಹರಿ
ಮೋದ ವೈಷಿಕ ಸುಖವಿಶೇಷ ಪ್ರ-
ಮೋದ ಪಾರತ್ರಿಕಸುಖಪ್ರದ-
ನಾದ ಕಾರಣದಿಂದ ಮೋದ ಪ್ರಮೋದ ಎನಿಸುವನು॥25॥

ಕರ್ಮಲೇಪವಿಲ್ಲದ ಆನಂದಸಾಗರ

ಎಂದಿಗಾದರು ವೃಷ್ಟಿಯಿಂದ ವ-
ಸುಂಧರೆಯೊಳಿಪ್ಪ ಖಿಳಜಲದಿಂ
ಸಿಂಧು ವೃದ್ಧಿಯನೈದುವುದೆ ಬಾರದಿರೆ ಬರಿದಹುದೆ ||
ಕುಂದುಕೊರತೆಗಳಿಲ್ಲದಿಹ ಸ್ವಾ-
ನಂದ ಸಂಪೂರ್ಣಸ್ವಭಾವಗೆ
ಬಂದು ಮಾಡುವುದೇನು ಕರ್ಮಾಕರ್ಮಜನ್ಯಫಲ ||26||

ದೇಹವೆಂಬ ವೃಕ್ಷದಿ ಜೀವನಿಗೆ ಕರ್ಮಜಫಲ, ಶ್ರೀಹರಿಗೆಸಾರಫಲ ಮತ್ತು ದೈತ್ಯರಿಗೆ ಪಾಪಫಲ

ದೇಹವೃಕ್ಷದೊಳೆರಡುಪಕ್ಷಿಗ-
ಳಿಹವು ಎಂದಿಗೂ ಬಿಡದೆ ಪರಮ
ಸ್ನೇಹದಿಂದಲಿ ಕರ್ಮಜಫಲಗಳುಂಬ ಜೀವಖಗ ||
ಶ್ರೀಹರಿಯು ತಾ ಸಾರಭೋಕ್ತನು
ದ್ರೋಹಿಸುವ ಕಲ್ಯಾದಿ ದೈತ್ಯ ಸ-
ಮೂಹಕೀವ ವಿಶಿಷ್ಟ ಪಾಪಕ್ಲೇಶವೆಲ್ಲರಿಗೆ ||27||

ಲಕ್ಷ್ಮೀರಮಣನ ನೋಟ ಮಾತ್ರದಿ ಸುಮನಸರ ಪಾಪ ಭಸ್ಮ

ದ್ಯುಮಣಿಕಿರಣವ ಕಂಡಮಾತ್ರದಿ
ತಿಮಿರವೋಡುವ ತೆರದಿ ಲಕ್ಷ್ಮೀ-
ರಮಣ ನೋಡಿದಮಾತ್ರದಿಂದಘನಾಶ ಐದುವುದು ॥
ಕಮಲಸಂಭವ ಮುಖ್ಯರೆಲ್ಲಾ
ಸುಮನಸರೊಳಿಹ ಪಾಪರಾಶಿಯ
ಅಮರಮುಖನಂದದಲಿ ಭಸ್ಮವ ಮಾಳ್ಪ ಹರಿ ತಾನು॥28॥

ಮತಿವಂತ ಹಾಗೂ ಮತಿಹೀನ ಜೀವರಲ್ಲಿ ಸ್ವಾತಂತ್ರ್ಯದ ವಿಭಜನೆ

ಚತುರಶತಭಾಗದಿ ದಶಾಂಶದೊ-
ಳಿತರಜೀವರಿಗೀವ ಲೇಶವ
ದಿತಿಜ ದೇವರ್ಕಗಳಿಗೆ ಕೊಡುವ ವಿಶಿಷ್ಟ ದುಃಖಸುಖ ॥
ಮತಿವಿಹೀನ ಪ್ರಾಣಿಗಳಿಗಾ-
ಹುತಿಯ ಸುಖ ಮೃತಿ ದುಃಖವರ ಯೋ-
ಗ್ಯತೆಯನರಿತು ಪಿಪೀಲಮಶಕಾದಿಗಳಿಗೀವ ಹರಿ ॥29॥

ಕಲ್ಯಾದಿದೈತ್ಯರಿಗೆ ಅಂಧಂತಮಸ್ಸು, ಚತುರ್ಮುಖಾದಿದೇವತೆಗಳಿಗೆ ನಿಜಮುಕ್ತಿ

ನಿತ್ಯನಿರಯಾಂಧಾಖ್ಯ ಕೂಪದಿ
ಭೃತ್ಯರಿಂದೊಡಗೂಡಿ ಪುನರಾ-
ವರ್ತಿವರ್ಜಿತ ಲೋಕವೈದುವ ಕಲಿಯು ದ್ವೇಷದಲಿ ||
ಸತ್ಯಲೋಕಾಧಿಪ ಚತುರ್ಮುಖ
ತತ್ವದೇವರ್ಕಳಸಹಿತ ನಿಜ-
ಮುಕ್ತಿಯೈದುವ ಹರಿಪದಾಬ್ಜವ ಭಜಿಸಿ ಭಕುತಿಯಲಿ||30||

ಕರ್ಮಗಳನ್ನು ಕೃಷ್ಣಾರ್ಪಣವೆನ್ನದಿರಲು ಪುಣ್ಯವನ್ನು ದೈತ್ಯರು ಕದಿಯುವರು

ವಿಧಿನಿಷೇಧಗಳೆರಡು ಮರೆಯದೆ
ಮಧುವಿರೋಧೀಯ ಪಾದಕರ್ಪಿಸ-
ಲದಿತಿಮಕ್ಕಳಿಗೀವ ಪುಣ್ಯವ ಪಾಪ ದೈತ್ಯರಿಗೆ ||
ಸುದರ್ಶನಧರಗೀಯದಿರೆ ಬಂ-
ದೊದಗಿ ಒಯ್ವರು ಪುಣ್ಯ ದೈತ್ಯರು
ಅಧಿಪರಿಲ್ಲದ ವೃಕ್ಷಗಳ ಫಲದಂತೆ ನಿತ್ಯದಲಿ ||31||

ಅಯೋಗ್ಯರ ಪುಣ್ಯವನ್ನು ಬ್ರಹ್ಮಾದ್ಯರಿಗೆ ಕೊಟ್ಟು ರಮಿಸುವನು

ತಿಲಜಕಶ್ಮಲ ತ್ಯಜಿಸಿ ದೀಪವು
ತಿಳಿಯತೈಲವ ಗ್ರಹಿಸಿ ಮಂದಿರ-
ದೊಳಗೆ ವ್ಯಾಪಿಸಿಯಿಪ್ಪ ಕತ್ತಲೆ ಭಂಗಿಸುವ ತೆರದಿ ॥
ಕಲಿಮೊದಲುಗೊಂಡಖಿಳ ದಾನವ
ಕುಲಜರನುದಿನ ಮಾಳ್ಪ ಪುಣ್ಯಜ
ಫಲವ ಬ್ರಹ್ಮಾದ್ಯರಿಗೆ ಕೊಟ್ಟಲ್ಲಲ್ಲೆ ರಮಿಸುವನು ॥32॥

ಶ್ರದ್ಧೆಯಿಂದ ಅರ್ಪಿಸಿದ ಪಾಪಕರ್ಮವನ್ನು ಸ್ವೀಕರಿಸುವ ಶುದ್ಧಾತ್ಮ

ಇದ್ದಲೆಯು ನಿತ್ಯದಲಿ ಮೇಧ್ಯಾ-
ಮೇಧ್ಯವಸ್ತುಗಳುಂಡು ಲೋಕದಿ
ಶುದ್ಧಶುಚಿ ಎಂದೆನಿಸಿಕೊಂಬನು ವೇದಸ್ಮೃತಿಗಳೊಳು ॥
ಬುದ್ಧಿಪೂರ್ವಕವಾಗಿ ವಿಬುಧರು
ಶ್ರದ್ಧೆಯಿಂದರ್ಪಿಸಿದ ಕರ್ಮ ನಿ-
ಷಿದ್ಧವಾದರು ಸರಿಯೆ ಕೈಕೊಂಡುದ್ಧರಿಸುತಿಪ್ಪ ॥33॥

ಸರ್ವವೂ ಭಗವದರ್ಪಿತವಾದ ಮೇಲೆ ಭಯವೇಕೆ ?

ಒಡೆಯರಿದ್ದ ವನಸ್ಥಫಲಗಳ
ಬಡಿದು ತಿಂಬುವರುಂಟೆ ಕಂಡರೆ
ಹೊಡೆದು ಬಿಸುಟುವರೆಂಬ ಭಯದಿಂ ನೋಡಲಂಜುವರು॥
ಬಿಡದೆ ಮಾಡುವ ಕರ್ಮಗಳು ಮನೆ
ಮಡದಿ ಮಕ್ಕಳು ಬಂಧುಗಳು ಕಾ-
ರೊಡಲನಾಳುಗಳೆಂದ ಮಾತ್ರದಿ ಓಡುವುದು ದುರಿತ
॥34॥

ಭಗವಂತನ ಕರ್ತೃತ್ವವನ್ನು ಮರೆತರೆ ಪುಣ್ಯನಾಶ

ಜ್ಞಾನ ಕರ್ಮೇಂದ್ರಿಯಗಳಿಂದೇ-
ನೇನು ಮಾಡುವ ಕರ್ಮಗಳ ಲ-
ಕ್ಷ್ಮೀನಿವಾಸನಿಗರ್ಪಿಸುತಲಿರು ಕಾಲಕಾಲದಲಿ ॥
ಪ್ರಾಣಪತಿ ಕೈಕೊಂಡು ನಾನಾ-
ಯೋನಿಯೈದಿಸನೊಮ್ಮೆ ಕೊಡದಿರೆ
ದಾನವರು ಸೆಳೆದೊಯ್ವರೆಲ್ಲಾ ಪುಣ್ಯರಾಶಿಗಳ ॥35॥

ಶಾಸ್ತ್ರಾರ್ಥಜ್ಞಾನವಿರುವ ಅಹಂಕಾರಿಗೆ ಭಗವಂತನು ಒಲಿಯುವುದಿಲ್ಲ

ಶ್ರುತಿಸ್ಮೃತ್ಯರ್ಥವ ತಿಳಿದಹಂ
ಮತಿವಿಶಿಷ್ಟನು ಕರ್ಮ ಮಾಡಲು
ಪ್ರತಿಗ್ರಹಿಸನು ಪಾಪಗಳ ಕೊಡುತಿಪ್ಪ ನಿತ್ಯ ಹರಿ ॥
ಚತುರದಶಭುವನಾಧಿಪತಿ ಕ್ರತು-
ಕೃತ ಕೃತಜ್ಞನಿಯಾಮಕನು ಎನೆ-
ಮತಿಭ್ರಂಶಪ್ರಮಾದಸಂಕಟದೋಷವವಗಿಲ್ಲ ॥36॥

ಸರ್ವಸ್ವತಂತ್ರನೆಂದು ಅರ್ಪಿಸಿದ ಪುಣ್ಯಫಲ ತಾ ಸ್ವೀಕರಿಸಿ, ಪಾಪವನ್ನು ದೈತ್ಯರಿಗೆ ಕೊಡುವನು

ವಾರಿಜಾಸನಮುಖ್ಯರಾಜ್ಞಾ-
ಧಾರಕರು ಸರ್ವಸ್ವತಂತ್ರ ರ-
ಮಾರಮಣನೆಂದರಿದು ಇಷ್ಟಾನಿಷ್ಟಕರ್ಮಫಲ ॥
ಸಾರಭೋಕ್ತನಿಗರ್ಪಿಸಲು ಸ್ವೀ-
ಕಾರ ಮಾಡುವ ಪಾಪಫಲವ ಕು-
ಬೇರನಾಮಕ ದೈತ್ಯರಿಗೆ ಕೊಟ್ಟವರ ನೋಯಿಸುವ ॥37॥

ದೇವ ಕುಬೇರ, ನಿರುತ, ಸೂರ್ಯ, ಶುಕ್ಲ, ಅಕಾಯ ಎಂಬ ನಾಮಗಳ ನಿರ್ವಚನ

ಕ್ರೂರದೈತ್ಯರೊಳಿದ್ದು ತಾನೇ
ಪ್ರೇರಿಸುವ ಕಾರಣದಿ ಹರಿಗೆ ಕು-
ಬೇರನೆಂಬರು ಎಲ್ಲರೊಳು ನಿರ್ಗತಗತಿಗೆ ನಿರತ ||
ಸೂರಿಗಮ್ಯಗೆ ಸೂರ್ಯನೆಂಬರು
ದೂರಶೋಕಗೆ ಶುಕ್ಲ ಲಿಂಗಶ-
ರೀರವಿಲ್ಲದ ಕಾರಣದಲಿ ಆಕಾಯನೆನಿಸುವನು ||38||

ಮೋಕ್ಷಕ್ಕೆ ದಾರಿದೀಪ ಹರಿನಾಮಸ್ಮರಣೆ

ಪೇಳಲೊಶವಲ್ಲವುದ ಮಹಾಪಾ-
ಪಾಳಿಗಳ ಒಂದೇ ಕ್ಷಣದಿ ನಿ-
ರ್ಮೂಲಗೈಸಲೆಬೇಕು ಎಂಬುವಗೊಂದೆ ಹರಿನಾಮ ||
ನಾಲಿಗೆಯೊಳುಳ್ಳವಗೆ ಪರಮಕೃ-
ಪಾಳು ಕೃಷ್ಣನು ಕೈಪಿಡಿದು ತ-
ನ್ನಾಲಯದೊಳಿಟ್ಟನುದಿನದಲಾನಂದ ಪಡಿಸುವವನು||39||

ಭವರೋಗಕ್ಕೆ ಶ್ರೀಮದ್‌ಭಾಗವತದ ಶ್ರವಣವೇ ಔಷಧಿ

ರೋಗಿಯೌಷಧ ಪಥ್ಯದಿಂದ ನಿ-
ರೋಗಿಯೆನಿಸುವ ತೆರದಿ ಶ್ರೀಮ-
ದ್ಭಾಗವತ ಸುಶ್ರವಣಗೈದು ಭವಾಖ್ಯ ರೋಗವನು ॥
ನೀಗಿ ಶಬ್ದಾದ್ಯಖಿಳ ವಿಷಯ ನಿ-
ಯೋಗಿಸು ದಶೇಂದ್ರಿಯವನಿಲನೊಳು
ಶ್ರೀಗುರುಜಗನ್ನಾಥವಿಟ್ಠಲ ಪ್ರೀತನಾಗುವನು ॥40॥

॥ ಇಲ್ಲಿಗೆ ಹದಿನೆಂಟನೆಯ ಕ್ರೀಡಾವಿಲಾಸಸಂಧಿ ಅಥವಾ ಸರ್ವಸ್ವಾತಂತ್ರ್ಯಸಂಧಿ ಮುಗಿಯಿತು ॥

ಕರ್ಮವಿಮೋಚನಸಂಧಿ-19

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಕರ್ಮ ಮಾಡಿಸುವ 5 ಕಾರಣರೂಪಗಳು

ಮೂಲನಾರಾಯಣನು ಮಾಯಾ-
ಲೋಲನಂತವತಾರನಾಮಕ-
ವ್ಯಾಳರೂಪ ಜಯಾರಮಣನಾವೇಶನೆನಿಸುವನು ||
ಲೀಲೆಗೈವಾನಂತಚೇತನ
ಜಾಲದೊಳು ಪ್ರದ್ಯುಮ್ನ ಬ್ರಹ್ಮಾಂ-
ಡಾಲಯದ ಒಳಹೊರಗೆ ನೆಲೆಸಿಹ ಶಾಂತಿಯನಿರುದ್ಧ||1||

5 ಕಾರಣರೂಪಗಳೇ 25 ಕಾರ್ಯರೂಪಗಳಾಗಿ 30 ರೂಪಗಳಿಂದ ರಮಿಸುವ ಜಗದುದರ

ಐದು ಕಾರಣರೂಪ ಇಪ್ಪ-
ತ್ತೈದು ಕಾರ್ಯಗಳೆನಿಸುವವು ಆ-
ರೈದುರೂಪದಿ ರಮಿಸುತಿಪ್ಪನು ಈ ಚರಾಚರದಿ ॥
ಭೇದವರ್ಜಿತ ಮೂರ್ಜಗಜ್ಜ-
ನ್ಮಾದಿಕಾರಣ ಮುಕ್ತಿದಾಯಕ
ಸ್ವೋದರದೊಳಿಟ್ಟೆಲ್ಲರನು ಸಂತೈಪ ಸರ್ವಜ್ಞ ॥2॥

ಕಾರ್ಯ, ಕಾರಣ, ಕರ್ತೃಗಳೊಳು ನಿಯಾಮಕನು ಕಪಿಲ

ಕಾರ್ಯ ಕಾರಣ ಕರ್ತೃಗಳೊಳು ಸ್ವ-
ಭಾರ್ಯರಿಂದೊಡಗೂಡಿ ಕಪಿಲಾ-
ಚಾರ್ಯ ಕ್ರೀಡಿಸುತಿಪ್ಪ ತನ್ನೊಳು ತಾನೇ ಸ್ವೇಚ್ಛೆಯಲಿ ॥
ಪ್ರೇರ್ಯನಲ್ಲ ರಮಾಬ್ಜಭವ ಭವ
ರಾರ್ಯ ರಕ್ಷಿಸಿ ಶಿಕ್ಷಿಸುವನು ಸ್ವ-
ವೀರ್ಯದಿಂದಲಿ ದಿವಿಜದಾನವತತಿಯನನುದಿನದಿ ॥3॥

ಜೀವರ ಹೃದಯಸ್ಥನಾದ ಭಗವಂತನೇ ಜಗತ್ತಿನ ಧಾರಕನು

ಈ ಸಮಸ್ತ ಜಗತ್ತಿನೊಳಗಾ-
ಕಾಶದೊಳಗಿರುತಿಪ್ಪ ವ್ಯಾಪ್ತಾ-
ವೇಶನವತಾರಾಂತರಾತ್ಮಕನಾಗಿ ಪರಮಾತ್ಮ ॥
ನಾಶರಹಿತ ಜಗತ್ತಿನೊಳಗವ-
ಕಾಶದನು ತಾನಾಗಿ ಯೋಗೀ
ಶಾಶಯಸ್ಥಿತ ತನ್ನೊಳಗೆಲ್ಲರನಿಟ್ಟು ಸಲಹುವನು ॥4॥

ಕಾರ್ಯಕಾರಣರೂಪಗಳು ಅಭೇದ್ಯ ಹಾಗೂ ಅವ್ಯಕ್ತ

ದಾರುಪಾಷಾಣಗತ ಪಾವಕ
ಬೇರೆಬೇರಿಪ್ಪಂತೆ ಕಾರಣ
ಕಾರ್ಯಗಳ ಒಳಗಿದ್ದು ಕಾರಣಕಾರ್ಯನೆಂದೆನಿಸಿ ॥
ತೋರಿಕೊಳ್ಳದೆ ಎಲ್ಲರೊಳು ವ್ಯಾ-
ಪಾರ ಮಾಡುವ ಯೋಗ್ಯತೆಗಳನು-
ಸಾರ ಫಲಗಳನುಣಿಸಿ ಸಂತೈಸುವ ಕೃಪಾಸಾಂದ್ರ ॥5॥

ಯೋಗ್ಯತಾನುಸಾರ ಕರ್ಮಾಕರ್ಮ ಫಲಾಫಲ ಉಣಿಸುವ ಧರ್ಮಾತ್ಮ

ಊರ್ಮಿಗಳವೋಲಿಪ್ಪ ಕರ್ಮವಿ-
ಕರ್ಮ ಜನ್ಯ ಫಲಾಫಲಂಗಳ
ನಿರ್ಮಲಾತ್ಮನು ಮಾಡಿ ಮಾಡಿಸಿ ಉಂಡುಣಿಸುತಿಪ್ಪ ॥
ನಿರ್ಮಮ ನಿರಾಮಯ ನಿರಾಶ್ರಯ
ಧರ್ಮವಿದ್ಧರ್ಮಾತ್ಮ ಧರ್ಮಗ
ದುರ್ಮತಿಯ ಜನರೊಲ್ಲನಪ್ರತಿಮಲ್ಲ ಶ್ರೀನಲ್ಲ ॥6॥

ಜೀವರ ಪಾಪಫಲದ ದುಃಖ ಭಗವಂತನಿಗಿಲ್ಲ

ಜಲದ ವಡವಾನಲಗಳಂಬುಧಿ-
ಜಲವನುಂಬುವುವಬ್ದ ಮಳೆಗರೆ-
ದಿಳೆಗೆ ಶಾಂತಿಯನೀವುದನಲನು ತಾನೆ ಭುಂಜಿಪುದು ॥
ತಿಳಿವುದೀಪರಿಯಲ್ಲಿ ಲಕುಮೀ-
ನಿಲಯ ಗುಣಕೃತ ಕರ್ಮಜ ಫಲಾ-
ಫಲಗಳುಂಡುಣಿಸುವನು ಸರ್ವಗ ಸರ್ವ ಜೀವರಿಗೆ ॥7॥

ಬಿಂಬಕ್ರಿಯಾನುಸಂಧಾನ ರಹಿತ ಕರ್ಮಗಳು ವ್ಯರ್ಥ

ಪುಸ್ತಕಗಳವಲೋಕಿಸುತ ಮಂ-
ತ್ರಸ್ತುತಿಗಳನಲೇನು ರವಿಯುದ-
ಯಸ್ತಮನ ಪರಿಯಂತ ಜಪತಪ ಮಾಡಿ ಫಲವೇನು ॥
ಹೃಸ್ಥಪರಮಾತ್ಮನೆ ಸಮಸ್ತಾ-
ವಸ್ಥೆಗಳೊಳಿದ್ದೆಲ್ಲರೊಳಗೆ ನಿ-
ರಸ್ತಕಾಮನು ಮಾಡಿ ಮಾಡಿಪನೆಂದು ತಿಳಿಯದವ ॥8॥

ಹರಿಸ್ಮರಣೆಯ ಅನುಸಂಧಾನವಿಲ್ಲದೆ ಕರ್ಮ ಮಾಡಲು ದುಃಖ ಸಮೃದ್ಧಿಯಾಗುವುದು

ಮದ್ಯಭಾಂಡವ ದೇವನದಿಯೊಳ-
ಗದ್ದಿ ತೊಳೆಯಲು ನಿತ್ಯದಲಿ ಪರಿ-
ಶುದ್ಧವಾಹುದೆ ಎಂದಿಗಾದರು ಹರಿಪದಾಬ್ಜಗಳ ॥
ಬುದ್ಧಿಪೂರ್ವಕ ಭಜಿಸದವಗೆ ವಿ-
ರುದ್ಧವೆನಿಸುವವೆಲ್ಲ ಕರ್ಮ ಸ-
ಮೃದ್ಧಿಗಳು ದುಃಖವನೆ ಕೊಡುತಿಹವಧಮಜೀವರಿಗೆ ॥9॥

ಹರಿಯಾಜ್ಞೆ ಎಂದು ಭಕ್ತಿಪೂರ್ವಕ ಸರ್ವೋತ್ತಮನ ಭಜಿಸು

ಭಕ್ತಿಪೂರ್ವಕವಾಗಿ ಮುಕ್ತಾ-
ಮುಕ್ತನಿಯಾಮಕನ ಸರ್ವೋ-
ದ್ರಿಕ್ತಮಹಿಮೆಗಳನವರತ ಕೊಂಡಾಡು ಮರೆಯದಲೆ ॥
ಸಕ್ತನಾಗದೆ ಲೋಕವಾರ್ತೆ ಪ್ರ-
ಸಕ್ತಿಗಳನೀಡಾಡಿ ಶ್ರುತಿಸ್ಮೃ-
ತ್ಯುಕ್ತಕರ್ಮವ ಮಾಡುತಿರು ಹರಿಯಾಜ್ಞೆಯೆಂದರಿದು॥10॥

ಕರ್ಮಲೋಪಗಳು ಹರಿಸ್ಮರಣೆಯಿಂದ ಪೂರ್ಣವಾಗುವವು

ಲೋಪವಾದರು ಸರಿಯೆ ಕರ್ಮಜ-
ಪಾಪಪುಣ್ಯಗಳೆರಡು ನಿನ್ನನು
ಲೇಪಿಸವು ನಿಷ್ಕಾಮುಕನು ನೀನಾಗಿ ಮಾಡುತಿರೆ
ಸೌಪರ್ಣಿವರವಹನ ನಿನ್ನ ಮ-
ಹಾಪರಾಧಗಳೆಣಿಸದಲೆ ಸ್ವ-
ರ್ಗಾಪವರ್ಗದೊಳಿಟ್ಟು ಸಲಹುವ ಸತತ ಸುಖಸಾಂದ್ರ
॥11॥

ಕರ್ಮಮೋಚಕ ಸ್ತೋತ್ರ

ಸ್ವರತ ಸುಖಮಯ ಸುಲಭ ವಿಶ್ವಂ-
ಭರ ವಿಶೋಕ ಸುರಾಸುರಾರ್ಚಿತ
ಚರಣಯುಗ ಚಾರ್ವಾಂಗ ಶಾರ್ಙ್ಗ ಶರಣ್ಯ ಜಿತಮನ್ಯು॥
ಪರಮಸುಂದರತರ ಪರಾತ್ಪರ-
ಶರಣಜನಸುರಧೇನು ಶಾಶ್ವತ-
ಕರುಣಿ ಕಂಜದಳಾಕ್ಷಕಾಯೆನೆ ಕಂಗೊಳಿಪ ಸಿದ್ಧ ॥12॥

ದೇವರಿಂದ ರಕ್ಷಿತನಾಗಲು ದ್ವಂದ್ವಕರ್ಮಗಳನ್ನು ಸಮರ್ಪಿಸು

ನಿರ್ಮಲನು ನೀನಾಗಿ ಕರ್ಮ ವಿ-
ಕರ್ಮಗಳನು ನಿರಂತರದಲಿ ಸು-
ಧರ್ಮನಾಮಕಗರ್ಪಿಸುತ ನಿಷ್ಕಲುಷ ನೀನಾಗು ॥
ಭರ್ಮಗರ್ಭನ ಜನಕ ದಯದಲಿ
ದುರ್ಮತಿಗಳನು ಕೊಡದೆ ತನ್ನಯ
ಹರ್ಮದೊಳಿಗಿಟ್ಟೆಲ್ಲ ಕಾಲದಿ ಕಾವ ಕೃಪೆಯಿಂದ ॥13॥

ಕೇವಲ ಭಗವದ್-ಪ್ರೀತಿಗಾಗಿ ಆರಾಧಿಸು

ಕಲ್ಪಕಲ್ಪದಿ ಶರಣಜನವರ
ಕಲ್ಪವೃಕ್ಷನು ತನ್ನ ನಿಜಸಂ-
ಕಲ್ಪದನುಸಾರದಲಿ ಕೊಡುತಿಪ್ಪನು ಫಲಾಫಲವ ॥
ಅಲ್ಪಸುಖದಾಪೇಕ್ಷೆಯಿಂದಹಿ-
ತಲ್ಪನಾರಾಧಿಸದಿರೆಂದಿಗು
ಶಿಲ್ಪಿಗನ ಕೈಸಿಕ್ಕ ಶಿಲೆಯಂದದಲಿ ಸಂತೈಪ ॥14॥

ಉಪಾಸನೆಗೆ ತಕ್ಕ ಫಲವನ್ನು ಕೊಡುವ ಜಗದಾತ್ಮ

ದೇಶಭೇದಾಕಾಶದಂದದಿ
ವಾಸುದೇವನು ಸರ್ವಭೂತನಿ-
ವಾಸನೆನಿಸಿ ಚರಚರಾತ್ಮಕನೆಂದು ಕರೆಸುವನು ॥
ದ್ವೇಷಸ್ನೇಹೊದಾಸೀನಗಳಿ-
ಲ್ಲೀಶರೀರಗಳೊಳಗೆ ಅವರೋ-
ಪಾಸನಗಳಂದದಲಿ ಫಲವೀವನು ಪರಬ್ರಹ್ಮ ॥15॥

ಮಿಂಚಿನಂದದಿ ಹೃದಯಾಕಾಶದಿ ಹರಿ ಪೊಳೆಯಲು ಸಂಚಿತಾಗಾಮಿಗಳು ನಾಶವಾಗುವವು

ಸಂಚಿತಾಗಾಮಿಗಳ ಕರ್ಮ ವಿ-
ರಿಂಚಿಜನಕನ ಭಜಿಸೆ ಕೆಡುವವು
ಮಿಂಚಿನಂದದಿ ಪೊಳೆವ ಪುರುಷೋತ್ತಮ ಹೃದಂಬರದಿ ॥
ವಂಚಿಸುವ ಜನರೊಲ್ಲ ಶ್ರೀವ-
ತ್ಸಾಂಕಿತ ಸುಸದ್ವಕ್ಷ ತಾ ನಿ-
ಷ್ಕಿಂಚನ ಜನಪ್ರಿಯ ಸುರಮುನಿಗೇಯ ಶುಭಕಾಯ
॥16॥

ಕೇವಲ ಕರ್ಮಗಳು ತಾರಕವಲ್ಲ

ಕಾಲ ದ್ರವ್ಯ ಸುಕರ್ಮ ಶುದ್ಧಿಯ
ಪೇಳುವರು ಅಲ್ಪರಿಗೆ ಇವು ನಿ-
ರ್ಮೂಲಗೈಸವು ಎಲ್ಲ ಪಾಪಗಳೆಲ್ಲ ಕಾಲದಲಿ ॥
ತೈಲಧಾರೀಯಂತವನ ಪದ
ಓಲಯಿಸಿ ತುತಿಸದಲೆ ನಿತ್ಯದಿ
ಬಾಲಿಶರು ಕರ್ಮಾದಿಗಳೆ ತಾರಕವೆನುತಲಿಹರು ॥17॥

ಭಗವದಾಶ್ರಯದಿಂದಲೇ ಸಾಧನೆಯು ಸಂಪೂರ್ಣ ಆಗುವುದು

ಕಮಲಸಂಭವ ಶರ್ವಶಕ್ರಾ-
ದ್ಯಮರರೆಲ್ಲರು ಇವನ ದುರತಿ-
ಕ್ರಮ ಮಹಿಮೆಗಳ ಮನವಚನದಿಂ ಪ್ರಾಂತಗಾಣದಲೆ ॥
ಶ್ರಮಿತರಾಗಿ ಪದಾಬ್ಜ ಕಲ್ಪ-
ದ್ರುಮದ ನೆಳಲಾಶ್ರಯಿಸಿ ಲಕ್ಷ್ಮೀ-
ರಮಣ ಸಂತೈಸೆಂದು ಪ್ರಾರ್ಥಿಪರತಿಭಕುತಿಯಿಂದ ॥18॥

ಮಧ್ವಮತಾನುಯಾಯಿಗಳಿಗೆ ಮೋಕ್ಷವು ನಿಶ್ಚಿತ

ವಾರಿಚರವೆನಿಸುವವು ದರ್ದುರ
ತಾರಕಳೆಂದರಿದು ಭೇಕವ-
ನೇರಿ ಜಲಧಿಯ ದಾಟುವೆನು ಎಂಬುವನ ತೆರನಂತೆ ॥
ತಾರತಮ್ಯಜ್ಞಾನಶೂನ್ಯರು
ಸೂರಿಗಮ್ಯನ ತಿಳಿಯಲರಿಯದೆ
ಸೌರ ಶೈವಮತಾನುಗರನನುಸರಿಸಿ ಕೆಡುತಿಹರು ॥19॥

ಸಾಧುವೇಷಧಾರಿಗಳ ಆರಾಧಿಸುತ ಭವಸಮುದ್ರದೊಳು ಮುಳಗದಿರಿ

ಕ್ಷುಧೆಯಗೋಸುಗ ಪೋಗಿ ಕಾನನ
ಬದರಿಫಲಗಳಪೇಕ್ಷೆಯಿಂದಲಿ
ಪೊದೆಯೊಳಗೆ ಸಿಗಬಿದ್ದು ಬಾಯ್ದೆರದವನ ತೆರನಂತೆ ||
ವಿಧಿಪಿತನ ಪೂಜಿಸದೆ ನಿನ್ನಯ
ಉದರಗೋಸುಗ ಸಾಧುಲಿಂಗ-
ಪ್ರದರುಶಕರಾರಾಧಿಸುತ ಬಳಲದಿರು ಭವದೊಳಗೆ ||20||

ದೇವರಲ್ಲಿ ವಿಷಯಸುಖ ಬೇಡುವುದು ಕಾಮಧೇನುವಿನ ಬಳಿ ಗೋಮಯ ಬೇಡಿದಂತೆ

ಕ್ಷೋಣಿಪತಿಸುತನೆನಿಸಿ ಕೈ ದು-
ಗ್ಗಾಣಿಗೊಡ್ಡುವ ತೆರದಿ ಸುಮನಸ
ಧೇನು ಮನೆಯೊಳಗಿರಲು ಗೋಮಯ ||
ಬಯಸುವಂದದಲಿ ವೇಣುಗಾನಪ್ರಿಯನ ಐಹಿಕ ಸು-
ಖಾನುಭವ ಬೇಡದಲೆ ಲಕುಮೀ-
ಪ್ರಾಣನಾಥನ ಪಾದಭಕುತಿಯ ಬೇಡು ಕೊಂಡಾಡು
||21||

ಭಗವತ್ಸ್ಮರಣೆಗೆ ವಿಧಿನಿಷೇಧಗಳ ನೋಡಬೇಕಿಲ್ಲ

ಉದಯವ್ಯಾಪಿನೀ ದರ್ಶಪೌರ್ಣಿಮ-
ವಧಿಕಯಾಮವು ಶ್ರವಣವಭಿಜಿತು
ಸದನವೈದಿರೆ ಮಾಳ್ಪ ತೆರದಂದದಲಿ ಹರಿಸೇವೆ ॥
ವಿಧಿನಿಷೇಧಗಳೇನು ನೋಡದೆ
ವಿಧಿಸುತಿರು ನಿತ್ಯದಲಿ ತನ್ನಯ
ಸದನದೊಳಗಿಂಬಿಟ್ಟು ಸಲಹುವ ಭಕ್ತವತ್ಸಲನು ॥22॥

ನಿಂದ್ಯದ್ರವ್ಯವನ್ನು ತ್ಯಜಿಸಿ ಮಧ್ವಪತಿಯನ್ನು ಸರ್ವತ್ರ ಭಜಿಸು

ನಂದಿವಾಹನರಾತ್ರಿ ಸಾಧನೆ
ಬಂದ ದ್ವಾದಶಿ ದಶಮಿ ಪೈತ್ರಕ-
ಸಂಧಿಸಿಹ ಸಮಯದಲಿ ಶ್ರವಣವ ತ್ಯಜಿಸುವಂತೆ ಸದಾ ।
ನಿಂದ್ಯರಿಂದಲಿ ಬಂದ ದ್ರವ್ಯವ-
ಕಣ್ದೆರೆದು ನೋಡದಲೆ ಶ್ರೀಮದಾ-
ನಂದತೀರ್ಥಾಂತರ್ಗತನ ಸರ್ವತ್ರ ಭಜಿಸುತಿರು ॥23॥

ಜ್ಞಾನ, ಜ್ಞೇಯ, ಜ್ಞಾತೃ ಆಗಿರುವ ಪರಮಾತ್ಮ

ಜ್ಞಾನ ಜ್ಞೇಯ ಜ್ಞಾತೃವೆಂಬಭಿ-
ದಾನದಿಂ ಬುದ್ಧ್ಯಾದಿಗಳಧಿ-
ಷ್ಠಾನದಲಿ ನೆಲೆಸಿದ್ದು ಕರೆಸುತ ತತ್ತದಾಹ್ವಯದಿ ॥
ಭಾನುಮಂಡಲಗ ಪ್ರದರ್ಶಕ
ತಾನೆನಿಸಿ ವಶನಾಗುವನು ಶುಕ
ಶೌನಕಾದಿ ಮುನೀಂದ್ರ ಹೃದಯಾಕಾಶಗತಚಂದ್ರ ॥23॥

ಮುನಿಗಳ ಹೃದಯದಲ್ಲಿ ಪೊಳೆವ

ಶ್ರೀಮನೋರಮ ಮೇರುತೇಶ ತ್ರಿಕಕು-
ಬ್ಧಾಮ ಸತ್ಕಲ್ಯಾಣಗುಣ ನಿ-
ಸ್ಸೀಮ ಪಾವನನಾಮ ದಿವಿಜೋದ್ಧಾಮ ರಘುರಾಮ ॥
ಪ್ರೇಮಪೂರ್ವಕ ನಿತ್ಯ ತನ್ನ ಮ-
ಹಾಮಹಿಮೆಗಳ ತುತಿಸುವರಿಗೆ ಸು-
ಧಾಮಗೊಲಿದಂದದಲಿ ಅಖಿಳಾರ್ಥಗಳ ಕೊಡುತಿಪ್ಪ
॥24॥

ಪರಮಾತ್ಮನನ್ನು ಭಕ್ತಿಯಿಂದ ತುತಿಸಲು ಅಖಿಳಾರ್ಥಗಳ ಪಾಲಿಸುವ

ತಂದೆತಾಯ್ಗಳ ಕುರುಹನರಿಯದ
ಕಂದ ದೇಶಾಂತರದೊಳಗೆ ತ-
ನ್ನಂದದಲಿ ಇಪ್ಪವರ ಜನನೀಜನಕರನು ಕಂಡು ॥
ಹಿಂದೆ ಎನ್ನನು ಪಡೆದವರು ಇವ-
ರಂದದಲಿ ಇಪ್ಪರಲ್ಲೆ ನಾನವ-
ರೆಂದು ಕಾಣುವೆನೆನುತ ಹುಡುಕುವ ತೆರದಿ ಕೋವಿದರು
॥25॥

ಕಾಣೆಯಾದ ಮಗುವನ್ನು ಹುಡುಕುವ ತೆರದಲ್ಲಿ ಜ್ಞಾನಿಗಳು ದೇವರನ್ನು ಹುಡುಕುವರು

ಶ್ರುತಿ ಪುರಾಣ ಸಮೂಹದೊಳು ಭಾ-
ರತ ಪ್ರತಿಪ್ರತಿ ಪದಗಳೊಳು ನಿ-
ರ್ಜಿತನ ಗುಣರೂಪಗಳ ಹುಡುಕುತ ಪರಮಹರುಷದಲಿ
ಮತಿವಂತರು ಪ್ರತಿದಿವಸ ಸಾರ-
ಸ್ವತ ಸಮುದ್ರದಿ ಶಫರಿಯಂದದಿ
ಸತತ ಸಂಚರಿಸುವರು ಕಾಣುವ ಲವಲವಿಕೆಯಿಂದ ॥26॥

ಸಾರಸ್ವತ ಸಮುದ್ರದಲ್ಲಿ ಪರಮಾತ್ಮನ ಗುಣರೂಪಗಳನ್ನು ಹುಡುಕುವ ಜ್ಞಾನಿಗಳು

ಮತ್ಸ್ಯಕೇತನ ಜನಕ ಹರಿ ಶ್ರೀ-
ವತ್ಸಲಾಂಛನ ನಿಜಶರಣ್ಯಜನ
ವತ್ಸಲ ವರಾರೋಹ ವೈಕುಂಠಾಲಯನಿವಾಸಿ ॥
ಚಿತ್ಸುಖಪ್ರದ ಸಲಹೆನಲು ಗೋ-
ವತ್ಸಧ್ವನಿಗೊದಗುವ ತೆರದಿ ಪರ-ಮೋತ್ಸಹದಿ
ಬಂದೊದಗುವನು ನಿರ್ಮತ್ಸರರ ಬಳಿಗೆ ॥27॥

ಭಕ್ತಜನವತ್ಸಲ ಶ್ರೀಹರಿ

ಸೂರಿಗಳಿಗೆ ಸಮೀಪಗ ದುರಾ-
ಚಾರಗಳಿಗೆಂದೆಂದು ದೂರಾ-
ದ್ದೂರತರ ದುರ್ಲಭನೆನಿಸುವನು ದೈತ್ಯ ಸಂತತಿಗೆ ॥
ಸಾರಿಸಾರಿಗೆ ನೆನೆವವರ ಸಂ-
ಸಾರವೆಂಬ ಮಹೋರಗಕೆ ಸ-
ರ್ಪಾರಿಯೆನಿಸಿ ಸದಾ ಸುಸೌಖ್ಯವನೀವ ಸುಜನರಿಗೆ ॥28॥

ಪರಮಾತ್ಮನ ಅಧಿಷ್ಠಾನವು ಜೀವರ ಯೋಗ್ಯತಾನುಸಾರ ತ್ರಿವಿಕ್ರಮ ಸ್ತೋತ್ರ

ಚಕ್ರಶಂಖಗದಾಬ್ಜಧರ ದುರ-
ತಿಕ್ರಮ ದುರಾವಾಸ ವಿಧಿ ಶಿವ-
ಶಕ್ರ ಸೂರ್ಯಾದ್ಯಮರಪೂಜ್ಯಪದಾಬ್ಜ ನಿರ್ಲಜ್ಜ ॥
ಶುಕ್ರಶಿಷ್ಯನ ಅಶ್ವಮೇಧ
ಪ್ರಕ್ರಿಯವ ಕೆಡಿಸಬ್ಜಜಾಂಡವ
ತಿಕ್ರಮಿಸಿ ಜಾಹ್ನವಿಯ ಪಡೆದ ತ್ರಿವಿಕ್ರಮಾಹ್ವಯನು ॥30॥

ಭೋಗಾಸಕ್ತಿ ತ್ಯಜಿಸಿ ಹರಿಯಲ್ಲಿ ಆಸಕ್ತನಾಗು

ಶಕ್ತರೆನಿಸುವರಿಲ್ಲ ಹರಿವ್ಯತಿ-
ರಿಕ್ತ ಸುರಗಣರೊಳಗೆ ಸರ್ವೋ-
ದ್ರಿಕ್ತನೆನಿಸುವ ಸರ್ವರಿಂದಲಿ ಸರ್ವಕಾಲದಲಿ ॥
ಭಕ್ತಿಪೂರ್ವಕವಾಗಿ ಅನ್ಯಪ್ರ-
ಸಕ್ತಿಗಳನೀಡಾಡಿ ಪರಮಾ-
ಸಕ್ತನಾಗಿರುವ ಹರಿಕಥಾಮೃತಪಾನವಿಷಯದಲಿ ॥31॥

ಬೆಲ್ಲದಚ್ಚಿನ ಬೊಂಬೆಯಂತೆ ಎಲ್ಲೆಡೆ ಇರುವ ಪರಮಾತ್ಮ

ಪ್ರಣತಕಾಮದ ಭಕ್ತಚಿಂತಾ-
ಮಣಿ ಮಣಿಮಯಾಭರಣಭೂಷಿತ-
ಗುಣಿ ಗುಣತ್ರಯದೂರ ವರ್ಜಿತ ಗಹನಸನ್ಮಹಿಮ ॥
ಎಣಿಸ ಭಕ್ತರ ದೋಷಗಳ ಕುಂ-
ಭಿಣಿಜೆಯಾಣ್ಮ ಶರಣ್ಯ ರಾಮಾ-
ರ್ಪಣವೆನಲು ಕೈಗೊಂಡ ಶಬರಿಯ ಫಲವ ಪರಮಾತ್ಮ
॥32॥

ಭಕ್ತಿಯಿಂದ ಸಮರ್ಪಿಸಿದ ನಿಷಿದ್ಧಕರ್ಮವನ್ನು ಸ್ವೀಕರಿಸುವನು

ಬಲ್ಲೆನೆಂಬುವರಿಲ್ಲವೀತನ
ಒಲ್ಲೆನೆಂಬುವರಿಲ್ಲ ಲೋಕದೊ-
ಳಿಲ್ಲದಿಹ ಸ್ಥಳವಿಲ್ಲ ಒಳ್ಳೆ ಜ್ಞಾತಜನರಿಲ್ಲ ॥
ಬೆಲ್ಲದಚ್ಚಿನ ಬೊಂಬೆಯಂದದಿ
ಎಲ್ಲರೊಳಗಿರುತಿಪ್ಪ ಶ್ರೀ ಭೂ-
ನಲ್ಲ ಇವಗೆಣೆಯಿಲ್ಲ ಅಪ್ರತಿಮಲ್ಲ ಜಗಕೆಲ್ಲ ॥33॥

ಭಕ್ತರಿಗೆ ಪ್ರಾರಬ್ಧ ಕರ್ಮದ ತೀವ್ರತೆಯನ್ನು ಕಡಿಮೆ ಮಾಡಿ ಉಣಿಸುವ ಕರುಣಾಳು

ಶಬ್ದಗೋಚರ ಶಾರ್ವರೀಕರ-
ನಬ್ದವಾಹನನುಜ ಯದುವಂ-
ಶಾಬ್ಧಿಚಂದ್ರಮ ನಿರುಪಮ ಸುನಿಸ್ಸೀಮ ಸಮಿತಿಸಮ ॥
ಲಬ್ಧನಾಗುವ ತನ್ನವಗೆ ಪ್ರಾ-
ರಬ್ಧಕರ್ಮಗಳುಣಿಸಿ ತೀವ್ರದಿ
ಕ್ಷುಬ್ಧಪಾವನಕನಂತೆ ಬಿಡದಿಪ್ಪನು ದಯಾಸಾಂದ್ರ ॥34॥

ಪಾಂಡವರಂತೆ ನಮಗೂ ಕರ್ಮವಿಮೋಚನೆ ಮಾಡುವ ಶ್ರೀಕೃಷ್ಣ

ಶ್ರೀ ವಿರಿಂಚಾದ್ಯಮರವಂದಿತ
ಈ ವಸುಂಧರೆಯೊಳಗೆ ದೇವಕಿ-
ದೇವಿಜಠರದೊಳವತರಿಸಿದನು ಅಜನು ಜನದಂತೆ ॥
ರೇವತೀರಮಣಾನುಜನು ಸ್ವಪ-
ದಾವಲಂಬಿಗಳನು ಸಲಹಿ ದೈ-
ತ್ಯಾವಳಿಯ ಸಂಹರಿಸಿದ ಜಗನ್ನಾಥ ವಿಟ್ಠಲನು ॥35॥

॥ ಇಲ್ಲಿಗೆ ಹತ್ತೊಂಭತ್ತನೆಯ ಕರ್ಮವಿಮೋಚನಸಂಧಿ ಮುಗಿಯಿತು ॥

ಗುಣತಾರತಮ್ಯಸಂಧಿ-20

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ರಮಾ ಬ್ರಹ್ಮರಿಂದ ಆರಾಧ್ಯ ಅನಂತಗುಣ ಪರಿಪೂರ್ಣ ಭಗವಂತ

ಶ್ರೀಧರಾ ದುರ್ಗಾಮನೋರಮ-
ವೇಧಮುಖ ಸುಮನಸಗಣ ಸಮಾ-
ರಾಧಿತ ಪದಾಂಭೋಜ ಜಗದಂತರ್ಬಹಿರ್ವ್ಯಾಪ್ತ ||
ಗೋಧರ ಫಣಿವರಾತಪತ್ರ ನಿ-
ಷೇಧದೂರ ವಿಚಿತ್ರ ಕರ್ಮ ಸು-
ಬೋಧ ಸುಖಮಯಗಾತ್ರ ಪರಮಪವಿತ್ರ ಸುಚರಿತ್ರ ||1||

ಶ್ರೀಹರಿಯ ನಿರ್ದುಷ್ಟ ಗುಣವಿಶೇಷಗಳು

ನಿತ್ಯನಿರ್ಮಲ ನಿಗಮವೇದ್ಯೋ-
ತ್ಪತ್ತಿಸ್ಥಿತಿಲಯದೋಷವರ್ಜಿತ
ಸ್ತುತ್ಯ ಪೂಜ್ಯ ಪ್ರಸಿದ್ಧ ಮುಕ್ತಾಮುಕ್ತಗಣಸೇವ್ಯ ॥
ಸತ್ಯಕಾಮ ಶರಣ್ಯ ಶಾಶ್ವತ
ಭೃತ್ಯವತ್ಸಲ ಭಯನಿವಾರಣ
ಅತ್ಯಧಿಕ ಸಂಪ್ರಿಯತಮ ಜಗನ್ನಾಥ ಮಾಂ ಪಾಹಿ ॥2॥

ಸರ್ವೋತ್ತಮಪುರುಷನನ್ನು ಬಗೆ ಬಗೆಯಿಂದ ಸೇವಿಸುವ ಅಕ್ಷರಳಾದ ಮಹಾಲಕ್ಷ್ಮೀ

ಪರಮಪುರುಷನ ರೂಪಗುಣವನು-
ಅರಸಿ ಕಾಂಬಳು ಪ್ರವಹದಂದದಿ
ನಿರುಪಮಳು ನಿರ್ದುಃಖಸುಖಸಂಪೂರ್ಣಳೆನಿಸುವಳು ॥
ಹರಿಗೆ ಧಾಮತ್ರಯಳೆನಿಸಿ ಆ-
ಭರಣವಸನಾಯುಧಗಳಾಗಿ-
ದ್ದರಿಗಳನು ಸಂಹರಿಸುವಳು ಅಕ್ಷರಳೆನಿಸಿಕೊಂಡು ॥3॥

ಭಗವಂತನಿಗಿಂತ ಅನಂತ ಗುಣ ಕಡಿಮೆ ಮಹಾಲಕ್ಷ್ಮೀ

ಈತಗಿಂತಾನಂತಗುಣದಲಿ
ಶ್ರೀತರುಣಿ ತಾ ಕಡಿಮೆಯೆನಿಪಳು
ನಿತ್ಯಮುಕ್ತಳು ನಿರ್ವಿಕಾರಳು ತ್ರಿಗುಣವರ್ಜಿತಳು ॥
ಧೌತಪಾಪ ವಿರಿಂಚಿ ಪವನರ
ಮಾತೆಯೆನಿಪ ಮಹಾಲಕುಮಿ ವಿ-
ಖ್ಯಾತಳಾಗಿಹಳೆಲ್ಲಕಾಲದಿ ಶ್ರುತಿಪುರಾಣದೊಳು ॥4॥

3ನೆಯ ಕಕ್ಷೆ ಬ್ರಹ್ಮ ವಾಯು

ಕಮಲಸಂಭವ ಪವನರೀರ್ವರು
ಸಮರು ಸಮವರ್ತಿಗಳು ರುದ್ರಾ-
ದ್ಯಮರಗಣಸಂಸೇವಿತಪರಬ್ರಹ್ಮನಾಮಕರು ॥
ಯಮಳರಿಗೆ ಮಹಲಕುಮಿ ತಾನು-
ತ್ತಮಳುಕೋಟಿ ಸಜಾತಿಗುಣದಿಂ-
ದಮಿತ ಸುವಿಜಾತ್ಯಧಮರೆನಿಪರು ಬ್ರಹ್ಮವಾಯುಗಳು॥5॥

4ನೆಯ ಕಕ್ಷ ಸರಸ್ವತೀ ಭಾರತೀ

ಪತಿಗಳಿಂದ ಸರಸ್ವತೀ ಭಾ-
ರತಿಗಳಧಮರು ನೂರುಗುಣ ಪರಿ-
ಮಿತ ವಿಜಾತ್ಯವರರು ಬಲಜ್ಞಾನಾದಿಗುಣದಿಂದ ॥
ಅತಿಶಯಳು ವಾಗ್ದೇವಿ ಶ್ರೀ ಭಾ-
ರತಿಗೆ ಪದದ ಪ್ರಯುಕ್ತ ವಿಧಿ ಮಾ-
ರುತರವೋಲ್ ಚಿಂತಿಪುದು ಸದ್ಭಕ್ತಿಯಲಿ ಕೋವಿದರು
॥6॥

5ನೆಯ ಕಕ್ಷ ಗರುಡ ಶೇಷ ರುದ್ರ
6ನೆಯ ಕಕ್ಷ ಷಣ್ಮಹಿಷಿಯರ ತಾರತಮ್ಯ

ಖಗ ಫಣಿಪತಿ ಮೃಡರು ಸಮ ವಾ-
ಣಿಗೆ ಶತಗುಣಾಧಮರು ಮೂವ-
ರ್ಮಿಗಿಲೆನಿಸುವನು ಶೇಷಪದದಿಂದಲಿ ತ್ರಿಯಂಬಕಗೆ ॥
ನಗಧರನ ಷಣ್ಮಹಿಷಿಯರು ಪ-
ನ್ನಗವಿಭೂಷಣಗೈದು ಮೇನಕೆ
ಮಗಳು ವಾರುಣಿ ಸೌಪರಣಿಗಳಿಗಧಿಕವೆರಡುಗುಣ ॥7॥

7ನೆಯ ಕಕ್ಷ ಸೌಪರ್ಣಿ ವಾರುಣಿ ಪಾರ್ವತಿ
8ನೆಯ ಕಕ್ಷ ಇಂದ್ರ, ಕಾಮ

ಗರುಡ ಶೇಷ ಮಹೇಶರಿಗೆ ಸೌ-
ಪರಣಿ ವಾರುಣಿ ಪಾರ್ವತಿಯು ಮೂ-
ವರು ದಶಾಧಮ ವಾರುಣಿಗೆ ಕಡಿಮೆಯೆನಿಸುವಳು ಗೌರಿ ||
ಹರನ ಮಡದಿಗೆ ಹತ್ತು ಗುಣದಲಿ
ಸುರಪಕಾಮರು ಕಡಿಮೆ ಇಂದ್ರಗೆ
ಕೊರತೆಯೆನಿಸುವ ಮನ್ಮಥನು ಪದದಿಂದಲಾವಾಗ ||8||

9ನೆಯ ಕಕ್ಷ ಅಹಂಕಾರಿಕ ಪ್ರಾಣ,
10ನೆಯ ಕಕ್ಷ ಗುರು, ರತಿ, ಶಚ್ಯಾದಿಗಳು
11ನೆಯ ಕಕ್ಷ ಪ್ರವಾಹ ವಾಯು

ಈರೈದುಗುಣ ಕಡಿಮೆಯಾಹಂ-
ಕಾರಿಪ್ರಾಣನು ಮನೋಜನ-
ಗಾರಿಗಳಿಗನಿರುದ್ಧ ರತಿ ಮನು ದಕ್ಷ ಗುರು ಶುಚಿಯು ||
ಆರುಜನ ಸಮ ಪ್ರಾಣನಿಂದಲಿ
ಹೌರಗೆನಿಪರು ಹತ್ತು ಗುಣದಲಿ
ಮಾರಜಾದ್ಯರಿಗೈದು ಗುಣದಿಂಧಮ ಪ್ರವಹಾಖ್ಯ ||9||

12ನೆಯ ಕಕ್ಷೆ ಸೂರ್ಯ ಚಂದ್ರಾದಿಗಳು, 13ನೆಯ ಕಕ್ಷೆ ವರುಣ, 14ನೆಯ ಕಕ್ಷೆ ನಾರದರು, 15ನೆಯ ಕಕ್ಷೆ ಭೃಗು, ಅಗ್ನಿ, ಪ್ರಸೂತಿ

ಗುಣದ್ವಯದಿಂ ಕಡಿಮೆ ಪ್ರವಹಗೆ
ಇನ ಶಶಾಂಕ ಯಮ ಸ್ವಯಂಭುವ
ಮನುಮಡದಿ ಶತರೂಪನಾಲ್ವರು ಪಾದಪಾದಾರ್ಧ ॥
ವನಧಿ ನೀಚ ಪದಾರ್ಧ ನಾರದ
ಮುನಿಗೆ ಭೃಗ್ವಗ್ನಿ ಪ್ರಸೂತಿಗ
ಳೆನಿಸುವರು ಪಾದಾರ್ಧಗುಣದಿಂದಧಮರಹುದೆಂದು॥10॥

16ನೆಯ ಕಕ್ಷೆ ಸಪ್ತ ಋಷಿಗಳು ವಿಶ್ವಾಮಿತ್ರ, ವೈವಸ್ವತ ಮನು 17ನೆಯ ಕಕ್ಷೆ ಮಿತ್ರನಾಮಕ ಸೂರ್ಯ

ಹುತವಹಗೆ ದ್ವಿಗುಣಾಧಮರು ವಿಧಿ-
ಸುತಮರೀಚ್ಯಾದಿಗಳು ವೈವ-
ಸ್ವತನು ವಿಶ್ವಾಮಿತ್ರರಿಗೆ ಕಿಂಚಿದ್ಗುಣಾಧಮನು ॥
ವ್ರತಿವರ ಜಗನ್ಮಿತ್ರ ವರ ನಿರ-
ಋತಿ ಪ್ರಾವಹಿ ತಾರರಿಗೆ ಕಿಂ-
ಚಿತ್ ಗುಣಾಧಮ ಧನಪ ವಿಷ್ವಕ್ಸೇನನೆನಿಸುವನು ॥11॥

18ನೆಯ ಕಕ್ಷೆ ಧನಪ ಗಣಪಾದಿಗಳು
85 ಶೇಷಶತಸ್ಥರು

ಧನಪ ವಿಷ್ವಕ್ಸೇನ ಗೌರೀ-
ತನಯರಿಗೆ ಉಕ್ತೇತರರು ಸಮ-
ರೆನಿಸುವರು ಎಂಭತ್ತೈದು ಜನ ಶೇಷಶತರೆಂದು ॥
ದಿನಪರಾರೇಳಧಿಕನಾಲ್ವ-
ತ್ತನಿಲರೇಳ್ವಸುರುದ್ರರೀರೈ
ದನಿತು ವಿಶ್ವೇದೇವ ಋಭುವಶ್ವಿನಿಗಳೆರಡು ಪಿತೃಧರಣೀ
॥12॥

ಚ್ಯವನ, ಸನಕಾದಿಗಳು, ಶುಕ್ರ, ಕಶ್ಯಪ, 11 ಮನು, 7 ಇಂದ್ರರು, ರಾಜರು, ಕರ್ಮಜದೇವತೆಗಳು

ಇವರಿಗಿಂತಲಿ ಕೊರತೆಯೆನಿಪರು-
ಚ್ಯವನಸನಕಾದಿಗಳು ಪಾವಕ
ಕವಿ ಉಚಥ್ಯ ಜಯಂತ ಕಶ್ಯಪ ಮನುಗಳೇಕಾದಶ ॥
ಧ್ರುವ ನಹುಷ ಶಶಿಬಿಂದು ಹೈಹಯ-
ದವುಷ್ಯಂತ ವಿರೋಚನನ ನಿಜ-
ಕುವರ ಬಲಿ ಮೊದಲಾದ ಸಪ್ತೇಂದ್ರರು ಕಕುಸ್ಥಗಯ॥13॥

ಪೃಥು, ಭರತ, ಪ್ರಹ್ಲಾದ, ಪರೀಕ್ಷಿತಿ, ಹರಿಶ್ಚಂದ್ರಾದಿ ರಾಜರು

ಪೃಥು ಭರತ ಮಾಂಧಾತ ಪ್ರಿಯ
ವ್ರತ ಮರುತ ಪ್ರಹ್ಲಾದ ಸುಪರೀ-
ಕ್ಷಿತ ಹರಿಶ್ಚಂದ್ರಾಂಬರೀಷೋತ್ತಾನಪಾದಮುಖ ॥
ಶತಸುಪುಣ್ಯಶ್ಲೋಕರು ಗದಾ-
ಭೃತಗಧಿಷ್ಠಾನರು ಸುಪ್ರಿಯ
ವ್ರತಗೆ ದ್ವಿಗುಣಾಧಮರು ಕರ್ಮಜರೆಂದು ಕರೆಸುವರು
॥14॥

20ನೆಯ ಕಕ್ಷೆ ಗಂಗಾ, ಸಂಜ್ಞಾ, ರೋಹಿಣಿ, ಶ್ಯಾಮಳಾ, ವಿರಾಟ್, ಪರ್ಜನ, 21ನೆಯ ಕಕ್ಷೆ ಅನಾಖ್ಯಾತರು 22ನೇ ಕಕ್ಷೆ ಅಗ್ನಿ ಪತ್ನಿ ಸ್ವಾಹಾಸ್ವದಾ 23ನೆಯ ಕಕ್ಷೆ ಬುಧ, 24ನೆಯ ಕಕ್ಷೆ ಉಷಾ, 25ನೆಯಕಕ್ಷೆ ಶನೈಶ್ಚರ ಗುಣ

ನಳನೀ ಸಂಜ್ಞಾ ರೋಹಿಣೀ ಶ್ಯಾ-
ಮಲ ವಿರಾಟ್ ಪರ್ಜನ್ಯರಧಮರು
ಎಲರಮಿತ್ರನ ಮಡದಿ ದ್ವಿಗುಣಾಧಮಳು ಬಾಂಬೊಳೆಗೆ ॥
ಜಲಮಯ ಬುಧಾಧಮನು ದ್ವಿಗುಣದಿ
ಕೆಳಗೆನಿಸುವರುಷಾ ಶನೈಶ್ಚರ-
ನಿಳೆಯು ಈರುಗುಣಾಧಮರುಷಾದೇವಿ ದೆಶೆಯಿಂದ॥15॥

26ನೆಯ ಕಕ್ಷೆ ಪುಷ್ಕರ, 27ನೆಯ ಕಕ್ಷೆ ಆಜಾನಜರು, 28ನೆಯ ಕಕ್ಷೆ ಚಿರಪಿತೃ, 29ನೆಯ ಕಕ್ಷೆ ಅಪ್ಸರರು ಋಷಿಗಳು ದೇವಗಂಧರ್ವರು

ಎರಡುಗುಣ ಕರ್ಮಾಧಿಪತಿ ಪು-
ಷ್ಕರ ಕಡಿಮೆಯಾಜಾನದಿವಿಜರು
ಚಿರಪಿತೃಗಳಿಂದುತ್ತಮರು ಕಿಂಕರರು ಪುಷ್ಕರಗೆ ॥
ಸುರಪನಾಲಯ ಗಾಯಕೋತ್ತಮ-
ರೆರಡ್ಶೈದುಗುಣದಿಂದಧಮರು ತು-
ಬುರಗೆ ಸಮ ನವ ಕೋಟಿಋಷಿಗಳು ನೂರುಜನರುಳಿದು
॥16॥

30ನೆಯ ಕಕ್ಷೆ ಮನುಷ್ಯ ಗಂಧರ್ವರು 31ನೆಯ ಕಕ್ಷೆ ರಾಜರು, 32ನೆಯ ಕಕ್ಷೆ ಮನುಷ್ಯೋತ್ತಮರು

ಆವರವರ ಪತ್ನಿಯರು ಅಪ್ಸರ-
ಯುವತಿಯರು ಸಮ ಉತ್ತಮರನುಳಿ-
ದವರರೆನಿಪರು ಮನುಜಗಂಧರ್ವರು ದ್ವಿಷಡ್ಗುಣದಿ ॥
ಕುವಲಯಾಧಿಪರೀರ್ರೈದು ಗುಣ
ವವನಿಪ ಸ್ತ್ರೀಯರು ದಶೋತ್ತರ
ನವತಿಗುಣದಿಂದಧಮರೆನಿಪರು ಮಾನುಷೋತ್ತಮರು ॥17॥

ಮುಕ್ತಿಯೋಗ್ಯರ ಮತ್ತು ನಿತ್ಯಸಂಸಾರಿಗಳ ಗುಣಗಳು

ಸತ್ವಸತ್ವರು ಸತ್ವರಾಜಸ
ಸತ್ವ ತಾಮಸ ಮೂವರು ರಜ-
ಸ್ಸತ್ವರಧಿಕಾರಿಗಳು ಭಗವದ್ಭಕ್ತರೆನಿಸುವರು ॥
ನಿತ್ಯಬದ್ಧರು ರಜೋರಜರು-
ತ್ಪತ್ತಿ ಭೂ ಸ್ವರ್ಗದೊಳು ನರಕದಿ
ಪೃಥ್ವಿಯೊಳು ಸಂಚರಿಸುತಿಪ್ಪರು ರಜಸ್ತಾಮಸರು ॥18॥

ಅಸುರ, ದೈತ್ಯ, ದೈತ್ಯತಮನಾದ ಕಲಿ ಇವರುಗಳ ಲಕ್ಷಣ

ತಮಸ್ಸಾತ್ವಿಕರೆನಿಸಿಕೊಂಬರು
ಅಮಿತನಾಖ್ಯಾತಾಸುರಗಣವಿದೆ-
ತಮೋರಾಜಸರೆನಿಸಿಕೊಂಬರು ದೈತ್ಯಸಮುದಾಯ ॥
ತಮಸ್ತಾಮಸ ಕಲಿ ಪುರಂಧ್ರಿಯು
ಅಮಿತ ದುರ್ಗುಣಪೂರ್ಣ ಸರ್ವಾ-
ಧಮರೊಳಧಮಾಧಮನು ದುರಾತ್ಮನು ಕಲಿಯೆನಿಸಿಕೊಂಬ
॥19॥

ಕಲಿಯು ಪಾಪಿಗಳಲ್ಲಿ ನೀಚ, ನವವಿಧ ದ್ವೇಷಾಕಾರ ಮತ್ತು ಇವನ 5 ಸ್ಥಾನಗಳು

ಇವನ ಪೋಲುವ ಪಾಪಿಜೀವರು
ಭುವನಮೂರೊಳಗಿಲ್ಲ ನೋಡಲು
ನವವಿಧದ್ವೇಷಗಳಿಗಾಕರನೆನಿಸಿಕೊಳುತಿಪ್ಪ ॥
ಬವರದಲಿ ಬಂಗಾರದಲಿ ನಟ
ಯುವತಿದ್ಯೂತಾಪೇಯ ಮೃಷ
ಕವಿಸಿ ಮೋಹದಿ ಕೆಡಿಸುವನು ಎಂದರಿದು ತ್ಯಜಿಸುವುದು
॥20॥

ಜಗತ್ತಿನ ಸೃಷ್ಟಿ ಶ್ರೀಹರಿಗೆ ಲೀಲೆ, ಜಗತ್ತನ್ನು ತಾರತಮ್ಯದಿಂದ ತಿಳಿದವರಿಗೇ ಮಾತ್ರ ಮುಕ್ತಿ

ತ್ರಿವಿಧ ಜೀವ ಪ್ರತತಿಗಳ ಸ-
ಗ್ಗಾವಳಿಯ ಆಣ್ಮಲಯನು ನಿರ್ಮಿಸಿ
ಯುವತಿಯರ ಒಡಗೂಡಿ ಕ್ರೀಡಿಸುವನು ಕೃಪಾಸಾಂದ್ರ ॥
ದಿವಿಜ ದಾನವ ತಾರತಮ್ಯದ
ವಿವರ ತಿಳಿವ ಮಹಾತ್ಮರಿಗೆ ಜಾ-
ಹ್ನವಿ ಸಖ ತಾನೊಲಿದು ಉದ್ಧರಿಸುವನು ಭವದಿಂದ॥21॥

ತಾರತಮ್ಯಜ್ಞಾನವು ಭವಸಮುದ್ರಕ್ಕೆ ನಾವೆ, ವೈಕುಂಠಕ್ಕೆ ಮೆಟ್ಟಿಲು

ದೇವ ದೈತ್ಯರ ತಾರತಮ್ಯವು
ಪಾವಮಾನಿಮತಾನುಗರಿಗಿದು
ಕೇವಲಾವಶ್ಯಕವು ತಿಳಿವುದು ಸರ್ವಕಾಲದಲಿ ||
ದಾವಶಿಖಿ ಪಾಪಾಟವಿಗೆ ನವ-
ನಾವೆಯೆನಿಪುದು ಭವಸಮುದ್ರಕೆ
ಪಾವಟಿಗೆ ವೈಕುಂಠಲೋಕಕಿದೆಂದು ಕರೆಸುವುದು ||22||

ತಾರತಮ್ಯಜ್ಞಾನದಿಂದಲೇ ಮುಕ್ತಿ

ತಾರತಮ್ಯಜ್ಞಾನ ಮುಕ್ತಿ-
ದ್ವಾರವೆನಿಪುದು ಭಕ್ತಜನರಿಗೆ
ತೋರಿ ಪೇಳಿ ಸುಖಾಬ್ಧಿಯೊಳು ಲೋಲಾಡುವುದು ಬುಧರು ||
ಕ್ರೂರಮಾನವರಿಗಿದು ಕರ್ಣಕ-
ಠೋರವೆನಿಪುದು ನಿತ್ಯದಲಿ ಅಧಿ-
ಕಾರಿಗಳಿಗಿದನರುಪುವುದು ದುಸ್ತರ್ಕಗಳ ಬಿಟ್ಟು ||23||

ಸರ್ವೋತ್ತಮಹರಿಯಿಂದ
ಭೃಗು ಋಷಿಗಳ ತನಕ ತಾರತಮ್ಯ

ಹರಿ ಸಿರಿ ವಿರಿಂಚೀರ ಭಾರತಿ
ಗರುಡ ಫಣಿಪತಿ ಷಣ್ಮಹಿಷಿಯರು
ಗಿರಿಜ ನಾಕೇಶಸ್ಮರಪ್ರಾಣಾನಿರುದ್ಧ ಶಚೀ ॥
ಗುರು ರತೀ ಮನು ದಕ್ಷ ಪ್ರವಹಾ-
ಮರುತ ಮಾನವಿ ಯಮ ಶಶೀ ದಿವಾ-
ಕರ ವರುಣ ನಾರದ ಸುರಾಸ್ಯ ಪ್ರಸೂತಿ ಭೃಗುಮುನಿಪ
॥24॥

ಸಪ್ತ ಬ್ರಹ್ಮ ಋಷಿಗಳಿಂದ ಚ್ಯವನಾದಿ ಮುನಿಗಳ ತಾರತಮ್ಯ

ವ್ರತತಿಜಾಸನ ಪುತ್ರರೆನಿಸುವ
ವ್ರತಿವರತ್ರಿ ಮರೀಚಿ ವೈವ-
ಸ್ವತನು ತಾರಾಮಿತ್ರ ನಿರಋತಿ ಪ್ರವಹಮಾರುತನ ॥
ಸತಿ ಧನೇಶಾಶ್ವಿನಿಗಳಿರ್ಗಣ-
ಪತಿಯು ವಿಷ್ವಕ್ಸೇನ ಶೇಷ ಸು-
ಶತರು ಮನುಗಳುಚಿಥ್ಯಚ್ಯವನಮುನಿಗಳಿಗೆ ನಮಿಪೆ
॥25॥

100 ಪುಣ್ಯಶ್ಲೋಕರಾಜರಿಂದ ಪುಷ್ಕರನ ತನಕ ಸ್ತೋತ್ರ

ಶತಸುಪುಣ್ಯಶ್ಲೋಕರೆನಿಸುವ
ಕ್ಷಿತಿಪರಿಗೆ ನಮಿಸುವೆನು ಭಾಗೀ-
ರಥಿ ವಿರಾಟ್ ಪರ್ಜನ್ಯ ರೋಹಿಣಿ ಶ್ಯಾಮಲಾ ಸಂಜ್ಞಾ ॥
ಹುತವಹನ ಮಹಿಳಾ ಬುಧೋಷಾ-
ಕ್ಷಿತಿ ಶನೈಶ್ಚರ ಪುಷ್ಕರರಿಗಾ-
ನತಿಸಿ ಬಿನ್ನೈಸುವೆನು ಭಕ್ತಿಜ್ಞಾನವಿಯಲೆಂದು ॥26॥

16,100 ಕೃಷ್ಣಪತ್ನಿಯರು, ಅಪ್ಸರರು, ಗಂಧರ್ವರು ಹರಿನಾಮಕೀರ್ತನೆ ಮಾಡಿಸಲಿ

ನೂರಧಿಕವಾಗಿಪ್ಪ ಮತ್ತಧಿ-
ನಾರುಸಾವಿರ ನಂದಗೋಪಕು-
ಮಾರನರ್ಧಾಂಗಿಯರಗಸ್ತ್ಯಾದಿಕ ಮುನೀಶ್ವರರು ॥
ಊರ್ವಶೀ ಮೊದಲಾದ ಅಪ್ಸರ
ನಾರಿಯರು ಶತ ತುಂಬುರರು ಕಂ-
ಸಾರಿಗುಣಗಳ ಕೀರ್ತನೆಯ ಮಾಡಿಸಲಿ ಎನ್ನಿಂದ ॥27॥

ಆಜಾನಜರಿಂದ ಸಕಲ ವೈಷ್ಣವರಿಗೆ ನಮನ

ಪಾವನರು ಶುಚಿ ಶುದ್ಧನಾಮಕ-
ದೇವತೆಗಳಾಜಾನ ಚಿರಪಿತೃ-
ದೇವ ನರ ಗಂಧರ್ವರವನಿಪ ಮಾನುಷೋತ್ತಮರು ॥
ಈ ವಸುಮತಿಯೊಳುಳ್ಳ ವೈಷ್ಣವ-
ರಾವಳಿಯೊಳಿಹನೆಂದು ನಿತ್ಯದಿ
ಸೇವಿಪುದು ಸಂತೋಷದಿಂ ಸರ್ವಪ್ರಕಾರದಲಿ ॥28॥

ತಾರತಮ್ಯಜ್ಞಾನವೇ ಪುರುಷಾರ್ಥಪ್ರದ

ಮಾನುಷೋತ್ತಮರನು ಪಿಡಿದು ಚತು-
ರಾನನಾಂತ ಶತೋತ್ತಮತ್ವ ಕ್ರ-
ಮೇಣ ಚಿಂತಿಪ ಭಕ್ತರಿಗೆ ಚತುರವಿಧ ಪುರುಷಾರ್ಥ ॥
ಶ್ರೀನಿಧಿ ಜಗನ್ನಾಥವಿಟ್ಠಲ
ತಾನೆ ಒಲಿದೀವನು ನಿರಂತರ
ಸಾನುರಾಗದಿ ಪಠಿಸುವುದು ಪ್ರಾಜ್ಞರಿಂದ ಮರೆಯದಲೆ
॥29॥

॥ ಇಲ್ಲಿಗೆ ಇಪ್ಪತ್ತನೆಯ ಗುಣತಾರತಮ್ಯಸಂಧಿ
ಮುಗಿಯಿತು ॥

ಬೃಹತ್ತಾರತಮ್ಯಸಂಧಿ-21
(ಆವೇಶಾವತಾರಸಂಧಿ)

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ದೇವತೆಗಳ ಅವತಾರ ಮತ್ತು ಅಂಶಾವೇಶಗಳನ್ನು ತಿಳಿಯಬೇಕು

ಹರಿ ಸಿರಿ ವಿರಿಂಚೀರಮುಖ ನಿ-
ರ್ಜರರ ಆವೇಶಾವತಾರಗಳ
ಸ್ಮರಿಸು ಗುಣಗಣ ಸರ್ವಕಾಲದಿ ಭಕ್ತಿಪೂರ್ವಕದಿ ॥

ಮೂಲನಾರಾಯಣನಿಂದ ಹೊರಟ ಅವತಾರ ರೂಪಗಳು

ಮೀನ ಕೂರ್ಮ ಕ್ರೋಡ ನರಹರಿ-
ಮಾಣವಕ ಭೃಗುರಾಮ ದಶರಥ
ಸೂನು ಯಾದವ ಬುದ್ಧ ಕಲ್ಕೀ ಕಪಿಲ ವೈಕುಂಠ ॥
ಶ್ರೀನಿವಾಸ ವ್ಯಾಸ ಋಷಭ ಹ-
ಯಾನನಾ ನಾರಾಯಣೀ ಹಂ-
ಸಾನಿರುದ್ಧ ತ್ರಿವಿಕ್ರಮ ಶ್ರೀಧರ ಹೃಷಿಕೇಶ ॥1॥

ಭಗವಂತನ ರೂಪಗಳ ಗುಣಚಿಂತನೆ

ಹರಿಯು ನಾರಾಯಣನು ಕೃಷ್ಣಾ-
ಸುರಕುಲಾಂತಕ ಸೂರ್ಯಸಮಪ್ರಭ
ಕರೆಸುವನು ನಿರ್ದುಷ್ಟಸುಖಪರಿಪೂರ್ಣ ತಾನೆಂದು ॥
ಸರ್ವದೇವೋತ್ತಮನು ಸರ್ವಗ-
ಪರಮಪುರುಷ ಪುರಾತನ ಜರಾ-
ಮರಣವರ್ಜಿತ ವಾಸುದೇವಾದ್ಯಮಿತರೂಪಾತ್ಮ ॥2॥

ಲಕ್ಷ್ಮೀತತ್ವದ ವಿವರಣೆ

ಈ ನಳಿನಭವಜನನಿ ಲಕುಮೀ
ಜ್ಞಾನಬಲಭಕ್ತ್ಯಾದಿ ಗುಣಸಂ-
ಪೂರ್ಣಳೆನಿಪಳು ಸರ್ವಕಾಲದಿ ಹರಿಕೃಪಾಬಲದಿ ॥
ಹೀನಳೆನಿಪಳನಂತಗುಣದಿ ಪು-
ರಾಣಪುರುಷಗೆ ಪ್ರಕೃತಿಗಿನ್ನು ಸ-
ಮಾನರೆನಿಸುವರಿಲ್ಲ ಮುಕ್ತಾಮುಕ್ತಾಸುರರೊಳಗೆ ॥3॥

ಭಗವಂತನೊಡನೇ ಉದ್ಭವಿಸಿದ ಲಕ್ಷ್ಮೀರೂಪಗಳು

ಗುಣಗಳ ತ್ರಯಮಾನಿ ಶ್ರೀ ಕುಂ-
ಭಿಣಿ ಮಹಾದುರ್ಗಾಂಭ್ರಣೀ ರು-
ಕ್ಮಿಣಿಯು ಸತ್ಯಾ ಶಾಂತಿ ಕೃತಿ ಜಯ ಮಾಯ ಮಹಾಲಕುಮಿ॥
ಜನಕಜಾ ಕಮಲಾಲಯಾ ದ-
ಕ್ಷಿಣೆಯು ಪದ್ಮಾ ತ್ರಿಲೋಕೇಶ್ವರಿ
ಅಣು ಮಹತ್ತಿನೊಳಿದ್ದು ಉಪಮಾರಹಿತಳೆನಿಸುವಳು ॥4॥

ಬ್ರಹ್ಮವಾಯುಗಳ ತಾರತಮ್ಯ

ಘೋಟಕಾಸ್ಯನ ಮಡದಿಗಿಂತಲಿ
ಹಾಟಕೋದರ ಪವನರೀರ್ವರು
ಕೋಟಿಗುಣದಿಂದಧಮರೆನಿಪರು ಆವ ಕಾಲದಲಿ ॥
ಖೇಟಪತಿ ಶೇಷಾಮರೇಂದ್ರರ
ಸಾಟಿಮಾಡದೆ ಶ್ರೀಶನ ಕೃಪಾ-
ನೋಟದಿಂದಲಿ ಸರ್ವರೊಳು ವ್ಯಾಪಾರ ಮಾಡುವರು
॥5॥

ಬ್ರಹ್ಮ ಹಾಗೂ ವಾಯು ದೇವರ ರೂಪಗಳು

ಪುರುಷ ಬ್ರಹ್ಮ ವಿರಿಂಚಿ ಮಹಾ-
ನ್ಮರುತ ಮುಖ್ಯಪ್ರಾಣ ಧೃತಿ ಸ್ಮೃತಿ-
ಗುರುವರ ಮಹಾಧ್ಯಾತ ಬಲವಿಜ್ಞಾತವಿಖ್ಯಾತ ॥
ಗರಳಭುಗ್ಭವರೋಗಭೇಷಜ-
ಸ್ವರ ವರಣ ವೇದಸ್ಥ ಜೀವೇ-
ಶ್ವರ ವಿಭೀಷಣ ವಿಶ್ವಚೇಷ್ಟಕ ವೀತಭಯ ಭೀಮ ॥6॥

ವಾಯುದೇವರ ಮೂಲ ಅವತಾರರೂಪ ಸ್ತೋತ್ರ

ಅನಿಲ ಸ್ಥಿತಿ ವೈರಾಗ್ಯನಿಧಿ ರೋ-
ಚನ ವಿಮುಕ್ತಿಗಾನಂದ ದಶಮತಿ
ಅನಿಮಿಷೇಶಾನಿದ್ರ ಶುಚಿ ಸತ್ವಾತ್ಮಕ ಶರೀರ
ಅಣು ಮಹದ್ರೂಪಾತ್ಮಕಾಮೃತ
ಹನುಮದಾದ್ಯವತಾರ ಪದ್ಮಾ-
ಸನಪದವಿಸಂಪ್ರಾಪ್ತ ಪರಿಸರ ಅಖಿಣಾಶ್ಮಸಮ ॥7॥

ದೇವರ ಅತಿಶಯ ಬಲದಿಂದ ಬ್ರಹ್ಮವಾಯುಗಳು ಜಗದ್ವ್ಯಾಪಾರ ಮಾಡುವರು

ಮಾತರಿಶ್ವಬ್ರಹ್ಮರು ಜಗ-
ನ್ಮಾತ್ರೆಗಧಮಾಧೀನರೆನಿಪರು
ಶ್ರೀತರುಣಿ ವಲ್ಲಭನು ಈರ್ವರೊಳಾವಕಾಲದಲಿ ॥
ನೀತಭಕ್ತಿ ಜ್ಞಾನಬಲರೂ-
ಪಾತಿಶಯದಿಂದಿದ್ದು ಚೇತನಾ-
ಚೇತನಗಳೊಳು ವ್ಯಾಪ್ತರೆನಿಸುವ ತತ್ತದಾಹ್ವಯದಿ ॥8॥

ಸರಸ್ವತಿದೇವಿಯರ ರೂಪಗಳು ಸ್ತೋತ್ರ

ಸರಸವತಿ ವೇದಾತ್ಮಿಕಾ ಭುಜಿ-
ನರಹರಿ ಗುರುಭಕ್ತಿ ಬ್ರಾಹ್ಮೀ
ಪರಮ ಸುಖ ಬಲಪೂರ್ಣೆ ಶ್ರದ್ಧಾ ಪ್ರೀತಿ ಗಾಯತ್ರಿ ॥
ಗುರುಡ ಶೇಷರ ಜನನಿ ಶ್ರೀಸಂ-
ಕರುಷಣ ಜಯಾತನುಜೆ ವಾಣೀ
ಕರಣನಿಯಾಮಕೆ ಚತುರ್ದಶ ಭುವನಸನ್ಮಾನ್ಯೆ ॥9॥

ಭಾರತೀದೇವಿಯ ಅವತಾರಗಳು

ಕಾಳಿ ದ್ರೌಪದಿ ಕಾಶಿಜಾ ಪಾಂ-
ಚಾಲಿ ಶಿವಕನ್ಯೇಂದ್ರಸೇನಾ
ಕಾಲಮಾನಿ ಚಂದ್ರ ವಿದ್ಯುನ್ನಾಮ ಭಾರತಿಯು ॥
ಗಾಳಿ ಬ್ರಹ್ಮರ ಯುವತಿಯರು ಏ-
ಳೇಳು ಐವತ್ತೊಂದು ಗುಣದಿಂ-
ಕೀಳು ಎನಿಪರು ತಮ್ಮ ಪತಿಗಳಿಗಿಂದಲಾವಾಗ ॥10॥

ಶೇಷ ರುದ್ರರ ಆವೇಶ ಅವತಾರಗಳು

ಹರಿಸಮೀರಾವೇಶ ನರ ಸಂ-
ಕರುಷಣಾವೇಶಯುತ ಲಕ್ಷ್ಮಣ
ಪರಮಪುರುಷನ ಶುಕ್ಲಕೇಶಾವೇಶ ಬಲರಾಮ ॥
ಹರ ಸದಾಶಿವ ತಪ ಅಹಂಕೃತು
ಮರುತಯುಕ್ತ ಶುಕೋರ್ಧ್ವಪಟ ತ-
ತ್ಪುರುಷ ಜಯಗೀಷೌರ್ವ ದ್ರೌಣಿ ವ್ಯಾಧ ದೂರ್ವಾಸ
॥11॥

ಗರುಡ ಶೇಷರ ತಾರತಮ್ಯ, ಷಣ್ಮಹಿಷಿಯರ ವಿಚಾರ

ಗರುಡ ಶೇಷ ಶಶಾಂಕದಳಶೇ-
ಖರರು ತಮ್ಮೊಳು ಸಮರು ಭಾರತಿ-
ಸರಸಿಜಾಸನ ಪತ್ನಿಗಧಮರು ನೂರು ಗುಣದಿಂದ ॥
ಹರಿಮಡದಿ ಜಾಂಬವತಿಯೊಳು ಶ್ರೀ-
ತರುಣಿಯಾವೇಶವಿಹುದೆಂದಿಗು
ಕೊರತೆ ಎನಿಪರು ಗರುಡಶೇಷರಿಗೈವರೈದುಗುಣ ॥12॥

ಷಣ್ಮಹಿಷಿಯರ ಮತ್ತು ವಾರುಣಿದೇವಿಯರ ವಿಷಯ

ನೀಲ ಭದ್ರಾ ಮಿತ್ರವಿಂದಾ
ಮೇಲೆನಿಪ ಕಾಳಿಂದ ಲಕ್ಷಣೆ
ಬಾಲೆಯರಿಗಿಂತಧಮ ವಾರುಣಿ ಸೌಪರಣಿ ಗಿರಿಜಾ ॥
ಶ್ರೀಲಕುಮಿಯುತ ರೇವತೀ ಸಿರಿ-
ಮೂಲರೂಪದಿ ಪೇಯಳೆನಿಪಳು
ಶೈಲಜಾದ್ಯರು ದಶಗುಣಾಧಮ ತಮ್ಮ ಪತಿಗಳಿಗೆ ॥13॥

ಇಂದ್ರಕಾಮರ ಅವತಾರ ಅಂಶರೂಪಗಳು

ನರಹರಿಯ ಆವೇಶಸಂಯುತ
ನರ ಪುರಂದರ ಗಾಧಿ ಕುಶ ಮಂ-
ದರದ್ಯುಮ್ನ ವಿಕುಕ್ಷಿ ವಾಲೀ ಇಂದ್ರನವತಾರ ||
ಭರತ ಬ್ರಹ್ಮಾವಿಷ್ಟ ಸಾಂಬ ಸು-
ದರುಶನ ಪ್ರದ್ಯುಮ್ನ ಸನಕಾ-
ದ್ಯರೊಳಗಿಪ್ಪ ಸನತ್ಕುಮಾರನು ಷಣ್ಮುಖನು ಕಾಮ ||14||

ಪಾರ್ವತಿ, ಇಂದ್ರ, ಕಾಮ, ಅಹಂಕಾರಿಕ ಪ್ರಾಣ ಮೊದಲಾದ ದೇವತೆಗಳ ಗುಣತಾರತಮ್ಯ

ಈರೈದು ಗುಣ ಕಡಿಮೆ ಪಾರ್ವತಿ
ವಾರುಣೀಯರಿಗಿಂದ್ರಕಾಮ ಶ-
ರೀರಮಾನಿ ಪ್ರಾಣ ದಶಗುಣವವರ ಶಕ್ರನಿಗೆ ||
ಮಾರಜಾರತಿ ದಕ್ಷ ಗುರು ವೃ-
ತ್ರಾರಿಜಾಯಾ ಶಚಿ ಸ್ವಯಂಭುವ-
ರಾರು ಜನ ಸಮ ಪ್ರಾಣಗವರರು ಹತ್ತು ಗುಣದಿಂದ
||15||

10ನೆಯ ಕಕ್ಷೆಯ
ಅನಿರುದ್ಧ ರತಿ ಶಚಿಯರ ಅವತಾರಗಳು

ಕಾಮಪುತ್ರನಿರುದ್ಧ ಸೀತಾ-
ರಾಮನಾನುಜ ಶತ್ರುಹನ ಬಲ
ರಾಮನಾನುಜಪೌತ್ರನನಿರುದ್ಧನೊಳಗನಿರುದ್ಧ ॥
ಕಾಮಭಾರ್ಯಾ ರುಗ್ಮವತಿ ಸ-
ನ್ನಾಮ ಲಕ್ಷಣಳೆನಿಸುವಳು ಪೌ-
ಲೋಮಿ ಚಿತ್ರಾಂಗದೆಯು ತಾರಾ ಎರಡು ಪೆಸರುಗಳು
॥16॥

10ನೆಯ ಕಕ್ಷೆಯಲ್ಲಿ ಪ್ರಬಲರಾದ
ಬೃಹಸ್ಪತಿಗಳ ಅವತಾರಗಳು

ತಾರನಾಮಕ ತ್ರೇತೆಯೊಳು ಸೀ-
ತಾರಮಣನಾರಾಧಿಸಿದನು ಸ-
ಮೀರಯುಕ್ತೋದ್ಧವನು ಕೃಷ್ಣಗೆ ಪ್ರಿಯನೆನಿಸಿದನು ॥
ವಾರಿಜಾಸನಯುಕ್ತ ದ್ರೋಣನು
ಮೂರು ಇಳೆಯೊಳು ಬೃಹಸ್ಪತಿಗವ-
ತಾರವೆಂಬರು ಮಹಾಭಾರತತಾತ್ಪರ್ಯದೊಳಗೆ ॥17॥

ಪ್ರವಾಹವಾಯು, ಸೂರ್ಯ, ಚಂದ್ರ, ಯಮ, ಇವರುಗಳ ಚಿಂತನೆ ಎಂದೆಂದೂ ಇರಬೇಕು

ಮನುಮುಖಾದ್ಯರಿಗಿಂತ ಪ್ರವಹನು
ಗುಣದಿ ಪಂಚಕ ನೀಚನೆನಿಸುವ
ಇನ ಶಶಾಂಕರು ಧರ್ಮ ಮಾನವಿ ಎರಡು ಗುಣದಿಂದ॥
ಕನಿಯರೆನಿಪರು ಪ್ರವಹಗಿಂತಲಿ
ದಿನಪ ಶಶಿ ಯಮಧರ್ಮರೂಪಗ-
ಳನುದಿನದಿ ಚಿಂತಿಪುದು ಸಂತರು ಸರ್ವಕಾಲದಲಿ ॥18॥

ಯಮಧರ್ಮ, ಸೂರ್ಯ, ಚಂದ್ರರ ಆವೇಶ ಅವತಾರಗಳು

ಮರುತನಾವೇಶಯುತ ಧರ್ಮಜ-
ಕರಡಿ ವಿದುರನು ಸತ್ಯಜಿತು ಈ-
ರೆರಡು ಧರ್ಮನ ರೂಪ ಬ್ರಹ್ಮಾವಿಷ್ಟ ಸುಗ್ರೀವ ॥
ಹರಿಯ ರೂಪಾವಿಷ್ಟ ಕರ್ಣನು
ತರಣಿಗೆರಡವತಾರ ಚಂದ್ರಮ
ಸುರಪನಾವೇಶಯುತನಂಗದನೆನಿಸಿಕೊಳುತಿಪ್ಪ ॥19॥

ವರುಣನ ಅವತಾರ ಮತ್ತು ಅಗ್ನಿ ನಾರದಾದಿಗಳ ತಾರತಮ್ಯ

ತರಣಿಗಿಂತಲಿ ಪಾದಪಾದರೆ
ವರುಣ ನೀಚನು ಮಹಾಭಿಷಕ್ ದರ-
ದುರ ಸುಷೇಣನು ಶಂತನುವು ನಾಲ್ವರು ವರುಣರೂಪ ॥
ಸುರಮುನೀ ನಾರದನು ಕಿಂಚಿತ್-
ಕೊರತೆ ವರುಣಗೆ ಅಗ್ನಿ ಭ್ರಗುವಜ-
ಗೊರಳಪತ್ನಿ ಪ್ರಸೂತಿ ಮೂವರು ನಾರದನಿಗಧಮ॥20॥

ಅಗ್ನಿದೇವರ ಅವತಾರ ಮತ್ತು ಅವರ ಕಕ್ಷಾತಾರತಮ್ಯ

ನೀಲ ದೃಷ್ಟದ್ಯುಮ್ನ ಲವ ಈ-
ಲೇಲಿಹಾನನ ರೂಪಗಳು ಭೃಗು
ಕಾಲಿಲೊದ್ದದರಿಂದ ಹರಿಯನು ವ್ಯಾಧನೆನಿಸಿದನು ॥
ಏಳು ಋಷಿಗಳಿಗುತ್ತಮರು ಮುನಿ
ಮೌಳಿ ನಾರದಗಧಮ ಮೂವರು
ಗಾಳಿಯುತ ಪ್ರಹ್ಲಾದ ಬಾಹ್ಲಿಕರಾಯನೆನಿಸಿದನು ॥21॥

19ನೆಯ ಕಕ್ಷೆಯ ಪ್ರಹ್ಲಾದರಾಜರು ಆವೇಶಬಲದಿಂದ ಅಗ್ನಿಯ ಕಕ್ಷೆಗೆ ಸೇರುತ್ತಾರೆ

ಜನಪ ಕರ್ಮಜರೊಳಗೆ ನಾರದ-
ಮುನಿಯನುಗ್ರಹಬಲದಿ ಪ್ರಹ್ಲಾ-
ದನಲ ಭೃಗುಮುನಿ ದಕ್ಷಪತ್ನಿಗೆ ಸಮನೆನಿಸಿಕೊಂಬ ॥
ಮನು ವಿವಸ್ವಾನ್ ಗಾಧಿಜೇರ್ವರು
ಅನಲಗಿಂತಲಿ ಕಿಂಚಿತಾಧಮ
ಎಣೆ ಎನಿಸುವರು ಸಪ್ತಋಷಿಗಳಿಗೆಲ್ಲ ಕಾಲದಲಿ ॥22॥

ಸಪ್ತಋಷಿಗಳು ಮತ್ತೆ ಮಿತ್ರನಾಮಕ ಸೂರ್ಯನ ಅವತಾರ ರೂಪಗಳಲು

ಕಮಲಸಂಭವಭವರೆನಿಪ ಸಂ-
ಯಮ ಮರೀಚಿಯು ಅತ್ರಿಯಂಗಿರ-
ಸುಮತಿ ಪುಲಹ ಕ್ರತು ವಸಿಷ್ಠ ಪುಲಸ್ತ್ಯಮುನಿ ಸ್ವಾಹಾ ॥
ರಮಣಗಧಮರು ಮಿತ್ರನಾಮಕ
ದ್ಯುಮಣಿ ರಾಹುಯುಕ್ತ ಭೀಷ್ಮಕ
ಯಮಳರೂಪನು ತಾರನಾಮಕನೆನಿಸಿ ತ್ರೇತೆಯೊಳು॥23॥

17 ಮತ್ತು 18ನೆಯ ಕಕ್ಷೆಯ ತಾರತಮ್ಯ ಮತ್ತು ಅವತಾರಗಳು

ನಿರುಯತಿಗೆರಡವತಾರ ದುರ್ಮುಖ
ಹರಯುತ ಘಟೋತ್ಕಚನು ಪ್ರಾವಹಿ
ಗುರುಮಡದಿ ತಾರಾ ಸಮರು ಪರ್ಜನ್ಯಗುತ್ತಮರು ॥
ಕರಿಗೊರಳಸಂಯುಕ್ತ ಭಗದ-
ತ್ತರಸು ಕತ್ಥನ ಧನಪ ರೂಪಗ-
ಳೆರಡು ವಿಷ್ನಪ ಚಾರುದೇಷ್ಣನು ಅಶ್ವಿನಿಗಳು ಸಮ ॥24॥

18ನೆಯ ಕಕ್ಷೆಯ 8 ವಸುಗಳ ನಾಮಗಳು

ದ್ರೋಣ ದ್ರುವ ದೋಷಾರ್ಕಾಗ್ನಿ-
ಪ್ರಾಣ ದ್ಯು ವಿಭಾವಸುಗಳೆಂಟು ಕೃ-
ಶಾನು ಶ್ರೇಷ್ಠ ದ್ಯುನಾಮವಸು ಭೀಷ್ಮಾರ್ಯ ಬ್ರಹ್ಮಯುತ ॥
ದ್ರೋಣನಾಮಕ ನಂದಗೋಪ ಪ್ರ-
ಧಾನ ಅಗ್ನಿಯನುಳಿದು ಏಳು ಸ-
ಮಾನರೆನಿಪರು ತಮ್ಮೊಳಗೆ ಜ್ಞಾನಾದಿಗುಣದಿಂದ ॥25॥

ಏಕಾದಶ ರುದ್ರರ ನಾಮಗಳು

ಭೀಮ ರೈವತ ಓಜಜೈಕಪ-
ದಾ ಮಹನ್ ಬಹುರೂಪಕನು ಭವ
ವಾಮ ಉಗ್ರ ವೃಷಾಕಪಿಯಹಿರ್ಬುಧ್ನಿ ಎನುತಿಪ್ಪ ॥
ಈ ಮಹಾತ್ಮರ ಮಧ್ಯದೊಳಗೆ ಉ-
ಮಾಮನೋಹರನುತ್ತಮನು ದಶ-
ನಾಮಕರು ಸಮರೆನಿಸಿಕೊಂಬರು ತಮ್ಮೊಳೆಂದೆಂದು ॥26॥

ದಶರುದ್ರರೊಳಗೆ ಅವತಾರ ತಾಳಿದವರ ವಿವರ

ಭೂರ್ಯಜೈಕಪದಾಹ್ವಯಹಿರ್ಬು-
ಧ್ನೀರಯಿದು ರುದ್ರಗಣಸಂಯುತ
ಭೂರಿಶ್ರವನೆಂದೆನಿಪ ಶಲ ವಿರುಪಾಕ್ಷನಾಮಕನು ॥
ಸೂರಿಕೃಪ ವಿಷ್ಕಂಭ ಸಹದೇ-
ವಾರನಾಗ್ರಣಿ ಸೋಮದತ್ತನು
ತಾ ರಚಿಸಿದ ದ್ವಿರೂಪ ಧರೆಯೊಳು ಪತ್ರತಾಪಕನು
॥27॥

ದ್ವಾದಶ ಆದಿತ್ಯರ ನಾಮಗಳು ಮತ್ತು ಅವತಾರಗಳು

ದೇವಶಕ್ರನುರುಕ್ರಮಾ ಮಿ-
ತ್ರಾವರುಣ ಪರ್ಜನ್ಯ ಭಗ ಪೂ-
ಷಾ ವಿವಸ್ವನು ಸವಿತೃ ಧಾತಾ ಅರ್ಯಮ ತ್ವಷ್ಟ ॥
ದೇವಕಿಸುತನಲ್ಲಿ ಸವಿತೃ ವಿ-
ಭಾವಸೂಸುತ ಭಾನು ಎನಿಸುವ
ಜ್ಯಾವನಪಯುತ ವೀರಸೇನನು ತ್ವಷ್ಟನಾಮಕನು ॥28॥

ಉತ್ತಮ ಕಕ್ಷೆಗೆ ಸೇರಿದ ದ್ವಾದಶಾದಿತ್ಯರು

ಎರಡಧಿಕ ದಶ ಸೂರ್ಯರೊಳು ಮೂ-
ರೆರಡು ಜನರುತ್ತಮ ವಿವಸ್ವಾನ್
ವರುಣ ಶಕ್ತನುರುಕ್ರಮನು ಪರ್ಜನ್ಯ ಮಿತ್ರಾಖ್ಯ ॥
ಮರುತನಾವೇಶಯುತ ಪಾಂಡೂ-
ವರ ಪರಾವಹನೆಂದೆನಿಪ ಕೇ-
ಸರಿ ಮೃಗಪ ಸಂಪಾತಿ ಶ್ವೇತತ್ರಯರು ಮರುದಂಶ ॥29॥

ಮರುತ್‌ಗಣಗಳ ಆವೇಶ ಮತ್ತು ಅವತಾರಗಳು

ಪ್ರತಿಭವಾತನು ಚೇಕಿತನು ವಿ-
ಪೃಥು ಎನಿಸುವನು ಸೌಮ್ಯ ಮಾರುತ
ವಿತತ ಶರ್ವೋತ್ತುಂಗ ಗಜನಾಮಕರು ಪ್ರಾಣಾಂಶ ॥
ದ್ವಿತೀಯಪಾನ ಗವಾಕ್ಷ ಗವಯ
ತೃತೀಯ ವ್ಯಾನ ಉದಾನ ವೃಷಪ-
ರ್ವತುಳ ಶರ್ವತ್ರಾತ ಗಂಧಸುಮಾದನರು ಸಮಾನ॥30॥

ಉಪಪ್ರಾಣರು ಮತ್ತು ಮರುತ್‌ಗಣಗಳ ವಿಚಾರ

ಐವರೊಳಗೀ ಕುಂತಿಭೋಜನು
ಆವಿನಾಮಕ ನಾಗ ಕೃಕಲನು
ದೇವದತ್ತ ಧನಂಜಯರು ಅವತಾರವರ್ಜಿತರು ॥
ಆವಹೋದ್ವಹ ವಿವಹ ಸಂವಹ
ಪ್ರಾವಹೀಪತಿ ಮರುತ ಪ್ರವಹನಿ-
ಗಾವಕಾಲಕು ಕಿಂಚಿದಧಮರು ಮರುದ್ಗಣರೆಲ್ಲ ॥31॥

ಪ್ರಾಣಾದಿ ಉತ್ತಮ ಮರುತರು ಮತ್ತು ವಿಶ್ವೇದೇವತೆಗಳ ವಿವರ

ಪ್ರಾಣಾಪಾನವ್ಯಾನೋದಾನ ಸ-
ಮಾನರೈವರನುಳಿದು ಮರುತರು
ಊನನೆನಿಪರು ಹತ್ತು ವಿಶ್ವೇದೇವರಿವರಿಂದ ॥
ಸೂನುಗಳು ಎನಿಸುವರು ಐವರು
ಮಾನಿನೀ ದ್ರೌಪದಿಗೆ ಕೆಲವರು
ಕ್ಷೋಣಿಯೊಳು ಕೈಕೇಯರೆನಿಪರು ಎಲ್ಲ ಕಾಲದಲಿ ॥32॥

ದ್ರೌಪತಿ ಕುವರರ ಮೂಲ ರೂಪಗಳ ವಿವರ

ಪ್ರತಿವಿಂಧ್ಯ ಶ್ರುತಸೋಮ ಶ್ರುತಕೀ-
ರುತಿ ಶತಾನಿಕ ಶ್ರುತಕರ್ಮ ದ್ರೌ-
ಪತಿಕುವರರಿವರೊಳಗೆ ಅಭಿತಾಮ್ರ ಪ್ರಮುಖ ಚಿತ್ರ ॥
ರಥನು ಗೋಪ ಕಿಶೋರ ಬಲರೆಂ-
ಬತುಲರೈಗಂಧರ್ವರಿಂದಲಿ
ಯುತರು ಧರ್ಮ ವೃಕೋದರಾದಿಜರೆಂದು ಕರೆಸುವರು
॥33॥

ಅಶ್ವಿನಿದೇವತೆಗಳು ಮತ್ತು ಸಮಾನ ಕಕ್ಷೆಯವರ ತಾರತಮ್ಯ

ವಿವಿಧ ಮೈಂದರು ನಕುಲಸಹದೇ-
ವ ವಿಭು ತ್ರಿಶಿಖಾಶ್ವಿನಿಗಳಲ್ಲಿ
ದಿವಿಪನಾವೇಶವಿಹುದೆಂದಿಗು ದ್ಯಾವಾಪೃಥ್ವಿ ಋಭು ॥
ಪವನಸುತ ವಿಶ್ವಕ್ಸೇನನುಮಾ-
ಕುವರ ವಿಘ್ನಪ ಧನಪ ಮೊದಲಾ-
ದವರು ಮಿತ್ರಗೆ ಕಿಂಚಿತಾಧಮರೆನಿಸಿಕೊಳುತಿಹರು ॥34॥

19ನೇ ಕಕ್ಷೆಯ ಕರ್ಮಜರು ಮತ್ತು ಮನುಗಳು

ಪಾವಕಾಗ್ನಿ ಕುಮಾರನೆನಿಸುವ
ಚ್ಯಾವನರುಚಥ್ಯಮುನಿ ಚಾಕ್ಷುಷ
ರೈವತ ಸ್ವಾರೋಚಿಷೋತ್ತಮ ಬ್ರಹ್ಮ ರುದ್ರೇಂದ್ರ ॥
ದೇವ ಧರ್ಮನು ದಕ್ಷನಾಮಕ
ಸಾವರಣಿ ಶಶಿಬಿಂದು ಪೃಥು ಪ್ರಿ-
ಯವ್ರತನು ಮಾಂಧಾತ ಗಯನು ಕಕುಸ್ಥ ದೌಷ್ಯಂತಿ
॥35॥

ಕರ್ಮಜರಾಜರು ಮತ್ತೆ 19 ಕಕ್ಷೆಯ ಸಪ್ತ ಇಂದ್ರರ ಹೆಸರುಗಳು

ಭರತ ಋಷಭಜ ಹರಿಣಿಜ ದ್ವಿಜ-
ಭರತ ಮೊದಲಾದಖಿಳರಾಯರೋ-
ಳಿರುತಿಹುದು ಶ್ರೀ ವಿಷ್ಣು ಪ್ರಾಣಾವೇಶ ಪ್ರತಿದಿನದಿ ॥
ವರ ದಿವಸ್ಪತಿ ಶಂಭುರದ್ಭುತ
ಕರೆಸುವನು ಬಲಿ ವಿಧೃತ ಶುಚಿ
ಸರಿಯೆನಿಪ ಋತಧಾಮ ಮೊದಲಾದಷ್ಟಗಂಧರ್ವ ॥36॥

ಕರ್ಮಜರು ಮತ್ತೆ ಮುಂದಿನ ಸಂಜ್ಞಾಶ್ಯಾಮಲೆಯರ ಅವತಾರ ರೂಪಗಳು

ಅರಸೆನಿಪ ಕರ್ಮಜರು ವೈಶ್ವಾ-
ನರಗಧಮ ಶತಗುಣದಿ ವಿಘ್ನೇ-
ಶ್ವರಗೆ ಕಿಂಚಿದ್ಗುಣ ಕಡಿಮೆ ಬಲಿಮುಖ್ಯ ಪಾವಕರು ॥
ಶರಭ ಪರ್ಜನ್ಯಾಖ್ಯ ಮೇಘಪ-
ತರುಣಿ ಭಾರ್ಯಾ ಸಂಜ್ಞೇ ಶಾರ್ವರಿ-
ಕರನ ಪತ್ನಿಯು ರೋಹಿಣೀ ಶ್ಯಾಮಲೆಯು ದೇವಕಿಯು
॥37॥

20ನೆಯ ಕಕ್ಷೆಯಿಂದ ಅವರರಾದ ಅಗ್ನಿ ಮತ್ತು ಅಶ್ವಿನೀ ಭಾರ್ಯಾದಿಗಳ ತಾರತಮ್ಯ

ಅರಸಿಯೆನಿಪಳು ಧರ್ಮರಾಜಗೆ
ವರುಣ ಭಾರ್ಯೋಷಾದಿಷಟ್ಕರು
ಕೊರತೆ ಎನಿಪರು ಪಾವಕಾದ್ಯರಿಗೆರಡು ಗುಣದಿಂದ ॥
ಎರಡು ಮೂರ್ಜನರಿಂದಧಮಸ್ವಾಹಾ
ಕರೆಸುವಳುಷಾದೇವಿ ವೈಶ್ವಾ-
ನರನ ಮಡದಿಗೆ ದಶಗುಣಾವರಳಶ್ವಿನೀಭಾರ್ಯಾ ॥38॥

ಬುಧನಿಂದ ಪುಷ್ಕರನವರೆಗೂ ಇರುವ ದೇವತಾವಿವರ

ಸುದರಶನ ಶಕ್ರಾದಿಸುರಯುತ
ಬುಧನು ತಾನಭಿಮನ್ಯುವೆನಿಸುವ
ಬುಧನಿಗಿಂತಾಶ್ವಿನೀಭಾರ್ಯಾ ಶಲ್ಯ ಮಾಗಧರ ॥
ಉದರಜೋಷಾದೇವಿಗಿಂತಲಿ
ಅಧಮನೆನಿಪ ಶನ್ಶೈಶ್ಚರನು ಶನಿ
ಗಧಮ ಪುಷ್ಕರ ಕರ್ಮಪನು ಎನಿಸುವನು ಬುಧರಿಂದ
॥39॥

ಅಧಮ ಕಕ್ಷೆಯ ಗಂಧರ್ವರ ಆವೇಶ ಅವತಾರಗಳು

ಉದ್ವಹಾ ಮರುತಾನ್ವಿತ ವಿರಾ-
ಧ ದ್ವಿತೀಯ ಸಂಜಯನು ತುಂಬುರ
ವಿದ್ವದುತ್ತಮ ಜನಮೇಜಯ ತ್ವಷ್ಟಯುತ ಚಿತ್ರರಥ ॥
ಸದ್ವಿನುತ ದಮಘೋಷಕ ಕಬಂ-
ಧದ್ವಯರು ಗಂಧರ್ವ ದನು ಮನು-
ಪದ್ಮಸಂಭವಯುತಾಕ್ರೂರ ಕಿಶೋರನೆನಿಸುವನು ॥40॥

ಪ್ರಸಿದ್ಧರಾದ ಧೃತರಾಷ್ಟ್ರಾದಿ ಗಂಧರ್ವರ ಅವತಾರಗಳು

ವಾಯುಯುತ ಧೃತರಾಷ್ಟ್ರ ದಿವಿಜರ
ಗಾಯಕನು ಧೃತರಾಷ್ಟ್ರ ನಕ್ರನು
ರಾಯದ್ರುಪದನವಹವಿಶಿಷ್ಟ ಹೂಹು ಗಂಧರ್ವ ॥
ನಾಯಕ ವಿರಾಡ್ವಿವಹಯುತ ಹಾಹಾ
ಗೇಯ ವಿದ್ಯಾಧರನೆ ಅಜಗರ
ತಾನೆನಿಸುವನು ಉಗ್ರಸೇನನೆ ಉಗ್ರಸೇನಾಖ್ಯ ॥41॥

ವಿಶ್ವಾವಸು ಪರಾವಸು ಚಿತ್ರಸೇನರ ಅವತಾರಗಳು

ಬಿಸಜಸಂಭವಯುಕ್ತ ವಿಶ್ವಾ-
ವಸು ಯುಧಾಮನ್ಯುತ್ತಮೌಜಸ-
ಬಿಸಜ ಮಿತ್ರಾರ್ಯಮಯುತ ಪರಾವಸು ಎನಿಸುತಿಪ್ಪ ||
ಅಸಮಮಿತ್ರಾನ್ವಿತ ಸತ್ಯಜಿತ್
ವಸುಧೆಯೊಳು ಚಿತ್ರಸೇನನಮೃತಾಂ-
ಧಸರ ಗಾಯಕರೆಂದು ಕರೆಸುವರಾವಕಾಲದಲಿ ||42||

ಗಂಧರ್ವರು ಮತ್ತು ಅಪ್ಸರಾ ಸ್ತ್ರೀಯರ ಅವತಾರ

ಉಳಿದ ಗಂಧರ್ವರುಗಳೆಲ್ಲರು
ಬಲಿಮೊದಲು ಗೋಪಾಲರೆನಿಪರು
ಇಳೆಯೊಳಗೆ ಸೈರಂಧ್ರಿ ಪಿಂಗಳೆಯಪ್ಸರಸ್ತ್ರೀಯರು ||
ತಿಲೋತ್ತಮೆಯು ಪೂರ್ವದಲಿ ನಕುಲನ
ಲಲನೆ ಪಾರ್ವತಿ ಎನಿಸುವಳು ಗೋ-
ಕುಲದ ಗೋಪಿಯರೆಲ್ಲ ಶಬರೀಮುಖ್ಯರಪ್ಸರರು ||43||

16,000 ಅಗ್ನಿಪುತ್ರರಲ್ಲಿ ಲಕ್ಷ್ಮೀ ಆವೇಶ

ಕೃಷ್ಣವರ್ತ್ಮನ ಸುತರೊಳಗೆ ಶತ-
ದ್ವ್ಯಷ್ಟಸಾವಿರ ಸ್ತ್ರೀಯರಲಿ ಪ್ರ-
ವಿಷ್ಟಳಾಗಿ ರಮಾಂಬ ತತ್ತನ್ನಾಮರೂಪದಲಿ ॥
ಕೃಷ್ಣಮಹಿಷಿಯರೊಳಗೆ ಇಪ್ಪಳು
ತ್ವಷ್ಟೃಪುತ್ರಿ ಕಶೇರು ಇವರೊಳು
ಶ್ರೇಷ್ಠಳೆನಿಪಳು ಉಳಿದ ಋಷಿಗಣ ಗೋಪಿಕಾಸಮರು
॥44॥

ಅಗ್ನಿ ಪುತ್ರರು ಊರ್ವಶಿ ಮತ್ತು ತುಂಬುರಾದಿ ಗಂಧರ್ವರು

ಸೂನುಗಳು ಎನಿಸುವರು ದೇವಕೃ-
ಶಾನುವಿಗೆ ಕ್ರತು ಸಿಂಧು ಶುಚಿ ಪವ-
ಮಾನ ಕೌಶಿಕರೈದು ತುಂಬುರ ಊರ್ವಶೀಶತರು ॥
ಮೇನಕಾ ಋಷಿ ರಾಯರುಗಳಾ-
ಜಾನುಸುರರಿಗೆ ಸಮರೆನಿಪರು ಸು-
ರಾಣಕರನಾಖ್ಯಾತ ದಿವಿಜರ ಜನಕರೆನಿಸುವರು ॥45॥

ಅನಾಖ್ಯಾತದೇವತೆಗಳ ಗುಣಗಳು

ಪಾವಕರಗಿಂದಧಮರೆನಿಸುವ
ದೇವಕುಲಜಾನಾಖ್ಯ ಸುರಗಣ
ಕೋವಿದರು ನಾನಾಸುವಿದ್ಯದಿ ಸ್ವೋತ್ತಮರ ನಿತ್ಯ ॥
ಸೇವಿಪರು ಸದ್ಭಕ್ತಿಪೂರ್ವಕ
ಸ್ವಾವರರಿಗುಪದೇಶಿಸುವರು ನಿ-
ರಾವಲಂಬನ ವಿಮಲಗುಣಗಳ ಪ್ರತಿದಿವಸದಲ್ಲಿ ॥46॥

ದೇವತೆಗಳು ವರ್ಣಾಶ್ರಮ ರಹಿತರು, ಆಜಾನಜರಿಗೆ ಚಿರಪಿತೃಗಳು ಶತಗಣ ಅಧಮರು

ಸುರರೊಳಗೆ ವರ್ಣಾಶ್ರಮಗಳೆಂ-
ಬೆರಡು ಧರ್ಮಗಳಿಲ್ಲ ತಮ್ಮೊಳು
ನಿರುಪಮರು ಎಂದೆನಿಸಿಕೊಂಬರು ತಾರತಮ್ಯದಲಿ ॥
ಗುರುಶಿಷ್ಯತ್ವವು ಈ ಋಷಿಗಳೊ-
ಳಗಿರುತಿಹುದು ಆಜಾನಸುರರಿಗೆ
ಚಿರಪಿತೃ ಶತಾಧಮರೆನಿಸುವರು ಏಳು ಜನರುಳಿದು ॥47॥

ಚಿರಪಿತೃಗಳಿಗಿಂತ ದೇವ, ನರ ಗಂಧರ್ವರ ಗುಣತಾರತಮ್ಯ

ಚಿರಪಿತೃಗಳಿಂದಧಮ ಗಂಧ-
ರ್ವರುಗಳೆನಿಪರು ದೇವನಾಮಕ
ಕೊರತೆ ಎನಿಸುವ ಚಕ್ರವರ್ತಿಗಳಿಂದ ಗಂಧರ್ವ ॥
ನರರೊಳುತ್ತಮರೆನಿಸುವರು ಹ-
ನ್ನೆರಡು ಎಂಭತ್ತೆಂಟು ಗುಣದಲಿ
ಹಿರಿಯರೆನಿಪರು ಕ್ರಮದಿ ದೇವಾವೇಶಬಲದಿಂದ ॥48॥

ದೇವಗಂಧರ್ವರಿಗಿಂತ ಕಡಿಮೆ ಮನುಷ್ಯ ಗಂಧರ್ವರು ಮತ್ತು ಮಾನುಷೋತ್ತಮರ ಉಪಾಸನಾಕ್ರಮ

ದೇವತೆಗಳಿಂ ಶ್ರೇಷ್ಠರೆನಿಪರು
ದೇವಗಂಧರ್ವರುಗಳಿವರಿಂ-
ದಾವಕಾಲಕು ಶಿಕ್ಷಿತರು ನರನಾಮ ಗಂಧರ್ವ ॥
ಕೇವಲತಿಸದ್ಭಕ್ತಿಪೂರ್ವಕ
ಯಾವದಿಂದ್ರಿಯಗಳ ನಿಯಾಮಕ
ಶ್ರೀವರನೆ ಎಂದರಿತು ಭಜಿಪರು ಮಾನುಷೋತ್ತಮರು
॥49॥

ಆವೇಶ ಮತ್ತು ಅಂಶಗಳಿಂದ ತಾರತಮ್ಯದಲ್ಲಿ ಬರುವ ವಿರೋಧವನ್ನು ಪರಿಹರಿಸಿಕೊಳ್ಳಬೇಕು

ಬಾದರಾಯಣ ಭಾಗವತ ಮೊದ-
ಲಾದ ಶಾಸ್ತ್ರಗಳಲ್ಲಿ ಬಹುವಿಧ
ದ್ವಾದಶದಶ ಸುಪಂಚವಿಂಶತಿಶತಸಹಸ್ರಯುತ ॥
ಭೇದಗಳ ಪೇಳಿದನು ಸ್ವೋತ್ತಮ
ಆದಿತೇಯಾವೇಶಬಲದಿ ವಿ-
ರೋಧ ಚಿಂತಿಸಬಾರದಿದು ಸಾಧುಜನಸಮ್ಮತವು ॥50॥

ಮುಕ್ತಿಯೋಗ್ಯರ ಲಕ್ಷಣಗಳು

ಇವರು ಮುಕ್ತಿಗೆಯೋಗ್ಯರೆಂಬರು
ಶ್ರವಣಮನನಾದಿಗಳ ಪರಮೋ-
ತ್ಸವದಿ ಮಾಡುತ ಕೇಳಿ ನಲಿಯುತ ಧರ್ಮಕಾಮಾರ್ಥ ॥
ತ್ರಿವಿಧ ಫಲಗಳಪೇಕ್ಷಿಸದೆ ಶ್ರೀ-
ಪವನಮುಖ ದೇವಾಂತರಾತ್ಮಕ
ಪ್ರವರತಮ ಶಿಷ್ಟೇಷ್ಟದಾಯಕನೆಂದು ಸ್ಮರಿಸುವರು ॥51॥

ನಿತ್ಯ ಸಂಸಾರಿಗಳ ಉಪಾಸನಾಕ್ರಮ

ನಿತ್ಯಸಂಸಾರಿಗಳು ಗುಣದೋ-
ಷಾತ್ಮಕರು ಬ್ರಹ್ಮಾದಿದಿವಿಜರು
ಭೃತ್ಯರೆಂಬರು ರಾಜನೋಪಾಧಿಯಲಿ ಹರಿಯೆಂಬ ॥
ಕೃತ್ತಿವಾಸನು ಬ್ರಹ್ಮ ಶ್ರೀವಿ-
ಷ್ಣುತ್ರಯರು ಸಮದುಃಖಸುಖ ಉ-
ತ್ಪತ್ತಿ ಮೃತಿ ಭಯ ಪೇಳುವರು ಅವತಾರಿಗಳಿಗೆ ಸದಾ
॥52॥

ತಮೋಯೋಗ್ಯರ ಲಕ್ಷಣಗಳು

ತಾರತಮ್ಯ ಜ್ಞಾನವಿಲ್ಲದೆ
ಸೂರಿಗಳ ನಿಂದಿಸುತ ನಿತ್ಯದಿ
ತೋರುತಿಪ್ಪರು ಸುಜನರೋಪಾಧಿಯಲಿ ನರರೊಳಗೆ ॥
ಕ್ರೂರಕರ್ಮಾಸಕ್ತರಾಗಿ ಶ-
ರೀರಪೋಷಣೆಗೋಸುಗದಿ ಸಂ-
ಚಾರ ಮಾಳ್ಪರು ಅನ್ಯದೇವತೆ ನೀಚರಾಲಯದಿ ॥53॥

ಮಧ್ವಾಚಾರ್ಯರ ಗ್ರಂಥಗಳ ಸಂಗ್ರಹವೇ ಈ ಹರಿಕಥಾಮೃತಸಾರ ಆದ್ದರಿಂದ ಇದು ಸುಖಬೋಧಸಾಗರ

ದಶಪ್ರಮತಿ ಮತಾಬ್ಧಿಯೊಳು ಸುಮ-
ನಸರೆನಿಪ ರತ್ನಗಳ ಅವಲೋ-
ಕಿಸಿ ತೆಗೆದು ಪ್ರಾಕೃತ ಸುಭಾಷಾತಂತುಗಳ ರಚಿಸಿ ॥
ಅಸುಪತಿ ಶ್ರೀರಮಣಗೆ ಸಮ-
ರ್ಪಿಸಿದೆ ಸಜ್ಜನರಿದನು ಸಂತೋ-
ಷಸಲಿ ದೋಷಗಳೆಣಿಸದಲೆ ಕಾರುಣ್ಯದಲಿ ನಿತ್ಯ ॥54॥

ವಿಸ್ತಾರತಾರತಮ್ಯದ ಸಂಕ್ಷೇಪ

ನಿರುಪಮ ಶ್ರೀವಿಷ್ಣು ಲಕುಮೀ
ಸರಸಿಜೋದ್ಭವ ವಾಯು ವಾಣೀ
ಗರುಡ ಷಣ್ಮಹಿಷಿಯರು ಪಾರ್ವತಿ ಶಕ್ರ ಸ್ಮರ ಪ್ರಾಣ ॥
ಬೃಹಸ್ಪತಿ ಪ್ರವಹ ಸೂರ್ಯನು
ವರುಣ ನಾರದ ವಹ್ನಿ ಸಪ್ತಾಂ-
ಗಿರರು ಮಿತ್ರ ಗಣೇಶ ಪೃಥು ಗಂಗಾ ಸ್ವಹಾ ಬುಧನು
॥55॥

ಶನೇಶ್ಚರಾದಿಗಳ ತಾರತಮ್ಯ

ತರುಣಿತನಯ ಶನೈಶ್ಚರನು ಪು-
ಷ್ಕರನಜಾನಜ ಚಿರಪಿತರು ಗಂ-
ಧರ್ವರೀರ್ವರು ದೇವ ಮಾನುಷ ಚಕ್ರವರ್ತಿಗಳು ॥
ನರರೊಳುತ್ತಮ ಮಧ್ಯಮಾಧಮ
ಕರೆಸುವರು ಮಧ್ಯೋತ್ತಮರು ಈ-
ರೆರಡು ಜನ ಕೈವಲ್ಯ ಮಾರ್ಗಸ್ಥರೆಂದಾನಮಿಪೆ ॥56॥

ಬೃಹತ್ತಾರತಮ್ಯದಜ್ಞಾನದಿಂದ ಪುರುಷಾರ್ಥದ ಸಿದ್ಧಿ

ಸಾರಭಕ್ತಿ ಜ್ಞಾನದಿ ಬೃಹ-
ತ್ತಾರತಮ್ಯವನರಿತು ಪಠಿಸುವ
ಸೂರಿಗಳಿಗನುದಿನದಿ ಪುರುಷಾರ್ಥಗಳ ಪೂರೈಸಿ ॥
ಕಾರುಣಿಕ ಮರುತಾಂತರಾತ್ಮಕ
ಮಾರಮಣ ಜಗನ್ನಾಥವಿಟ್ಠಲ
ತೋರಿಕೊಂಬನು ಹೃತ್ಕಮಲದೊಳು ಯೋಗ್ಯತೆಗಳರಿತು
॥57॥

॥ ಇಲ್ಲಿಗೆ ಇಪ್ಪತ್ತೊಂದನೆಯ ಬೃಹತ್ತಾರತಮ್ಯಸಂಧಿ ಮುಗಿಯಿತು ॥

ಸಕಲದುರಿತನಿವಾರಣಸಂಧಿ-22

(ಭಕ್ತಾಪರಾಧಸಹಿಷ್ಣು ಸಂಧಿ)

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಪಾಹಿ ಎಂದು ಶರಣಾಗುವವರ ಉದ್ಧರಿಪ ಕರುಣಾಸಾಗರ ಶ್ರೀಹರಿ

ಶ್ರೀಲಕುಮಿವಲ್ಲಭಗೆ ಸಮ ಕರು-
ಣಾಳುಗಳ ನಾ ಕಾಣೆನೆಲ್ಲಿ ಕು-
ಚೇಲನವಲಿಗೆ ಮೆಚ್ಚಿ ಕೊಟ್ಟನು ಸಕಲ ಸಂಪದವ ॥
ಕೇಳಿದಾಕ್ಷಣ ವಸ್ತ್ರಗಳ ಪಾಂ-
ಚಾಲಿಗಿತ್ತನು ದೈತ್ಯನುಧರವ
ಸೀಳಿ ಸಂತೈಸಿದನು ಪ್ರಹ್ಲಾದನ ಕೃಪಾಸಾಂದ್ರ ॥1॥

ಶ್ರೀನಿವಾಸನ ಸೇವೆಯಿಂದ ಮಾತ್ರವೇ ಇಹಪರಂಗಳಲಿ ಸೌಖ್ಯ

ದೇವಶರ್ಮಾಹ್ವಯ ಕುಟುಂಬಕೆ
ಜೀವನೋಪಾಯವನು ಕಾಣದೆ
ದೇವದೇವಶರಣ್ಯ ರಕ್ಷಿಸು ರಕ್ಷಿಸೆನೆ ಕೇಳಿ ॥ ತಾನೊಲಿದು
ಪಾಲಿಸಿದ ಸೌಖ್ಯ ಕೃ-
ಪಾವಲೋಕನದಿಂದ ಈತನ
ಸೇವಿಸದೆ ಸೌಖ್ಯಗಳ ಬಯಸುವರಲ್ಪ ಮಾನವರು ॥2॥

ದ್ರೋಣ, ಭೀಷ್ಮ ಕೃಪಾದಿಗಳ ದೋಷಗಳನ್ನು ಲೆಕ್ಕಿಸದೆ ಪರಗತಿಯಿತ್ತ ಕರುಣಾಳು

ಶ್ರೀನಿವಾಸನ ಪೋಲ್ವ ಕರುಣಿಗ-
ಳೀನಳಿನಜಾಂಡದೊಳು ಕಾಣೆ ಪ್ರ-
ವೀಣರಾದವರರಸಿ ನೋಳ್ಪುದು ಶ್ರುತಿ ಪುರಾಣದೊಳು॥
ದ್ರೋಣ ಭೀಷ್ಮ ಕೃಪಾದಿಗಳು ಕುರು-
ಸೇನೆಯೊಳಗಿರಲವರವಗುಣಗ-
ಳೇನು ನೋಡದೆ ಪಾಲಿಸಿದ ಪರಮಾತ್ಮ ಪರಗತಿಯ ॥3॥

ಭಕ್ತಿಗೆ ಮಾತ್ರ ಒಲಿವ ಶ್ರೀನಿವಾಸದೇವ

ಚಂಡವಿಕ್ರಮ ಚಕ್ರಶಂಖವ
ತೊಂಡಮಾನ ನೃಪಾಲಗಿತ್ತನು
ಭಾಂಡಕಾರಕ ಭೀಮನ ಮೃದಾಭರಣಗಳಿಗೊಲಿದ ॥
ಮಂಡೆ ಒಡೆದಾಕಾಶರಾಜನ
ಹೆಂಡತಿಯ ನುಡಿ ಕೇಳಿ ಮಗಳಿಗೆ
ಗಂಡನೆನಿಸಿದ ಗಹನಮಹಿಮ ಗದಾಬ್ಜಧರಪಾಣಿ ॥4॥

ಅಹಲ್ಯೆ, ಇಂದ್ರ, ಬಲಿರಾಜರ ಪಾಪ ಪರಿಹರಿಸಿದ ಶರಣಾಗತ ವತ್ಸಲ

ಗೌತಮನ ನಿಜಪತ್ನಿಯನು ಪುರು-
ಹೂತನೈದಿರೆ ಕಾಯ್ದು ವೃತ್ರನ
ಘಾತಿಸಿದ ಪಾಪವನು ನಾಲ್ಕು ವಿಭಾಗ ಮಾಡಿದನು ॥
ಶಾತಕುಂಭಾತ್ಮಕ ಕಿರೀಟವ
ಕೈತವದಿ ಕದ್ದೊಯ್ದು ಇಂದ್ರಾ-
ರಾತಿ ಬಾಗಿಲ ಕಾಯ್ದ ಭಕ್ತತ್ವೇನ ಸ್ವೀಕರಿಸಿ ॥5॥

ದೋಷರಹಿತನಾದ ಪರಮಾತ್ಮನು ದೋಷಗಳ ನಡುವೆ ಇದ್ದು ಉದ್ಧರಿಸಿದ

ನಾರ ನಂದವ್ರಜದ ಸ್ತ್ರೀಯರ
ಜಾರಕರ್ಮಕೆ ಒಲಿದು ಅಜ ಸುಕು-
ಮಾರನೆನಿಸಿದ ನಂದಗೋಪಗೆ ನಳಿನಭವಜನಕ ॥
ವೈರವರ್ಜಿತ ದೈತ್ಯರನು ಸಂ-
ಹಾರ ಮಾಡಿದ ಖಪಗಮನ ಪೆಗ-
ಲೇರಿದನು ಗೋಪಾಲಕರ ವೃಂದಾವನದೊಳಿದ್ದು ॥6॥

ಶುದ್ಧ ಭಕುತಿಗೆ ಒಲಿವ ಭಕ್ತವತ್ಸಲ

ಶ್ರೀಕರಾರ್ಚಿತ ಪಾದಪಲ್ಲವ
ಗೋಕುಲದ ಗೊಲ್ಲತಿಯರೊಲಿಸಿದ
ಪಾಕಶಾಸನಪೂಜ್ಯ ಗೋಗೋವತ್ಸಗಳ ಕಾಯ್ದ ॥
ಓಕರಿಸಿ ಕುರುಪತಿಯ ಭೋಜನ
ಸ್ವೀಕರಿಸಿದನು ವಿದುರನೌತಣ
ಬಾಕುಲಿಕನಂದದಲಿ ತೋರಿದ ಭಕ್ತವತ್ಸಲನು ॥7॥

ಭಕ್ತರಿಗೆ ಪುತ್ರನಾಗಿ, ಪತಿಯಾಗಿ, ರಕ್ಷಕನಾಗಿ ಉದ್ಧರಿಸಿದ ಕೃಪಾಸಾಂದ್ರ

ಪುತ್ರನೆನಿಸಿದ ಗೋಪಿದೇವಿಗೆ
ಭರ್ತೃವೆನಿಸಿದ ವ್ರಜದ ನಾರಿಯ-
ರುಕ್ತಿ ಲಾಲಿಸಿ ಪರ್ವತವ ನೆಗೆಹಿದ ಕೃಪಾಸಾಂದ್ರ ॥
ಶತ್ರುತಾಪನ ಯಜ್ಞಪುರುಷನ
ಪುತ್ರಿಯರ ತಂದಾಳ್ದ ತ್ರಿಜಗ-
ದ್ಧಾತ್ರ ಮಂಗಳಗಾತ್ರ ಪರಮಪವಿತ್ರ ಸುರಮಿತ್ರ ॥8॥

ಭಕ್ತರಿಗಾಗಿ ಅವತರಿಸುವ ಅನಂತಮಹಿಮ

ರೂಪನಾಮವಿಹೀನ ಗರ್ಗಾ-
ರೋಪಿತ ಸುನಾಮದಲಿ ಕರೆಸಿದ
ವ್ಯಾಪಕ ಪರಿಚ್ಛಿನ್ನರೂಪದಿ ತೋರ್ದ ಲೋಕರಿಗೆ ॥
ದ್ವಾಪರಾಂತ್ಯದಿ ದೈತ್ಯರನು ಸಂ-
ತಾಪಗೊಳಿಸುವೆನೆಂದು ಶ್ವೇತ-
ದ್ವೀಪಮಂದಿರನವತರಿಸಿ ಸಲಹಿದನು ತನ್ನವರ ॥9॥

ನಾನಾವತಾರ ತಾಳಿ ದೇವ ಋಷಿ ನೃಪ ಮಾನವನರನ್ನು ಉದ್ಧರಿಸಿದ

ಶ್ರೀವಿರಿಂಚಾದ್ಯಮರನುತ ನಾ-
ನಾವತಾರವ ಮಾಡಿ ಸಲಹಿದ
ದೇವತೆಗಳನು ಋಷಿಗಳನು ಕ್ಷಿತಿಪರನು ಮಾನವರ ॥
ಸೇವೆಗಳ ಕೈಗೊಂಡು ಫಲಗಳ-
ನೀವ ನಿತ್ಯಾನಂದಮಯ ಸು-
ಗ್ರೀವ ಧ್ರುವ ಮೊದಲಾದ ಭಕ್ತರಿಗಿತ್ತ ಪುರುಷಾರ್ಥ॥10॥

ಅನಂತಕಲ್ಯಾಣಗುಣರೂಪನಾದ ಶ್ರೀಹರಿಯು ಸ್ಮರಣೆ ಮಾತ್ರದಿ ಪ್ರಸನ್ನನಾಗುವನು

ದುಷ್ಟದಾನವಹರಣ ಸರ್ವೋ-
ತ್ಕೃಷ್ಟ ಸದ್ಗುಣಭರಿತ ಭಕ್ತಾ-
ಭೀಷ್ಟದಾಯಕ ಭವವಿನಾಶಕ ವಿಗತಭಯಶೋಕ ॥
ನಷ್ಟತುಷ್ಟಿಗಳಿಗಿಲ್ಲ ಸೃಷ್ಟ್ಯಾ-
ದ್ಯಷ್ಟಕರ್ತನಿಗಾವಕಾಲದಿ
ಹೃಷ್ಟನಾಗುವ ಸ್ಮರಣೆಮಾತ್ರದಿ ಹೃದ್ಗುಹಾವಾಸಿ ॥11॥

ಬ್ರಹ್ಮರುದ್ರಾದಿ ಸಕಲ ದೇವತೆಗಳನ್ನು ಕಾಯುವ ಸರ್ವೋತ್ತಮ

ಹಿಂದೆ ಪ್ರಳಯೋದಕದಿ ತಾವರೆ-
ಕಂದನಂಜಿಸಿ ಕಾಯ್ದ ತಲೆಯೊಳು
ಬಾಂದೊರೆಯ ಪೊತ್ತವಗೊಲಿದು ಪರಿಯಂಕಪದವಿತ್ತ ॥
ವಂದಿಸಿದ ವೃಂದಾರಕರ ಸ-
ದ್ವಂದ ಕುಣಿಸಿದ ಸುಧೆಯ ಕರುಣಾ-
ಸಿಂಧು ಕಮಲಾಕಾಂತ ಬಹುನಿಶ್ಚಿಂತ ಜಯವಂತ ॥12॥

ಭೋಗ್ಯ ಭೋಕ್ತೃವಾಗಿ ದೇವ ದೈತ್ಯರಿಗೆ ಸಮೀಚೀನ ಅಸಮೀಚೀನ ಫಲವೀವ

ಸತ್ಯಸಂಕಲ್ಪಾನುಸಾರ ಪ್ರ-
ವರ್ತಿಸುವ ಪ್ರಭು ತನಗೆ ತಾನೇ
ಭೃತ್ಯನೆನಿಸುವ ಭೋಕ್ತ ಭೋಗ್ಯಪದಾರ್ಥದೊಳಗಿದ್ದು ॥
ತತ್ತದಾಹ್ವಯನಾಗಿ ತರ್ಪಕ-
ತೃಪ್ತಿಪಡಿಸುವ ತತ್ವಪತಿಗಳ
ಮತ್ತರಾದಸುರರ್ಗೆ ಅಸಮೀಚೀನ ಫಲವೀವ ॥13॥

ಅನುಸಂಧಾನವಿಲ್ಲದ ಹರಿ ಸ್ಮರಣೆಗೂ ಫಲವಿದೆ

ಬಿಟ್ಟಿಗಳ ನೆವದಿಂದಲಾಗಲಿ
ಪೊಟ್ಟೆಗೋಸುಗವಾದಡಾಗಲಿ
ಕೆಟ್ಟರೋಗಪ್ರಯುಕ್ತವಾಗಲಿ ಅಣಕದಿಂದೊಮ್ಮೆ ॥
ನಿಟ್ಟುಸುರಿನಿಂ ಬಾಯ್ದೆರೆದು ಹರಿ
ವಿಟ್ಠಲಾ ಸಲಹೆಂದೆನಲು ಕೈ-
ಗೊಟ್ಟು ಕಾವ ಕೃಪಾಳು ಸಂತತ ತನ್ನ ಭಕುತರನು ॥14॥

ಹರಿಯ ಗುಣಕರ್ಮಗಳನ್ನು ಯಾವ ಬಗೆಯಲ್ಲಿ ಕೊಂಡಾಡಿದರೂ ಒಲಿವ

ಈ ವಸುಂಧರೆಯೊಳಗೆ ಶ್ರೀ ಭೂ-
ದೇವಿಯರಸನ ಸುಗುಣ ಕರ್ಮಗ-
ಳಾವ ಬಗೆಯಿಂದಾದಡಾಗಲಿ ಕೀರ್ತಿಸುವ ನರರ ॥
ಕಾವ ಕಮಲದೊಳಾಯತಾಕ್ಷ ಕೃ-
ಪಾವಲೋಕನದಿಂದ ಕಪಿಸು-
ಗ್ರೀವಗೊಲಿದಂದದಲಿ ಒಲಿದಭಿಲಾಷೆ ಪೂರೈಪ ॥15॥

ದೇಹಾಕಾರ ರೂಪನಾಗಿ ಜೀವರೊಡನೆ ಜನಿಸಿ ಸಾಧನೆ ಮಾಡಿಸಿ ಮುಕ್ತಿಯನೀವ

ಚೇತನಾಂತರ್ಯಾಮಿ ಲಕುಮೀ-
ನಾಥ ಕರ್ಮಗಳನುಸರಿಸಿ ಜನಿ-
ತೋಥವಿಷ್ಣೋ ಎಂಬ ಶ್ರುತಿಪ್ರತಿಪಾದ್ಯನೆಮ್ಮೊಡನೆ ॥
ಜಾತನಾಗುವ ಜನ್ಮರಹಿತಾ-
ಕೂತಿನಂದನ ಭಕ್ತರಿಂದಾ-
ಹೂತನಾಗಿ ಮನೋರಥವ ಬೇಡಿಸಿಕೊಳದಲೀವ ॥16॥

ನೃಪ ಋಷಭ ಹೋತ ಋತುಸತ್ ರೂಪಗಳ ವ್ಯಾಪಾರ

ನೃಪನು ಎನಿಸುವ ಮನುಜರೊಳು ಸುರ
ವೃಷಭನಿಂದ್ರಿಯಗಳೊಳು ತತ್ತ-
ದ್ವಿಷಯಗಳ ಭುಂಜಿಸುವ ಹೋತಾಹ್ವಯನು ತಾನಾಗಿ ॥
ಮೃಷರಹಿತ ವೇದದೊಳು ಋತು ಸತು
ಪೆಸರಿನಿಂದಲಿ ಕರೆಸುತ ಜಗ-
ತ್ಪ್ರಸವಿತ ನಿರಂತರದಿ ಸಂತೈಸುವನು ಭಕುತರನು ॥17॥

ಅಬ್ಜ, ಗೋಜಾ, ಅದ್ರಿಜ ನಾಮಕನ ಸ್ಥಾನ ಮತ್ತು ಕಾರ್ಯಗಳು

ಅಬ್ಜಭವಪಿತ ಜಲಧರಾದ್ರಿಯೊ-
ಳಬ್ಜ ಗೋಜಾದ್ರಿಜನೆನಿಸಿ ಜಲ-
ದುಬ್ಬಳೆ ಪೀಯೂಷದಾವರೆ ಶ್ರೀ ಶಶಾಂಕರೊಳು ॥
ಕಬ್ಬು ಕದಳಿ ಲತಾ ತೃಣ ದ್ರುಮ-
ಹೆಬ್ಬುಗೆಯ ಮಾಡುತಿಹ ಗೋಜನು
ಇಬ್ಬಗೆ ಪ್ರತೀಕದೊಳು ಮಣಿಮೃಗ ಸೃಜಿಪನದ್ರಿಜನು॥18॥

ವೇದಪ್ರತಿಪಾದ್ಯ ಶುಚಿಸತ್ ಮತ್ತು ಅಚ್ಯುತನ ವ್ಯಾಪಾರ

ಶ್ರುತಿವಿನುತ ಸರ್ವತ್ರದಲಿ ಭಾ-
ರತಿರಮಣನೊಳಗಿದ್ದು ತಾ ಶುಚಿ-
ಷತುವೆನಿಸಿ ಜಡಚೇತನರರನ ಪವಿತ್ರಮಾಡುತಿಹ ॥
ಅತುಳಮಹಿಮಾನಂತರೂಪಾ-
ಚ್ಯುತನೆನಿಸಿ ಚಿದ್ದೇಹದೊಳು ಪ್ರಾ-
ಕೃತಪುರುಷನಂದದಲಿ ನಾನಾಚೇಷ್ಟೆಗಳ ಮಾಳ್ಪ ॥19॥

ಅನ್ನಮಯಾದಿ ಪಂಚರೂಪಗಳನ್ನು ಚಿಂತಿಸಬೇಕಾದ ಅಧಿಷ್ಠಾನಗಳು

ಅತಿಥಿಯೆನಿಸುವನನ್ನಮಯ ಭಾ-
ರತಿರಮಣನೊಳು ಪ್ರಾಣಮಯ ಪ್ರಾ-
ಕೃತ ವಿಷಯ ಚಿಂತನೆಯ ಮಾಡಿಸುವನು ಮನೋಮಯನು॥
ಯತನ ವಿಜ್ಞಾನಮಯ ಬರಲದ
ಜತನಮಾಡಿಸಿ ಆತ್ಮಜಾಯಾ-
ಸುತರ ಸಂಗದಿ ಸುಖವನೀವಾನಂದಮಯನೆನಿಸಿ ॥20॥

ದೋಷದೂರನ ಸ್ಮರಣೆಯಿಂದ ದೋಷನಾಶ

ಇನಿತು ರೂಪಾತ್ಮನಿಗೆ ದೋಷಗ-
ಳೆನಿತು ಬಪ್ಪವು ಪೇಳಿರೈ ಬ್ರಾ-
ಹ್ಮಣಕುಲೋತ್ತಮರಾದವರು ನಿಷ್ಕಪಟ ಬುದ್ಧಿಯಲಿ ॥
ಗುಣನಿಯಾಮಕ ತತ್ತದಾಹ್ವಯ
ನೆನಿಸಿ ಕಾರ್ಯವ ಮಾಳ್ಪ ದೇವನ
ನೆನೆದ ಮಾತ್ರದಿ ದೋಷರಾಶಿಗಳೆಲ್ಲ ಕೆಡುತಿಹವು ॥21॥

ಕುಸ್ಥಂ ಅಶಸ್ಥ, ಖಸ್ಥ, ವ್ಯಸ್ತ, ಸಮಸ್ತ, ಉಪಸ್ಥ ನಾಮಕನ ಉಪಾಸನೆ

ಕುಸ್ಥನೆನಿಸುವ ಭೂಮಿಯೊಳು ಆ-
ಶಸ್ಥನೆನಿಸುವ ದಿಗ್ವಲಯದೊಳು
ಖಸ್ಥನೆನಿಪಾಕಾಶದೊಳು ಒಬ್ಬೊಬ್ಬರೊಳಗಿದ್ದು ॥
ವ್ಯಸ್ತನೆನಿಸುವ ಸರ್ವರೊಳಗೆ ಸ-
ಮಸ್ತನೆನಿಸುವ ಬಳಿಯಲಿದ್ದು ಉ-
ಪಸ್ಥನೆನಿಪ ವಿಶೋಧನ ವಿಶುದ್ಧಾತ ಲೋಕದೊಳು ॥22॥

ಸ್ಥಾನ ಹಾಗೂ ಸ್ವಭಾವಾನುಸಾರ ಕರ್ಮಗಳ ಮಾಡುತ್ತಾ ನೆಲೆಸಿರುವನು

ಜ್ಞಾನದನು ಎಂದೆನಿಪ ಶಾಸ್ತ್ರಿ
ಮಾನದನು ಎಂದೆನಿಪ ವಸನದಿ
ದಾನಶೀಲ ಸುಬುದ್ಧಿಯೊಳಗವದಾನ್ಯನೆನಿಸುವನು ॥
ವೈನತೇಯವರೂಥ ತತ್ತತ್ಸ್ಥಾನ-
ದಲಿ ತತ್ತತ್ಸ್ವಭಾವಗಳಾನು
ಸಾರ ಚರಿತ್ರೆಗಳ ಮಾಡುತ ನಿತ್ಯ ನೆಲೆಸಿಪ್ಪ ॥23॥

ಅಗಣೀ, ಮಣೀ, ಶ್ರೀಮಾನ್, ಯೋಗಕ್ಷೇಮ ನಾಮಕ ರೂಪಗಳ ಅಧಿಷ್ಠಾನ ಚಿಂತನೆ

ಗ್ರಾಮಪನೊಳಗ್ರಣಿಯೆನಿಸುವನು
ಗ್ರಾಮಣೀಯೆನಿಸುವನು ಜನರೊಳು
ಗ್ರಾಮಪಗ್ರಾಮಗಳೊಳಗೆ ಶ್ರೀಮಾನ್ಯನೆನಿಸುತಿಪ್ಪ ॥
ಶ್ರೀ ಮನೋರಮ ತಾನೇ ಯೋಗ-
ಕ್ಷೇಮನಾಮಕನಾಗಿ ಸಲಹುವ
ಈ ಮಹಿಮೆ ಮಿಕ್ಕಾದ ದೇವರಿಗುಂಟೆ ಲೋಕದೊಳು
॥24॥

ವಿಜಯ ತಂದುಕೊಡುವ ವಿಜಯಸಾರಥಿರೂಪ

ವಿಜಯಸಾರಥಿ ಎಂದು ಗರುಡ
ಧ್ವಜನ ಮೂರ್ತಿಯ ಭಕ್ತಿಪೂರ್ವಕ
ಭಜಿಸುತಿಪ್ಪ ಮಹಾತ್ಮರಿಗೆ ಸರ್ವತ್ರದಲಿ ಒಲಿದು ॥
ವಿಜಯದನು ತಾನಾಗಿ ಸಲಹುವ
ಭುಜಗಭೂಷಣಪೂಜ್ಯ ಚರಣಾಂ-
ಬುಜ ವಿಭೂತಿದ ಭುವನಮೋಹನರೂಪ ನಿರ್ಲೇಪ
॥25॥

ಕರ್ಮಗಳ ಅರಿವೇ ಇಲ್ಲದ ಅಸೃಜ್ಯ ಜೀವರನ್ನು ಸೃಷ್ಟಿಸಿ ಕರ್ಮಫಲ ಉಣಿಸುವ ಕರುಣಾಸಾಂದ್ರ

ಅನಭಿಮತ ಕರ್ಮಪ್ರವಹದೊಳ-
ಗನಿಮಿಷಾದಿ ಸಮಸ್ತಚೇತನ-
ಗಣವಿಹುದು ತತ್ಫಲಗಳುಣ್ಣದೆ ಸೃಷ್ಟಿಸದೆ ಮುನ್ನ ॥
ವನಿತೆಯಿಂದೊಡಗೂಡಿ ಕರುಣಾ-
ವನಧಿ ನಿರ್ಮಿಸೆ ತಮ್ಮ ತಮ್ಮಯ
ಅನುಚಿತೋಚಿತ ಕರ್ಮಫಲಗಳನುಣುತ ಚರಿಸುವರು
॥26॥

ಹರಿಗೆ ಸಮರ್ಪಿಸದೆ ಮಾಡಿದ ಭೋಜನ ಯಮಪಟ್ಟಣಕ್ಕೆ ಸೋಪಾನ

ಝಲ್ಲಡಿಯ ನೆಳಲಂತೆ ಭವಸುಖ-
ತಲ್ಲಣವಗೊಳಿಸುವುದು ನಿಶ್ಚಯ-
ವಲ್ಲ ಸಾಲವ ಮಾಡಿ ಸಕ್ಕರೆ ಮೆದ್ದ ತೆರನಂತೆ ॥
ಕ್ಷುಲ್ಲಕರ ಕೂಡಾಡದಲೆ ಶ್ರೀ-
ವಲ್ಲಭನ ಸದ್ಗುಣಗಣಂಗಳ
ಬಲ್ಲವರ ಕೂಡಾಡಿ ಸಂಪಾದಿಸು ಪರಂಪದವ ॥27॥

ಒಂದರಿಯ ನೆರಳಂತೆ ಈ ಭವ ಸುಖ

ಝಲ್ಲಡಿಯ ನೆಳಲಂತೆ ತೋರ್ಪುದು
ಎಲ್ಲಕಾಲದಿ ಭವದ ಸೌಖ್ಯವು
ಎಲ್ಲಿ ಪೊಕ್ಕರು ಬಿಡದೆ ಬೆಂಬತ್ತಿಹುದು ಜೀವರಿಗೆ ॥
ಒಲ್ಲೆನೆಂದರೆ ಬಿಡದು ಹರಿನಿ-
ರ್ಮಾಲ್ಯ ನೈವೇದ್ಯವನು ಭುಂಜಿಸಿ
ಬಲ್ಲವರ ಕೂಡಾಡು ಭವದುಃಖಗಳ ನೀಡಾಡು ॥28॥

ಹರಿಪ್ರಸಾದ ಮತ್ತು ಸತ್ಸಂಗವೇ ಸಂಸಾರಕ್ಕೆ ಮದ್ದು

ಕುಟ್ಟಿ ಕೊಯ್ದು ದನಟ್ಟು ಇಟ್ಟುದ-
ಸುಟ್ಟು ಕೊಟ್ಟುದ ಮುಟ್ಟಲಘ ಹಿ-
ಟ್ಟಿಟ್ಟು ಮಾಳ್ಪುದು ವಿಟ್ಠಲುಂಡುಚ್ಛಿಷ್ಠ ಸಜ್ಜನರ ॥
ಬಿಟ್ಟು ತನ್ನಯ ಹೊಟ್ಟೆಗೋಸುಗ-
ಥಟ್ಟನುಣುತಿಹ ಕೆಟ್ಟ ಮನುಜರ
ಕಟ್ಟಿ ಒಯ್ದೆಮಪಟ್ಟಣದೊಳೊತ್ತಟ್ಟಿಲಿಡುತಿಹರು ॥29॥

ಆಲಸ್ಯ ಮಾಡದೆ ಭಕ್ತಿಯಿಂದ ಭಜಿಸುವ ಭಕ್ತರಿಂಗೆ ಒದಗುವ ಶ್ರೀಹರಿ

ಜಾಗುಮಾಡದೆ ಭೋಗದಾಸೆಯ-
ನೀಗಿ ಪರಮನುರಾಗದಲಿ ವರ-
ಭೋಗಿಶಯನನ ಆಗರದ ಹೆಬ್ಬಾಗಿಲಲಿ ನಿಂದು
ಕೂಗುತಲೆ ಶಿರಬಾಗಿ ಕರುಣಾ-
ಸಾಗರನೆ ಭವರೋಗಭೇಷಜ
ಕೈಗೊಡೆಂದೆನೆ ಬೇಗ ಒದಗುವ ಭಾಗವತರರಸ ||30||

ಭಕ್ತರ ಹೀನಕರ್ಮಗಳನ್ನೂ ಸಹ ಸ್ವೀಕರಿಸಿ ಉದ್ಧರಿಪ ದಯಾನಿಧಿ

ಏನು ಕರುಣವೋ ತನ್ನವರಲಿ ದ-
ಯಾನಿಧಿಗೆ ಸದ್ಭಕ್ತಜನರತಿ
ಹೀನಕರ್ಮವ ಮಾಡಿದರು ಸರಿ ಸ್ವೀಕರಿಸಿ ಪೊರೆವ
ಪ್ರಾಣಹಿಂಸಕಲುಬ್ಧಕಗೆ ಸು-
ಜ್ಞಾನ ಭಕ್ತಿಗಳಿತ್ತು ತನ್ನ ಮಹಿಮೆ ಪು-
ರಾಣರೂಪದಿ ಪೇಳಿಸಿದ ರಘುಸೂನುಸುಚರಿತ್ರ ||3

ಬೇಡುವುದಾದರೆ, ಸಜ್ಜನರ ಸಂಗವ ಬೇಡು

ಮೂಢಮಾನವ ಎಲ್ಲ ಕಾಲದಿ
ಬೇಡಿಕೊಂಬಿನಿತೆಂದು ದೈನ್ಯದಿ
ಬೇಡದಂದದಿ ಮಾಡು ಪುರುಷಾರ್ಥಗಳ ಸ್ವಪ್ನದಲಿ ॥
ನೀಡುವರೆ ನಿನ್ನಮಲಗುಣ ಕೊಂ-
ಡಾಡಿ ಹಿಗ್ಗುವ ಭಾಗವತರೊಡ-
ನಾಡಿಸೆನ್ನನು ಜನುಮಜನುಮಗಳಲ್ಲಿ ಮರೆಯದಲೆ ॥32॥

ಶ್ರೀಹರಿ ಬಿಟ್ಟು ಬೇರೆ ಪುರುಷಾರ್ಥವಿಲ್ಲ

ಚತುರವಿಧ ಪುರುಷಾರ್ಥರೂಪನು
ಚತುರಮೂರ್ತ್ಯಾತ್ಮಕನಿರಲು ಮ-
ತ್ತಿತರ ಪುರುಷಾರ್ಥಗಳ ಬಯಸುವರೇನು ಬಲ್ಲವರು ॥
ಮತಿವಿಹೀನರು ಆಹಿಕಸುಖ ಶಾ-
ಶ್ವತವಿದೆಂದರಿದುನುದಿನದಿ ಗಣ-
ಪತಿಯೆ ಮೊದಲಾದನ್ಯ ದೇವತೆಗಳನೆ ಭಜಿಸುವರು॥33॥

ಜೀವರಂತರ್ಯಾಮಿಯಾಗಿ ಯೋಗ್ಯತಾನುಸಾರ ಫಲವೀವ ಸರ್ವಜ್ಞ

ದ್ರುಹಿಣ ಮೊದಲಾದಮರಗಣ ಸ-
ನ್ಮಹಿತ ಸರ್ವಪ್ರಾಣಿಗಳ ಹೃ-
ದ್ಗುಹನಿವಾಸಿ ಗಭೀರ ಸರ್ವಾರ್ಥಪ್ರದಾಯಕನು ॥
ಅಹಿಕ ಪಾರತ್ರದಲಿ ವಿಹಿತಾ
ವಿಹಿತ ಕರ್ಮಗಳರಿತು ಫಲ ಸ-
ನ್ನಿಹಿತನಾಗಿದ್ದೆಲ್ಲರಿಗೆ ಕೊಡುತಿಪ್ಪ ಸರ್ವಜ್ಞ ॥34॥

ವೈಷಮ್ಯವಿಲ್ಲದೆ ಯೋಗ್ಯತಾನುಸಾರ ಫಲ ಕೊಡುವನು

ಒಮ್ಮೆಗಾದರು ಜೀವರೊಳು ವೈ-
ಷಮ್ಯ ದ್ವೇಷಾಸೂಯೆ ಇಲ್ಲ ಸು -
ಧರ್ಮನಾಮಕ ಸಂತೈಸುವನು ಸರ್ವರನು ನಿತ್ಯ
ಬ್ರಹ್ಮಕಲ್ಪಾಂತದಲಿ ವೇದಾ-
ಗಮ್ಯ ಶ್ರೀಜಗನ್ನಾಥವಿಠ್ಠಲ
ಸುಮ್ಮನೀವನು ತ್ರಿವಿಧರಿಗೆ ಅವರವರ ನಿಜಗತಿಯ ॥35॥

॥ ಇಲ್ಲಿಗೆ ಇಪ್ಪತ್ತೆರಡನೆಯ ಭಕ್ತಾಪರಾಧಸಹಿಷ್ಣುಸಂಧಿ ಅಥವಾ ಸಕಲದುರಿತನಿವಾರಣ ಸಂಧಿ ಮುಗಿಯಿತು ॥

ಅಪರೋಕ್ಷತಾರತಮ್ಯಸಂಧಿ-23

(ಕಲ್ಪಸಾಧನ ಸಂಧಿ)

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

21 ಕುಮತಗಳ ನಿರಾಕರಿಸಿ "ಹರಿಯೇ ಸರ್ವೋತ್ತಮ" ಎಂದು ಸ್ಥಾಪಿಸಿದ ಮಧ್ವಗುರುಗಳೇ !! ಕೃಪಾದೃಷ್ಟಿಯಿಂದೊಮ್ಮೆ ನೋಡಿ

ಏಕವಿಶಂತಿ ಮತಪ್ರವರ್ತಕ
ಕಾಕುಮಾಯ್ಗಳ ಕುಹಕಯುಕ್ತಿ ನಿ-
ರಾಕರಿಸಿ ಸರ್ವೋತ್ತಮನು ಹರಿಯೆಂದು ಸ್ಥಾಪಿಸಿದ ॥
ಶ್ರೀಕಳತ್ರನ ಸದನ ದ್ವಿಜಪ ಪಿ -
ನಾಕಿಸನ್ನುತಮಹಿಮ ಪರಮ ಕೃ-
ಪಾಕಟಾಕ್ಷದಿ ನೋಡು ಮಧ್ವಾಚಾರ್ಯ ಗುರುವರ್ಯ ॥1॥

ಶ್ರೀಹರಿ ನುಡಿಸಿದಂತೆ ಕಲ್ಪಸಾಧನೆಯನ್ನು ವಿವರಿಸುವೆನು

ವೇಧ ಮೊದಲಾಗಿಪ್ಪಮಲ ಮೋ-
ಕ್ಷಾಧಿಕಾರಿಗಳಾದ ಜೀವರ
ಸಾಧನಗಳಪರೋಕ್ಷನಂತರ ಲಿಂಗಭಂಗವನು ॥
ಸಾಧುಗಳು ಚಿತ್ತೈಪುದೆನ್ನಪ-
ರಾಧಗಳ ನೋಡದಲೆ ಚಕ್ರ ಗ-
ದಾಧರನು ಪೇಳಿಸಿದ ತೆರದಂದದಲಿ ಪೇಳುವೆನು ॥2॥

ಕರ್ಮಯೋಗಿ-ಪ್ರತೀಕಾಲಂಬನ ಜೀವರ ಲಕ್ಷಣಗಳು

ತೃಣ ಕ್ರಿಮಿ ದ್ವಿಜ ಪಶು ನರೋತ್ತಮ
ಜನಪ ನರಗಂಧರ್ವಗಣರಿವ-
ರೆನಿಪರಂಶವಿಹೀನ ಕರ್ಮಸುಯೋಗಿಗಳು ಎಂದು ॥
ತನು ಪ್ರತೀಕದಿ ಬಿಂಬನ ಉಪಾ-
ಸನವಗೈಯುತ ಇಂದ್ರಿಯಜ ಕ-
ರ್ಮನವರತ ಹರಿಗರ್ಪಿಸುತ ನಿರ್ಮಮರು ಎನಿಸುವರ

॥3॥

ಏಳುವಿಧ ಕರ್ಮಯೋಗಿಗಳು ಬ್ರಾಹ್ಮಣ ಜನ್ಮ ತಾಳಿ ಗುರುಮುಖೇನ ತಿಳಿದ ಕಾಲಧರ್ಮವನ್ನು ದೇವರಿಗೆ ಅರ್ಪಿಸುವರು

ಏಳುವಿಧ ಜೀವಗಣ ಬಹಳ ಸು-
ರಾಳಿ ಸಂಖ್ಯಾನೇಮವುಳ್ಳದು
ತಾಳಿ ನರದೇಹವನು ಬ್ರಾಹ್ಮಣಕುಲದಲವತರಿಸಿ ॥
ಸ್ಥೂಲಕರ್ಮವ ತೊರೆದು ಗುರುಗಳು
ಪೇಳಿದರ್ಥವ ತಿಳಿದು ತತ್ತ-
ತ್ಕಾಲಧರ್ಮ ಸಮರ್ಪಿಸುತಿಹರು ಕರ್ಮಯೋಗಿಗಳು
॥4॥

1000 ಜನ್ಮಗಳಲ್ಲಿ ಜ್ಞಾನಪೂರ್ವಕ ಸಾಧನ ಕ್ರಮ

ಹೀನಕರ್ಮಗಳಿಂದ ಬಹುವಿಧ-
ಯೋನಿಯಲಿ ಸಂಚರಿಸಿ ಪ್ರಾಂತಕೆ
ಮಾನುಷತ್ವವನೈದಿ ಸರ್ವೋತ್ತಮನು ಹರಿಯೆಂಬ ॥
ಜ್ಞಾನಭಕ್ತಿಗಳಿಂದ ವೇದೋ-
ಕ್ತಾನುಸಾರ ಸಹಸ್ರಜನುಮಾ
ನ್ಯೂನ ಕರ್ಮವ ಮಾಡಿ ಹರಿಗರ್ಪಿಸಿದ ನಂತರದಿ ॥5॥

ಮುಂದೆ 10 ಜನ್ಮಗಳಲ್ಲಿ ವಿಶೇಷ ಜ್ಞಾನಪೂರ್ವಕ ಸಾಧನೆ

ಹತ್ತು ಜನುಮಗಳಲ್ಲಿ ಹರಿ ಸ-
ರ್ವೋತ್ತಮ ಸುರಾಸುರಗಣಾರ್ಚಿತ
ಚಿತ್ರಕರ್ಮ ವಿಶೋಕಾನಂತಾನಂತರೂಪಾತ್ಮ ॥
ಸತ್ಯಸತ್ಸಂಕಲ್ಪ ಜಗದು-
ತ್ಪತ್ತಿ ಸ್ಥಿತಿ ಲಯ ಕಾರಣ ಜರಾ-
ಮೃತ್ಯುವರ್ಜಿತನೆಂದುಪಾಸನೆಗೈದ ತರುವಾಯ ॥6॥

ಅಪರೋಕ್ಷ ಹಂತವನ್ನು ಹೊಂದಿಸುವ ಕೊನೆಯ 3 ಜನ್ಮಗಳು

ಮೂರು ಜನುಮಗಳಲ್ಲಿ ದೇಹಾ-
ಗಾರ ಪಶು ಧನ ಪತ್ನಿ ಮಿತ್ರ ಕು-
ಮಾರ ಮಾತಾಪಿತೃಗಳಲ್ಲಿಹ ಸ್ನೇಹಕಿಂತಧಿಕ ॥
ಮಾರಮಣನಲಿ ಬಿಡದೆ ಮಾಡುವ
ಸೂರಿಗಳು ಈ ಉಕ್ತಜನುಮವ
ಮೀರಿ ಪರಮಾತ್ಮನ ಸ್ವದೇಹದಿ ನೋಡಿ ಸುಖಿಸುವರು
॥

ಜ್ಞಾನಯೋಗಿಗಳು ಹಾಗೂ ವಿಜ್ಞಾನಯೋಗಿಗಳ ವಿಂಗಡನೆ

ದೇವಗಾಯಕಾಜಾನ ಚಿರಪಿತೃ
ದೇವರೆಲ್ಲರು ಜ್ಞಾನಯೋಗಿಗ-
ಳಾವಕಾಲಕು ಪುಷ್ಕರ ಶನೈಶ್ಚರ ಉಷಾ ಸ್ವಾಹಾ
ದೇವಿ ಬುಧ ಸನಕಾದಿಗಳು ಮೇ-
ಘಾವಳಿಪ ಪರ್ಜನ್ಯ ಸಾಂಶರು
ಈ ಉಭಯಗಣದೊಳಗಿವರ ವಿಜ್ಞಾನಯೋಗಿಗಳು ||8||

ಜ್ಞಾನಯೋಗಿಗಳು ಹಾಗೂ ವಿಜ್ಞಾನಯೋಗಿಗಳ ಸಾಧನಮಾರ್ಗ

ಭರತಖಂಡದಿ ನೂರು ಜನುಮವ
ಧರಿಸಿ ನಿಷ್ಕಾಮುಕ ಸುಕರ್ಮಾ-
ಚರಿಸಿದಾನಂತರದಿ ದಶಸಾಹಸ್ರ ಜನುಮದಲಿ ||
ಉರುತರಜ್ಞಾನವನು ಪಡೆದೆ
ದೆರಡೊಂದು ಶತ ದೇಹದಲಿ ಭಕುತಿಯ
ನಿರವಧಿಕನಲಿ ಮಾಡಿ ಕಾಂಬರು ಬಿಂಬರೂಪವನು ||9||

ಜ್ಞಾನ-ವಿಜ್ಞಾನ ಯೋಗಿಗಳ ಲಕ್ಷಣಗಳು

ಸಾಧನಾತ್ಪೂರ್ವದಲಿ ಇವರಿಗ-
ನಾದಿಕಾಲಪರೋಕ್ಷವಿಲ್ಲ ನಿ-
ಷೇಧಕರ್ಮಗಳಿಲ್ಲ ನರಕಪ್ರಾಪ್ತಿ ಮೊದಲಿಲ್ಲ ॥
ವೇದಶಾಸ್ತ್ರಗಳಲ್ಲಿ ಇಪ್ಪ ವಿ-
ರೋಧವಾಕ್ಯವ ಪರಿಹರಿಸಿ ಮಧು-
ಸೂದನನೆ ಸರ್ವೋತ್ತಮೋತ್ತಮನೆಂದು ಸುಖಿಸುವರು
॥10॥

ಭಕ್ತಿಯೋಗಿಗಳ ಲಕ್ಷಣ

ಸತ್ಯಲೋಕಾಧಿಪನ ಪಿಡಿದು ಶ-
ತಸ್ಥ ದೇವಗಣಾಂತರೆಲ್ಲರು
ಭಕ್ತಿಯೋಗಿಗಳೆಂದು ಕರೆಸುವರಾವಕಾಲದಲಿ ॥
ಭಕ್ತಿಯೋಗ್ಯರ ಮಧ್ಯದಲ್ಲಿ ಸದ್-
ಭಕ್ತಿವಿಜ್ಞಾನಾ ಗುಣದಿಂ-
ದುತ್ತಮೋತ್ತಮ ಬ್ರಹ್ಮವಾಯು ವಾಣಿವಾಗ್ದೇವಿ ॥11

ಋಜುಗಣದವರಿಗೆ ತ್ರಿಗುಣಗಳ ವಿಕಾರವಿಲ್ಲ

ಋಜುಗುಣಕೆ ಭಕ್ತ್ಯಾದಿಗುಣ ಸ-
ಹಜವೆನಿಸುವುದು ಕ್ರಮದಿ ವೃದ್ಧ್ಯ-
ಬ್ಜಜಪದವಿಪರ್ಯಂತ ಬಿಂಬೋಪಾಸನವು ಅಧಿಕ ॥
ವೃಜಿನವರ್ಜಿತರಿವರೊಳಗೆ ತ್ರಿಗು-
ಣಜ ವಿಕಾರಗಳಿಲ್ಲವೆಂದಿಗು-
ದ್ವಿಜ ಫಣಿಪ ಮೃಡ ಶಕ್ರ ಮೊದಲಾದವರೊಳಿರುತಿಹುವು
॥12॥

ಭಕ್ತಿಯೋಗಿಗಳು ಸಾಧನಾತ್ಪೂರ್ವದಲ್ಲಿ ಸಾಮಾನ್ಯಾಪರೋಕ್ಷಿಗಳು ಸಾಧನೋತ್ತರದಲ್ಲಿ ಬಿಂಬಾಪರೋಕ್ಷಿಗಳು

ಸಾಧನಾತ್ಪೂರ್ವದಲಿ ಈ ಋ-
ಜ್ವಾದಿ ತಾತ್ವಿಕರೆನಿಪ ಸುರಗಣ-
ನಾದಿಸಾಮಾನ್ಯಾಪರೋಕ್ಷಿಗಳೆಂದು ಕರೆಸುವರು ॥
ಸಾಧನೋತ್ತರ ಸ್ವಸ್ವಬಿಂಬ ಉ-
ಪಾಧಿರಹಿತಾದಿತ್ಯನಂದದಿ
ಸಾದರದಿ ನೋಡುವರು ಅಧಿಕಾರಾನುಸಾರದಲಿ ॥13॥

ಭಿನ್ನಭಕ್ತರು ಹಾಗೂ ಅಭಿನ್ನಭಕ್ತರು

ಭಿನ್ನಭಕ್ತರು ಎನಿಸುತಿಹರು ಸು-
ಪರ್ಣ ಶೇಷಾದ್ಯಮರರೆಲ್ಲಾ
ಭಿನ್ನಭಕುತರು ನಾಲ್ವರೆನಿಪರು ಭಾರತೀ ಪ್ರಾಣ ॥
ಸೊನ್ನೊಡಲ ವಾಗ್ದೇವಿಯರು ಪಣೆ-
ಗಣ್ಣ ಮೊದಲಾದವರೊಳಗೆ ತ-
ತ್ತನ್ನಿಯಾಮಕರಾಗಿ ವ್ಯಾಪಾರವನೆ ಮಾಡುವರು ॥14॥

ದ್ವಂದ್ವಕರ್ಮಗಳಿಗೆ ಪವಮಾನನೇ ಪ್ರೇರಕನೆಂದು ಭಜಿಸಿದರೆ ಕುಯೋನಿಗಳು ಬಾರವು

ಹೀನ ಸತ್ಕರ್ಮಗಳೆರಡು ಪವ-
ಮಾನದೇವನು ಮಾಳ್ಪನಿದಕನು
ಮಾನವಿಲ್ಲೆಂದೆನುತ ದೃಢಭಕ್ತಿಯಲಿ ಭಜಿಪರ್ಗೆ ॥
ಪ್ರಾಣಪತಿ ಸಂಪ್ರೀತನಾಗಿ ಕು-
ಯೋನಿಗಳ ಕೊಡನೆಲ್ಲಕರ್ಮಗ-
ಳಾನೆ ಮಾಡುವೆನೆಂಬ ಮನುಜರ ನರಕಕ್ಕೈದಿಸುವ ॥15॥

ವಾಯುದೇವರ ಪಿಂಡಾಂಡ ಮತ್ತು ಬ್ರಹ್ಮಾಂಡ ಆಧಾರಕ ಎರಡು ರೂಪಗಳು

ದೇವ ಋಷಿ ಪಿತೃ ನೃಪ ನರರೆನಿ-
ಪ್ಪೈವರೊಳು ನೆಲೆಸಿದ್ದು ಅವರ ಸ್ವ-
ಭಾವಕರ್ಮವ ಮಾಡಿ ಮಾಡಿಪ ಒಂದು ರೂಪದಲಿ ॥
ಭಾವಿಬ್ರಹ್ಮನು ಕೂರ್ಮರೂಪದ-
ಲೀ ವಿರಿಂಚಾಂಡವನು ಬೆನ್ನಲಿ
ತಾ ವಹಿಸಿ ಲೋಕಗಳ ಪೊರೆವನು ದ್ವಿತೀಯರೂಪದಲಿ
॥16॥

ಮೂರನೆಯ ರೂಪದಿಂದ ಶ್ವಾಸಮಂತ್ರ ಜಪ

ಗುಪ್ತನಾಗಿದ್ದನಿಲದೇವ ದ್ವಿ-
ಸಪ್ತಲೋಕದ ಜೀವರೊಳಗೆ ತ್ರಿ-
ಸಪ್ತಸಾವಿರದಾರುನೂರು ಶ್ವಾಸಜಪಗಳನು ॥
ಸುಪ್ತಿ ಸ್ವಪ್ನದಿ ಜಾಗ್ರತಿಗಳ
ಲಾಪ್ತನಂದದಿ ಮಾಡಿ ಮಾಡಿಸಿ
ಕ್ಲೃಪ್ತಭೋಗಗಳೀವ ಪ್ರಾಂತಕೆ ತೃತೀಯ ರೂಪದಲಿ॥17॥

ದಗ್ಧಪಟದಂತೆ ವಾಯುದೇವರ ಲಿಂಗದೇಹ

ಶುದ್ಧಸತ್ವಾತ್ಮಕ ಶರೀರದೊ-
ಳಿದ್ದ ಕಾಲಕು ಲಿಂಗದೇಹವು
ಬದ್ಧವಾಗದು ದಗ್ದಪಟದೋಪಾಧಿ ಇರುತಿಹುದು ॥
ಸಿದ್ಧಸಾಧನ ಸರ್ವರೊಳಗನ-
ವದ್ಯನೆನಿಸುವ ಗರುಡ ಶೇಷ ಕ-
ಪರ್ದಿ ಮೊದಲಾದಮರರೆಲ್ಲರು ದಾಸರೆನಿಸುವರು ॥18॥

100 ಕಲ್ಪ ಸಾಧನಾನಂತರ ಕಲ್ಕಿ ಎನಿಸಿ ವಾಯುಪದವಿ ಏರಿದಾಗ ಅವತಾರತ್ರಯ

ಗಣದೊಳಗೆ ತಾನಿದ್ದು ಋಜುವೆಂ-
ದೆನಿಸಿಕೊಂಬನು ಕಲ್ಪಶತ ಸಾ-
ಧನವ ಗೈದಾನಂತರದಿ ತಾ ಕಲ್ಕಿಯೆನಿಸುವನು ॥
ದ್ವಿನವಶೀತಿಯ ಪ್ರಾಂತಭಾಗದಿ
ಅನಿಲ ಹನುಮದ್ಭೀಮರೂಪದಿ
ದನುಜರೆಲ್ಲರ ಸದೆದು ಮಧ್ವಾಚಾರ್ಯನೆನಿಸಿದನು ॥19॥

ಬ್ರಹ್ಮ ಸರಸ್ವತಿಯರು, ವಾಯು ಭಾರತಿಯರು ಅನಂತ ರೂಪದಿಂದ ಹರಿಯ ಸೇವಿಸುವರು

ವಿಶ್ವವ್ಯಾಪಕ ಹರಿಗೆ ತಾ ಸಾ-
ದೃಶ್ಯರೂಪವ ಧರಿಸಿ ಬ್ರಹ್ಮ ಸ-
ರಸ್ವತೀ ಭಾರತಿಗಳಿಂದೊಡಗೂಡಿ ಪವಮಾನ ॥
ಶಾಶ್ವತ ಸುಭಕ್ತಿಯಲಿ ಸುಜ್ಞಾ-
ನಸ್ವರೂಪನ ರೂಪಗುಣಗಳ
ನಶ್ವರವು ಎಂದೆನುತ ಪೇಳುವ ಶ್ರುತಿಗಳೊಳಗಿದ್ದು ॥20॥

ಗರುಡಾದಿಗಳಿಗೆ ಹರಿಯ ಕಾಣಲು ಮುಖ್ಯ ಉಪಾಧಿಯಾಗಿರುವ ತ್ರಿಕೋಟಿರೂಪಕ ಮುಖ್ಯಪ್ರಾಣ

ಖೇಟ ಕುಕ್ಕುಟ ಜಲಟವೆಂಬ ತ್ರಿ-
ಕೋಟಿರೂಪವ ಧರಿಸಿ ಸತತ ನಿ-
ಶಾಟರನು ಸಂಹರಿಸಿ ಸಲಹುವ ಸರ್ವಸಜ್ಜನರ ॥
ಕೈಟಭಾರಿಯ ಪುರದ ರತ್ನ-
ವಾಟನೆನಿಸುವ ಗುರುಡ ಶೇಷ ಲ-
ಲಾಟನಮುಖ್ಯ ಸುರರಿಗೆ ಆವಕಾಲದಲಿ ॥21॥

ಋಜುಗಳ ಸ್ಮರಣೆಮಾತ್ರದಿ ಪಾಪಃ

ಈ ಋಜುಗಳೊಳಗೊಬ್ಬ ಸಾಧನ
ನೂರು ಕಲ್ಪದಿ ಮಾಡಿ ಕರೆಸುವ
ಚಾರುತರ ಮಂಗಳಸುನಾಮದಿ ಕಲ್ಪಕಲ್ಪದಲಿ ॥
ಸೂರಿಗಳು ಸಂಸ್ತುತಿಸಿ ವಂದಿಸೆ
ಘೋರದುರಿತಗಳಳಿದು ಪೋಪುವು
ಮಾರಮಣ ಸಂಪ್ರೀತನಾಗುವ ಸರ್ವಕಾಲದಲಿ ॥22॥

ಋಜುಗಳ ನಾಮಗಳು

ಪಾಹಿ ಕಲ್ಕಿ ಸುತೇಜದಾಸನೆ
ಪಾಹಿ ಧರ್ಮಾಧರ್ಮಖಂಡನೆ
ಪಾಹಿ ವರ್ಚಸ್ವೀ ಋಷಣ ನಮೋ ಸಾಧು ಮಹಿಪತಿಯೇ ॥
ಪಾಹಿ ಸದ್ಧರ್ಮಜ್ಞ ಧರ್ಮಜ
ಪಾಹಿ ಸಂಪೂರ್ಣ ಶುಚಿ ವೈಕೃತ
ಪಾಹಿ ಅಂಜನ ಸರ್ಷಪನೆ ಖರ್ಪಟನು ಶ್ರದ್ಧಾಹ್ವ ॥23॥

19 ಸಂಧ್ಯಾತ ಋಜುವಿನಿಂದ 32 ಮನುನಾಮಕ ಋಜುವಿನ ಸ್ತೋತ್ರ

ಪಾಹಿ ಸಂಧ್ಯಾನ ವಿಜ್ಞಾನನೆ
ಪಾಹಿ ಮಹವಿಜ್ಞಾನ ಕೀರ್ತನ
ಪಾಹಿ ಸಂಕೀರ್ಣಾಖ್ಯ ಕತ್ಥನ ಪಾಹಿಬುದ್ಧ ಜಯಾ ॥
ಪಾಹಿ ಸುಮಹತ್ತರ ಸುವೀರ್ಯನೆ
ಪಾಹಿ ಮಾಂ ಮೇಧಾವಿ ವಿಜಯ ಜಯ
ಪಾಹಿ ಮಾಂ ರಂತಿಮ್ನ ಮನು ಮಾಂ ಪಾಹಿ ಮಾಂಪಾಹಿ ॥24॥

33 ಮೋದನಾಮಕ ಋಜುವಿನಿಂದ 48 ಸರ್ವಜ್ಞ ಋಜುವಿನಲ್ಲಿ ಪ್ರಾರ್ಥನೆ

ಪಾಹಿ ಮೋದ ಪ್ರಮೋದ ಸಂತಸ
ಪಾಹಿ ಆನಂದ ಸಂತುಷ್ಟನೆ
ಪಾಹಿ ಮಾಂ ಚಾರ್ವಾಂಗ ಚಾರು ಸುಬಾಹು ಚಾರುಪದ ॥
ಪಾಹಿ ಪಾಹಿ ಸುಲೋಚನನೆ ಮಾಂ
ಪಾಹಿ ಸಾರಸ್ವತ ಸುವೀರನೆ
ಪಾಹಿ ಪ್ರಾಜ್ಞನೆ ಕಪಿಲಲಂಪಟ ಪಾಹಿ ಸರ್ವಜ್ಞ ॥25॥

49 ಸರ್ವಜಿತ್ ಪದವಿಯಿಂದ 60 ಯಾಗವರ್ತಕನಲ್ಲಿ ಪ್ರಾರ್ಥನೆ

ಪಾಹಿ ಮಾಂ ಸರ್ವಜಿತ್ ಮಿತ್ರನೆ
ಪಾಹಿ ಪಾಪವಿನಾಶಕನೆ ಮಾಂ
ಪಾಹಿ ಧರ್ಮವಿನೇತ ಶಾರದ ಓಜ ಸುತಪಸ್ವೀ ||
ಪಾಹಿ ಮಾಂ ತೇಜಸ್ವಿ ನಮೋ ಮಾಂ
ಪಾಹಿ ದಾನಸುಶೀಲ ನಮೋ ಮಾಂ
ಪಾಹಿ ಯಜ್ಞಸುಕರ್ತ ಯಜ್ವೀ ಯಾಗವರ್ತಕನೆ ||26||

61 ಪ್ರಾಣ ಋಜುವಿನಿಂದ 75 ಸುಬಲ ಋಜುಗಳ ಸ್ಮರಣೆ

ಪಾಹಿ ಪ್ರಾಣ ತ್ರಾಣ ಅಮರ್ಷೀ
ಪಾಹಿ ಮಾಂ ಉಪದೇಷ್ಟ್ರ ತಾರಕ
ಪಾಹಿ ಕಾಲಕ್ರೀಡನ ಸುಕರ್ತಾ ಸುಕಾಲಜ್ಞ ||
ಪಾಹಿ ಕಾಲಸುಸೂಚಕನೆ ಮಾಂ
ಪಾಹಿ ಕಲಿಸಂಹರ್ತೃ ಕಲಿ ಮಾಂ
ಪಾಹಿ ಕಾಲ ಶ್ಯಾಮರೇತ ಸದಾರತ ಸುಬಲನೆ ||27||

76 ಸಹಃ ಋಜುವಿನಿಂದ
89 ಸ್ಮರ್ತವ್ಯ ಋಜುವಿನ ನಾಮಗಳು

ಪಾಹಿ ಪಾಹಿ ಸಹೋ ಸದಾಕಪಿ
ಪಾಹಿ ಗಮ್ಯಜ್ಞಾನ ದಶಕಲ
ಪಾಹಿ ಮಾಂ ಶ್ರೋತವ್ಯ ನಮೋ ಸಂಕೀರ್ತಿತವ್ಯ ನಮೋ ॥
ಪಾಹಿ ಮಾಂ ಮಂತವ್ಯ ಕವ್ಯನೆ
ಪಾಹಿ ಮಾಂ ದ್ರಷ್ಟವ್ಯ ಸಖ್ಯನೆ
ಪಾಹಿ ಮಾಂ ಗಂತವ್ಯ ಕ್ರವ್ಯನೆ ಪಾಹಿ ಸ್ಮರ್ತವ್ಯ ॥28॥

90 ಸೇವ್ಯ ಋಜುವಿನಿಂದ, ಲಾತವ್ಯ, ವಾಯು, ಬ್ರಹ್ಮ ಋಜುಗಳಿಗೆ ನಮನ

ಪಾಹಿ ಸೇವ್ಯ ಸುಭವ್ಯ ನಮೋ ಮಾಂ
ಪಾಹಿ ಸ್ವರ್ಗವ್ಯ ನಮೋ ಭಾವ್ಯನೆ
ಪಾಹಿ ಮಾಂ ಜ್ಞಾತವ್ಯ ನಮೋ ವಕ್ತವ್ಯ ಗವ್ಯ ನಮೋ ॥
ಪಾಹಿ ಮಾಂ ಲಾತವ್ಯ ವಾಯುವೆ
ಪಾಹಿ ಬ್ರಹ್ಮ ಬ್ರಾಹ್ಮಣಪ್ರಿಯ
ಪಾಹಿ ಪಾಹಿ ಸರಸ್ವತೀಪತೆ ಜಗದ್ಗುರುವರ್ಯ ॥29॥

ವಾಮನ ಪುರಾಣೋಕ್ತ 100 ಋಜುಗಳ ನಾಮಸ್ಮರಣೆಯಿಂದ ಮುಕ್ತಿ

ವಾಮನಪುರಾಣದಲಿ ಪೇಳಿದ
ಈ ಮಹಾತ್ಮರ ಪರಮಮಂಗಳ-
ನಾಮಗಳ ಸಂಪ್ರೀತಿಪೂರ್ವಕ ನಿತ್ಯ ಸ್ಮರಿಸುವರ ॥
ಶ್ರೀಮನೋರಮನವರು ಬೇಡಿದ
ಕಾಮಿತಾರ್ಥಗಳಿತ್ತು ತನ್ನ ತ್ರಿ-
ಧಾಮದೊಳಗನುದಿನದಲಿಟ್ಟಾನಂದ ಪಡಿಸುವನು ॥30॥

ವಾಯುದೇವರಿಗೆ 100 ಜನ್ಮ ಮಹಾಸುಖ ಪ್ರಾರಬ್ಧ

ಈ ಸಮೀರಗೆ ನೂರುಜನುಮ ಮ-
ಹಾಸುಖ ಪ್ರಾರಾಬ್ಧಭೋಗ ಪ್ರ-
ಯಾಸವಿಲ್ಲದಲೈದಿದನು ಲೋಕಾಧಿಪತ್ಯವನು ॥
ಭೂಸುರನ ಒಪ್ಪಿಡಿಯವಲಿಗೆ ವಿ-
ಶೇಷಸೌಖ್ಯವನಿತ್ತ ದಾತನ
ದಾಸವರ್ಯನು ಲೋಕಪತಿಯೆನಿಸುವುದು ಅಚ್ಚರವೆ
॥31॥

ವಾಯುಪದವಿಯಲ್ಲಿನ ಸಾಧನೆಗಳು

ದ್ವಿಶತಕಲ್ಪಗಳಲ್ಲಿ ಬಿಡದೀ-
ಪೆಸರಿನಿಂದಲಿ ಕರೆಸಿದನು ತ-
ನ್ನೊಳಗಮರರೊಳಗಿಟ್ಟು ಮಾಡುವನವರ ಸಾಧನವ ॥
ಅಸದುಪಾಸನಗೈವ ಕಲ್ಯಾ-
ದ್ಯಸುರ ಪರ ಸಂಹರಿಸಿ ತಾ ಪೊಂ-
ಬಸಿರಪದವೈದಿದನು ಗುರುಪವಮಾನ ಸತಿಯೊಡನೆ ॥32॥

ಬ್ರಹ್ಮಪದವಿಯಲ್ಲಿ
87 1/2 ವರ್ಷ ವ್ಯಾಪ್ತ್ಯೋಪಾಸನೆ ಮಾಡುವರು

ಅನಿಮಿಷರ ನಾಮದಲಿ ಕರೆಸುವ
ಅನಿಲದೇವನು ಒಂದು ಕಲ್ಪದಿ-
ವನಜಸಂಭವನೆನಿಸಿ ಎಂಭತ್ತೇಳುವರೆ ವರುಷ ॥
ಗುಣತ್ರಯವರ್ಜಿತನ ಮಂಗಳ-
ಗುಣಕ್ರಿಯ ಸುರೂಪಗಳುಪಾ-
ಸನವು ಅವ್ಯಕ್ತಾದಿ ಪೃಥಿವ್ಯಂತರದಿ ಇರುತಿಹನು ॥33॥

ಋಜುಗಣಕ್ಕೆ ಪರಮೋತ್ಸಾಹವರ್ಜಿತವೆಂಬ ದೋಷ ಮತ್ತು ವಿಶೇಷಾಪರೋಕ್ಷ ವಿಚಾರ

ಮಹಿತ ಋಜುಗಣಕೊಂದೆ ಪರಮೋ-
ತ್ಸಾಹವಿವರ್ಜಿತವೆಂಬ ದೋಷವು
ವಿಹಿತವೇ ಸರಿ ಇದನು ಪೇಳದೆ ಮುಕ್ತಬ್ರಹ್ಮರಿಗೆ ॥
ಬಹುದು ಸಾಮ್ಯ ಜ್ಞಾನ ಭಕುತಿಯು
ದ್ರುಹಿಣಪದ ಪರಿಯಂತ ವೃದ್ಧಿಯು
ಬಹಿರುಪಾಸನೆಯುಂಟನಂತರ ಬಿಂಬದರ್ಶನವು ॥34॥

ಶ್ರೀನಿವಾಸನ ಪ್ರೀತಿಗಾಗಿ ಮತ್ತು ದೈತ್ಯರ ಮೋಹಕ್ಕಾಗಿ ಭಯ ಅಜ್ಞಾನ ಶೋಕಾದಿಗಳ ಪ್ರದರ್ಶನ

ಜ್ಞಾನರಹಿತ ಭಯತ್ವ ಪೇಳ್ವಪು-
ರಾಣ ದೈತ್ಯರ ಮೋಹಕವು ಚತು-
ರಾನನಗೆ ಕೊಡುವುದೆ ಮೋಹಾಜ್ಞಾನ ಭಯ ಶೋಕ ॥
ಭಾನುಮಂಡಲ ಚಲಿಸಿದಂದದಿ
ಕಾಣುವುದು ದೃಗ್ದೋಷದಿಂದಲಿ
ಶ್ರೀನಿವಾಸನ ಪ್ರೀತಿಗೋಸುಗ ತೋರ್ದನಲ್ಲದಲೆ ॥35॥

ಲಕ್ಷ್ಮೀದೇವಿಯಲ್ಲಿ ಶಿಷ್ಯತ್ವ ವಹಿಸಿ ಬಿಂಬಾಪರೋಕ್ಷ

ಕಮಲಸಂಭವ ಸರ್ವರೊಳಗು-
ತ್ತಮನೆನಿಸುವನು ಎಲ್ಲ ಕಾಲದಿ
ವಿಮಲ ಭಕುತಿ ಜ್ಞಾನ ವೈರಾಗ್ಯಾದಿ ಗುಣದಿಂದ ॥
ಸಮಭ್ಯಧಿಕವಿವರ್ಜಿತನ ಗುಣ-
ರಮೆಯ ಮುಖದಿಂದರಿತು ನಿತ್ಯದಿ
ದ್ಯುಮಣಿಕೋಟಿಗಳಂತೆ ಕಾಂಬನು ಬಿಂಬರೂಪವನು

॥36॥

ಋಜುಪದವಿಗೆ ತಕ್ಕಂತೆ ಜ್ಞಾನಭಕ್ತಿಗಳ ಅಭಿವೃದ್ಧಿ

ಜ್ಞಾನಭಕ್ತ್ಯಾದ್ಯಖಿಳಗುಣ ಚತು-
ರಾನನನೊಳಿಪ್ಪಂತೆ ಮುಖ್ಯ
ಪ್ರಾಣನಲಿ ಚಿಂತಿಪುದು ಯತ್ಕಿಂಚಿತ್ ಕೊರತೆಯಾಗಿ
ನ್ಯೂನ ಋಜುಗಣ ಜೀವರಲಿ ಕ್ರ-
ಮೇಣ ವೃದ್ಧಿ ಜ್ಞಾನಭಕುತಿ ಸ-
ಮಾನ ಭಾರತಿವಾಣಿಗಳಲಿ ಪದಪ್ರಯುಕ್ತಧಿಕ ॥37॥

ಬ್ರಹ್ಮ-ವಾಯುಗಳಿಗೆ ದೀಪದಂತೆ ಸ್ಪಷ್ಟವಾಗಿ ಅಪರೋಕ್ಷವಾಗುವುದು

ಸೌರಿಸೂರ್ಯನ ತೆರದಿ ಬ್ರಹ್ಮ ಸ-
ಮೀರ ಗಾಯತ್ರೀ ಗಿರಿಗಳೊಳು
ತೋರುವುದು ಅಸ್ಪಷ್ಟರೂಪದಿ ಮುಕ್ತಿಪರಿಯಂತ
ವಾರಿಜಾಸನ ವಾಯು ವಾಣೀ-
ಭಾರತಿಗಳಿಗೆ ಮಹಾಪ್ರಳಯದಿ
ಬಾರದಜ್ಞಾನಾದಿ ದೋಷವು ಹರಿಕೃಪಾಬಲದಿ ||38||

ಲಿಂಗದೇಹ ಭಂಗಕ್ಕಾಗಿ ವಿರಜಾನದಿಸ್ನಾನ ಮಾಡಿಸುವ ಬ್ರಹ್ಮದೇವರು

ನೂರು ವರುಷಾನಂತರದಲಿ ಸ-
ರೋರುಹಾಸನು ತನ್ನ ಕಲ್ಪದ-
ಲಾರು ಮುಕ್ತಿಯನೈದುವರೋ ಅವರವರ ಕರೆದೊಯ್ದು
ಶೌರಿಪುರದೊಳಗಿಪ್ಪ ನದಿಯಲಿ
ಕಾರುಣಿಕ ಸುಸ್ನಾನ ನಿಜಪರಿ-
ವಾರ ಸಹಿತದಿ ಮಾಡಿ ಹರಿಯುದರ ಪ್ರವೇಶಿಸುವ ||39||

ಭಗವಂತನ ಉದರದಿಂದ ಹೊರಬಂದ ಮುಕ್ತರ ವ್ಯಾಪಾರ

ವಾಸುದೇವನ ಉದರದಲಿ ಪ್ರ-
ವೇಶಗೈದಾನಂತರದಿ ನಿ-
ರ್ದೋಷಮುಕ್ತರು ಉದರದಿಂ ಪೊರಮಟ್ಟು ಹರುಷದಲಿ ॥
ಈಶನಿಂದಾಜ್ಞೆಯ ಪಡೆದನಂ-
ತಾಸನ ಶ್ವೇತದ್ವೀಪ ಮೋಕ್ಷದಿ
ವಾಸವಾಗಿ ವಿಮುಕ್ತದುಃಖರು ಸಂಚರಿಸುತಿಹರು ॥40॥

ಹರಿಪ್ರೀತಿಗಾಗಿ ಜಗತ್ತಿನ ವ್ಯಾಪಾರ ಮಾಡುವ ಋಜುಗಳು

ಸತ್ವ ಸತ್ವ ಮಹಾಸುಸೂಕ್ಷ್ಮವು
ಸತ್ವಸತ್ವಾತ್ಮಕ ಕಳೇವರ
ಸತ್ಯಲೋಕಾಧಿಪನೆನಿಪಗತ್ಯವೆರಡು ಗುಣ ॥
ಮುಕ್ತಿಯೋಗ್ಯವಿದಲ್ಲಜಾಂಡೋ-
ತ್ಪತ್ತಿಕಾರಣವಲ್ಲ ಹರಿಪ್ರೀ-
ತ್ಯರ್ಥವಾಗಿ ಜಗದ್ವ್ಯಾಪಾರಗಳ ಮಾಡುವನು ॥41॥

ರುದ್ರದೇವರ ಸಾಧನೆಯ ವೈಭವ

ಪಾದನ್ಯೂನ ಶತಾಬ್ದ ಪರಿಯಂ-
ತೋದಿ ಉಗ್ರತಪಾಹ್ವಯದಿ ಲವ-
ಣೋದಧಿಯೊಳಗೆ ಕಲ್ಪದಶ ತಪವಿದ್ದನಂತರದಿ ॥
ಸಾಧಿಸಿದ ಮಹದೇವಪದವಾ-
ರೈದುನವಕಲ್ಪಾ ವಸಾನಕೆ
ಐದುವನು ಶೇಷನ ಪದವ ಪಾರ್ವತೀಸಹಿತ ॥42॥

ಇಂದ್ರ-ಕಾಮರ ಸಾಧನೆಯ ವೈಭವ

ಇಂದ್ರಮನು ದಶಕಲ್ಪಗಳಲಿ ಸು-
ನಂದನಾಮದಿ ಶ್ರವಣಗೈದು ಮು-
ಕುಂದನಪರೋಕ್ಷಾರ್ಥ ನಾಲ್ಕು ಸುಕಲ್ಪ ತಪವಿದ್ದು ॥
ನೊಂದು ಪೊಗೆಯೊಳು ಕೋಟಿವರುಷ ಪು-
ರಂದರನು ಅದನುಂಡನಂತರ
ಪೊಂದಿದನು ನಿಜಲೋಕ ಸುರಪತಿ ಕಾಮನಿದರಂತೆ ॥43॥

ಸೂರ್ಯ-ಚಂದ್ರರ ಸಾಧನವಿಚಾರ

ಕರೆಸುವರು ಪೂರ್ವದಲಿ ಚಂದ್ರಾ-
ರ್ಕರತಿ ಶಾಂತ ಸುರೂಪ ನಾಮದಿ
ಎರಡೆರಡು ಮನುಕಲ್ಪ ಶ್ರವಣಗೈದು ಮನುಕಲ್ಪ ॥
ವರತಪೋಬಲದಿಂದಲರ್ವಾಕ್-
ಶಿರಗಳಾಗೀರ್ಯೆದುಸಾವಿರ-
ವರುಷ ದುಃಖವನೀಗಿ ಕಾಂಬರು ಬಿಂಬರೂಪವನು॥44॥

ರುದ್ರ, ಇಂದ್ರ, ಅಹಂಕಾರಿಕ ಪ್ರಾಣ, 10ನೇ ಕಕ್ಷೆ ದೇವತೆಗಳ ಒಟ್ಟು ಕಲ್ಪ ಸಾಧನವಿಚಾರ

ಸಾಧನಗಳ ಅಪರೋಕ್ಷ ನಂತರ
ವೈದುವರು ಮೋಕ್ಷವನು ಶಿವಶ-
ಕ್ರಾದಿದಿವಿಜರು ಉಕ್ತಕ್ರಮದಿಂ ಕಲ್ಪ ಸಂಖ್ಯೆಯಲಿ ॥
ಐದಲೆಯಗೈವತ್ತು ಉಪೇಂದ್ರ ಸ-
ಹೋದರನಿಗಿಪ್ಪತ್ತು ದ್ವಿನವತ್ವ
ಗಾಧಿಪತಿ ಪ್ರಾಣನಿಗೆ ಗುರು ಮನುಗಳಿಗೆ ಷೋಡಶವು
॥45॥

ಪ್ರವಾಹ ವಾಯು, ಚಂದ್ರ, ಸೂರ್ಯ, ಯಮ, ಮಿತ್ರಾದಿ, ಶೇಷಶತಸ್ಥರಿಗೆ, ಸನಕಾದಿ, ಗಂಗೆಯಿಂದ ಪುಷ್ಕರಾದಿಗಳ ಒಟ್ಟು ಕಲ್ಪ ಸಾಧನೆ ವಿವರ

ಪ್ರವಹಮರುತಗೆ ಹನ್ನೆರಡು ಸ್ಯೆಂ-
ಧವ ದಿವಾಕರ ಧರ್ಮರಿಗೆ ದಶ
ನವಸುಕಲ್ಪವು ಮಿತ್ರರಿಗೆ ಶೇಷಶತಜನಕೆಂಟು ॥
ಕವಿ ಸನಕ ಸನಂದನ ಸನ-
ತ್ಕುವರ ಮುನಿಗಳಿಗೇಳು ವರುಣನ
ಯುವತಿ ಪರ್ಜನ್ಯಾದಿ ಪುಷ್ಕರಗಾರು ಕಲ್ಪದಲಿ ॥46॥

ಕರ್ಮಜರಿಗೆ, ಆಜಾನಜರಿಗೆ,ಗೋಪಿಕಾಸ್ತ್ರೀಯರಿಗೆ, ಪಿತೃಗಳಿಗೆ, ದೇವಗಂಧರ್ವ, ಮನುಷ್ಯಗಂಧರ್ವರಿಗೆ, ಮನುಷ್ಯೋತ್ತಮರಿಗೆ ಎಷ್ಟು ಕಲ್ಪಗಳು ಸಾಧನೆ ?

ಐದು ಕರ್ಮಜ ಸುರರಿಗಾಜಾ-
ನಾದಿಗಳಿಗೀರೆರಡು ಕಲ್ಪಾ-
ರ್ಧಾಧಿಕತ್ರಯ ಗೋಪಿಕಾಸ್ತ್ರೀಯರಿಗೆ ಪಿತೃತ್ರಯವು ॥
ಈ ದಿವೌಕಸ ಮನುಜ ಗಾಯಕ-
ರೈದುವರು ಎರಡೊಂದು ಕಲ್ಪನ-
ರಾಧಿಪರಿಗರೆ ಕಲ್ಪದೊಳಗಪರೋಕ್ಷವಿರುತಿಹುದು ॥47॥

ದೀಪದನುಸಾರ ದೀಪ್ತಿಯು ವ್ಯಕ್ತವಾಗುವಂತೆ ಜೀವರನುಸಾರ ದೇವರು ಶಕ್ತಿಯನ್ನು ವ್ಯಕ್ತಮಾಡಿ ಸಾಧನೆ ಮಾಡಿಸುವನು

ದೀಪಗಳನನುಸರಿಸಿ ದೀಪ್ತಿಯು
ವ್ಯಾಪಿಸಿ ಮಹಾತಿಮಿರ ಕಳೆದು ಪ-
ರೋಪಕಾರವ ಮಾಳ್ಪ ತೆರದಿಂದಲಿ ಪರಮಾತ್ಮ ॥
ಆ ಪಯೋಜಾಸನನೊಳಿದ್ದು ಸ್ವ-
ರೂಪಶಕ್ತಿಯ ವ್ಯಕ್ತಗೈಸುತ
ತಾ ಪೊಳೆವನವರಂತೆ ಚೇಷ್ಟೆಯ ಮಾಡಿ ಮಾಡಿಸುತ ॥48॥

ಸುರರಿಗೆ ದೇಹವನ್ನು ಕೊಟ್ಟು ಸೇವೆ ಕೈಕೊಂಡು ಸಾಧನವನ್ನು ಮಾಡಿಸುವನು

ಸ್ವೋದರಸ್ಥಿತ ಪ್ರಾಣ ರುದ್ರೇಂ-
ದ್ರಾದಿ ಸುರರಿಗೆ ದೇಹಗಳ ಕೊ-
ಟ್ಟಾದರದಲವರವರ ಸೇವೆಯ ಕೊಂಬನನವರತ ॥
ಮೋದ ಬೋಧ ದಯಾಬ್ಧಿ ತನ್ನವ-
ರಾಧಿರೋಗವ ಕಳೆದು ಮಹದಪ-
ರಾಧಗಳ ನೋಡದಲೆ ಸಲಹುವ ಸತತ ಸ್ಮರಿಸುವರ॥49॥

ಶ್ರೀಹರಿಯೇ ಜಗಜ್ಜನ್ಮಾದಿಕರ್ತಾ

ಪ್ರತಿಪ್ರತೀ ಕಲ್ಪದಲಿ ಸೃಷ್ಟಿ
ಸ್ಥಿತಿ ಲಯವ ಮಾಡುತಲೆ ಮೋದಿಪ-
ಚುತರಮುಖ ಪರಮಾನರನ್ನವ ಮಾಡಿ ಭುಂಜಿಸುವ ॥
ಘೃತವೆ ಮೃತ್ಯುಂಜಯನೆನಿಪ ದೇ-
ವತೆಗಳೆ ಉಪಸೇಚನರು ಶ್ರೀ-
ಪತಿಗೆ ಮೂರ್ಜಗವೆಲ್ಲವೋದನತಿಥಿಯೆನಿಸಿಕೊಂಬ॥50॥

ಗರ್ಭಿಣಿಸ್ತ್ರೀಯಂತೆ ಜೀವರನ್ನು ಸಾಕುವ ಕರುಣಾಶಾಲಿ

ಗರ್ಭಿಣಿಸ್ತ್ರೀ ಉಂಡಭೋಜನ
ಗರ್ಭಗತ ಶಿಶು ಉಂಬ ತೆರದಲಿ
ನಿರ್ಭಯನು ತಾನುಂಡುಣಿಸುವನು ಸರ್ವಜೀವರಿಗೆ ॥
ನಿರ್ಬಲತಿಪರಮಾಣು ಜೀವಗೆ
ಅಬ್ಬುವುದೆ ಸ್ಥೂಲಾನ್ನಭೋಜನ
ಅರ್ಭಕರು ಪೇಳುವರು ಕೋವಿದರಿದನೊಡಂಬಡರು
॥51॥

ದೇವರಿಗೆ ಪ್ರಾಕೃತ ಭೋಜನದಿಂದ ಯಾವ ಪ್ರಯೋಜನವೂ ಇಲ್ಲ

ಅಪಚಯಗಳಿಲ್ಲುಂಡುದದರಿಂ-
ದುಪಚಯಗಳಿಲ್ಲಮರಗಣದೊಳ-
ಗುಪಮರೆನಿಸುವರಿಲ್ಲ ಜನುಮಾದಿಗಳು ಮೊದಲಿಲ್ಲ ॥
ಅಪರಿಮಿತಸನ್ಮಹಿಮ ನರಹರಿ
ಅಪುನರಾವರ್ತರನ ಮಾಡುವ
ಕೃಪಣವತ್ಸಲ ಸ್ವಪದಸೌಖ್ಯವನಿತ್ತು ಶರಣರಿಗೆ ॥52॥

ಜಗತ್ತೆಂಬ ಭೂಮಿಯಲ್ಲಿ ಜೀವರೆಂಬ ಬೀಜ ಬಿತ್ತಿ ಕೃಷಿ ಮಾಡುವ ಕೃಷಿಕ ಲಕ್ಷ್ಮೀಪತಿ

ಬಿತ್ತಿ ಬೀಜವ ಭೂಮಿಯೊಳು ನೀ-
ರೆತ್ತಿ ಬೆಳೆಸಿದ ಬೆಳಸು ಪ್ರಾಂತಕೆ
ರೆತ್ತಿ ಮೆಲುವಂದದಲಿ ಲಕುಮೀರಮಣ ಲೋಕಗಳ ॥
ಮತ್ತೆ ಜೀವರ ಕರ್ಮ ಕಾಲೋ-
ತ್ಪತ್ತಿ ಸ್ಥಿತಿ ಲಯ ಮಾಡುತಲಿ ಸಮ-
ವರ್ತಿಯೆನಿಸುವ ಖೇದ ಮೋದಗಳಿಲ್ಲದನವರತ ॥53॥

ದೇವತೆಗಳಿಗೆ ಕ್ಷುತ್‌ಪಿಪಾಸಾದಿಗಳಿಲ್ಲ, ಅಸುರ ಪಿಶಾಚಾದಿಗಳಿಗೆ ನಿತ್ಯಬಾಧೆ, ಇತರೆ ಜೀವರಿಗೆ ತಾತ್ಕಾಲಿಕ

ಶ್ವಸನ ರುದ್ರೇಂದ್ರ ಪ್ರಮುಖ ಸುಮ-
ನಸರೊಳಿದ್ದರು ಕ್ಷುತ್ಪಿಪಾಸೆಗ-
ಳೊಶದೊಳಿಪ್ಪುವು ಸಕಲಭೋಗಕೆ ಸಾಧನಗಳಾಗಿ ॥
ಅಸುರ ಪ್ರೇತ ಪಿಶಾಚೆಗಳ ಬಾ-
ಧಿಸುತಲಿಪ್ಪುವ ದಿನದಿನದಿ ಮಾ-
ನಿಸರೊಳಗೆ ಮೃಗ ಪಕ್ಷಿ ಜೀವರೊಳಿದ್ದು ಪೋಗುವುವು॥54॥

ದೇವರ ದೋಷದೂರತ್ವ ಗುಣೋಪಾಸನೆಯಿಂದ ಬ್ರಹ್ಮಾದಿ ಸಕಲದೇವತೆಗಳು ಮುಕ್ತರಾಗಿಹರು

ವಾಸುದೇವನು ಸ್ವಪ್ನ ಸುಷುಪ್ತಿ ಪಿ-
ಪಾಸೆ ಕ್ಷುದ್ ಭಯ ಶೋಕ ಮೋಹಾ-
ಯಾಸ ವಿಸ್ಮೃತಿ ಮಾತ್ಸರ್ಯ ಮದ ಪುಣ್ಯಪಾಪಾದಿ
ದೋಷವರ್ಜಿತನೆಂದು ಬ್ರಹ್ಮ ಸ-
ದಾಶಿವಾದಿ ಸಮಸ್ತ ದಿವಿಜರು
ಪಾಸನೆಯ ಗೈದೆಲ್ಲಕಾಲದಿ ಮುಕ್ತರಾಗಿಹರು ॥55॥

ಬ್ರಹ್ಮಕಲ್ಪದಲ್ಲಿ ಕ್ಷಣ, ತೃಟಿ, ಲವ, ನಿಮಿಷ, ಮಾತ್ರ, ಗುರು, ಪ್ರಾಣ, ಘಳಿಗೆ, ದಿನಗಳ ಕಾಲ ಗಣನೆ

ಪರಮಸೂಕ್ಷ್ಮ ಕ್ಷಣವೈದು ತ್ರುಟಿ
ಕರೆಸುವುದು ಐವತ್ತು ತ್ರುಟಿ ಲವ
ಎರಡು ಲವವು ನಿಮೇಷ ನಿಮಿಷಗಳೆಂಟು ಮಾತ್ರ ಯುಗ ॥
ಗುರು ದಶ ಪ್ರಾಣವು ಪಳವು ಹ-
ನ್ನೆರಡು ಬಾಣವು ಘಟಿಕ ತ್ರಿಂಶತಿ
ಇರುಳು ಹಗಲರವತ್ತು ಘಟಿಕಗಳಹೋರಾತ್ರಿಗಳು ॥56॥

ಪಕ್ಷ, ಮಾಸ, ಋತು, ಅಯನ, ವರ್ಷ, ಯುಗ ಮತ್ತು ದೇವಮಾನದ ವರ್ಷಗಳ ಗಣನೆ

ಈ ದಿವಾರಾತ್ರಿಗಳೆರಡು ಹದಿ-
ನೈದು ಪಕ್ಷಗಳೆರಡು ಮಾಸಗ-
ಳಾದಪವು ಮಾಸದ್ವಯವೆ ಋತು ಋತುತ್ರಯಗಳಯನ ॥
ಐದುವವು ಅಯನದ್ವಯಾಬ್ದ ಕೃ-
ತಾದಿಯುಗಗಳು ದೇವಮಾನದಿ
ದ್ವಾದಶಸಹಸ್ರವರುಷಗಳಹವದನು ಪೇಳುವೆನು ॥57॥

ದೇವಮಾನದಲ್ಲಿ ಒಂದು ಚತುರ್ಯುಗದ ವರ್ಷ ಗಣನೆ

ಚತುಸ್ಸಾವಿರದೆಂಟುನೂರವು
ಕೃತಯುಗಕೆ ತ್ರಿಸಹಸ್ರ ಸಲೆಷಟ್
ಶತವು ತ್ರೇತೆಗೆ ದ್ವಾಪರಕೆ ದ್ವಿಸಹಸ್ರನಾನೂರು ॥
ದಿತಿಜಪತಿ ಕಲಿಯುಗಕೆ ಸಾವಿರ-
ಶತಗಳ ದ್ವಯ ಕೂಡಿ ಈ ದೇ-
ವತೆಗಳಿಗೆ ಹನ್ನೆರಡುಸಾವಿರವಹವು ವರುಷಗಳು ॥58॥

ಮನುಷ್ಯಮಾನದಲ್ಲಿ ಚತುರ್ಯುಗ ಗಣನೆ

ಪ್ರಥಮಯುಗಕೇಳಧಿಕವರೆ ವಿಂ-
ಶತಿಸುಲಕ್ಷಾಷ್ಟೋತ್ತರಶತ ವಿಂ-
ಶತಿಸಹಸ್ರ ಮನುಷ್ಯಮಾನಾಬ್ಧಗಳು ಷಣ್ಣವತಿ ॥
ಮಿತ ಸಹಸ್ರದ ಲಕ್ಷದ್ವಾದಶ
ದ್ವಿತೀಯ ತೃತಿಯಕೆ ಎಂಟು ಲಕ್ಷದ
ಚತುಃಷಷ್ಠಿಸಹಸ್ರ ಕಲಿಗಿದರರ್ಧ ಚಿಂತಿಪುದು ॥59॥

432 ಕೋಟಿ ವರ್ಷಗಳು
ಬ್ರಹ್ಮದೇವರ ಒಂದು ಹಗಲು

ಮೂರಧಿಕನಾಲ್ವತ್ತುಲಕ್ಷದ-
ಆರುಮೂರೆರಡಧಿಕಸಾವಿರ
ಈರೆರಡು ಯುಗವರುಷ ಸಂಖ್ಯೆಯ ಗೈಯಲಿನಿತಹದೋ ||
ಸೂರಿ ಪೆಚ್ಚಿಸೆ ಸಾವಿರದನಾ-
ನ್ನೂರು ಮೂವತ್ತೆರಡು ಕೋಟಿ ಸ-
ರೋರುಹಾಸನಗಿದು ದಿವಸವೆಂಬರು ವಿಪಶ್ಚಿತ್ತರು ||60||

ಬ್ರಹ್ಮದೇವರ ಕಾಲದ ವಿವರ

ಶತಧೃತಿಗೆ ಈ ದಿವಸಗಳು ತ್ರಿಂ-
ಶತಿಯು ಮಾಸದ್ವಾದಶಾಬ್ದವು
ಶತವೆರಡರೊಳು ಸರ್ವಜೀವೋತ್ಪತ್ತಿ ಸ್ಥಿತಿಲಯವು ||
ಶ್ರುತಿಸ್ಮೃತಿಗಳು ಪೇಳುತಿಹುವ-
ಚ್ಯುತಗೆ ನಿಮಿಷವಿದೆಂದು ಸುಖಶಾ-
ಶ್ವತಗೆ ಪಾಸಟೆ ಎಂಬುವರೆ ಬ್ರಹ್ಮಾದಿ ದಿವಿಜನರು ||61||

ಪರಮಾತ್ಮನು ಕಾಲಾತೀತನು

ಆದಿಮಧ್ಯಾಂತಗಳು ಇಲ್ಲದ
ಮಾಧವಗಿದುಪಚಾರವೆಂದು ಋ-
ಗಾದಿವೇದಪುರಾಣಗಳು ಪೇಳುವವು ನಿತ್ಯದಲಿ ॥
ಮೋದಮಯನಾನುಗ್ರಹವ ಸಂ-
ಪಾದಿಸಿ ರಮಾ ಬ್ರಹ್ಮ ರುದ್ರೇಂ-
ದ್ರಾದಿಗಳು ತಮ್ಮತಮ್ಮ ಪದವಿಯನ್ನೈದಿ ಸುಖಿಸುವರು
॥62॥

ಮುಕ್ತಿ ಎಂಬುದು ಜ್ಞಾನಾಸಕ್ತರಿಗೆ ಮಾತ್ರ

ಈ ಕೃಥಾಮೃತಪಾನಸುಖ ಸುವಿ-
ವೇಕಿಗಳಿಲ್ಲದಲೆ ವೈಷಿಕ-
ವ್ಯಾಕುಲ ಕುಚಿತ್ತರಿಗೆ ದೊರೆವುದೆ ಆವಕಾಲದಲಿ
ಲೋಕವಾರ್ತೆಯ ಬಿಟ್ಟು ಇದನವ ॥
ಲೋಕಿಸುತ ಮೋದಿಪರಿಗೊಲಿದು ಕೃ-
ಪಾಕರ ಜಗನ್ನಾಥವಿಟ್ಠಲ ಕಾಯ್ವ ಕರುಣದಲಿ ॥63॥

॥ ಇಲ್ಲಿಗೆ ಇಪ್ಪತ್ತೊಂದನೆಯ ಅಪರೋಕ್ಷತಾರತಮ್ಯಸಂಧಿ
ಮುಗಿಯಿತು ॥

ಬಿಂಬಪ್ರತಿಬಿಂಬಸಂಧಿ-24

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಮುಕ್ತ, ಜೀವನ್ಮುಕ್ತ, ಸೃಜ್ಯ, ಅಸೃಜ್ಯರ ವಿಶ್ವಾದಿ ಬಿಂಬರೂಪಗಳು

ಮುಕ್ತಬಿಂಬನು ತುರಿಯ ಜೀವ-
ನ್ಮುಕ್ತಬಿಂಬನು ವಿಶ್ವಭವಸಂ-
ಸಕ್ತಬಿಂಬನು ತೈಜಸನು ಅಸೃಜ್ಯರಿಗೆ ಪ್ರಾಜ್ಞ ||
ಶಕ್ತನಾದರು ಸರಿಯೆ ಸರ್ವೋ-
ದ್ರಿಕ್ತಮಹಿಮನು ದುಃಖಸುಖಗಳ
ವ್ಯಕ್ತ ಮಾಡುತಲಿಪ್ಪ ಕಲ್ಪಾಂತರದಲಿ ಬಪ್ಪರಿಗೆ ||1||

ಅನ್ನ, ಅನ್ನಾದ, ವಿಶ್ವ, ತೈಜಸ, ಪ್ರಾಜ್ಞರೂಪಗಳು

ಅನ್ನನಾಮಕ ಪ್ರಕೃತಿಯೊಳಗಾ-
ಚ್ಛಿನ್ನನಾಗಿಹ ಪ್ರಾಜ್ಞನಾಮದಿ
ಸೊನ್ನೊಡಲ ಮೊದಲಾದವರೊಳನ್ನಾದ ತೈಜಸನು ॥
ಅನ್ನದಾಂಬುಜನಾಭ ವಿಶ್ವನು
ಭಿನ್ನನಾಮ ಕ್ರಿಯೆಗಳಿಂದಲಿ
ತನ್ನೊಳಗೆ ತಾ ರಮಿಪ ಪೂರ್ಣಾನಂದಜ್ಞಾನಘನ ॥2॥

ಬೂದಿಮುಚ್ಚಿದ ಕೆಂಡದಂತೆ ಬ್ರಹ್ಮರುದ್ರರಲ್ಲಿ ಪರಮಾತ್ಮನ ವ್ಯಾಪಾರ

ಬೂದಿಯೊಳಗಡಗಿಪ್ಪ ನಲನೋ-
ಪಾದಿ ಚೇತನ ಪ್ರಕೃತಿಯೊಳ-
ನ್ನಾದನನ್ನಾಹ್ವಯದಿ ಕರೆಸುವ ಬ್ರಹ್ಮ ಶಿವರೂಪೀ ॥
ಓದನಪ್ರದ ವಿಷ್ಣು ಪರಮಾ-
ಹ್ಲಾದವೀವುತ ತೃಪ್ತಿಪಡಿಸುವಾ
ಗಾಧಮಹಿಮನ ಚಿತ್ರಕರ್ಮವನಾವದ ಬಣ್ಣಿಸುವ ॥3॥

ಪರಮಾತ್ಮನ ನಾದ, ಬಿಂದು, ಘೋಷ, ಶಾಂತ, ಅತಿಶಾಂತ ರೂಪಗಳ ಅಧಿಷ್ಠಾನ

ನಾದ ಭೋಜನ ಶಬ್ದದೊಳು ಬಿಂ-
ದೊದ ನೋದಕದೊಳಗೆ ಘೋಷನು
ವಾದದೊಳು ಶಾಂತಾಖ್ಯ ಜಠರಾಗ್ನಿಯೊಳು ಇರುತಿಪ್ಪ ॥
ವೈದಿಕಸುಶಬ್ದದೊಳು ಪುತ್ರ ಸ-
ಹೋದರಾನುಗರೊಳತಿಶಾಂತನ
ಪಾದಕಮಲನವರತ ಚಿಂತಿಸು ಈ ಪರಿಯಲಿಂದ ॥4॥

ಶ್ರೀಹರಿಯು ಅನಂತಗುಣಪರಿಪೂರ್ಣ, ವೇದಪ್ರತಿಪಾದ್ಯ ಮತ್ತು ಸರ್ವವಿಲಕ್ಷಣನು

ವೇದಮಾನಿ ರಮಾನುಪಾಸ್ಯ ಗು-
ಣೋದಧಿ ಗುಣತ್ರಯವಿವರ್ಜಿತ
ಸ್ವೋದರಸ್ಥಿತ ನಿಖಿಳಬ್ರಹ್ಮಾಂಡಾದ್ವಿಲಕ್ಷಣನು ॥
ಸಾಧುಸಮ್ಮತವೆನಿಸುತಿಹ ನಿಷು-
ಸೀದಗಣಪತಿಯೆಂಬ ಶ್ರುತಿ ಪ್ರತಿ-
ಪಾದಿಸುವದನವತರವನ ಗುಣ ಪ್ರಾಂತಗಾಣದಲೆ ॥5॥

ಮಾಯಾರಮಣನು ಪುರುಷ ರೂಪದಿಂದ ಮಾಡುವ ವ್ಯಾಪಾರಗಳು

ಕರೆಸುವನು ಮಾಯಾರಮಣ ತಾ-
ಪುರುಷರೂಪದಿ ತ್ರಿಸ್ಥಳಗಳೊಳು
ಪರಮ ಸತ್ಪುರುಷಾರ್ಥದ ಮಹತ್ತತ್ವದೊಳಗಿದ್ದು ॥
ಸರಸಿಜಭವಾಂಡಸ್ಥಿತ ಸ್ತ್ರೀ-
ಪುರುಷ ತನ್ಮಾತ್ರಗಳ ಏಕೋ-
ತ್ತರದಶೇಂದ್ರಿಯಗಳ ಮಹಾಭೂತಗಳ ನಿರ್ಮಿಸಿದ ॥6॥

ಜೀವರ ದೇಹದೊಳು ಪ್ರವಿಷ್ಟನಾದ ಪುರುಷರೂಪದ ವ್ಯಾಪಾರ

ಈ ಶರೀರಗ ಪುರುಷ ತ್ರಿಗುಣದಿ
ಶ್ರೀಸಹಿತ ತಾನಿದ್ದು ಜೀವರಿ-
ಗಾಶ ಲೋಭಾಜ್ಞಾನ ಮದ ಮತ್ಸರ ಕುಮೋಹ ಕ್ಷುಧಾ॥
ಹಾಸ ಹರುಷ ಸುಷುಪ್ತಿ ಸ್ವಪ್ನಪಿ-
ಪಾಸ ಜಾಗ್ರತಿ ಜನ್ಮ ಸ್ಥಿತಿ ಮೃತಿ
ದೋಷ ಪುಣ್ಯ ಜಯಾಪಜಯ ದ್ವಂದ್ವಗಳ ಕಲ್ಪಿಸಿದ
॥7॥

ಸಂಸಾರಬಂಧಕನೂ ಇವನೇ
ಮೋಚಕನೂ ಇವನೇ !!

ತ್ರಿವಿಧ ಗುಣಮಯ ದೇಹ ಜೀವಕೆ
ಕವಚದಂದದಿ ತೊಡಿಸಿ ಕರ್ಮ-
ಪ್ರವಹದೊಳು ಸಂಚಾರ ಮಾಡಿಸುತಿಪ್ಪ ಜೀವರನ ॥
ಕವಿಸಿ ಮಾಯಾರಮಣ ಮೋಹವ
ಭವಕೆ ಕಾರಣನಾಗುವನು ಸಂ-
ಶ್ರವಣ ಮನನವ ಮಾಳ್ಪರಿಗೆ ಮೋಚಕನೆಸುತಿಪ್ಪ ॥8॥

ಚೇತನಾಚೇತನಪ್ರತೀಕಗಳಲ್ಲಿ
ಸಾಶನ ಮತ್ತು ಅಶನ ರೂಪಗಳು

ಸಾಶನಾಹ್ವಯ ಸ್ತ್ರೀ ಪುರುಷರೊಳು
ವಾಸವಾಗಿಹನೆಂದರಿದು ವಿ-
ಶ್ವಾಸಪೂರ್ವಕ ಭಜಿಸಿ ತೋಷಿಸು ಸ್ವಾವರೋತ್ತಮರ ॥
ಕ್ಲೇಶನಾಶನ ಅಚಲಗಳೊಳು ಪ್ರ-
ಕಾಶಿಸುತಲಿಹನಶನರೂಪೋ-
ಪಾಸನವ ಮಾಳ್ಪರಿಗೆ ತೋರ್ಪನು ತನ್ನ ನಿಜರೂಪ ॥9॥

ವಿಶ್ವಾದಿ ಎಲ್ಲಾ ಭಗವದ್ರೂಪಗಳನ್ನು ಚರಾಚರಗಳಲ್ಲಿ ಚಿಂತಿಸು

ಪ್ರಕಾರಾಂತರ ಚಿಂತಿಸುವುದೀ
ಪ್ರಕೃತಿಯೊಳು ವಿಶ್ವಾದಿರೂಪವ
ಪ್ರಕಟ ಮಾಳ್ಪೆನು ಯಥಾಮತಿಯೊಳು ಗುರುಕೃಪಾಬಲದಿ ||
ಮುಕುರನಿರ್ಮಿತ ಸದನದೊಳು ಪೊಗೆ
ಸ್ವಕೀಯ ರೂಪವ ಕಾಂಬ ತೆರದಲಿ
ಆಕುಟಿಲಾತ್ಮಕ ಚರಾಚರದಿ ಸರ್ವತ್ರ ತೋರುವನು ||10||

ವಿಶ್ವಾದಿ ಎಂಟು ರೂಪಗಳ ಚಿಂತನೆಯಿಂದ ಮುಕ್ತಿ

ಪರಿಚ್ಛೇದತ್ರಯ ಪ್ರಕೃತಿಯೊಳ-
ಗಿರುತಿಹನು ವಿಶ್ವಾದಿರೂಪವ-
ಧರಿಸಿ ಆತ್ಮಾದಿತ್ರಿರೂಪವ ಈಷಣತ್ರಯದಿ ||
ಸುರುಚಿ ಜ್ಞಾನಾತ್ಮ ಸ್ವರೂಪದಿ
ತುರಿಯನಾಮಕ ವಾಸುದೇವನ
ಸ್ಮರಿಸು ಮುಕ್ತಿಪ್ರದಾಯಕನೀತನಹುದೆಂದು ||11||

ಕ್ಷಮ ಕ್ಷಾಮ ಸಮೀಹನಾಗಿ ದೇವ ದೈತ್ಯರಲ್ಲಿ ಸಾಧನೆಯನ್ನು ಮಾಡಿಸುವ

ಕಮಲಸಂಭವಜನಕ ಜಡಜಂ-
ಗಮರೊಳಗೆ ನೆಲೆಸಿದ್ದು ಕ್ರಮ ವ್ಯ-
ತ್ಯಮದಿ ಕರ್ಮವ ಮಾಡಿ ಮಾಡಿಸುತಿಪ್ಪ ॥
ಬೇಸರದೆ ಕ್ಷಮ ಕ್ಷಾಮ ಸಮೀಹನಾಹ್ವಯ
ಸುಮನಸಾಸುರರೊಳಗೆ ಅಹಂ
ಮಮ ನಮನ ಎಂದೀ ಉಪಾಸನೆಗೈವ ಪ್ರಾಂತದಲಿ॥12॥

ಭಗವದಧೀನವಾದ ಸೂಕ್ಷ್ಮಸ್ಥೂಲ ಪ್ರಕೃತಿಯಲ್ಲಿ ಹರಿಯ ನಿತ್ಯ ಸನ್ನಿಧಾನ

ಈ ಸಮಸ್ತ ಜಗತ್ತು ಈಶಾ-
ವಾಸ್ಯವೆನಿಪುದು ಕಾರ್ಯರೂಪವು
ನಾಶವಾದರು ನಿತ್ಯವೇ ಸರಿ ಕಾರಣ ಪ್ರಕೃತಿ ॥
ಶ್ರೀಶಗೆ ಜಡಪ್ರತಿಮೆಯೆನಿಪುದು
ಮಾಸದೊಮ್ಮೆಗು ಸನ್ನಿಧಾನವು
ವಾಸವಾಗಿಹ ನಿತ್ಯ ಶಾಲಗ್ರಾಮದೋಪಾಧಿ ॥13॥

ಎಲ್ಲರಂತರ್ಯಾಮಿಯಾಗಿದ್ದು ಪ್ರತ್ಯೇಕ ಕರ್ಮ ಮಾಡಿಸುವ ಶ್ರೀಹರಿ

ಏಕಮೇವಾದ್ವಿತೀಯ ರೂಪಾ-
ನೇಕ ಜೀವರೊಳಿದ್ದು ತಾ ಪ್ರ-
ತ್ಯೇಕ ಕರ್ಮವ ಮಾಡಿ ಮೋಹಿಸುತಿಪ್ಪ ತಿಳಿಸದಲೆ ॥
ಮೂಕಬಧಿರಾಂಧಾದಿ ನಾಮಕ
ಈ ಕಳೇವರದೊಳಗೆ ಕರೆಸುವ
ಮಾಕಳತ್ರನಲೌಕಿಕ ಮಹಾಮಹಿಮೆಗೇನೆಂಬೆ ॥14॥

ಲೋಕಬಂಧುವಾಗಿರುವ ಪರಮಾತ್ಮ ಜೀವರಲ್ಲಿ ಸಂಬಂಧಪಡದೆ ವಾಸವಾಗಿದ್ದು ಸಾಕುವನು

ಲೋಕಬಂಧುರ್ಲೋಕನಾಥ ವಿ-
ಶೋಕ ಭಕ್ತರ ಶೋಕನಾಶನ
ಶ್ರೀಕರಾರ್ಚಿತ ಸೋಕದಂದಲಿಪ್ಪ ಸರ್ವರೊಳು ॥
ಸಾಕುವನು ಸಜ್ಜನರ ಪರಮ ಕೃ-
ಪಾಕರೇಶ ಪಿನಾಕಿಸನ್ನುತ
ಸ್ವೀಕರಿಸುವಾನತರು ಕೊಟ್ಟ ಸಮಸ್ತ ಕರ್ಮಗಳ ॥15॥

ಸರ್ವಸ್ವವೂ ದೇವರಿತ್ತದೆಂದು ಮೋಹಕೊಳಗಾಗದೆ ಸರ್ವನಾಮಕನ ಪೂಜಿಸು

ಆಹಿತ ಪ್ರತಿಮೆಗಳೆನಿಸುವವು
ದೇಹ ಗೇಹಾಪತ್ಯ ಸತಿ ಧನ
ಲೋಹ ಕಾಷ್ಠ ಶಿಲಾ ಮೃದಾತ್ಮಕವಾದ ದ್ರವ್ಯಗಳು ॥
ಸ್ನೇಹದಲಿ ಪರಮಾತ್ಮ ಎನಗಿ-
ತ್ತೀಹನೆಂದರಿದನುದಿನದಿ ಸ-
ಮ್ಮೋಹಕೊಳಗಾಗದಲೆ ಪೂಜಿಸು ಸರ್ವನಾಮಕನ ॥16॥

ಹೋತನಾಮಕನು ಪಟದಲ್ಲಿ ತಂತುವಿದ್ದಂತೆ ಚೇತನರಲ್ಲಿ ನಿರ್ಭೀತನಾಗಿ ವ್ಯಾಪ್ತನಾಗಿ ವ್ಯಾಪಾರ ಮಾಡುವನು

ಶ್ರೀತರುಣಿವಲ್ಲಭಗೆ ಜೀವರು
ಚೇತನ ಪ್ರತಿಮೆಗಳು ಓತ-
ಪ್ರೋತನಾಗಿದ್ದೆಲ್ಲರೊಳು ವ್ಯಾಪಾರ ಮಾಡುತಿಹ ॥
ಹೋತ ಸರ್ವೇಂದ್ರಿಯಗಳೊಳು ಸಂ-
ಪ್ರೀತಿಯಿಂದುಂಡುಣಿಸಿ ವಿಷಯ ನಿ-
ರ್ವಾತ ದೇಶಗ ದೀಪದಂದದಲಿಪ್ಪ ನಿರ್ಭಯದಿ ॥17॥

ಮಹದದ್ಭುತನಿಂದ ಜಗದ್ವ್ಯಾಪಾರ ಮತ್ತು ದೇವರ 5 ಅಧಿಷ್ಠಾನಗಳು

ಭೂತ ಸೋಕಿದ ಮಾನವನು ಬಹು-
ಮಾತನಾಡುವ ತೆರದಿ ಮಹದ-
ದ್ಭೂತ ವಿಷ್ಣ್ವಾವೇಶದಿಂದಲಿ ವರ್ತಿಪುದು ಜಗವು ॥
ಕೈತವೋಕ್ತಿಗಳಲ್ಲ ಶೇಷ ಫ-
ಣಾತಪತ್ರಗೆ ಜೀವಪಂಚಕ-
ವ್ರಾತವೆಂದಿಗು ಭಿನ್ನಪಾದಾಹ್ವಯದಿ ಕರೆಸುವುದು ॥18॥

ಚತುಷ್ಪಾತ್ ರೂಪದ 4 ಸ್ಥಾನಗಳು

ದಿವಿಯೊಳಿಪ್ಪ ವು ಮೂರು ಪಾದಗ-
ಳವನಿಯೊಳಗಿಹುದೊಂದು ಈ ವಿಧ
ಕವಿಭಿರೀಡಿತ ಕರೆಸುವ ಚತುಷ್ಪಾತು ತಾನೆಂದು ॥
ಇವನ ಪಾದಚತುಷ್ಟಯಗಳನು
ಭವಕೆ ತಂದು ನಿರಂತರದಿ ಉ-
ದ್ಧವನ ಸಖ ಸರ್ವಾಂತರಾತ್ಮಕನೆಂದು ಸ್ಮರಿಸುತಿರು ॥19॥

ವಿದ್ವಾಂಸನೆಂಬ ಅಹಂನಿಂದ ಹರಿಭಕ್ತರಿಗೆ ನಮಿಸದಿರಲು ಭವಪಾಶದಲಿ ಬಂಧಿಸುವ

ವಂಶ ಬಾಗಲು ಬೆಳೆಯೆ ಕಂಡು ನ-
ರಾಂಶದಲಿ ಶೋಭಿಪುದು ಬಾಗದ
ವಂಶ ಪಾಶದಿ ಕಟ್ಟಿ ಏರುವ ಡೊಂಬ ಮಸ್ತಕಕೆ ॥
ಕಂಸಮರ್ದನ ದಾಸರಿಗೆ ನಿ-
ಸ್ಸಂಶಯದಿ ವಂದಿಸದೆ ನಾ ವಿ-
ದ್ವಾಂಸನೆಂದಹಂಕರಿಸೆ ಭವಗುಣದಿಂದ ಬಂಧಿಸುವ
॥20॥

ದೇವರ ಆವಾಸ ಸ್ಥಾನಗಳು

ಜ್ಯೋತಿರೂಪಗೆ ಪ್ರತಿಮೆಗಳು ಸಾಂ-
ಕೇತಿಕಾರೋಪಿತ ಸುಪೌರುಷ
ಧಾತುಸಪ್ತಕ ಧೈರ್ಯ ಶೌರ್ಯೌದಾರ್ಯ ಚಾತುರ್ಯ ॥
ಮಾತು ಮಾನ ಮಹತ್ವ ಸಹನ ಸು-
ನೀತಿ ನಿರ್ಮಲದೇಶ ಬ್ರಾಹ್ಮಣ-
ಭೂತ ಪಂಚಕ ಬುದ್ಧಿ ಮೊದಲಾದಿಂದ್ರಿಯಸ್ಥಾನ ॥21॥

ಅಜಿತ, ಶಾಶ್ವತ, ಸ್ಥಾಣು, ಗೋವಿದಾಂಪತಿ, ಅಮೃತ, ಅನಂತ, ರೂಪಗಳ ಅಧಿಷ್ಠಾನ

ಜೀವರಾಶಿಯೊಳಮೃತ ಶಾಶ್ವತ
ಸ್ಥಾವರಗಳೊಳು ಸ್ಥಾಣುನಾಮಕ
ನಾವಕಾಲದಲಿಪ್ಪ ನಜಿತಾನಂತನೆಂದೆನಿಸಿ ॥
ಗೋವಿದಾಂಪತಿ ಗಾಯನಪ್ರಿಯ-
ಸಾವಯವ ಸಾಹಸ್ರನಾಮ ಪ-
ರಾವರೇಶ ಪವಿತ್ರಕರ್ಮ ವಿಪಶ್ಚಿತಸುಧಾಮ ॥22॥

ಮಾಧವನ ಪೂಜಾರ್ಥ ಮಾಡಿದ ನಿಷೇಧ ಕರ್ಮಗಳೂ ಸತ್ಕರ್ಮವಾಗುವುದು ಹಾಗೂ ಸ್ವಾರ್ಥದ ಸತ್ಕರ್ಮವು ಭವಬಂಧಕವಾಗುವುದು

ಮಾಧವನ ಪೂಜಾರ್ಥವಾಗಿ ನಿ-
ಷೇಧಕರ್ಮವ ಮಾಡಿ ಧನ ಸಂ-
ಪಾದಿಸಲು ಸತ್ಪುಣ್ಯಕರ್ಮಗಳೆನಿಸಿಕೊಳುತಿಹುವು ॥
ಸ್ವೋದರಂಭರಣಾರ್ಥ ನಿತ್ಯದಿ
ಸಾಧುಕರ್ಮವ ಮಾಡಿದರು ಸರಿ-
ಐದುವನು ದೇಹಾಂತರವ ಸಂದೇಹವಿನಿತಿಲ್ಲ ॥23॥

ಕರುಣೆಯಿಂದ ಜೀವರಲ್ಲಿದ್ದು ಪೋಷಿಸುವ ಮಹಾಮಹಿಮೆ

ಅಪಗತಾಶ್ರಯ ಎಲ್ಲರೊಳಗಿ-
ದ್ದುಪಮನೆನಿಪಾನುಪಮರೂಪನು
ಶಫರಕೇತನಜನಕ ಮೋಹಿಪ ಮೋಹಕನ ತೆರದಿ ॥
ತಪನಕೋಟಿಸಮಪ್ರಭಾಸಿತ
ವಸುವೆನಿಪ ಕೃಷ್ಣಾದಿರೂಪಕ
ದ್ವಿಪದನಂತುಂಡುಣಿಪ ಸರ್ವತ್ರದಲಿ ನೆಲೆಸಿದ್ದು ॥24॥

ಭಕ್ತರ ಕೂಗಿಗೆ ಒದಗಿ ಬರುವ ಭವಭಿಷಕ್

ಅಡವಿಯೊಳು ಬಿತ್ತದಲೆ ಬೆಳೆದಿಹ
ಗಿಡದ ಮೂಲಿಕೆ ಸಕಲ ಜೀವರ
ಒಡಲೊಳಿಪ್ಪಾ ಮಯವ ಪರಿಹರಗೈಸುವಂದದಲಿ ॥
ಜಡಜಸಂಭವಜನಕ ತ್ರಿಜಗ-
ದ್ವಡೆಯ ಸಂತೈಸೆನಲು ಅವರಿ-
ದ್ದೆಡೆಗೆ ಬಂದೊದಗುವನು ಭಕ್ತರ ಭಿಡೆಯ ಮೀರದಲೆ
॥25॥

ಸರ್ವಕಾಮದನನ್ನು ನಿಷ್ಕಾಮನೆಯಿಂದ ಭಜಿಸುತ ಮದ್ದಾನಯಂತೆ ಸಂಚರಿಸು

ಶ್ರೀನಿಕೇತನ ತನ್ನವರ ದೇ-
ಹಾನುಬಂಧಿಗಳಂತೆ ಅವ್ಯವ-
ದಾನದಲಿ ನೆಲೆಸಿಪ್ಪ ಸರ್ವದ ಸಕಲ ಕಾಮದನು ॥
ಏನು ಕೊಟ್ಟುದ ಭುಂಜಿಸುತ ಮ-
ದ್ದಾನೆಯಂದದಿ ಸಂಚರಿಸು ಮ-
ತ್ತೇನು ಬೇಡದೆ ಭಜಿಸುತಿರು ಅವನಂಘ್ರಿಕಮಲಗಳ॥26॥

ಉತ್ತಮ, ಮಧ್ಯಮ, ಅಧಮ, ಅಧಮಾಧಮ ಜೀವರ ಸಾಧನೆಯ ಫಲಗಳು

ಬೇಡದಲೆ ಕೊಡುತಿಪ್ಪ ಸುರರಿಗೆ
ಬೇಡಿದರೆ ಕೊಡುತಿಹನು ನರರಿಗೆ
ಬೇಡಿ ಬಳಲುವ ದೈತ್ಯರಿಗೆ ಕೊಡನೊಮ್ಮೆ ಪುರುಷಾರ್ಥ ॥
ಮೂಢರನುದಿನ ಧರ್ಮಕರ್ಮವ
ಮಾಡಿದರು ಸರಿ ಅಹಿಕಫಲಗಳ
ನೀಡಿ ಉನ್ನತ್ತರನು ಮಾಡಿ ಮಹಾನಿರಯವೀವ ॥27॥

ಸೂರ್ಯನ ಕಿರಣದಂತೆ ದೇವರು ಜೀವರ ಆಕಾರದಲ್ಲಿ ಯೋಗ್ಯತಾನುಸಾರ ಇರುವನು

ತರಣಿ ಸರ್ವತ್ರದಲಿ ಕಿರಣವ
ಹರಹಿ ತತ್ತದ್ವಸ್ತುಗಳನನು
ಸರಿಸಿ ಅದರದರಂತೆ ಛಾಯವ ಕಂಗೊಳಿಪ ತೆರದಿ ॥
ಅರಿಧರೇಜಾನೇಜ ಜಗದೊಳ-
ಗಿರುವ ಛಾಯಾತಪನೆನಿಸಿ ಸಂ-
ಕರುಷಣಾಹ್ವಯ ಅವರವರ ಯೋಗ್ಯತೆಗಳಂತಿಪ್ಪ ॥28॥

ಸೇವ್ಯ ಸೇವಕನಾಗಿರುವ ಸರ್ವಾಂತರ್ಯಾಮಿ

ಈ ವಿಧದಿ ಸರ್ವತ್ರ ಲಕುಮಿ-
ಭೂ ವನಿತೆಯರ ಕೂಡಿ ತನ್ನ ಕ-
ಳಾವಿಶೇಷಗಳೆಲ್ಲ ಕಡೆಯಲಿ ತುಂಬಿ ಸೇವ್ಯತಮ ॥
ಸೇವಕನು ತಾನೆನಿಸಿ ಮಾಯಾ-
ದೇವಿರಮಣ ಪ್ರವಿಷ್ಟ ರೂಪಕ
ಸೇವೆ ಮಾಳ್ಪ ಶರಣ್ಯ ಶಾಶ್ವತ ಕರುಣಿ ಕಮಲಾಕ್ಷ ॥29॥

ಅನಂತಕಲ್ಯಾಣಗುಣ ಪರಿಪೂರ್ಣ

ಪ್ರಣವಕಾರಣ ಕಾರ್ಯ ಪ್ರತಿಪಾ-
ದ್ಯನು ಪರಾತ್ಪರ ಚೇತನಾಚೇ-
ತನ ವಿಲಕ್ಷಣಾನಂತಸತ್ಕಲ್ಯಾಣ ಗುಣಪೂರ್ಣ
ಅನುಪಮನುಪಾಸಿತ ಗುಣೋದಧಿ
ಅನಘ ಅಜಿತಾನಂತ ನಿಷ್ಕಿಂ-
ಚನಜನಪ್ರಿಯ ನಿರ್ವಿಕಾರ ನಿರಾಶ್ರಯಾವ್ಯಕ್ತ ॥30॥

ಹರಿಕಥಾಮೃತವು ಸಂಸಾರಾಂಧಕಾರಕ್ಕೆ ದೀಪವಟ್ಟಿಗೆಯಂತಿರುವುದು

ಗೋಪ ಭೀಯ ಭವಾಂಧಕಾರಕೆ
ದೀಪವಟ್ಟಿಗೆ ಸಕಲ ಸುಖಸದ-
ನೋಪರಿಗ್ರಹವೆನಿಸುತಿಪ್ಪುದು ಹರಿಕಥಾಮೃತವು ॥
ಗೋಪತಿ ಜಗನ್ನಾಥವಿಟ್ಠಲ ಸ-
ಮೀಪದಲಿ ನೆಲೆಸಿದ್ದು ಭಕ್ತರ
ನಾಪವರ್ಗರ ಮಾಡುವನು ಭವದುಃಖಭವದಿಂದ ॥31॥

॥ ಇಲ್ಲಿಗೆ ಇಪ್ಪತ್ತಾನಾಕನೆಯ ಬಿಂಬಾಪರೋಕ್ಷಸಂಧಿ/
ಬಿಂಬಪ್ರತಿಬಿಂಬಸಂಧಿ ಮುಗಿಯಿತು ॥

ಆರೋಹಣತಾರತಮ್ಯಸಂಧಿ-25

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಶಾಂಡಿಲ್ಯ ಮುನಿಗಳು ಹೇಳಿದ ತಾರತಮ್ಯ ತತ್ವ

ಭಕ್ತರೆನಿಸುವ ದಿವ್ಯ ಪುರುಷರ
ಉಕ್ತಿ ಲಾಲಿಸಿ ಪೇಳ್ದ ಮುಕ್ತಾ-
ಮುಕ್ತಜೀವರ ತಾರತಮ್ಯವ ಮುನಿಪ ಶಾಂಡಿಲ್ಯ
॥ಸಂಧಿ ಸೂಚನೆ ॥

ಸ್ಥಾವರದಿಂದ ಚಕ್ರವರ್ತಿಗಳ ತನಕ ಉತ್ತಮೋತ್ತಮರ ತಾರತಮ್ಯ

ಸ್ಥಾವರದ ನೋಡಲ್ಕೆ ತೃಣ ಕ್ರಿಮಿ
ಜೀವರುತ್ತಮ ಕ್ರಿಮಿಗಳಿಂದಾ
ಜಾವಿ ಗೋ ಗಜ ವ್ಯಾಘ್ರ ಸಿಂಹಗಳಿಂದ ಶೂದ್ರಾದಿ ॥
ಮೂವರುತ್ತಮ ಕರ್ಮಿಕರು ಭೂ-
ದೇವರುತ್ತಮ ಕರ್ಮಿ ನೋಡಲು
ಕೋವಿದೋತ್ತಮ ಕವಿಗಳಿಂದಲಿ ಕ್ಷಿತಿಪರುತ್ತಮರು ॥1॥

ರಾಜರಿಂದ ಚಿರಪಿತೃಗಳ ತನಕದ ತಾರತಮ್ಯ

ಧರಣಿಪರ ನೋಡಲ್ಕೆ ನರ ಗಂ-
ಧರ್ವರುತ್ತಮ ದೇವಗಂಧ-
ರ್ವರ ಗಣೋತ್ತಮರಿವರಿಗಿಂತ ಶತೋನಶತಕೋಟಿ ॥
ಪರಮಋಷಿಗಳು ಅಪ್ಸರ ಸ್ತ್ರೀ-
ಯರು ಸಮಾನರು ಇವರಿಗಿಂತಲಿ
ಚಿರಪಿತೃಗಳುತ್ತಮರು ಚಿರನಾಮಕ ಪಿತೃಗಳಿಂದ ॥2॥

ಋಷಿಗಳಿಂದ 16100 ಕೃಷ್ಣನ ಹೆಂಡತಿಯರ ತನಕದ ತಾರತಮ್ಯ

ಎರಡೈದು ಎಂಭತ್ತು ಋಷಿ ತುಂ-
ಬರಶತೋರ್ವಶೀಯಪ್ಸರಸ್ತ್ರೀ-
ಯರು ಶತಾಜಾನಜರು ಉತ್ತಮ ಚಿರಪಿತೃಗಳಿಂದ ॥
ವರರು ಊರ್ವಶಿಗಿಂತ ವೈಶ್ವಾ-
ನರನ ಸುತರೀರೆಂಟು ಸಾವಿರ
ಹರೆಯರೊಳುತ್ತಮ ಕಶೇರ್ಯಪ್ಪತ್ತು ನಾಲ್ಕು ಜನ ।

ಗೋಪಿಕಾಸ್ತ್ರೀಯರು, ಶನ್ಯೈಶ್ಚರ, ಪುಷ್ಕರ, ಬುಧ, ಸ್ವಾಹಾದೇವಿಯರ ತಾರತಮ್ಯ

ಸರಿಯೆನಿಪರು ವ್ರಜೌಕಸ ಸ್ತ್ರೀ-
ಯರು ಸುರಾಸ್ಯಾತ್ಮಜರಿಗೆ ಪು-
ಷ್ಕರನು ಕರ್ಮಪ ಪುಷ್ಕರನಿಗೆ ಶನ್ಯೈಶ್ಚರುತ್ತಮನು ॥
ತರಣಿಜನಿಗುತ್ತಮಳುಷಾಶ್ವಿನಿ-
ಸುರರ ಸಿಗುತ್ತಮ ಜಲಪ ಬುಧ
ಶರಧಿಜಾತ್ಮಜಗುತ್ತಮ ಸ್ವಾಹಾದೇವಿಯೆನಿಸುವಳು ॥4॥

ಸ್ವಾಹಾದೇವಿ, ಗಂಗಾದಿ ದೇವತೆಗಳು, 100 ಕರ್ಮಜದೇವತೆಗಳ ವಿವರ

ಅನಳಭಾರ್ಯಳಿಗಿಂತನಾಖ್ಯಾ-
ತನಿಮಿಷರನಾಖ್ಯಾತರಿಂದಲಿ
ಘನಪ ಪರ್ಜನ್ಯಾನಿರುದ್ಧನ ಸ್ತ್ರೀ ಉಷಾದೇವಿ ॥
ದ್ಯುನದಿ ಸಂಜ್ಞಾ ಶ್ಯಾಮಲಾ ರೋ-
ಹಿಣಿಗಳಾರ್ವರು ಸಮರನಾಖ್ಯಾ-
ತನಿಮಿಷೋತ್ತಮರಿವರಿಗಿಂತಲಿ ನೂರು ಕರ್ಮಜರು ॥5॥

19ನೇ ಕಕ್ಷೆಯ ರಾಜರು, ಮನುಗಳು, ಇಂದ್ರಾದಿ ದೇವತೆಗಳ ತಾರತಮ್ಯ

ಪೃಥು ನಹುಷ ಶಶಿಬಿಂದು ಪ್ರಿಯ-
ವ್ರತ ಪರೀಕ್ಷಿತ ನೃಪರು ಭಾಗೀ-
ರಥಿಯ ನೋಡಲಕಧಿಕ ಬಲ್ಯಾದಿಂದ್ರ ಸಪ್ತಕರು ॥
ಪಿತೃಗಳೆಂಟೆಂಟಧಿಕವಪ್ಸರ
ಸತಿಯರೀರ್ರೈದೊಂದು ಮನುಗಳು
ದಿತಿಜಗುರು ಚಾವನ ಉಚಥ್ಯರು ಕರ್ಮಜರು ಸಮರು
॥6॥

ಧನಪ, ಗಣಪ, ಅಶ್ವಿನಿಗಳು, ಮಿತ್ರ, ತಾರಾ, ನಿರಋತಿ, ಸಪ್ತಋಷಿಗಳ ವಿವರ

ಧನಪ ವಿಷ್ವಕ್ಸೇನ ಗಣಪಾ-
ಶ್ವಿನಿಗಳೆಂಭತ್ತೈದು ಶೇಷರಿ-
ಗೆಣೆಯೆನಿಸುವರು ಮಿತ್ರ ತಾರಾ ನಿರಋತಿ ಪ್ರಾವಹಿ ॥
ಗುಣಗಳಿಂದೈದಧಿಕ ಎಂಭ-
ತ್ತೆನಿಪ ಶೇಷರಿಗುತ್ತಮರು ಸ-
ನ್ಮುನಿ ಮರೀಚಿ ಪುಲಸ್ತ್ಯ ಪುಲಹ ಕ್ರತು ವಸಿಷ್ಠ ಮುಖ ॥7॥

ಸಪ್ತಋಷಿಗಳಿಗಿಂತ ಅಗ್ನಿ ಪ್ರಸೂತಿ, ಭೃಗು ಉತ್ತಮರು

ಅತ್ರಿ ಅಂಗಿರಸರೇಳು ಬ್ರಹ್ಮನ
ಪುತ್ರರಿವರಿಗೆ ಸಮರ ವಿಶ್ವಾ-
ಮಿತ್ರ ವೈವಸ್ವತರು ಈಶಾವೇಶ ಬಲದಿಂದ ॥
ಮಿತ್ರಗಿಂತುತ್ತಮರು ಸ್ವಾಹಾ-
ಭರ್ತೃ ಭೃಗುವು ಪ್ರಸೂತಿ ವಿಶ್ವಾ-
ಮಿತ್ರ ಮೊದಲಾದವರಿಗಿಂತಲಿ ಮೂವರುತ್ತಮರು ॥8॥

ನಾರದ, ವರುಣ, ಸೂರ್ಯಾದಿಗಳು, ಪ್ರವಹ, ದಕ್ಷಾದಿಗಳ ತಾರತಮ್ಯ

ನಾರದೋತ್ತಮನಗ್ನಿಗಿಂತಲಿ
ವಾರಿನಿಧಿ ಪಾದೋತ್ತಮನು ಯಮ
ತಾರಕೇಶ ದಿವಾಕರರು ಶತರೂಪರುತ್ತಮರು ॥
ವಾರಿಜಾಪ್ತನಿಗಿಂತ ಪ್ರವಹ-
ಮಾರುತೋತ್ತಮ ಪ್ರವಹಗಿಂತಲಿ
ಮಾರಪುತ್ರನಿರುದ್ಧ ಗುರು ಮನು ದಕ್ಷ ಶಚಿ ರತಿಯು
॥9॥

ಅಹಂಕಾರಿಕ ಪ್ರಾಣ, ಕಾಮ, ಇಂದ್ರ, ಪಾರ್ವತಿ, ಷಣ್ಮಹಿಷಿಯರ ತಾರತಮ್ಯ

ಆರು ಜನರುಗಳಿಂದಲಾಹಂ-
ಕಾರಿಕಪ್ರಾಣೋತ್ತಮಾಖಿಳಶ-
ರೀರಮಾನಿ ಪ್ರಾಣಗಿಂತಲಿ ಕಾಮ ಇಂದ್ರರಿಗೆ ॥
ಗೌರಿ ವಾರುಣಿ ಖಗಪರಾಣಿಗೆ
ಶೌರಿ ಮಹಿಷಿಯರೊಳಗೆ ಜಾಂಬವ-
ತೀ ರಮಾಯುತಳಾದ ಕಾರಣ ಅಧಿಕಳೆನಿಸುವಳು ॥10॥

ಗರುಡ, ಶೇಷ, ರುದ್ರರಿಂದ ಬ್ರಹ್ಮ ವಾಯುಗಳು, ಲಕ್ಷ್ಮಿಯ ತನಕದ ತಾರತಮ್ಯ

ಹರ ಫಣಿಪ ವಿಹಗೇಂದ್ರ ಮೂವರು
ಹರಿಮಡದಿಯರಿಗುತ್ತಮರು ಸೌ-
ಪರಣಿಪತಿಗುತ್ತಮರು ಭಾರತಿ ವಾಣಿ ಈರ್ವರಿಗೆ ॥
ಮರುತ ಬ್ರಹ್ಮರು ಉತ್ತಮರು ಇಂ-
ದಿರೆಯು ಪರಮೋತ್ತಮಳು ಲಕ್ಷ್ಮಿಗೆ
ಸರಿಯೆನಿಸುವವರಿಲ್ಲವೆಂದಿಗು ದೇಶಕಾಲದೊಳು ॥11॥

ಶ್ರೀ ಮಹಾಲಕ್ಷ್ಮಿಯ ಗುಣ ಹಾಗೂ ಶಕ್ತಿಸಾಮರ್ಥ್ಯ

ಶ್ರೀ ಮುಕುಂದನ ಮಹಿಳೆ ಲಕುಮಿ ಮ-
ಹಾಮಹಿಮೆಗೇನೆಂಬೆ ಬ್ರಹ್ಮೇ-
ಶಾಮರೇಂದ್ರರ ಸೃಷ್ಟಿ ಸ್ಥಿತಿ ಲಯಗೈಸಿ ಅವರವರ ॥
ಧಾಮಗಳ ಕಲ್ಪಿಸಿಕೊಡುವಳಜ-
ರಾಮರಣಳಾಗಿದ್ದು ಸರ್ವ-
ಸ್ವಾಮಿ ಮಮ ಗುರುವೆಂದುಪಾಸನೆ ಮಾಳ್ಪಳಚ್ಯುತನ
॥12॥

ದೇವರು ಹಾಗೂ ಲಕ್ಷ್ಮಿಯ ನಡುವಿನ ಗುಣದಲ್ಲಿರುವ ಅಂತರ

ಈಸು ಮಹಿಮೆಗಳುಳ್ಳ ಲಕುಮಿ ಪ-
ರೇಶನಾನಂತಾಂಶ ಗುಣದೊಳು
ಲೇಶಲೇಶಕೆ ಸರಿಯೆನಿಸಳಾವಾವ ಕಾಲದಲಿ ॥
ದೇಶಕಾಲಾತೀತ ಲಕುಮಿಗೆ
ಕೇಶವನ ವಕ್ಷಸ್ಥಳವೇ ಅವ-
ಕಾಶವಾಯಿತು ಇವನ ಮಹಿಮೆಯ ವ್ಯಾಪ್ತಿಗೆಣೆಯುಂಟೆ
॥13॥

ದೇವರ ಕಲ್ಪನಾತೀತ ಮಹಾಮಹಿಮೆಗಳು

ಒಂದು ರೂಪದೊಳಂದವಯವದೊ-
ಳೊಂದು ರೋಮದೊಳೊಂದು ದೇಶದಿ
ಪೊಂದಿಕೊಂಡಿಹರಜಭವಾದಿ ಸಮಸ್ತ ಜೀವಗಣ ॥
ಸಿಂಧು ಸಪ್ತದ್ವೀಪ ಮೇರು ಸು-
ಮಂದರಾದ್ಯದ್ರಿಗಳು ಬ್ರಹ್ಮ ಪು-
ರಂದರಾದಿ ಸಮಸ್ತಲೋಕ ಪರಾಲಯಗಳೆಲ್ಲ ॥14॥

ಶ್ರೀಹರಿಯ ಸರ್ವೋತ್ತಮತ್ವದ ಚಿಂತನೆ

ಸರ್ವದೇವೋತ್ತಮನು ಸರ್ವಗ-
ಸರ್ವಗುಣಸಂಪೂರ್ಣ ಸರ್ವದ-
ಸರ್ವತಂತ್ರಸ್ವತಂತ್ರ ಸರ್ವಾಧಾರ ಸರ್ವಾತ್ಮ ॥
ಸರ್ವತೋಮುಖ ಸರ್ವನಾಮಕ
ಸರ್ವಜನಸಂಪೂಜ್ಯ ಶಾಶ್ವತ-
ಸರ್ವ ಕಾಮದ ಸರ್ವಸಾಕ್ಷಿಗ ಸರ್ವಜಿತ್ಸರ್ವ ॥15॥

ಆರೋಹಣ ತಾರತಮ್ಯ ಜ್ಞಾನದ ಫಲ

ತಾರತಮ್ಯಾರೋಹಣವ ಬರೆ-
ದಾರು ಪಠಿಸುವರವರ ಲಕ್ಷ್ಮೀ
ನಾರಸಿಂಹ ಸಮಸ್ತ ದೇವಗಣಾಂತರಾತ್ಮಕನು ॥
ಪೂರೈಸುವ ಮನೋರಥಂಗಳ
ಕಾರುಣಿಕ ಕೈವಲ್ಯದಾಯಕ
ದೂರಗೈವ ಸಮಸ್ತದುರಿತವ ವಿಗತಭಯಶೋಕ ॥16॥

ತಾರತಮ್ಯ ಜ್ಞಾನದಿಂದ ಜ್ಞಾನ, ಭಕ್ತಿ, ವಿರಕ್ತಿ ಅಭಿವೃದ್ಧಿಯೊಂದಿಗೆ ಸಂಸಾರನಾಶ

ಪ್ರಣತಕಾಮದನಂಘ್ರಿ ಸಂದರು-
ಶನದಪೇಕ್ಷೆಗಳುಳ್ಳವಗೆ ನಿ-
ಚ್ಚಣಿಕೆಯನಿಪುದು ಜಡ ಮೊದಲು ಬ್ರಹ್ಮಾಂತತರತಮವು ॥
ಮನವಚನದಿಂ ಸಮರಿಸುವರ ಭವ-
ವನಧಿ ಶೋಷಿಸಿ ಪೋಗುವುದು ಕಾ-
ರಣವೆನಿಸುವುದು ಜ್ಞಾನ ಭಕ್ತಿ ವಿರಕ್ತಿ ಸಂಪದಕೆ ॥17॥

ತ್ರಿವಿಧ ಜೀವರ ಸ್ವಭಾವವನ್ನು ತೋರ್ಪ ತ್ರಿಗುಣಾತೀತ

ಅನಳನೊಳು ಹೋಮಿಸುವ ಹರಿ ಚಂ-
ದನವೆ ಮೊದಲಾದುದರ ಸೂವಾ-
ಸನೆಯು ಪ್ರತ್ಪ್ರತ್ಯೇಕ ತೋರ್ಪುದು ಎಲ್ಲ ಕಾಲದಲಿ ॥
ದನುಜ ಮಾನವ ದಿವಿಜರವರವ-
ರನುಚಿತೋಚಿತಕರ್ಮ ವೃಜಿನಾ-
ರ್ದನನು ವ್ಯಕ್ತಿಯ ಮಾಳ್ಪ ತ್ರಿಗುಣಾತೀತ ವಿಖ್ಯಾತ॥18॥

ಸರ್ವೋತ್ತಮನ ಮಹಿಮೆ

ಭಕ್ತವತ್ಸಲ ಭಾಗ್ಯ ಪುರುಷ ವಿ-
ವಿಕ್ತ ವಿಶ್ವಾಧಾರ ಸರ್ವೋ-
ದ್ರಿಕ್ತ ದೋಷವಿದೂರ ದುರ್ಗಮ ದುರ್ವಿಭಾವ್ಯ ಸ್ವಹಿ ॥
ಶಕ್ತ ಶಾಶ್ವತ ಸಕಲ ವೇದೈ-
ಕೋಕ್ತ ಮಾನದ ಮಾನ್ಯ ಮಾಧವ
ಸೂಕ್ತ ಸೂಕ್ಷ್ಮ ಸ್ಥೂಲ ತ್ರಿಜಗನ್ನಾಥವಿಟ್ಠಲನು ॥19॥

॥ ಇಲ್ಲಿಗೆ ಇಪ್ಪತ್ತೈದನೆಯ ಆರೋಹಣತಾರತಮ್ಯಸಂಧಿ ಮುಗಿಯಿತು ॥

ಶೇಷಶತಸ್ಥರಿಂದ, 20ನೆಯ ಕಕ್ಷೆಯ ಗಂಗಾ, ಶ್ಯಾಮಲ, ಉಷಾದೇವಿಯರಿಗೆ ವಂದನೆ

ಉಕ್ತದೇವರ್ಕಳನುಳಿದು ಎಂ-
ಭತ್ತೈದು ಜನರುಗಳು ಮನುಗಳು
ಚಿಥ್ಯ ಚ್ಯಾವನ ಯಮಳರಿಗೆ ಕರ್ಮಜರೆನಿಸುತಿಪ್ಪ ॥
ಕಾರ್ತವೀರ್ಯಾರ್ಜುನ ಪ್ರಮುಖ ಶ-
ತಸ್ಥರಿಗೆ ಪರ್ಜನ್ಯ ಗಂಗಾ-
ದಿತ್ಯ ಯಮಸೋಮಾನಿರುದ್ಧಪತ್ನಿಯರ ಪದಕೆ ॥4॥

ಸ್ವಾಹಾ ಸ್ವಧಾರಿಂದ ಕರ್ಮಾಭಿಮಾನಿ ಪುಷ್ಕರನಿಗೆ ವಂದನೆ

ಹುತವಹನರ್ಧಾಂಗಿನಿಗೆ ಚಂದ್ರನ
ಸುತ ಬುಧಗೆ ನಾಮಾತ್ಮಿಕೋಷಾ
ಸತಿಗೆ ಛಾಯಾತ್ಮಜ ಶನೈಶ್ಚರಗಾನಮಿಪೆ ಸತತ ॥
ಪ್ರತಿದಿವಸದಲಿ ಬಿಡದೆ ಜೀವ
ಪ್ರತತಿ ಮಾಡುವ ಕರ್ಮಗಳಿಗಧಿ-
ಪತಿಯೆನಿಪ ಪುಷ್ಕರನ ಪಾದಾಂಬುಜಗಳಿಗೆ ನಮಿಪೆ ॥

ಆಜಾನಜರಿಂದ ಶ್ರೀನಿವಾಸನ ದಾಸರಾದ ಮನುಷ್ಯೋತ್ತಮರಿಗೆ ನಮಸ್ಕಾರ

ಆನಮಿಪೆ ಆಜಾನಜರಿಗೆ ಕೃ-
ಶಾನುಸುತರಿಗೆ ಗೋವ್ರಜದೊಳಿಹ
ಮಾನಿನಿಯರಿಗೆ ಚಿರಪಿತರು ಶತನ್ಯೂನ ಶತಕೋಟಿ ॥
ಮೌನಿಜನರಿಗೆ ದೇವಮಾನವ
ಗಾನ ಪ್ರೌಢರಿಗವನಿಪರಿಗೆ ರ-
ಮಾನಿವಾಸನ ದಾಸವರ್ಗಕೆ ನಮಿಪೆನನವರತ ॥6॥

ಸಂಕ್ಷಿಪ್ತ ತಾರತಮ್ಯ ಸ್ತೋತ್ರವನ್ನು ನಿತ್ಯ ಪಠಿಸುವವರಿಗೆ 4 ಪುರುಷಾರ್ಥಗಳುಸಿದ್ಧ

ಅನುಕ್ರಮಣಿಕಾ ತಾರತಮ್ಯವ-
ನನುದಿನದಿ ಸದ್ಭಕ್ತಿಪೂರ್ವಕ
ನೆನವರಿಗೆ ಧರ್ಮಾರ್ಥಕಾಮಾದಿಗಳು ಫಲಿಸುವುವು ॥
ವನಜಸಂಭವ ಮುಖ್ಯರವಯವ-
ರೆನಿಸುವರು ಜಗನ್ನಾಥವಿಟ್ಠಲಗೆ
ವಿನಯದಿಂದಲಿ ನಮಿಸಿ ಕೊಂಡಾಡುತಿರು ಮರೆಯದಲೆ॥7॥

॥ ಇಲ್ಲಿಗೆ ಇಪ್ಪತ್ತಾರನೆಯ ಅವರೋಹಣತಾರತಮ್ಯಸಂಧಿ ಮುಗಿಯಿತು ॥

ಅನುಕ್ರಮಣಿಕಾ ತಾರತಮ್ಯಸಂಧಿ-27

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಸಂಧಿ ಸೂಚನೆ

ಮಾನುಷೋತ್ತಮಪಿಡಿದು ಸಂಕರು-
ಷಣನ ಪರಿಯಂತರಂದಿ ಪೇಳಿದ
ಅನುಕ್ರಮಣಿಕೆಯ ಪದ್ಯವನು ಕೇಳುವುದು ಸಜ್ಜನರು

ಮಾನುಷ್ಯೋತ್ತಮರಿಂದ ಸರ್ವೋತ್ತಮನವರೆಗೆ ನಮಸ್ಕಾರ

ಶ್ರೀಮದಾಚಾರ್ಯರ ಮತಾನುಗ-
ಧೀಮತಾಂವರರಂಘ್ರಿಕಮಲಕೆ
ಸೋಮಪಾನಾರ್ಹರಿಗೆ ತಾತ್ವಿಕ ದೇವತಾಗಣಕೆ ||
ಹೈಮವತಿ ಷಣ್ಮಹಿಷಿಯರ ಪದ-
ವ್ಯೋಮಕೇಶಗೆ ವಾಣಿ ವಾಯು
ತಾಮರಸಭವ ಲಕುಮಿ ನಾರಾಯಣರಿಗಾನಮಿಪೆ ||1||

ಎನ್ನ ಕುಲದೈವನಾದ ಭಗವಂತನೇ ! ಸಂತೈಸು ಸಜ್ಜನರ

ಶ್ರೀಮತಾಂ ವರ ಶ್ರೀಪತೇ ಸ-
ತ್ಕಾಮಿತಪ್ರದ ಸೌಮ್ಯ ತ್ರಿಕಕು-
ದ್ಧಾಮ ತ್ರಿಚತುಷ್ಪಾದ ಪಾವನಚರಿತ ಚಾರ್ವಂಗ ॥
ಗೋಮತಿಪ್ರಿಯ ಗೌಣಗುರುತಮ
ಸಾಮಗಾಯನಲೋಲ ಸರ್ವ-
ಸ್ವಾಮಿ ಮಮ ಕುಲದೈವ ಸಂತೈಸುವುದು ಸಜ್ಜನರ ॥2॥

ಓ ದೇವನೇ ! ನೀನೊಬ್ಬನೇ ಭಕ್ತರ ಚಿಂತಾಮಣಿ

ರಾಮ ರಾಕ್ಷಸಕುಲಭಯಂಕರ
ಸಮೇಜೇಂದ್ರಪ್ರಿಯ ಮನೋವಾ-
ಚಾಮಗೋಚರ ಚಿತ್ಸುಖಪ್ರದ ಚಾರುತರಚರಿತ ॥
ಭೂಮ ಭೂಸ್ವರ್ಗಾಪವರ್ಗದ
ಕಾಮಧೇನು ಸುಕಲ್ಪ ತರು ಚಿಂ-
ತಾಮಣಿಯು ಎಂದೆನಿಪ ನಿಜಭಕ್ತರಿಗೆ ಸರ್ವತ್ರ

ವಟಪತ್ರಶಾಯಿಯೇ ಏನಿದು ನಿನ್ನ ಅಚ್ಚರಿಯ ರೂಪ

ಸ್ವರ್ಣವರ್ಣ ಸ್ವತಂತ್ರ ಸರ್ವಗ-
ಕರ್ಣಹೀನ ಸುಶಯ್ಯ ಶಾಶ್ವತ-
ವರ್ಣ ಚತುರಾಶ್ರಮವಿವರ್ಜಿತ ಚಾರುತರ ಸ್ವರತ ॥
ಅರ್ಣಸಂಪ್ರತಿಪಾದ್ಯ ವಾಯು ಸು-
ಪರ್ಣವರವಹನಪ್ರತಿಮ ವಟ-
ಪರ್ಣಶಯನಾಶ್ಚರ್ಯತಮ ಸಚ್ಚರಿತ ಗುಣಭರಿತ ॥4॥

ತನ್ನ ಸ್ಮರಣೆ ಮಾಡುವವರನ್ನು ಎಂದಿಗೂ ಬಿಟ್ಟಿರದ ಶ್ರೀಹರಿ

ಅಗಣಿತಸುಗುಣಧಾಮ ನಿಶ್ಚಲ
ಸ್ವಗತಭೇದವಿಶೂನ್ಯ ಶಾಶ್ವತ
ಜಗದಿ ಜೀವಾತ್ಯಂತಭಿನ್ನಾಪನ್ನಪರಿಪಾಲ ॥
ತ್ರಿಗುಣವರ್ಜಿತ ತ್ರಿಭುವನೇಶ್ವರ
ಹಗಲಿರುಳು ಸ್ಮರಿಸುತಲಿಹರ ಬಿ-
ಟ್ಟಗಲ ಶ್ರೀ ಜಗನ್ನಾಥವಿಟ್ಠಲ ವಿಶ್ವವ್ಯಾಪಕನು ॥5॥

॥ ಇಲ್ಲಿಗೆ ಇಪ್ಪತ್ತೇಳನೆಯ ಅನುಕ್ರಮಣಿಕಾ ತಾರತಮ್ಯಸಂಧಿ ಮುಗಿಯಿತು ॥

ವಿಘ್ನೇಶ್ವರಸ್ತೋತ್ರಸಂಧಿ-28

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ವ್ಯಾಸಕೃಪೆಗೆ ಪಾತ್ರನಾದ ಆಕಾಶಾಧಿಪನೆ ಎಮ್ಮನುದ್ಧರಿಸು

ಶ್ರೀಶನಂಘ್ರಿಸರೋಜಭೃಂಗ ಮ-
ಹೇಶಸಂಭವ ಮನ್ಮನದೊಳು ಪ್ರ-
ಕಾಶಿಸನುದಿನ ಪ್ರಾರ್ಥಿಸುವೆ ಪ್ರೇಮಾತಿಶಯದಿಂದ ॥
ನೀ ಸಲಹು ಸಜ್ಜನರ ವೇದ-
ವ್ಯಾಸಕರುಣಾಪಾತ್ರ ಮಹದಾ-
ಕಾಶಪತಿ ಕರುಣಾಳು ಕೈಪಿಡಿದೆನ್ನನುದ್ಧರಿಸು ॥1॥

ಹೇ ಗಜಮುಖ ! ಸಜ್ಜನರ ಸಂಗವೆಮಗೆ ದಯಪಾಲಿಸು

ಏಕದಂತ ಇಭೇಂದ್ರಮುಖ ಚಾ-
ಮೀಕರಕೃತಭೂಷಣಾಂಗ ಕೃ-
ಪಾಕಟಾಕ್ಷದಿ ನೋಡು ವಿಜ್ಞಾಪಿಸುವೆನಿನಿತೆಂದು ॥
ನೋಕನೀಯನ ತುತಿಸುತಿಪ್ಪ ವಿ-
ವೇಕಿಗಳ ಸಹವಾಸಸುಖಗಳ
ನೀ ಕರುಣಿಸುವುದೆಮಗೆ ಸಂತತ ಪರಮಕರುಣದಲಿ ॥2॥

ದುರ್ವಿಷಯಗಳಲ್ಲಿ ಆಸಕ್ತವಾಗಿರುವ ಮನವ ಹರಿಪಾದಾರವಿಂದಗಳಲ್ಲಿ ಇರುವಂತೆ ಮಾಡು

ವಿಘ್ನರಾಜನೆ ದುರ್ವಿಷಯದೊಳು
ಮಗ್ನವಾಗಿಹ ಮನವ ಮಹದೋ-
ಷಘ್ನನಂಘ್ರಿಸರೋಜಯುಗಳದಿ ಭಕ್ತಿಪೂರ್ವಕದಿ ॥
ಲಗ್ನವಾಗಲಿ ನಿತ್ಯ ನರಕಭ-
ಯಾಗ್ನಿಗಳಿಗಾನಂಜೆ ಗುರುವರ
ಭಗ್ನಗೈಸೆನ್ನವಗುಣಗಳನು ಪ್ರತಿದಿವಸದಲ್ಲಿ ॥3॥

ಧನಪ ವಿಶ್ವಕ್ಸೇನ ಅಶ್ವಿನಿಗಳಿಗೆ ಸಮನಾದ ಗಣಪನೆ ಎಮಗೆ ಹರಿಭಕ್ತಿಜ್ಞಾನವ ಕೊಟ್ಟು ಸಲಹು

ಧನಪ ವಿಷ್ವಕ್ಸೇನ ವೈದ್ಯಾ-
ಶ್ವಿನಿಗಳಿಗೆ ಸರಿಯೆನಿಪ ಷಣ್ಮುಖ-
ನನುಜ ಶೇಷಶತಸ್ಥ ದೇವೋತ್ತಮ ವಿಯದ್ಗಂಗಾ ॥
ವಿನುತ ವಿಶ್ವೋಪಾಸಕನೆ ಸ-
ನ್ಮನದಿ ವಿಜ್ಞಾಪಿಸುವೆ ಲಕುಮೀ-
ವನಿತೆಯರಸನ ಭಕ್ತಿ ಜ್ಞಾನವ ಕೊಟ್ಟು ಸಲಹುವುದು॥4॥

ಕೃಷ್ಣ ರುಗ್ಮಿಣಿಯರ ಪುತ್ರನಾಗಿ ಅವತರಿಸಿದ ಚಾರುದೇಷ್ಣ

ಚಾರುದೇಷ್ಣಾಹ್ವಯೆನಿಸಿ ಅವ-
ತಾರ ಮಾಡಿದೆ ರುಗ್ಮಿಣಿಯಲಿ
ಗೌರಿಯರಸನ ವರದಿ ಉದ್ಧಟರಾದ ರಾಕ್ಷಸರ ॥
ಶೌರಿಯಾಜ್ಞದಿ ಸಂಹರಿಸಿ ಭೂ-
ಭಾರವಿಳುಹಿದ ಕರುಣಿ ತ್ವತ್ಪಾ-
ದಾರವಿಂದಕೆ ನಮಿಪೆ ಕರುಣಿಪುದೆಮಗೆ ಸನ್ಮತಿಯ ॥5॥

ಗಣಪತಿಯ ಆಪಾದಮೌಳಿ ಪರಿಯಂತ ವರ್ಣನೆ

ಶೂರ್ಪಕರ್ಣದ್ವಯ ವಿವರ್ಜಿತ
ದರ್ಪಹರ ಉದಿತಾರ್ಕಸನ್ನಿಭ
ಸರ್ಪವರ ಕಟಿಸೂತ್ರ ವೈಕೃತಗಾತ್ರ ಸುಚರಿತ್ರ ॥
ಸ್ವರ್ಪಿತಾಂಕುಶ ಪಾಶಕರ ಖಳ-
ದರ್ಪಭಂಜನ ಕರ್ಮಸಾಕ್ಷಿಗೆ
ತರ್ಪಕನು ನೀನಾಗಿ ತೃಪ್ತಿಯ ಪಡಿಸು ಸಜ್ಜನರ ॥6॥

ಮಹಾಭಾರತವನ್ನು ಬರೆದು ವಿಸ್ತರಿಸಿದ ಗಣಪನೆ ಎಮಗೆ ಅದರರ್ಥವನ್ನು ಉಪದೇಶಿಸು

ಖೇಶ ಪರಮ ಸುಭಕ್ತಿಪೂರ್ವಕ-
ವ್ಯಾಸಕೃತ ಗ್ರಂಥಗಳನರಿತು ಪ್ರ-
ಯಾಸವಿಲ್ಲದೆ ಬರೆದು ವಿಸ್ತರಿಸಿದೆಯೋ ಲೋಕದೊಳು ॥
ಪಾಶಪಾಣಿಯೆ ಪ್ರಾರ್ಥಿಸುವೆನುಪ-
ದೇಶಿಸೆನಗದರರ್ಥಗಳ ಕರು-
ಣಾಸಮುದ್ರ ಕೃಪಾಕಟಾಕ್ಷದಿ ನೋಡು ಪ್ರತಿದಿನದಿ ॥7॥

ಪ್ರಾಣಾವೇಶಯುತನಾದ ಗಣಪತಿಯು ಶ್ರೀಶನ ನಾಭಿದೇಶಸ್ಥಿತನು

ಶ್ರೀಶನತಿನಿರ್ಮಲ ಸುನಾಭೀ-
ದೇಶವಸ್ಥಿತ ರಕ್ತಗಂಧಾ-
ತಿಶೋಭಿತಗಾತ್ರ ಲೋಕಪವಿತ್ರ ಸುರಮಿತ್ರ ॥
ಮೂಷಕಾಸುರವಹನ ಪ್ರಾಣಾ-
ವೇಶಯುತ ಪ್ರಖ್ಯಾತ ಪ್ರಭು ಪೂ-
ರೈಸು ಭಕ್ತರು ಬೇಡಿದಿಷ್ಟಾರ್ಥಗಳ ಪ್ರತಿದಿನದಿ ॥8॥

ದೈತ್ಯರಿಗೆ ಭಯಂಕರ ಗತಿ ನೀಡುವುದಕ್ಕಾಗಿ ಸಂಕಟ ಚತುರ್ಥಿಗನಾಗಿ ಮೋಹಿಸುವನು

ಶಂಕರಾತ್ಮಜ ದೈತ್ಯರಿಗತಿಭ-
ಯಂಕರಗತಿಗಳೀಯಲೋಸುಗ
ಸಂಕಟಚತುರ್ಥಿಗನೆನಿಸಿ ಅಹಿತಾರ್ಥಗಳ ಕೊಟ್ಟು ॥
ಮಂಕುಗಳ ಮೋಹಿಸುವ ಚಕ್ರದ-
ರಾಂಕಿತನೆ ದಿನದಿನದಿ ತ್ವತ್ಪದ
ಪಂಕಜಗಳಿಗೆರಗಿ ಬಿನ್ನೈಸುವೆನು ಪಾಲಿಪುದು ಎಮ್ಮ ॥9॥

ಸಿದ್ಧಿದಾಯಕ ಗಣಪತಿಯೇ !
ಶೀಘ್ರದಿ ಎನ್ನ ರಕ್ಷಿಸು

ಸಿದ್ಧ ವಿದ್ಯಾಧರಗಣಸಮಾ-
ರಾಧ್ಯ ಚರಣಸರೋಜ ಸರ್ವಸು-
ಸಿದ್ಧಿದಾಯಕ ಶೀಘ್ರದಿಂ ಪಾಲಿಪುದು ಬಿನ್ನಪವ ||
ಬುದ್ಧಿ ವಿದ್ಯಾ ಜ್ಞಾನ ಬಲ ಪರಿ-
ಶುದ್ಧ ಭಕ್ತಿ ವಿರಕ್ತಿ ನಿರುತನ
ವದ್ಯನ ಸ್ಮೃತಿಲೀಲೆಗಳ ಸುಸ್ತವನ ವದನದಲಿ ||10||

ಭಕ್ತವರನೇ ! ಶಾಸ್ತ್ರಾಸಕ್ತಿ ವಿಷಯ ವಿರಕ್ತಿಯನ್ನು ಪಾಲಿಸು

ರಕ್ತವಾಸದ್ವಯ ವಿಭೂಷಣ
ಉಕ್ತಿ ಲಾಲಿಸು ಪರಮಭಗವ-
ದ್ಭಕ್ತವರ ಭವ್ಯಾತ್ಮ ಭಾಗವತಾದಿ ಶಾಸ್ತ್ರದಲಿ ||
ಸಕ್ತವಾಗಲಿ ಮನವು ವಿಷಯವಿ-
ರಕ್ತಿ ಪಾಲಿಸು ವಿದ್ವದಾದ್ಯ ವಿ-
ಮುಕ್ತನೆಂದೆನಿಸೆನ್ನ ಭವಭಯದಿಂದಲನುದಿನದಿ ||11||

ಈಶನನುಗ್ರಹವಿರುವ ಗಣಪತಿಯ ಭಜನೆಯಿಂದ ಜಯ

ಶುಕ್ರಶಿಷ್ಯರ ಸಂಹರಿಪುದಕೆ
ಶಕ್ರ ನಿನ್ನನು ಪೂಜಿಸಿದನು ಉ-
ರುಕ್ರಮ ಶ್ರೀರಾಮಚಂದ್ರನು ಸೇತು ಮುಖದಲ್ಲಿ ॥
ಚಕ್ರವರ್ತಿಪಧರ್ಮರಾಜನು
ಚಕ್ರಪಾಣಿಯ ನುಡಿಗೆ ಭಜಿಸಿದ
ವಕ್ರತುಂಡನೆ ನಿನ್ನೊಳೆಂತುಟೊ ಈಶನುಗ್ರಹವು ॥12॥

ಎನ್ನಲ್ಲಿ ನೀನಿಂತು ಧರ್ಮಪ್ರೇರಕನಾಗು

ಕೌರವೇಂದ್ರನು ನಿನ್ನ ಭಜಿಸಿದ
ಕಾರಣದಿ ನಿಜಕುಲಸಹಿತ ಸಂ-
ಹಾರ ಐದಿದ ಗುರುವರ ವೃಕೋದರನ ಗದೆಯಿಂದ ॥
ತಾರಕಾಂತಕನನುಜ ಎನ್ನ
ಶರೀರದೊಳು ನೀ ನಿಂತು ಧರ್ಮ-
ಪ್ರೇರನು ನೀನಾಗಿ ಸಂತೈಸೆನ್ನ ಕರುಣದಲಿ ॥13॥

ಮೂಕರನ್ನೂ ವಾಗ್ಮಿಯನ್ನಾಗಿಸುವ
21 ಮೋದಕಪ್ರಿಯನಾದ ಗಣಪತಿ

ಏಕವಿಂಶತಿಮೋದಕಪ್ರಿಯ-
ಮೂಕರನು ವಾಗ್ಮಿಗಳ ಮಾಳ್ಪ ಕೃ-
ಪಾಕರೇಶ ಕೃತಜ್ಞ ಕಾಮದ ಕಾಯೋ ಕೈಪಿಡಿದು ॥
ಲೇಖಕಾಗ್ರಣಿ ಮನ್ಮನದ ದು-
ರ್ವ್ಯಾಕುಲವ ಪರಿಹರಿಸು ದಯದಿ ಪಿ-
ನಾಕಿಭಾರ್ಯಾತನುಜ ಮೃದ್ಭವ ಪ್ರಾರ್ಥಿಸುವೆ ನಿನ್ನ ॥14॥

ಸೃಷ್ಟಿಕರ್ತನ ಸ್ಮರಣೆಸುಖ ಕರುಣಿಸು

ನಿತ್ಯ ಮಂಗಳಚರಿತ ಜಗದು-
ತ್ಪತ್ತಿ ಸ್ಥಿತಿ ಲಯ ನಿಯಮನ ಜ್ಞಾ-
ನತ್ರಯಪ್ರದ ಬಂಧಮೋಚಕ ಸುಮನಸಾಸುರರ ॥
ಚಿತ್ತವೃತ್ತಿಗಳಂತೆ ನಡೆವ ಪ್ರ-
ಮತ್ತನಲ್ಲ ಸುಹೃಜ್ಜನಾಪ್ತನ
ನಿತ್ಯದಲಿ ನೆನೆನೆನೆದು ಸುಖಿಸುವ ಭಾಗ್ಯ ಕರುಣಿಪುದು ॥15॥

ಪಂಚಭೇದಜ್ಞಾನ ಮತ್ತು ವಿಷಯವಿರಕ್ತಿ ಕರುಣಿಸು

ಪಂಚಬೇಧ ಜ್ಞಾನವರುಪು ವಿ-
ರಿಂಚಿಜನಕನ ತೋರು ಮನದಲಿ
ವಾಂಛಿತಪ್ರದ ಒಲುಮೆಯಿಂದಲಿ ದಾಸನೆಂದರಿದು ॥
ಪಂಚವಕ್ತ್ರನ ತನಯ ಭವದೊಳು
ವಂಚಿಸದೆ ಸಂತೈಸು ವಿಷಯದಿ
ಸಂಚರಿಸದಂದದಲಿ ಮಾಡು ಮನಾದಿ ಕರಣಗಳ ॥16॥

ನಿನ್ನಲ್ಲಿ ಬೇಡುವುದೊಂದೆ ! ಹರಿವಾಯುಗಳ ಮತ್ತು ತತ್ವಾಭಿಮಾನಿಗಳ ಅಧೀನವಾಗಿ ಕರ್ಮ ಮಾಡುವೆನೆಂಬ ಉತ್ತಮಜ್ಞಾನ ಮಾತ್ರ !!

ಏನು ಬೇಡುವುದಿಲ್ಲ ನಿನ್ನ ಕು-
ಯೋನಿಗಳು ಬರಲಂಜೆ ಲಕುಮೀ-
ಪ್ರಾಣಪತಿ ತತ್ವೇಶರಿಂದೊಡಗೂಡಿ ಗುಣಕಾರ್ಯ ॥
ತಾನೆ ಮಾಡುವನೆಂಬ ಈ ಸು-
ಜ್ಞಾನವನೆ ಕರುಣಿಸುವುದೆಮಗೆ ಮ-
ಹಾನುಭಾವ ಮುಹುರ್ಮುಹುಃ ಪ್ರಾರ್ಥಿಸುವೆನಿನಿತೆಂದು
॥17॥

ಗುರುವರ್ಯನೇ ಅಹಂಕಾರ ಮಮಕಾರಗಳನ್ನು ಪರಿಹರಿಸು

ನಮೋ ನಮೋ ಗುರುವರ್ಯ ವಿಬುಧೋ-
ತ್ತಮ ವಿವರ್ಜಿತನಿದ್ರ ಕಲ್ಪ-
ದ್ರುಮನೆನಿಪೆ ಭಜಕರಿಗೆ ಬಹುಗುಣಭರಿತ ಶುಭಚರಿತ ॥
ಉಮೆಯ ನಂದನ ಪರಿಹರಿಸಹಂ-
ಮಮತೆ ಬುದ್ಧ್ಯಾದಿಂದ್ರಿಯಗಳಾ-
ಕ್ರಮಿಸಿ ದಣಿಸುತಲಿಹುವು ಭವದೊಳಗಾವ ಕಾಲದಲಿ
॥18॥

ಸಂಸಾರದುಃಖದಿಂದ ಜಯವನ್ನು ಕರುಣಿಸು

ಜಯ ಜಯತು ವಿಘ್ನೇಶ ತಾಪ-
ತ್ರಯ ವಿನಾಶನ ವಿಶ್ವಮಂಗಳ
ಜಯ ಜಯತು ವಿದ್ಯಾಪ್ರದಾಯಕ ವೀತಭಯಶೋಕ ।
ಜಯ ಜಯತು ಚಾರ್ವಾಂಗ ಕರುಣಾ
ನಯನದಿಂದ ನೋಡಿ ಜನುಮಾ
ಮಯ ಮೃತಿಗಳನು ಪರಿಹರಿಸು ಭಕ್ತರಿಗೆ ಭವದೊಳಗೆ
॥19॥

ಭಗವತ್‌ಸ್ಮರಣೆಗೆ ಬರುವ ವಿಘ್ನವನ್ನು ಪರಿಹರಿಸು

ಕಡುಕರುಣಿ ನೀನೆಂದರಿದು ಹೇ
ರೊಡಲ ನಮಿಸುವೆ ನಿನ್ನಡಿಗೆ ಬೆಂ-
ಬಿಡದೆ ಪಾಲಿಸು ಪರಮಕರುಣಾಸಿಂಧು ಎಂದೆಂದು ॥
ನಡುನಡುವೆ ಬರುತಿಪ್ಪ ವಿಘ್ನವ
ತಡೆದು ಭಗವನ್ನಾಮಕೀರ್ತನೆ
ನುಡಿದು ನುಡಿಸೆನ್ನಿಂದ ಪ್ರತಿದಿವಸದಲಿ ಮರೆಯದಲೆ
॥20॥

21 ಪದ್ಯಗಳನ್ನು ವಿಶ್ವಂಭರನಿಗೆ ಸಮರ್ಪಿಸುವೆ

ಏಕವಿಶಂತಿ ಪದಗಳೆನಿಸುವ
ಕೋಕನದ ನವಮಾಲಿಕೆಯ ಮೈ-
ನಾಕಿತನಯಾಂತರ್ಗತ ಶ್ರೀ ಪ್ರಾಣಪತಿಯೆನಿಪ
ಶ್ರೀಕರ ಜಗನ್ನಾಥವಿಟ್ಠಲ
ಸ್ವೀಕರಿಸಿ ಸ್ವರ್ಗಾಪವರ್ಗದಿ
ತಾ ಕೊಡುವ ಸೌಖ್ಯಗಳ ಭಕ್ತರಿಗಾವ ಕಾಲದಲಿ

॥ ಇಲ್ಲಿಗೆ ಇಪ್ಪತ್ತೆಂಟನೆಯ ವಿಘ್ನೇಶ್ವರಸ್ತೋತ್ರಸಂಧಿ ಮುಗಿಯಿತು ॥

ಅಣುತಾರತಮ್ಯಸಂಧಿ-29

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಅವರೋಹಣ ಕ್ರಮದಲ್ಲಿ ಭಗವಂತನಿಂದ ಷಣ್ಮಹಿಷಿಯರ ತನಕದ ತಾರತಮ್ಯ

ವಿಷ್ಣು ಸರ್ವೋತ್ತಮನು ಪ್ರಕೃತಿ ಕ-
ನಿಷ್ಠಳೆನಿಪಳನಂತಗುಣ ಪರ-
ಮೇಷ್ಠಿ ಪವನರು ಕಡಿಮೆ ವಾಣೀಭಾರತಿಗಳಧಮ ||
ವಿಷ್ಣುವಾಹ ಫಣೀಂದ್ರ ಮೃಡರಿಗೆ
ಕೃಷ್ಣಮಹಿಷಿಯರಧಮರಿವರೊಳು
ಶ್ರೇಷ್ಠಳೆನಿಪಳು ಜಾಂಬವತಿಯಾವೇಶಬಲದಿಂದ ||1||

ಗರುಡ ಶೇಷ ರುದ್ರರಿಂದ ಪ್ರವಾಹವಾಯುವಿನ ತನಕದ ತಾರತಮ್ಯ

ಪ್ಲವಗ ಪ್ನನಗಪಾಹಿ ಭೂಷಣ-
ಯುವತಿಯರು ಸಮ ತಮ್ಮೊಳಗೆ ಜಾಂ-
ಬವತಿಗಿಂತಲಿ ಕಡಿಮೆ ಇವರಿಂದಿಂದ್ರಕಾಮರಿಗೆ ॥
ಅವರ ಪ್ರಾಣನು ಕಡಿಮೆ ಕಾಮನ
ಕುವರ ಶಚಿ ರತಿ ದಕ್ಷ ಗುರು ಮನು-
ಪ್ರವಹಮಾರುತ ಕೊರತೆಯೆನಿಸುವನಾರು ಜನರಿಂದ ॥2॥

ಯಮ ಸೂರ್ಯಾದಿಗಳಿಂದ ಏಳನೆಯ ಕಕ್ಷೆ ವೈವಸ್ವತನವರೆಗಿನ ತಾರತಮ್ಯ

ಯಮ ದಿವಾಕರ ಚಂದ್ರ ಮಾನವಿ-
ಸಮರ ಕೋಣಪ ಪ್ರವಹಗಧಮರು
ದ್ಯುಮಣಿಗಿಂತಲಿ ವರುಣ ನೀಚನು ನಾರದಾಧಮನು ॥
ಸುಮನಸಾಸ್ಯ ಪ್ರಸೂತಿ ಭೃಗುಮುನಿ-
ಸಮರು ನಾರದಗಧಮರತ್ರಿ-
ಪ್ರಮುಖ ವಿಶ್ವಾಮಿತ್ರ ವೈವಸ್ವತರನಲಗಧಮ ॥3॥

100 ಜನರಲ್ಲಿ ಉತ್ತಮ ಕಕ್ಷೆಗೆ ಸೇರಿದ 15 ಮಂದಿ

ಈ ದಿವೌಕಸರೊಳಗೆ ಉಕ್ತರು
ಐದಧಿಕದಶ ಉಳಿದ ಎಂಬ-
ತ್ತೈದು ಶೇಷರಿಗೆಣೆಯೆನಿಸುವರು ಧನಪ ವಿನಾಯಕರು ॥
ಸಾಧು ವೈವಸ್ವತ ಸ್ವಯಂಭುವ
ಶ್ರೀದ ತಾಪಸರುಳಿದು ಮನು ಏ-
ಕಾದಶರು ವಿಘ್ನೇಶಗಿಂತಲಿ ನೀಚರೆನಿಸುವರು ॥6॥

ಕರ್ಮಜರಾಜರು, ಋಷಿಗಳು, ಸಂಜ್ಞಾಗಂಗಾದೇವಿಯರ ತಾರತಮ್ಯ

ಚ್ಯವನನಂದನ ಕವಿ ಬೃಹಸ್ಪತಿ
ಅವರಜನುಚಥ್ಯಮುನಿ ಪಾವಕ
ಧ್ರುವ ನಹುಷ ಶಶಿಬಿಂದು ಪ್ರಿಯವ್ರತನು ಪ್ರಲ್ಹಾದ ॥
ಕುವಲಯಪರುಕ್ತೇತರಿಂದಲಿ
ಅವರ ರೋಹಿಣಿ ಶ್ಯಾಮಲಾ ಜಾ-
ಹ್ನವೀ ವಿರಾಟ್ಪರ್ಜನ್ಯ ಸಂಜ್ಞಾದೇವಿಯರು ಅಧಮ ॥7॥

ಅನಾಖ್ಯಾತರು, ಸ್ವಾಹಾ, ಸ್ವಧಾ, ಬುಧ, ಉಷಾದೇವಿ, ಪುಷ್ಕರನ ತಾರತಮ್ಯ

ದ್ಯುನದಿಗಿಂತಲಿ ನೀಚರೆನಿಪರು
ಅನಭಿಮಾನಿ ದಿವೌಕಸರು ಕೇ-
ಚನ ಮುನಿಗಳಿಗೆ ಕಡಿಮೆ ಸ್ವಾಹಾದೇವಿಗಧಮ ಬುಧ ॥
ಎನಿಸುವಳುಷಾದೇವಿ ನೀಚಳು
ಶನಿ ಕಡಿಮೆ ಕರ್ಮಾಧಿಪತಿ ಸ-
ದ್ವಿನುತ ಪುಷ್ಕರ ನೀಚನೆನಿಸುವ ಸೂರ್ಯನಂದನಗೆ ॥8॥

16100 ಕೃಷ್ಣನ ಮಡದಿಯರು, ಋಷಿ, ಗಂಧರ್ವ, ಅಪ್ಸರೆಯರು ಸಮಾನರು

ಕೊರತೆಯೆನಿಪರಶೀತಿ ಋಷಿ ಪು-
ಷ್ಕರಗೆ ಊರ್ವಶಿಮುಖ್ಯ ಶತ ಅ-
ಪ್ಸರರು ತುಂಬುರುಮುಖರು ಆಜಾನಜರೆನಿಸುತಿಹರು ॥
ಕರೆಸುವುದು ಅನಲಗಣ ನಾಲ್ವ-
ತ್ತರೆ ಚತುರ್ದಶ ದ್ವ್ಯಷ್ಟಸಾವಿರ
ಹರಿಮಡದಿಯರು ಸಮರೆನಿಸುವರು ಪಿಂತೆ ಪೇಳ್ದರಿಗೆ ॥9॥

ಅನಾಖ್ಯಾತರು, ಅಪ್ಸರೆಯರು, ಗೋಪಿಯರು, ದೇವರ, ನರ ಗಂಧರ್ವರಾಜರ ಗುಣತಾರತಮ್ಯ

ತದವರರನಾಖ್ಯಾತ ಅಪ್ಸರ
ಸುದತಿಯರು ಕೃಷ್ಣಾಂಗಸಂಗಿಗ-
ಳಿದರ ತರುವಾಯದಲಿ ಚಿರಪಿತರುಗಳು ಇವರಿಂದ ॥
ತ್ರಿದಶ ಗಂಧರ್ವಗಣ ಇವರಿಂ-
ದಧಮ ನರಗಂಧರ್ವರಿವರಿಂ-
ದುದಧಿಮೇಖಳಪತಿಗಳಧಮರು ನೂರು ಗುಣದಿಂದ ॥10॥

ರಾಜರಿಗಿಂತ ಮನುಷ್ಯೋತ್ತಮರು ಅಧಮರು

ಪೃಥ್ವಿಪತಿಗಳಿಗಿಂತ ಶತ ಮನು-
ಜೋತ್ತಮರು ಕಡಿಮೆನಿಪರಿವರಿಂ-
ದುತ್ತರೋತ್ತರ ನೂರು ಗುಣದಿಂದಧಿಕರಾದವರ ॥
ನಿತ್ಯದಲಿ ಚಿಂತಿಸುತ ನಮಿಸುತ
ಭೃತ್ಯ ನಾನಹುದೆಂಬ ಭಕ್ತರ
ಚಿತ್ತದಲಿ ನೆಲೆಗೊಂಡು ಕರುಣಿಪರಖಿಳ ಸೌಖ್ಯಗಳ ॥11

ತೃಣಜೀವರು, ನಿತ್ಯಸಂಸಾರಿಗಳು, ತಮೋಯೋಗ್ಯರ ತಾರತಮ್ಯ

ದ್ರುಮಲತಾತೃಣಗುಲ್ಮಜೀವರು
ಕ್ರಮದಿ ನೀಚರು ಇವರಿಗಿಂತಾ-
ಧಮರೆನಿಸುವರು ನಿತ್ಯಬದ್ಧರಿಗಿಂತಲಜ್ಞಾನಿ ॥
ತಮೋಯೋಗ್ಯರು ಭೃತ್ಯರಧಮರು
ಅಮರುಷಾದ್ಯಭಿಮಾನಿ ದೈತ್ಯರು
ನಮುಚಿ ಮೊದಲಾದವರಿಗಿಂತಲಿ ವಿಪ್ರಚಿತಿ ನೀಚ ॥12॥

ಪರಮನೀಚರಾದ ಅಲಕ್ಷ್ಮೀ ಮತ್ತು ಕಲಿಯನ್ನು ಚಿಂತಿಸಬೇಕಾದ ಸಮಯ ಸ್ಥಳ

ಅಲಕುಮಿಯು ತಾ ನೀಚಳೆನಿಪಳು
ಕಲಿ ಪರಮನೀಚತಮನವನಿಂ-
ದುಳಿದ ಪಾಪಿಗಳಿಲ್ಲ ನೋಡಲು ಈ ಜಗತ್ರಯದಿ ॥
ಮಲವಿಸರ್ಜನಕಾಲದಲಿ ಕ-
ತ್ತಲೆಯೊಳಗೆ ಕಶ್ಮಲ ಕುಮಾರ್ಗ
ಸ್ಥಳಗಳಲಿ ಚಿಂತನೆಯ ಮಾಳ್ಪುದು ಬಲ್ಲವರು ನಿತ್ಯ ॥13॥

ಸಾತ್ವಿಕರಲ್ಲಿ ಬ್ರಹ್ಮ, ನಿತ್ಯಬದ್ಧರಲ್ಲಿ ಪುರಂಜನ, ತಾಮಸರಲ್ಲಿ ಕಲಿ ನಿಯಾಮಕರು

ಸತ್ವ ಜೀವರ ಮಾನಿ ಬ್ರಹ್ಮನು
ನಿತ್ಯಬದ್ಧರೊಳಗೆ ಪುರಂಜನ
ದೈತ್ಯಸಮುದಾಯಾಧಿಪತಿ ಕಲಿಯೆನಿಪ ಪವಮಾನ ॥
ನಿತ್ಯದಲಿ ಅವರೊಳು ಕರ್ಮ ಪ್ರ-
ವರ್ತಕನು ತಾನಾಗಿ ಶ್ರೀಪುರು-
ಷೋತ್ತಮನ ಸಂಪ್ರೀತಿಗೋಸುಗ ಮಾಡಿ ಮಾಡಿಸುವ
॥14॥

ತ್ರಿವಿಧರಲ್ಲಿ ಮಾಡುವ ಪ್ರಾಣದೇವರ ತ್ರಿವಿಧ ವ್ಯಾಪಾರ

ಪ್ರಾಣದೇವನು ತ್ರಿವಿಧರೊಳಗೆ ಪ್ರ-
ವೀಣ ತಾನೆಂದೆನಿಸಿ ಅಧಿಕಾ-
ರಾನುಸಾರದಿ ಕರ್ಮಗಳ ತಾ ಮಾಡಿ ಮಾಡಿಸುವ ॥
ಜ್ಞಾನ ಭಕ್ತಿ ಸುರರ್ಗೆ ಮಿಶ್ರ-
ಜ್ಞಾನ ಮಧ್ಯಮ ಜೀವರಿಗೆ ಅ-
ಜ್ಞಾನ ಮೋಹ ದ್ವೇಷಗಳ ದೈತ್ಯರಿಗೆ ಕೊಡುತಿಪ್ಪ ॥15॥

ತಾರತಮ್ಯ ಜ್ಞಾನದಿಂದಲೇ ಮುಕ್ತಿ

ದೇವದೈತ್ಯರ ತಾರತಮ್ಯವ
ನೀ ವಿದಧಿ ತಿಳಿದೆಲ್ಲರೊಳು ಲ-
ಕ್ಷ್ಮೀವರನೆ ಸರ್ವೋತ್ತಮನು ಎಂದರಿದು ನಿತ್ಯದಲಿ ॥
ಸೇವಿಸುವ ಭಕ್ತರಿಗೊಲಿದು ಸುಖ-
ವೀವ ಸರ್ವತ್ರದಲಿ ಸುಖಮಯ
ಶ್ರೀ ವಿರಿಂಚಾದ್ಯಮರನುತ ಜಗನ್ನಾಥವಿಟ್ಠಲನು ॥16॥

॥ ಇಲ್ಲಿಗೆ ಇಪ್ಪತ್ತೊಂಭತ್ತನೆಯ ಅಣುತಾರತಮ್ಯಸಂಧಿ
ಮುಗಿಯಿತು ॥

ದೈತ್ಯತಾರತಮ್ಯಸಂಧಿ-30

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಸಂಧಿ ಸೂಚನೆ

ಶ್ರೀಶ ಮುಕ್ತಾಮುಕ್ತ ಸುರವರ
ವಾಸುದೇವಗೆ ಭಕ್ತಿಯಲಿ ಕಮ -
ಲಾಸನನು ಪೇಳಿದನು ದೈತ್ಯಸ್ವಭಾವಗುಣಗಳನು

ದೈತ್ಯರು ಯಾರು ? ಅವರಿಗೆ ಬ್ರಹ್ಮದೇವರು ನೀಡುವ ಶಿಕ್ಷೆ

ಎನಗೆ ನಿನ್ನಲಿ ಭಕುತಿಜ್ಞಾನಗ-
ಳೆನಿತಿಹವು ಪ್ರಾಣನಲಿ ತಿಳಿಯದೆ
ಹನುಮದಾದ್ಯವತಾರಗಳ ಭೇದಗಳ ಪೇಳುವವ ॥
ದನುಜ ಘೋರಾಂಧಂತಮಸಿಗ್ಯೋ-
ಗ್ಯನು ನ ಸಂಶಯ ನಿನ್ನ ಬೈವರ
ಕೊನೆಯ ನಾಲಿಗೆ ಪಿಡಿದು ಛೇದಿಪೆನೆಂದನಬ್ಜಭವ ॥1॥

ದೇವರ ಬಗ್ಗೆ ದೈತ್ಯರ ಚಿಂತನೆ

ಜ್ಞಾನ ಬಲ ಸುಖ ಪೂರ್ಣ ವ್ಯಾಪ್ತಗೆ
ಹೀನಗುಣನೆಂಬುವನು ಈಶ್ವರ-
ನಾನೆಯೆಂಬುವ ಸಚ್ಚಿದಾನಂದಾತ್ಮಗುತ್ಪತ್ತಿ ॥
ಶ್ರೀನಿತಂಬಿನಿಗೀಶಗೆ ವಿಯೋ-
ಗಾನುಚಿಂತನೆ ಭೇದಭೇದವಿ-
ಹೀನ ದೇಹಗೆ ಶಸ್ತ್ರಗಳ ಭಯ ಪೇಳುವವ ದೈತ್ಯ ॥2॥

ದೇವರ ಮೂಲ ಮತ್ತು ಅವತಾರಗಳಲ್ಲಿ ಭೇದ ಪೇಳುವ ತಾಮಸರು

ಲೇಶಭಯಶೋಕಾದಿಶೂನ್ಯಗೆ
ಕ್ಲೇಶಗಳ ಪೇಳುವವ ರಾಮ
ವ್ಯಾಸರೂಪಂಗಳಿಗೆ ಋಷಿ ವಿಪ್ರತ್ವ ಪೇಳುವವ ॥
ದಾಶರಥೀ ಕೃಷ್ಣಾದಿರೂಪಕೆ
ಕೇಶಖಂಡನ ಪೇಳ್ವ ಮಕ್ಕಳಿ-
ಗೋಸುಗ ಶಿವಾರ್ಚನೆಯ ಮಾಡಿದನೆಂಬುವನೆ ದೈತ್ಯ॥3॥

ರಾಮನಿಗೆ ಪಾಪಲೇಪವನ್ನು ಅವತಾರಗಳಲ್ಲಿ ಭೇದವನ್ನು ಅಂತರ್ಯಾಮಿ ಅಧಿಷ್ಠಾನಗಳಿಗೆ ಐಕ್ಯವನ್ನು ಚಿಂತಿಸುವವನೇ ದೈತ್ಯ

ಪಾಪಪರಿಹಾರಾರ್ಥ ರಾಮನು
ಮಾಪತಿಯ ನಿರ್ಮಿಸಿದ ಭಗವ-
ದ್ರೂಪ ರೂಪಕೆ ಭೇದ ಚಿಂತನೆ ಮಾಳ್ಪ ಮಾನವನು ॥
ಆಪಗಳು ಸತ್ತೀರ್ಥ ಗುರು ಮಾ-
ತಾ ಪಿತೃ ಪ್ರಭೂ ಪ್ರತಿಮೆ ಭೂತದ-
ಯಾಪರರ ಕಂಡವರೆ ದೇವರು ಎಂಬುವನೆ ದೈತ್ಯ ॥4॥

ಪ್ರತಿಮೆಯೇ ದೇವರು ಎನ್ನುವನು, ಅನ್ಯದೇವತೆಗಳಿಗೆ ಸಾಮ್ಯ ಹೇಳುವನು ಕೂಡ ದೈತ್ಯನು

ಸುಂದರ ಸ್ವಯಂವ್ಯಕ್ತವು ಚಿದಾ-
ನಂದ ರೂಪಗಳೆಂಬುವನು ನರ-
ರಿಂದ ನಿರ್ಮಿತ ಈಶ್ವರಗೆ ಅಭಿನಮಿಸುತಿಹ ನರನು ॥
ಕಂದುಗೊರಳ ದಿವಾಕರನು ಹರಿ
ಒಂದೆ ಸೂರ್ಯ ಸುರೋತ್ತಮ ಜಗ-
ದ್ವಂದ್ಯನೆಂಬುವ ವಿಷ್ಣುದೂಷಣೆ ಮಾಡುವವ ದೈತ್ಯ ॥5॥

ಅಶ್ವತ್ಥ, ತುಳಸೀ, ಶಿವಲಿಂಗಗಳಲ್ಲಿ ದೇವರ ಶಾಲಿಗ್ರಾಮವಿಟ್ಟು ವಂದಿಸಬೇಕು

ನೇಮದಿಂದಶ್ವತ್ಥ ತುಳಸೀ
ಸೋಮಧರನಲಿ ವಿಮಲ ಶಾಲ-
ಗ್ರಾಮಗಳನಿಟ್ಟಭಿನಮಿಪ ನರ ಮುಕ್ತಿಯೋಗ್ಯ ಸದಾ ॥
ಭೂಮಿಯೊಳು ಧರ್ಮಾರ್ಥಮುಕ್ತಿಸು-
ಕಾಮಪೇಕ್ಷೆಗಳಿಂದ ಶಾಲ-
ಗ್ರಾಮಗಳ ವ್ಯತಿರಿಕ್ತ ವಂದಿಸೆ ದುಃಖ ಐದುವನು ॥6॥

ದೇವತೆಗಳನ್ನು ಅಂತರ್ಯಾಮಿವಿವಕ್ಷಯಾ ಪೂಜಿಸಬೇಕು

ವಿತತಮಹಿಮನ ಬಿಟ್ಟು ಸುರರಿಗೆ
ಪೃಥಗ್ವಂದನೆ ಮಾಳ್ಪ ಮಾನವ-
ದಿತಿಜನೇ ಸರಿ ಹರಿಯು ತಾ ಸಂಸ್ಥಿತನೆನಿಸನಲ್ಲಿ ॥
ಚತುರಮುಖ ಮೊದಲಾದಖಿಳ ದೇ-
ವತೆಗಳೊಳಗಿಹನೆಂದು ಲಕ್ಷ್ಮೀ-
ಪತಿಗೆ ವಂದಿಸೆ ಒಂದರೆಕ್ಷಣ ಬಿಟ್ಟಗಲನವರ ॥7॥

ಲಿಂಗ, ತುಳಸೀ, ಅಶ್ವತ್ಥ, ಗೋವುಗಳನ್ನು ಪೂಜಿಸಬೇಕಾದರೆ ಇರುವ ನಿಯಮಗಳು

ಶೈವಶೂದ್ರಕರಾರ್ಚಿತ ಮಹಾ-
ದೇವ ವಾಯು ಹರಿ ಪ್ರತಿಮೆ ವೃಂ-
ದಾವನದಿ ಮಾಸದ್ವಯದೊಳಿಹ ತುಳಸಿ ಅಪ್ರಸವ ॥
ಗೋ ವಿವಾಹವಿವರ್ಜಿತಾಶ್ವ-
ತ್ಥಾ ವಿಟಪಿಗಳ ಭಕ್ತಿಪೂರ್ವಕ-
ಸೇವಿಸುವ ನರ ದೈತ್ಯ ಶಾಶ್ವತ ದುಃಖ ಐದುವನು ॥8॥

ಮನುಷ್ಯೋತ್ತಮರ ತನಕ ಮುಕ್ತಿಯೋಗ್ಯರು, ಕಲಿಗೆ 100 ಕಲ್ಪಸಾಧನೆ, ನೀಚರ ತಾರತಮ್ಯ

ಕಮಲಸಂಭವಮುಖ್ಯ ಮನುಜೋ-
ತ್ತಮರ ಪರಿಯಂತರದಿ ಮುಕ್ತರು
ಸಮ ಶತಾಯುಷ್ಯವುಳ್ಳವನು ಕಲಿ ಬ್ರಹ್ಮನೋಪಾಧಿ ॥
ಕ್ರಮದಿ ನೀಚರು ದೈತ್ಯರು ನರಾ-
ಧಮರ ಪಿಡಿದು ಕುಲಕ್ಷ್ಮೀ ಕಲಿಯನು
ಪರಮರೆನಿಸುವವರಸುರರೊಳು ದ್ವೇಷಾದಿಗುಣದಿಂದ॥9॥

ಕಲ್ಯಾದಿ ದೈತ್ಯರ ಮಾರ್ಗ ಅಂಧಂತಮಸ್ಸಿಗೆ ಹಾಗೂ ಅವರ ಲಿಂಗದೇಹ ಭಂಗ ವಾಯುದೇವರ ಗಧಾಪ್ರಹಾರದಿಂದ

ವನಜಸಂಭವನಬ್ದ ಶತ ಒ-
ಬ್ಬನೆ ಮಹಾಕಲಿಶಬ್ದವಾಚ್ಯನು
ದಿನದಿನಗಳಲಿ ಬೀಳ್ವರಂಧಂತಮದಿ ಕಲಿಮಾರ್ಗ ॥
ದನುಜರೆಲ್ಲ ಪ್ರತೀಕ್ಷಿಸುತ ಬ್ರ-
ಹ್ಮನ ಶತಾಬ್ದಾಂತದಲಿ ಲಿಂಗವು
ಅನಿಲನ ಗದಾಪ್ರಹಾರದಿಂದಲಿ ಭಂಗವೈದುವುದು ॥10॥

ದೈತ್ಯರು ದುಃಖಸ್ವರೂಪರು ಹರಿದ್ವೇಷಿಗಳಲ್ಲಿ ತಾರತಮ್ಯ

ಮಾರುತನ ಗದೆಯಿಂದ ಲಿಂಗಶ-
ರೀರ ಪೋದಾನಂತರ ತಮೋ-
ದ್ವಾರವೈದಿ ಸ್ವರೂಪದುಃಖಗಳನುಭವಿಸುತಿಹರು ॥
ವೈರ ಹರಿಭಕ್ತರಲಿ ಹರಿಯಲಿ
ತಾರತಮ್ಯದಲಿರುತಿಹುದು ಸಂ-
ಸಾರದಲಿ ತಮಸ್ಸಿನಲಿ ಅತ್ಯಧಿಕ ಕಲಿಯಲ್ಲಿ ॥11॥

ಕಲಿಯ ಜ್ಞಾನ, ಸ್ವರೂಪ ಹಾಗೂ ಕಾಲನೇಮಿಯವರೆಗಿನ ತಾರತಮ್ಯ

ಜ್ಞಾನವೆಂಬುದು ಮಿಥ್ಯವಸಮೀ-
ಚೀನ ದುಃಖತರಂಗವೆ ಸಮೀ-
ಚೀನಬುದ್ಧಿ ನಿರಂತರದಿ ಕಲಿಗಿಹುದು ದೈತ್ಯರೊಳು ॥
ಹೀನಳೆನಿಪಳು ಶತಗುಣದಿ ಕಲಿ-
ಮಾನಿನಿಗೆ ಶತ ವಿಪ್ರಚಿತ್ತಿಗೆ
ಊನಶತಗುಣ ಕಾಲನೇಮಿಯೆ ಕಂಸನೆನಿಸಿದನು ॥12॥

ಮಧುಕೈಟಭರು, ನರಕಾಸುರ, ವಿಪ್ರಚಿತ್ತಿ ಹಿರಣ್ಯಕಶಿಪುವಿನ ತಾರತಮ್ಯ

ಕಾಲನೇಮಿಗೆ ಪಂಚಗುಣದಿಂ-
ಕೀಳು ಮಧುಕೈಟಭರು ಜನ್ಮವ
ತಾಳಿ ಇಳೆಯೊಳು ಹಂಸಡಿಭಿಕಾಹ್ವಯದಿ ಕರೆಸಿದರು ॥
ಐಳನಾಮಕ ವಿಪ್ರಚಿತ್ತಿ ಸ-
ಮಾಳುವೆನಿಪ ಹಿರಣ್ಯಕಶಿಪು
ಶೂಲಪಾಣಿಯ ಭಕ್ತ ನರಕಗೆ ಶತಗುಣಾಧಮನು ॥13॥

ಹಿರಣ್ಯಕಶಿಪು, ಮಣಿಮಂತ, ಬಕ, ತಾರಕಾಸುರ, ಶಂಬರರ ತಾರತಮ್ಯ

ಗುಣಗಳ ತ್ರಯ ನೀಚನೆನಿಸುವ
ಕನಕ ಕಶಿಪುಗೆ ಹಾಟಕಾಂಬಕ
ಎಣೆಯೆನಿಪ ಮಣಿಮಂತಗಿಂತಲಿ ಕಿಂಚಿದೂನ ಬಕ ||
ದನುಜವರ ತಾರಕನು ವಿಂಶತಿ-
ಗುಣದಿ ನೀಚನು ಲೋಕಕಂಟಕ-
ನೆನಿಪ ಶಂಬರ ತಾರಾಕಾಸುರಗಧಮ ಷಡ್ಗುಣದಿ ||14||

ಶಂಬರ, ಸಾಲ್ವರ ತಾರತಮ್ಯ

ಸರಿಯೆನಿಸುವನು ಸಾಲ್ವನಿಗೆ ಸಂ-
ಕರನು ಅಧಮನು ದಶಗುಣದಿ ಶಂ-
ಬರಗೆ ಷಡ್ಗುಣ ನೀಚನೆನಿಪ ಹಿಡಿಂಬಕಾ ಬಾಣಾ- ||
ಸುರನು ದ್ವಾಪರ ಕೀಚಕನು ನಾ-
ಲ್ವರು ಸಮರು ದ್ವಾಪರನೆ ಶಕುನಿ
ಕರೆಸಿದನು ಕೌರವಗೆ ಸೋದರಮಾವನಹುದೆಂದು ||15||

ನಮುಚಿ, ಇಲ್ವಲ, ಪಾಕ, ವಾತಾಪಿ, ಧೇನುಕ, ಕೇಶಿ, ತೃಣಾವರ್ತ ತಾರತಮ್ಯ

ನಮುಚಿ ಇಲ್ವಲ ಪಾಕನಾಮಕ
ಸಮರು ಬಾಣಾದ್ಯರಿಗೆ ದಶಗುಣ-
ನಮುಚಿ ನೀಚನು ನೂರು ಗುಣದಿಂದಧಮ ವಾತಾಪಿ ॥
ಕುಮತಿ ಧೇನುಕ ನೂರು ಗುಣದಿಂ-
ದಮರರಿಪು ವಾತಾಪಿಗಧಮನು-
ವಮನ ಧೇನುಕನಿಂದಲರ್ಧಗುಣಾಧಮನು ಕೇಶಿ ॥16॥

ತೃಣಾವರ್ತ, ಲವಣಾಸುರ, ಅರಿಷ್ಟಾಸುರ, ಹಂಸ ಡಿಬಿಕ, ವೇನ, ಪೌಂಡ್ರಕನ ತಾರತಮ್ಯ

ಮತ್ತೆ ಕೇಶೀನಾಮಕ ತೃಣಾ-
ವರ್ತ ಸಮ ಲವಣಾಸುರನು ಒಂ-
ಧತ್ತು ನೀಚಾರಿಷ್ಟನಾಮಕ ಪಂಚಗುಣದಿಂದ ॥
ದೈತ್ಯಸತ್ತಮ ಹಂಸ ಡಿಭಿಕ ಪ್ರ-
ಮತ್ತವೇನನು ಪೌಂಡ್ರಕನು ಎಂ-
ಭತ್ತು ಗುಣದಿಂದಧಮ ಮೂವರು ಲವಣನಾಮಕಗೆ
॥17॥

ದುಃಶಾಸನ, ವೃಷಸೇನ, ಜರಾಸಂಧ, ಕಂಸ, ಕೂಪವಿಕರ್ಣ, ರುಗ್ಮೀ ಮಹಾಸುರ, ಶತಧನ್ವಿ, ಕಿರ್ಮೀರನ ತಾರತಮ್ಯ

ಈಶನೇ ನಾನೆಂಬ ಖಳ ದು-
ಶ್ಯಾಸನಾ ವೃಷಸೇನ ದೈತ್ಯಾ-
ಗ್ರೇಸರ ಜರಾಸಂಧ ಸಮ ಪಾಪಿಗಳೊಳತ್ಯಧಿಕ ॥
ಕಂಸ ಕೂಪವಿಕರ್ಣ ಸರಿ ರು-
ಗ್ಮೀ ಶತಾಧಮ ರುಗ್ಮಿಗಿಂತ ಮ-
ಹಾಸುರನು ಶತಧನ್ವಿ ಕಿರ್ಮೀರರರು ಶತಾಧಮರು ॥18॥

ಇಂದ್ರಿಯಾಭಿಮಾನಿದೈತ್ಯರ ತಾರತಮ್ಯ

ಮದಿರಪಾನೀ ದೈತ್ಯಗಣದೊಳ-
ಗಧಮರೆನಿಪರು ಕಾಲಕೇಯರು
ಅಧಿಕರಿಗೆ ಸಮರಹರು ದೇವಾವೇಶ ಬಲದಿಂದ ॥
ವದನ ಪಾಣಿ ಪಾದ ಶ್ರೋತ್ರಿಯ-
ಗುಧ ಉಪಸ್ಥ ಘ್ರಾಣ ತ್ವಗ್ರಸನ-
ಕಧಿಪ ದೈತ್ಯರು ನೀಚರೆನಿಪರು ಕಾಲಕೇಯರಿಗೆ ॥19॥

ಹೀನಕರ್ಮಗಳ ಮಾಡಿಸುವ ಕಲ್ಯಾದಿ ದೈತ್ಯರು ಹಾಗೂ ಪರಶುಕ್ಲತ್ರಯರ ಸ್ವರೂಪ ವರ್ಣನೆ

ಜ್ಞಾನ ಕರ್ಮೇಂದ್ರಿಯಗಳಿಗಭಿ-
ಮಾನಿ ಕಲ್ಯಾದ್ಯಖಿಳ ದಿತಿಜರು
ಹೀನಕರ್ಮವ ಮಾಡಿ ಮಾಡಿಸುತಿಹರು ಸರ್ವರೊಳು ॥
ವಾಣಿ ಭಾರತಿ ಕಮಲಭವ ಪವ-
ಮಾನರಿವರಬ್ಜನ್ನ ಭಕ್ತರು
ಪ್ರಾಣ ಅಸುರಾವೇಶರಹಿತರು ಅಖಿಣಾಶ್ಮಸಮ ॥20॥

ರುದ್ರಾದಿ ದೇವತೆಗಳು ಮಾತ್ರ ಕಲ್ಯಾವೇಶಯುತರು ಪರಶುಕ್ಲತ್ರಯರಿಗೆ ಎಂದೂ ಸದಾ ಕಲ್ಯಾವೇಶವಿಲ್ಲ

ಹುತವಹಾಕ್ಷಾದ್ಯಮರರೆಲ್ಲರು
ಯುತರು ಕಲ್ಯಾವೇಶ ವಿಧೀ ಮಾ-
ರುತ ಸರಸ್ವತಿ ಭಾರತೀಯರವತಾರದೊಳಗಿಲ್ಲ ॥
ಕೃತ ಪುಟಾಂಜಲಿಯಿಂದ ತನ್ನಯ
ಪಿತನ ಸಮ್ಮುಖದಲ್ಲಿ ನಿಂದಾ
ನತಿಸಿ ಬಿನ್ನೈಸಿದನು ತನ್ನೊಳು ಕೃಪೆಯ ಮಾಡೆಂದು
॥21॥

ಭಗವದ್ವೇಷಿಗಳ ತಾರತಮ್ಯ ದೂಷಣೆಯು ಭೂಷಣವೆನಿಸುವುದು ಸಂಶಯ ಸಲ್ಲ !

ದ್ವೇಷಿದೈತ್ಯರ ತಾರತಮ್ಯವು
ದೂಷಣೆಯು ಭೂಷಣಗಳೆನ್ನದೆ
ದೋಷವೆಂಬುವ ದ್ವೇಷಿ ನಿಶ್ಚಯ ಇವರ ನೋಡಲ್ಕೆ ॥
ಕ್ಲೇಶಗಳನೈದುವನು ಬಹುವಿಧ
ಸಂಶಯವು ಪಡಸಲ್ಲ ವೇದ-
ವ್ಯಾಸ ಗರುಡಪುರಾಣದಲಿ ಪೇಳಿದನು ಋಷಿಗಳಿಗೆ ॥22॥

ದೈತ್ಯರ ನಿಂದಿಸುವವನಿಗೆ ಯಮದೂತರ ಭಯವಿಲ್ಲ

ಜಾಳಿ ನೆಗ್ಗಿಲು ಕ್ಷುದ್ರಶಿಲೆ ಬರಿ-
ಗಾಲ ಪುರುಷನ ಬಾಧಿಪುವು ಚ-
ಮ್ಮಾಳಿಗೆಯ ಮೆಟ್ಟಿದವಗುಂಟೆ ಕಂಟಕಗಳ ಭಯ ॥
ಚೇಳು ಸರ್ಪವ ಕೊಂದ ವಾರ್ತೆಯ
ಕೇಳಿ ಮೋದಿಪಗಿಲ್ಲವಘ ಯಮ-
ನಾಳುಗಳ ಭಯವಿಲ್ಲ ದೈತ್ಯರ ನಿಂದಿಸುವ ನರಗೆ ॥23॥

ದೇವ ದೈತ್ಯ ಮಿಶ್ರಜೀವರಿಗೆ ಯೋಗ್ಯತಾನುಸಾರ ಫಲವೀವ

ಪುಣ್ಯಕರ್ಮವ ಪುಷ್ಕರಾದಿ ಹಿ-
ರಣ್ಯಗರ್ಭಾಂತರ್ಗತ ಬ್ರ-
ಹ್ಮಣ್ಯದೇವನಿಗರ್ಪಿಸುತಲಿರು ಪುಣ್ಯಪಾಪಗಳ
ಜನ್ಮದುಃಖವ ಕಲಿಮುಖಾದ್ಯರಿ-
ಗುಣ್ಣಲೀವನು ಸಕಲಲೋಕಶ-
ರಣ್ಯ ಶಾಶ್ವತ ಮಿಶ್ರಜನರಿಗೆ ಮಿಶ್ರಫಲವೀವ ॥24॥

ಗುಣಿ ಗುಣಾತ್ಮಕನಾಗಿ ತ್ರಿವಿಧ ಜೀವರಿಗೆ ತ್ರಿವಿಧ ಫಲ ಕೊಡುವ

ತ್ರಿವಿಧ ಗುಣಗಳ ಮಾನಿ ಶ್ರೀ ಭಾ-
ರ್ಗವಿರಮಣ ಗುಣಿಗಣಗಳೊಳಗವ
ರವರ ಯೋಗ್ಯತೆ ಕರ್ಮಗಳನನುಸರಿಸಿ ಕರ್ಮಫಲ ॥
ಸ್ವವಶರಾದಮರಾಸುರರ ಗಣ-
ಕವಧಿಯಿಲ್ಲದೆ ಕೊಡುವ ದೇವ-
ಪ್ರವರವರ ಜಗನ್ನಾಥವಿಟ್ಠಲ ವಿಶ್ವವ್ಯಾಪಕನು ॥25॥

॥ ಇಲ್ಲಿಗೆ ಮೂವತ್ತನೆಯ ದೈತ್ಯತಾರತಮ್ಯಸಂಧಿ
ಮುಗಿಯಿತು ॥

ನೈವೇದ್ಯಸಮರ್ಪಣಸಂಧಿ-31

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ||ಪ||

ಭಕ್ತರನ್ನು ಮಕ್ಕಳಂತೆ ಪೊರೆವ ಸ್ವರಮಣನಾದ ಶ್ರೀಹರಿ

ಲೆಕ್ಕಿಸದೆ ಲಕುಮಿಯನು ಬೊಮ್ಮನ
ಪೊಕ್ಕುಳಿಂದಲಿ ಪಡದೆ ಪೊಸ ಪೊಂ-
ಬಕ್ಕಿದೇರನು ಪಡೆದವಯವಗಳಿಂದ ದಿವಿಜರನು ||
ಮಕ್ಕಳಂದದಿ ಪೊರೆವ ಸರ್ವದ-
ರಕ್ಕಸಾಂತಕ ರಣದೊಳಗೆ ನಿ-
ರ್ದುಃಖ ಸುಖಮಯ ಕಾಯ್ದ ಪಾರ್ಥನ ಸೂತನೆಂದೆನಿಸಿ
||1||

ಮಧ್ವರ ಅಂತಃಕರಣದಲ್ಲಿ ರಾಜಿಸುವ ಶೇಷಶಾಯಿಯ ಮಹಿಮೆಯು ಅತ್ಯದ್ಭುತ !!

ದೋಷಗಂಧವಿದೂರ ನಾನಾ-
ವೇಷಧಾರಿ ವಿಚಿತ್ರಕರ್ಮ ಮ-
ನೀಷಿ ಮಾಯಾರಮಣ ಮಧ್ವಾಂತಃಕರಣರೂಢ ॥
ಶೇಷಶಾಯಿ ಶರಣ್ಯ ಕೌಸ್ತುಭ
ಭೂಷಣಸುಕಂಧರ ಸದಾ ಸಂ-
ತೋಷ ಬಲ ಸೌಂದರ್ಯಸಾರನ ಮಹಿಮೆಗೇನೆಂಬೆ
॥2॥

ಸ್ಥೂಲದೇಹದಲ್ಲಿ ಸಾಶನ ರೂಪ, ಸ್ವರೂಪ ದೇಹದಲ್ಲಿ ಅನಶನ ರೂಪ

ಸಾಶನಾನಶನೇ ಅಭೀ ಎಂ-
ಬೀ ಶ್ರುತಿಪ್ರತಿಪಾದ್ಯನೆನಿಸುವ
ಕೇಶವನ ರೂಪದ್ವಯವ ಚಿದ್ದೇಹದೊಳಹೊರಗೆ ॥
ಬೇಸರದೆ ಸದ್ಭಕ್ತಿಯಿಂದ ಉ-
ಪಾಸನೆಯ ಗೈಯುತ್ತ ಬುಧರು ಹು-
ತಾಶನನವೋಲಿಪ್ಪರೆಂದನವರತ ತುತಿಸುತಿರು ॥3॥

ಅನಂತಕಲ್ಯಾಣಗುಣಪೂರ್ಣನೆ ನನ್ನನ್ನು ರಕ್ಷಿಸು

ಸಕಲಸದ್ಗುಣಪೂರ್ಣ ಜನ್ಮಾ-
ದ್ಯಖಿಳದೋಷವಿದೂರ ಪ್ರಕಟಾ
ಪ್ರಕಟ ಸದ್ವ್ಯಾಪಾರಿ ಗತಸಂಸಾರಿ ಕಂಸಾರಿ ॥
ನಕುಲ ನಾನಾರೂಪ ನಿಯಾ-
ಮಕ ನಿಯಮ್ಯ ನಿರಾಮಯ ರವಿ
ಪ್ರಖರಸನ್ನಿಭ ಪ್ರಭು ಸದಾ ಮಾಂ ಪಾಹಿ ಪರಮಾಪ್ತ
॥4॥

ತತ್ತದಾಕಾರನಾದ ಅಂತರ್ಯಾಮಿಯ ವ್ಯಾಪಾರ

ಚೇತನಾಚೇತನ ಜಗತ್ತಿನೊ-
ಳಾತತನು ತಾನಾಗಿ ಲಕುಮೀ-
ನಾಥ ಸರ್ವರೊಳಿಪ್ಪ ತತ್ತದ್ರೂಪಗಳ ಧರಿಸಿ ॥
ಜಾತಿಕಾರನ ತೆರದಿ ಎಲ್ಲರ
ಮಾತಿನೊಳಗಿದ್ದಖಿಳಕರ್ಮವ
ತಾ ತಿಳಿಸಿಕೊಳ್ಳದಲೆ ಮಾಡಿಸಿ ನೋಡಿ ನಗುತಿಪ್ಪ ॥5॥

ಭಯರಹಿತನೆ ! ವಿಜ್ಞಾನದಾಯಕನೆ ! ಮಾತರಿಶ್ವಪ್ರಿಯನೆ ! ಸಲಹೆಮ್ಮನು

ವೀತಭಯ ವಿಜ್ಞಾನದಾಯಕ-
ಭೂತಭವ್ಯಭವತ್ಪ್ರಭು ಖಳಾ-
ರಾತಿ ಖಗವರವಹನ ಕಮಲಾಕಾಂತ ನಿಶ್ಚಿಂತ ॥
ಮಾತರಿಶ್ವಪ್ರಿಯ ಪುರಾತನ
ಪೂತನಾಪ್ರಾಣಾಪಹಾರಿ ವಿ-
ಧಾತೃಜನಕ ವಿಪಶ್ಚಿತರ ಪ್ರಿಯ ಸಲಹು ಸಲಹೆಮ್ಮ ॥6॥

ಸೃಷ್ಟ್ಯಾದ್ಯಷ್ಟಕರ್ತೃವೆನಿಸುವ ನನ್ನ ಕುಲ ಸ್ವಾಮಿಯೇ ನಿನಗೆ ನಮಸ್ಕಾರಗಳು

ದುಷ್ಟಜನಸಂಹಾರಿ ಸರ್ವೋ-
ತ್ಕೃಷ್ಟ ಮಹಿಮ ಸಮೀರನುತ ಸಕ-
ಲೇಷ್ಟದಾಯಕ ಸ್ವರತ ಸುಖಮಯ ಮಮ ಕುಲಸ್ವಾಮಿ ॥
ಹೃಷ್ಟ ಪುಷ್ಟ ಕನಿಷ್ಠ ಸೃಷ್ಟ್ಯಾ-
ದ್ಯಷ್ಟಕರ್ತೃ ಕರೀಂದ್ರವರದ ಯ-
ಥೇಷ್ಟದನು ಉನ್ನತ ಸುಕರ್ಮಾ ನಮಿಪೆನನವರತ ॥7॥

ಏಕಮೇವಾದ್ವಿತೀಯರೂಪನಾದ
ಸಕಲ ದೇವತೆಗಳಿಂದ ಸ್ತುತ್ಯನಾದ
ದೇವನೇ ಎಮ್ಮನು ಪಾಲಿಸು

ಪಾಕಶಾಸನ ಪೂಜ್ಯಚರಣ ಪಿ-
ನಾಕಿಸನ್ನುತಮಹಿಮ ಸೀತಾ-
ಶೋಕನಾಶನ ಸುಲಭ ಸುಮುಖ ಸುವರ್ಣವರ್ಣನಿಭ ॥
ಮಾಕಳತ್ರ ಮನೀಷಿ ಮಧುರಿಪು-
ಏಖಮೇವಾದ್ವಿತೀಯರೂಪ ಪ್ರ-
ತೀಕ ದೇವಗಣಾಂತರಾತ್ಮಕ ಪಾಲಿಸುವುದೆಮ್ಮ ॥8॥

ವಿಶ್ವ ತೈಜಸ ಪ್ರಾಜ್ಞನ ಸ್ತೋತ್ರ

ಅಪ್ರಮೇಯಾನಂತ ಸ್ವರೂಪ ಸ-
ದಾ ಪ್ರಸನ್ನಮುಖಾಬ್ಜ ಮುಕ್ತಿಸು-
ಖಪ್ರದಾಯಕ ಸುಮನಸಾರಾಧಿತ ಪದಾಂಭೋಜ ॥
ಸ್ವಪ್ರಕಾಶ ಸ್ವತಂತ್ರ ಸರ್ವಗ-
ಕ್ಷಿಪ್ರಫಲದಾಯಕ ಕ್ಷಿತೀಶ ಯ-
ದುಪ್ರವೀರ ವಿತರ್ಕ್ಯ ವಿಶ್ವ ಸುತೈಜಸ ಪ್ರಾಜ್ಞ ॥9॥

ಗಾಳಿಯನ್ನನುಸರಿಸಿ ಮೇಘ ಚಲಿಸುವಂತೆ, ಮುಕ್ತಿದಾಯಕನಾದ ಶ್ರೀಹರಿಯನನ್ನುಸರಿಸಿ ಲಕ್ಷ್ಮ್ಯಾದಿ ಸಕಲ ದೇವತೆಗಳೂ ಚಲಿಸುವರು

ಗಾಳಿ ನಡೆವಂದದಲಿ ನೀಲಘ-
ನಾಳಿ ವರ್ತಿಸುವಂತೆ ಬ್ರಹ್ಮತ್ರಿ-
ಶೂಳಧರ ಶಕ್ರಾರ್ಕ ಮೊದಲಾದಖಿಳ ದೇವಗಣ ॥
ಕಾಲಕರ್ಮ ಗುಣಾಭಿಮಾನಿ ಮ-
ಹಾಲಕುಮಿ ಅನುಸರಿಸಿ ನಡೆವಳು
ಮೂಲಕಾರಣ ಮುಕ್ತಿದಾಯಕ ಹರಿಯೆನಿಸಿಕೊಂಬ॥10॥

"ಜೀವರಲ್ಲಿ ಜೋಡುಕರ್ಮಗಳ ಮಾಡಿಸಿ ಫಲವೀವವನು ಶ್ರೀಹರಿ" ಎಂದು ಭಜಿಸಿ ಭವಾಬ್ಧಿ ದಾಟುವ ಜ್ಞಾನಿಗಳು

ಮೋಡ ಕೈಬೀಸಣಿಗೆಯಿಂದಲಿ
ಓಡಿಸುವೆನೆಂಬನ ಪ್ರಯತ್ನವು
ಕೂಡುವುದೆ ಕಲ್ಪಾಂತಕಾದರು ಲಕುಮಿವಲ್ಲಭನು ॥
ಜೋಡುಕರ್ಮವ ಜೀವರೊಳು ತಾ-
ಮಾಡಿ ಮಾಡಿಸಿ ಫಲಗಳುಣಿಸುವ
ಪ್ರೌಢರಾದವರಿವನ ಭಜಿಸಿ ಭವಾಬ್ಧಿ ದಾಟುವರು ॥11॥

ಆಕಾಶದಂತೆ ವ್ಯಾಪ್ತನಾದ ಹರಿ ತನ್ನವರ ಸಲಹುವನು

ಕ್ಲೇಶ ಮೋಹಾಜ್ಞಾನ ದೋಷ ವಿ-
ನಾಶಕ ವಿರಿಂಚಾಂಡದೊಳಗಾ-
ಕಾಶದೋಪಾಧಿಯಲಿ ತುಂಬಿಹನೆಲ್ಲ ಕಾಲದಲಿ ॥
ಘಾಸಿಗೊಳಿಸದೆ ತನ್ನವರನಾ-
ಯಾಸವಿಲ್ಲದೆ ಸಲಹುವನು ಕರು-
ಣಾಸಮುದ್ರ ಪ್ರಸನ್ನವದನಾಂಭೋಜ ವೈರಾಜ ॥12॥

ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ನೋಡಿ ಸುಖಿಸುವಂತೆ, ಜ್ಞಾನಿಗಳು ಎಲ್ಲೆಡೆ ಶ್ರೀಹರಿಯೆ ನೋಡಿ ಸುಖಿಸುವರು

ಕನ್ನಡಿಯ ಕೈಪಿಡಿದು ನೋಳ್ಪನ
ಕಣ್ಣುಗಳು ಕಂಡಲ್ಲಿ ಎರಗದೆ
ತನ್ನವೊಳ್ ಪ್ರತಿಬಿಂಬ ಕಾಂಬುವ ದರ್ಪಣವ ಬಿಟ್ಟು ॥
ಧನ್ಯರಿಳೆಯೊಳಗೆಲ್ಲಕಡೆಯಲಿ
ನಿನ್ನ ರೂಪವ ನೋಡಿ ಸುಖಿಸುತ
ಸನ್ನುತಿಸುತಾನಂದವಾರಿಧಿಯೊಳಗೆ ಮುಳುಗಿಹರು ॥13॥

ಅನ್ನದಲ್ಲಿ ಚಂದ್ರ, ಕೇಶವ, ಪರಮಾನ್ನದಲ್ಲಿ ಭಾರತಿ ನಾರಾಯಣ, ಭಕ್ಷ್ಯದಲ್ಲಿ ಸೂರ್ಯ ಮಾಧವ, ಘೃತದಲ್ಲಿ ಲಕ್ಷ್ಮೀ ಗೋವಿಂದ

ಅನ್ನಮಾನಿ ಶಶಾಂಕನೊಳು ಕಾ-
ರುಣ್ಯಸಾಗರ ಕೇಶವನು ಪರ-
ಮಾನ್ನದೊಳು ಭಾರತಿಯು ನಾರಾಯಣನು ಭಕ್ಷ್ಯದೊಳು ॥
ಸೊನ್ನಗದಿರನು ಮಾಧವನು ಶ್ರುತಿ-
ಸನ್ನುತ ಶ್ರೀಲಕ್ಷ್ಮೀ ಘೃತದೊಳು
ಮಾನ್ಯ ಗೋವಿಂದಾಭಿದನು ಇರುತಿಪ್ಪನೆಂದೆಂದು ॥14॥

ಕ್ಷೀರದಲ್ಲಿ ಸರಸ್ವತಿ ವಿಷ್ಣು, ಮಂಡಿಗೆಯಲ್ಲಿ ಬ್ರಹ್ಮ ಮಧುಸೂದನ, ಬೆಣ್ಣೆಯಲ್ಲಿ ವಾಯು ತ್ರಿವಿಕ್ರಮ, ದಧಿಯಲ್ಲಿ ವರುಣ, ಚಂದ್ರ ವಾಮನ

ಕ್ಷೀರಮಾನಿ ಸರಸ್ವತಿ ಜಗ-
ತ್ಸಾರ ವಿಷ್ಣುವ ಚಿಂತಿಸುವುದು ಸ-
ರೋರುಹಾಸನ ಮಂಡಿಗೆಯೊಳಿರುತಿಪ್ಪ ಮಧುವೈರಿ ॥
ಮಾರುತನು ನವನೀತದೊಳು ಸಂ-
ಪ್ರೇರಕ ತ್ರಿವಿಕ್ರಮನು ದಧಿಯೊಳು
ವಾರಿನಿಧಿ ಚಂದ್ರಮರೊಳಗೆ ಇರುತಿಪ್ಪ ವಾಮನನು॥15॥

ಸೂಪಕೆ ಗರುಡ ಶ್ರೀಧರ, ಸೊಪ್ಪಲ್ಲಿ ಮಿತ್ರಾಖ್ಯ ಸೂರ್ಯ ಹೃಷಿಕೇಶ, ಫಲಶಾಕಕೆ ಶೇಷ ಪದ್ಮನಾಭ

ಗರುಡ ಸೂಪಕೆ ಮಾನಿ ಶ್ರೀ ಶ್ರೀ-
ಧರನು ದೇವತೆ ಪತ್ರಶಾಕಕೆ
ವರನೆನಿಪ ಮಿತ್ರಾಖ್ಯಸೂರ್ಯ ಹೃಷೀಕಪನ ಮೂರ್ತಿ ॥
ಉರಗರಾಜನು ಫಲಸುಶಾಕಕೆ
ವರನೆನಿಸುವನು ಪದ್ಮನಾಭವ
ಸ್ಮರಿಸಿ ಭುಂಜಿಸುತಿಹರು ಬಲ್ಲವರೆಲ್ಲ ಕಾಲದಲಿ ॥16॥

ಅಮ್ಲದಲ್ಲಿ ಗೌರಿ ದಾಮೋದರ, ಅನಾಮ್ಲದಿ ರುದ್ರ ಸಂಕರ್ಷಣ, ಸಕ್ಕರೆಯಲ್ಲಿ ಇಂದ್ರ ವಾಸುದೇವ

ಗೌರಿ ಸರ್ವಾಮ್ಲಸ್ಥಳೆನಿಪಳು
ಶೌರಿ ದಾಮೋದರನ ತಿಳಿವುದು
ಗೌರಿಪಾನಾಮ್ಲಸ್ಥ ಸಂಕರುಷಣನ ಚಿಂತಿಪುದು ॥
ಸಾರಶರ್ಕರ ಗುಡದೊಳಗೆ ವೃ-
ತ್ರಾರಿ ಇರುತಿಹ ವಾಸುದೇವನ
ಸೂರಿಗಳು ಧೇನಿಪರು ಪರಮಾದರದಿ ಸರ್ವತ್ರ ॥17॥

ವ್ಯಂಜನದಿ ಗುರು ಪ್ರದ್ಯುಮ್ನ, ಖಾರ ಪದಾರ್ಥದಿ ಯಮ ಅನಿರುದ್ಧ, ಸಾಸಿವೆ, ಹಿಂಗು, ಏಲಕ್ಕಿ ಕರ್ಪೂರದಿ ಮನ್ಮಥ ಪುರುಷೋತ್ತಮ

ಸ್ಮರಿಸು ವಾಚಸ್ಪತಿಯ ಸೋಪ-
ಸ್ಕರದೊಳಗೆ ಪ್ರದ್ಯುಮ್ನನಿಪ್ಪನು
ನಿರಯಪತಿ ಯಮಧರ್ಮ ಕಟುದ್ರವ್ಯದೊಳಗನಿರುದ್ಧ ॥
ಸರಷಪ ಶ್ರೀರಾಮಠೇಲದಿ
ಸ್ಮರನ ಶ್ರೀಪುರುಷೋತ್ತಮನ ಕ-
ರ್ಪೂರದಿ ಚಿಂತಿಸಿ ಪೂಜಿಸುತಲಿರು ಪರಮಭಕುತಿಯಲಿ॥18॥

ಲೇಹ್ಯ, ಪೇಯ, ಕರೆದ ತಿಂಡಿಯಲ್ಲಿ ಬುಧ ಅಧೋಕ್ಷಜ, ಕೂಷ್ಮಾಂಡ, ತಿಲ, ಉದ್ದಿನ ಪದಾರ್ಥದಿ ಲಕ್ಷ್ಮೀನರಸಿಂಹ

ನಾಲಿಗಿಂದಲಿ ಸ್ವೀಕರಿಪ ರಸ-
ಪಾಲು ಮೊದಲಾದುದರೊಳಗೆ ಘೃತ
ತೈಲಪಕ್ವ ಪದಾರ್ಥದೊಳಗಿಹ ಚಂದ್ರನಂದನನ ॥
ಪಾಲಿಸುವಧೋಕ್ಷಜನ ಚಿಂತಿಸು
ಸ್ಥೂಲಕೂಷ್ಮಾಂಡ ತಿಲ ಮಾಷಜ
ಈ ಲಲಿತ ಭಕ್ಷ್ಯದೊಳು ದಕ್ಷನು ಲಕ್ಷ್ಮೀನರಸಿಂಹ ॥19॥

ಉದ್ದಿನ ಭಕ್ಷ್ಯಾದಿ ಮನು ಅಚ್ಯುತ,
ಉಪ್ಪಿನಲ್ಲಿ ನಿರಋತಿ ಜನಾರ್ದನ,
ಫಲರಸದಿ ಪ್ರಾಣ ಉಪೇಂದ್ರ, ವೀಳ್ಯದಿ ಗಂಗೆ ಹರಿ

ಮನುವು ಮಾಷ ಸುಭಕ್ಷ್ಯದೊಳು ಚಿಂ-
ತನೆಯ ಮಾಡಚ್ಯುತನ ನಿರಋತಿ
ಮನೆಯೆನಿಪ ಲವಣದೊಳು ಮರೆಯದೆ ಶ್ರೀ- ॥
ಜನಾರ್ದನನ ನೆನೆವುತಿರು ಫಲರಸಗಳೊಳು ಪ್ರಾ-
ಣನ ಉಪೇಂದ್ರನ ವೀಳ್ಯದೆಲೆಯೊಳು
ದ್ಯುನದಿ ಹರಿರೂಪವನೆ ಕೊಂಡಾಡುತಲಿ ಸುಖಿಸುತಿರು॥20॥

ನೀರಿನಲ್ಲಿ ಬುಧ ಕೃಷ್ಣ,
ಪದಾರ್ಥಶುದ್ಧಿ ಪುಷ್ಕರ ಹಂಸ

ವೇದವಿನುತಗೆ ಬುಧನು ಸುಸ್ವಾ-
ದೋದಕಾಧಿಪನೆನಿಸಿಕೊಂಬನು
ಶ್ರೀದ ಕೃಷ್ಣನ ತಿಳಿದು ಪೂಜಿಸುತಿರು ನಿರಂತರದಿ ॥
ಸಾಧುಕರ್ಮಪ ಪುಷ್ಕರನು ಸುನಿ-
ವೇದಿತ ಪದಾರ್ಥಗಳ ಶುದ್ಧಿಯ
ಗೈದುಗೈಸುತ ಹಂಸನಾಮಕಗರ್ಪಿಸುತಲಿಪ್ಪ ॥21॥

ಸ್ವಾದಿಷ್ಟ ಭೋಜನದಿ ರತಿ ವಿಶ್ವ, ಒಲೆಯಲ್ಲಿ ಅಗ್ನಿ ಭಾರ್ಗವ, ಕಟ್ಟಿಗೆ, ಬೆರಣಿಗಳಲ್ಲಿ ವಸಂತ ಋಷಭ

ರತಿ ಸಕಲ ಸುಸ್ವಾದುರಸಗಳ
ಪತಿಯೆನಿಸುವಳು ಅಲ್ಲಿ ವಿಶ್ವನು
ಹುತವಹನ ಚೂಲಿಗಳೊಳಗೆ ಭಾರ್ಗವನ ಚಿಂತಿಪುದು ॥
ಕ್ಷಿತಿಜ ಗೋಮಯಜಾದಿಯೊಳು ಸಂ-
ಸ್ಥಿತ ವಸಂತನ ಋಷಭದೇವನ
ತುತಿಸುತಿರು ಸಂತತ ಸದಾ ಸದ್ಭಕ್ತಿ ಪೂರ್ವಕದಿ ॥22॥

ಪಾಚಕರಲ್ಲಿ ಲಕ್ಷ್ಮೀ ವಿಶ್ವಂಭರ, ಮಂಡಲದಿ ಭೂದೇವಿ ವರಾಹ, ಮುಚ್ಚಳದಲ್ಲಿ ಗಣಪತಿ ಸನತ್ಕುಮಾರ

ಪಾಕಕರ್ತೃಗಳೊಳಗೆ ಚತುರ್ದಶ
ಲೋಕಮಾತೆ ಮಹಾಲಕುಮಿ ಗತ-
ಶೋಕ ವಿಶ್ವಂಭರನ ತಿಳಿವುದು ಎಲ್ಲ ಕಾಲದಲಿ ॥
ಚೌಕಶುದ್ಧ ಸುಮಂಡಲದಿ ಭೂ-
ಸೂಕರಾಹ್ವಯ ಉಪರಿ ಚೈಲಪ
ಏಕದಂತ ಸನತ್ಕುಮಾರನ ಧ್ಯಾನಿಪುದು ಬುಧರು ॥23॥

ಪರದೆಯಲ್ಲಿ ವಿಶ್ವಕ್ಸೇನ ಪುರುಷ

ಶ್ರೀನಿವಾಸನ ಭೋಗ್ಯವಸ್ತುವ
ಕಾಣಗೊಡದಂದದಲಿ ವಿಷ್ವ-
ಕ್ಸೇನ ಪರಿಖಾರೂಪನಾಗಿಹನಲ್ಲಿ ಪುರುಷಾಖ್ಯ ॥
ತಾನೆ ಪೂಜಕ ಪೂಜ್ಯನೆನಿಸಿ ನಿ-
ಜಾನುಗರ ಸಂತೈಪ ಗುರುಪವ
ಮಾನ ವಂದಿತ ಸರ್ವಕಾಲಗಳಲ್ಲಿ ಸರ್ವೇಶ ॥24॥

ನೂತನ ವಿಹಿತ ಪದಾರ್ಥಗಳಲ್ಲಿ ರಮಾದೇವಿ ರಸರೂಪಳಾಗಿ ಹರಿಯ ತೃಪ್ತಿ ಪಡಿಸುವಳು

ನೂತನ ಸಮೀಚೀನ ಸುರಸೋ-
ಪೇತ ಹೃದ್ಯ ಪದಾರ್ಥದೊಳು ವಿಧಿ-
ಮಾತೆ ತತ್ತದ್ರಸಗಳೊಳು ರಸರೂಪ ತಾನಾಗಿ ॥
ಪ್ರೀತಿಪಡಿಸುತ ನಿತ್ಯದಿ ಜಗ-
ನ್ನಾಥವಿಟ್ಠಲನ ಕೂಡಿ ತಾ ನಿ-
ರ್ಭೀತಳಾಗಿಹಳೆಂದರಿದು ನೀ ಭಜಿಸಿ ಸುಖಿಸುತಿರು॥25॥

॥ ಇಲ್ಲಿಗೆ ಮೂವತ್ತೊಂದನೆಯ ನೈವೇದ್ಯಸಮರ್ಪಣಸಂಧಿ
ಮುಗಿಯಿತು ॥

ಕಕ್ಷ್ಯಾತಾರತಮ್ಯಸಂಧಿ-32

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಸರ್ವೇಶ, ಸರ್ವಗ, ಸ್ವತಂತ್ರ, ಸಗುಣನಾದ ನರಹರಿ ಸಲಹು ಸಜ್ಜನರ

ಶ್ರೀರಮಣ ಸರ್ವೇಶ ಸರ್ವಗ-
ಸಾರಭೋಕ್ತ ಸ್ವತಂತ್ರ ದೋಷವಿ-
ದೂರ ಜ್ಞಾನಾನಂದಬಲ ಐಶ್ವರ್ಯಗುಣಪೂರ್ಣ ॥
ಮೂರು ಗುಣವರ್ಜಿತ ಸಗುಣ ಸಾ-
ಕಾರ ವಿಶ್ವಸ್ಥಿತಿಲಯೋದಯ
ಕಾರಣ ಕೃಪಾಸಾಂದ್ರ ನರಹರೆ ಸಲಹೊ ಸಜ್ಜನರ ॥1॥

ಹರಿಯ ವಕ್ಷಸ್ಥಳದಲ್ಲಿರುವ ನಿತ್ಯಮುಕ್ತಳೆ ! ನಮ್ಮನ್ನು ರಕ್ಷಿಸು

ನಿತ್ಯಮುಕ್ತಳೆ ನಿರ್ವಿಕಾರಳೆ
ನಿತ್ಯಸುಖಿಸಂಪೂರ್ಣ ನಿತ್ಯಾ-
ನಿತ್ಯಜಗದಾಧಾರೆ ಮುಕ್ತಾಮುಕ್ತಗಣವಿನುತೆ ॥
ಚಿತ್ತೈಸು ಬಿನ್ನಪವ ಶ್ರೀಪುರು-
ಷೋತ್ತಮನ ವಕ್ಷೋನಿವಾಸಿನಿ
ಭೃತ್ಯವತ್ಸಲೆ ಕಾಯೆ ತ್ರಿಜಗನ್ಮಾತೆ ವಿಖ್ಯಾತೆ ॥2॥

ತನ್ನ ಸ್ವಾಮಿಯ ಅಪಾರ ಮಹಿಮೆಯ ಕಂಡು ಬೆರಗಾಗುವ ರಮಾದೇವಿ

ರೋಮಕೂಪಗಳೊಳಗೆ ಪೃಥಕ್ಪೃಥ-
ಗಾ ಮಹಾಪುರುಷನ ಸ್ವಮೂರ್ತಿಯು
ತಾಮರಸಜಾಂಡಗಳ ತದ್ಗತ ವಿಶ್ವರೂಪಗಳ ॥
ಶ್ರೀಮಹಿಳೆ ರೂಪಗಳ ಗುಣಗಳ
ಸೀಮೆಗಾಣದೆ ಯೋಚಿಸುತ ಮಮ
ಸ್ವಾಮಿ ಮಹಿಮೆಯದೆಂತುಂಟೆಂದಡಿಗಡಿಗೆ ಬೆರಗಾದೆ
॥3॥

ಶ್ರೀಹರಿಯ ತಿಳುವಳಿಕೆಗೆ ಮೀರಿದ ಮಹಿಮೆಗಳನ್ನು ಕಂಡು ಆನಂದಬಾಷ್ಪ ಸುರಿಸುವ ಬ್ರಹ್ಮದೇವರು

ಒಂದಜಾಂಡದೊಳೊಂದು ರೂಪದೊ-
ಳೊಂದವಯವದೊಳೊಂದು ನಖದೊಳ-
ಗೊಂದು ಗುಣಗಳ ಪಾರುಗಾಣದೆ ಕೃತಪುಟಾಂಜಲಿಯಿಂ ॥
ಮಂದಜಾಸನ ಪುಳಕಪುಳಕಾ-
ನಂದಭಾಷ್ಪ ತೊದಲುನುಡಿಗಳಿಂ-
ದಿಂದಿರಾವಲ್ಲಭನ ಮಹಿಮೆ ಗಭೀರತರವೆಂದ ॥4॥

ಸೌಂದರ್ಯಸಾರನಾದ ಹರಿಯನ್ನು ಪ್ರೀತಿಯಿಂದ ನೋಡಿ ಸುಖಿಸುವ ಬ್ರಹ್ಮವಾಯುಗಳ ಯೋಗ್ಯತೆ ದೊಡ್ಡದು

ಏನು ಧನ್ಯರೋ ಬ್ರಹ್ಮ ಗುರು ಪವ-
ಮಾನ ರಾಯರು ಈ ಪರಿಯಲಿ ರ-
ಮಾನಿವಾಸನ ವಿಮಲ ಲಾವಣ್ಯಾತಿಶಯಗಳನು
ಸಾನುರಾಗದಿ ನೋಡಿ ಸುಖಿಪ ಮ-
ಹಾನುಭಾವರ ಭಾಗ್ಯವೆಂತೋ ಭ-
ವಾನಿಧವನಿಗಸಾಧ್ಯವೆನಿಸಲು ನರರ ಪಾಡೇನು ॥5॥

ಋಜುಗಳು ವಾಯು ಬ್ರಹ್ಮ ಪದವಿಗೆ ಬರುವ ಕ್ರಮ

ಆ ಪಿತಾಮಹ ನೂರು ಕಲ್ಪರ
ಮಾಪತಿಯ ಗುಣ ಜಪಿಸಿ ಒಲಿಸಿ ಮ-
ಹಾಪರಾಕ್ರಮ ಹನುಮಭೀಮಾನಂದಮುನಿಯೆನಿಸಿ ॥
ಆ ಪರಬ್ರಹ್ಮನ ಸುನಾಭೀ-
ಕೂಪಸಂಭವನಾಮದಲಿ ಮೆರೆ-
ವಾ ಪಯೋಜಾಸನ ಸಮೀರರಿಗಭಿನಮಿಪೆ ನಿತ್ಯ ॥6॥

ತಮ್ಮ ಹೃದಯಾಕಾಶದಲ್ಲಿ ಚಂದ್ರನಂತಿರುವ ವಾಸುದೇವನನ್ನು ಕಂಡು ಹಿಗ್ಗುವ ಸರಸ್ವತಿ ಭಾರತಿಯರು

ವಾಸುದೇವನ ಮೂರ್ತಿ ಹೃದಯಾ-
ಕಾಶಮಂಡಲ ಮಧ್ಯದಲಿ ತಾ-
ರೇಶನಂದದಿ ಕಾಣುತತಿಸಂತೋಷದಲಿ ತುತಿಪ ॥
ಆ ಸರಸ್ವತೀ ಭಾರತೀಯರಿಗೆ
ನಾ ಸತತ ವಂದಿಸುವೆ ಪರಮೋ-
ಲ್ಲಾಸದಲಿ ಸುಜ್ಞಾನ ಭಕುತಿಯ ಸಲಿಸಲೆಮಗೆಂದು ॥7॥

ದೇವರ ಪಾದನಖದಲ್ಲಿ ಮುಖದ ಪ್ರತಿಬಿಂಬ ಕಂಡು ಹಿಗ್ಗುವ ವೈನತೇಯ

ಜಗದುದರನ ಸುರೋತ್ತಮನ ನಿಜ-
ಪೆಗಲೊಳಾಂತು ಕರಾಬ್ಜದೊಳ್ ಪದ-
ಯುಗ ಧರಿಸಿ ನಖಪಂಕ್ತಿಯೊಳು ರಮಣೀಯತರವಾದ॥
ನಗಧರನ ಪ್ರತಿಬಿಂಬ ಕಾಣುತ-
ಮಿಗೆ ಹರುಷದಿಂ ಪೊಗಳಿ ಹಿಗ್ಗುವ
ಖಗಕುಲಾಧಿಪ ಕೊಡಲಿ ಮಂಗಳ ಸಕಲ ಸುಜನರಿಗೆ ॥8॥

ದ್ವಿಸಹಸ್ರ ಜಿಹ್ವೆಗಳಿಂದ ಹರಿಯನ್ನು ಸ್ತುತಿಸುವ ಹರಿಪರ್ಯಂಕನಾದ ಶೇಷ

ಯೋಗಿಗಳ ಹೃದಯಕೆ ನಿಲಕ ನಿಗ-
ಮಾಗಮೈಕವಿನುತನ ಪರಮನು-
ರಾಗದಿಂ ದ್ವಿಸಹಸ್ರ ಜಿಹ್ವೆಗಳಿಂದ ವರ್ಣಿಸುವ ॥
ಭೋಗಗಗನಪಾತಾಳವ್ಯಾಪ್ತನ
ಯೋಗನಿದ್ರಾಸ್ಪದನೆನಿಪ ಗುರು
ನಾಗರಾಜನ ಪದಕೆ ನಮಿಸುವೆ ಮನದೊಳನವರತ ॥9॥

ಮಂದಜಾಸನ ತನಯನಾದ
ಪಾರ್ವತೀರಮಣನೆ ಪಾಲಿಸು

ನಂದಿವಾಹನ ನಳಿನಿಧರ ಮೌ-
ಳೀಂದುಶೇಖರ ಶಿವ ತ್ರಿಯಂಬಕ
ಅಂಧಕಾಸುರಮಥನ ಗಜ ಶಾರ್ದೂಲಚರ್ಮಧರ ॥
ಮಂದಜಾಸನತನಯ ತ್ರಿಜಗ-
ದ್ವಂದ್ಯ ಶುದ್ಧಸ್ಫಟಿಕ ಸನ್ನಿಭ-
ವಂದಿಸುವೆನನವರತ ಪಾಲಿಸು ಪಾರ್ವತೀರಮಣ ॥10॥

ಪ್ರಮಥಗಣಪೂಜಿತ ಮಹಾದೇವನೇ ಮಾಂಪಾಹಿ

ಫಣಿಪಫಣಾಂಚಿತ ಮುಕುಟರಂಜಿತ
ಕ್ವಣಿತಡಮರು ತ್ರಿಶೂಲ ಶಿಖಿ ದಿನ
ಮಣಿ ನಿಶಾಕರನೇತ್ರ ಪರಮಪವಿತ್ರ ಸುಚರಿತ್ರ ॥
ಪ್ರಣತಕಾಮದ ಪ್ರಮಥ ಸುರಮುನಿ
ಗಣಸುಪೂಜಿತಚರಣಯುಗ ರಾ-
ವಣಮದವಿಭಂಜನ ಸತತ ಮಾಂ ಪಾಹಿ ಮಹದೇವ
॥11॥

ವೈರಾಗ್ಯಾಧಿಪತಿಯಾದ ರುದ್ರನೇ ಸರ್ವಕಾಲದಲ್ಲೂ ರಕ್ಷಿಸು

ದಕ್ಷಯಜ್ಞವಿಭಂಜನನೆ ವಿರು-
ಪಾಕ್ಷ ವೈರಾಗ್ಯಾಧಿಪತಿ ಸಂ-
ರಕ್ಷಿಸೆಮ್ಮನು ಸರ್ವಕಾಲದಿ ಸನ್ಮುದವನಿತ್ತು ॥
ಯಕ್ಷಪತಿಸಖ ಯಜಪರಿಗೆ ಸುರ-
ವೃಕ್ಷ ವೃಕದನುಜಾರಿ ಲೋಕಾ-
ಧ್ಯಕ್ಷ ಶುಕ ದೂರ್ವಾಸ ಜೈಗೀಷವ್ಯ ಸಂತ್ರೈಸು ॥12॥

ಶೇಷಪದವಿಗಾಗಿ ರುದ್ರದೇವರ 10 ಕಲ್ಪ ಸಾಧನೆ

ಹತ್ತುಕಲ್ಪದಿ ಲವಣಜಲಧಿಯೊ-
ಳುತ್ತಮಶ್ಲೋಕನ ಒಲಿಸಿ ಕೃತ-
ಕೃತ್ಯನಾಗಿ ಜಗತ್ಪತಿಯ ನೇಮದಿ ಕುಶಾಸ್ತ್ರಗಳ ॥
ಬಿತ್ತರಿಸಿ ಮೋಹಿಸಿ ದುರಾತ್ಮರ
ನಿತ್ಯನಿರಯನಿವಾಸರೆನಿಸಿದ
ಕೃತ್ತಿವಾಸಗೆ ನಮಿಪೆ ಶೇಷಪದಾರ್ಹನಹುದೆಂದು ॥13॥

ಷಣ್ಮಹಿಷಿಯರ ಪ್ರಾರ್ಥನೆ

ಕಂಬುಪಾಣಿಯ ಪರಮಪ್ರೇಮ ನಿ-
ತಂಬಿನಿಯರೆಂದೆನಿಪ ಲಕ್ಷಣೆ
ಜಾಂಬವತಿ ಕಾಳಿಂದಿ ನೀಲಾ ಭದ್ರ ಸಖವಿಂದ-
ರೆಂಬ ಷಣ್ಮಹಿಷಿಯರ ದಿವ್ಯ ಪ-
ದಾಂಬುಜಗಳಿಗೆ ನಮಿಪೆ ಮಮ ಹೃದ-
ಯಾಂಬರದಿ ನೆಲೆಸಲಿ ಬಿಡದೆ ತಮ್ಮರಸನೊಡಗೂಡಿ
||14||

ಪತ್ಯಂತರ್ಗತ ಭಗವಂತನ ಉಪಾಸನೆ ಮಾಡುವ ಸೌಪರ್ಣಿ ವಾರುಣಿ ಪಾರ್ವತಿ

ಆ ಪರಂತಪನೊಲುಮೆಯಿಂದ ಸ-
ದಾಪರೋಕ್ಷಿಗಳೆನಿಸಿ ಭಗವ-
ದ್ರೂಪಗುಣಗಳ ಮಹಿಮೆ ಸ್ವಪತಿಗಳಾನನದಿ ತಿಳಿವ ||
ಸೌಪರಣಿ ವಾರುಣಿ ನಗಾತ್ಮಜ
ರಾಪನಿತು ಬಣ್ಣಿಸುವೆನೆನ್ನ ಮ-
ಹಾಪರಾಧಗಳೆಣಿಸದೀಯಲಿ ಪರಮ ಮಂಗಳವ ||15||

ಇಂದ್ರ ದೇವರ ವರ್ಣನೆ

ತ್ರಿದಿವತರು ಮಣಿ ಧೇನುಗಳಿಗಾ-
ಸ್ಪದವೆನಿಪ ತ್ರಿದಶಾಲಯಾಬ್ಧಿಗೆ
ಬದರನಂದದಲೊಪ್ಪುತಿಪ್ಪ ಉಪೇಂದ್ರ ಚಂದ್ರಮನ ||
ಮೃದು ಮಧುರ ಸುಸ್ತವನದಿಂದಲಿ
ಮಧುಸಮಯ ಪಿಕನಂತೆ ಪಾಡುವ
ಮುದಿರವಾಹನನಂಘ್ರಿಯುಗ್ಮಂಗಳಿಗೆ ನಮಿಸುವೆನು ||16||

ರತಿಪತಿಯಾದ ಮನ್ಮಥನೆ ಎಮ್ಮ ದುರ್ಮತಿಯ ಕಳೆದು ಸನ್ಮತಿಯ ಪಾಲಿಸು

ಕೃತಿರಮಣ ಪ್ರದ್ಯುಮ್ನದೇವನ
ಅತುಳ ಬಲ ಲಾವಣ್ಯ ಗುಣ ಸಂ-
ತತ ಉಪಾಸನ ಕೇತುಮಾಲಾಖಂಡದೊಳು ರಚಿಪ ||
ರತಿಮನೋಹರನಂಘ್ರಿಕಮಲಕೆ
ನುತಿಸುವೆನು ಭಕುತಿಯಲಿ ಮಮ ದು-
ರ್ಮತಿಯ ಕಳೆದುಸನ್ಮತಿಯನೀಯಲಜಸ್ರ ಎಮಗೊಲಿದು
||17||

ಭವಸಮುದ್ರದ ನಾವಿಕೆ ಪ್ರವಹವಾಯು

ಭವವನಧಿ ನವಪೋತ ಪುಣ್ಯ-
ಶ್ರವಣ ಕೀರ್ತನ ಪಾದವನರುಹ
ಭವನ ನಾವಿಕನಾಗಿ ಭಜಕರ ತಾರಿಸುವ ಬಿಡದೆ ॥
ಪ್ರವಹಮಾರುತದೇವ ಪರಮೋ-
ತ್ಸವ ವಿಶೇಷ ನಿರಂತರ ಮಹಾ-
ಪ್ರವಹದಂದದಿ ಕೊಡಲಿ ಭಗವದ್ಭಕ್ತಸಂತತಿಗೆ ॥20॥

ಶತರೂಪಾದೇವಿಯ ಸ್ತುತಿ

ಜನರನುದ್ಧರಿಸುವೆನೆನುತ ನಿಜ-
ಜನಕನನುಮತದಲಿ ಸ್ವಯಂಭುವ
ಮನುವಿನಿಂದಲಿ ಪಡೆದ ಸುಕುಮಾರಕರನೊಲುಮೆಯಲಿ ॥
ಜನನಿ ಶತರೂಪಾನಿತಂಬಿನಿ-
ಮನವಚನಕಾಯದಲಿ ಬಿಡದನು
ದಿನ ನಮಿಸುವೆನು ಎಮಗೆ ಕೊಡು ಸನ್ಮಂಗಳವನೊಲಿದು
॥21॥

ಯಮದೇವರ ಸ್ತೋತ್ರ

ನರನ ನಾರಾಯಣನ ಹರಿ ಕೃ-
ಷ್ಣರ ಪಡೆದೆ ಪುರುಷಾರ್ಥ ತೆರದಲಿ
ತರಣಿ ಶಶಿ ಶತರೂಪರಿಗೆ ಸಮನೆನಿಸಿ ಪಾಪಿಗಳ ॥
ನಿರಯದೊಳು ನೆಲೆಗೊಳಿಸಿ ಸಜ್ಜನ
ನೆರವಿಯನು ಪಾಲಿಸುವ ಔದುಂ-
ಬರ ಸಲಹು ಸಲಹೆಮ್ಮ ಬಿಡದಲೆ ಪರಮಕರುಣದಲಿ
॥22॥

ಮನೋಭಿಮಾನಿ ಚಂದ್ರನ ಸೋತ್ರ

ಮಧುವಿರೋಧಿಮನೋಜ ಕ್ಷೀರೋ-
ದಧಿ ಮಥನಸಮಯದಲುದಿಸಿ ನೆರೆ
ಕುಧರಜಾವಲ್ಲಭನ ಮಸ್ತಕಮಂದಿರದಿ ಮೆರೆವ ॥
ವಿಧು ತವಾಂಘ್ರಿಪಯೋಜಯುಗಳಕೆ
ಮಧುಪನಂದದಲೆರಗಲೆನ್ನನ-
ದಧಿಪ ವಂದಿಪೆನನುದಿನಂತಸ್ತಾಪ ಪರಿಹರಿಸು ॥23॥

ಸೂರ್ಯನ ಸ್ತುತಿ

ಶ್ರೀವನರುಹಾಂಬಕನ ನೇತ್ರಗ-
ಳೀವೆ ಮನೆಯೆನಿಸಿ ಸುಜನರಿಗೆ ಕ-
ರಾವಲಂಬನವೀವ ತೆರದಿ ಮಯೂಖ ವಿಸ್ತರಿಪ ॥
ಆ ವಿವಸ್ವಾನ್ ಎಂದೆನಿಸುವ ವಿ-
ಭಾವಸುವಹರ್ನಿಶಿಗಳಲಿ ಕೊಡ-
ಲೀವಸುಂಧರೆಯೊಳು ವಿಪಶ್ಚಿತರೊಡನೆ ಸುಜ್ಞಾನ ॥24॥

ಸಮುದ್ರರಾಜನ ಸ್ತುತಿ

ಲೋಕಮಾತೆಯ ಪಡೆದು ನೀ ಜಗ-
ದೇಕಪಾತ್ರನಿಗಿತ್ತ ಕಾರಣ
ಶ್ರೀ ಕುಮಾರಿಸಮೇತ ನೆಲೆಸಿದ ನಿನ್ನ ಮಂದಿರದಿ ॥
ಆ ಕಮಲಭವಮುಖರು ಬಿಡದೆ ಪ-
ರಾಕೆನುತ ನಿಂದಿಹರೊ ಗುಣರ-
ತ್ನಾಕರನೆ ಬಣ್ಣಿಸಲಳವೆ ಕೊಡು ಎಮಗೆ ಸನ್ಮನವ ॥25॥

ದೇವರ್ಷಿ ನಾರದರಿಗೆ ವಂದನೆ

ಫಣೆಯೊಳೊಪ್ಪುವ ತಿಲಕ ತುಲಸೀ-
ಮಣಿಗಣಾಂಚಿತಕಂಠ ಕರದಲಿ
ಕ್ವಣಿತ ವೀಣಾ ಸುಸ್ವರದಿ ಬಹುತಾಳ ಗತಿಗಳಲಿ ॥
ಪ್ರಣವಪ್ರತಿಪಾದ್ಯನ ಗುಣಂಗಳ
ಕುಣಿಕುಣಿದು ಅತಿಸಂಭ್ರಮದಿ ಗಾ-
ಯನವ ಮಾಡುವ ದೇವಋಷಿ ನಾರದರಿಗಭಿನಮಿಪೆ
॥26 ॥

ಕೇಶವನೆ ಪರದೈವವೆಂದು ಸಾರಿದ ಭೃಗುಋಷಿಗಳಿಗೆ ನಮಿಸುವೆ

ಆ ಸರಸ್ವತಿತೀರದಲಿ ಬಿ-
ನ್ನೈಸಲಾ ಮುನಿಗಳ ನುಡಿಗೆ ಜಲ-
ಜಾಸನ ಮಹೇಶಾಚ್ಯುತರ ಲೋಕಂಗಳಿಗೆ ಪೋಗಿ ॥
ತಾ ಸಕಲಗುಣಗಳ ವಿಚಾರಿಸೆ
ಕೇಶವನೆ ಪರದೈವವೆಂದುಪ-
ದೇಶಿಸಿದ ಭೃಗುಮುನಿಪ ಕೊಡಲೆಮಗಖಿಳಪುರುಷಾರ್ಥ
॥27॥

ದೇವಮುಖ ಅಗ್ನಿಗೆ ವಂದನೆ

ಬಿಸರುಹಾಂಬಕನಾಜ್ಞೆಯಲಿ ಸುಮ-
ನಸಮುಖನು ತಾನೆನಿಸಿ ನಾನಾ-
ರಸಗಳುಳ್ಳ ಹವಿಸ್ಸುಗಳನವರವರಿಗೋಯ್ದೀವ-
ವಸುಕುಲಾಧಿಪ ಯಜ್ಞಪುರುಷನ
ಅಸಮಬಲರೂಪಂಗಳಿಗೆ ವಂ-
ದಿಸುವೆ ಜ್ಞಾನ ಯಶಸ್ಸು ವಿದ್ಯೆ ಸುಬುದ್ಧಿ ಕೊಡಲೆಮಗೆ
॥28॥

ಪ್ರಸೂತಿದೇವಿಯೆ ಎಮ್ಮ ಕುಟುಂಬ ಸಲಹು

ತಾತನಪ್ಪಣೆಯಿಂದ ನೀ ಪ್ರ-
ಖ್ಯಾತಿಯುಳ್ಳರವತ್ತು ಮಕ್ಕಳ
ಪ್ರೀತಿಯಿಂದಲಿ ಪಡೆದವರವರಿಗಿತ್ತು ಮನ್ನಿಸುವ ॥
ವೀತಿಹೋತ್ರನ ಸಮಳೆನಿಸುವ ಪ್ರ-
ಸೂತಿ ಜನನಿ ತ್ವದಂಘ್ರಿಕಮಲಕೆ
ನಾ ತುತಿಸಿ ತಲೆಬಾಗುವೆಮ್ಮ ಕುಟುಂಬ ಸಲಹುವುದು
॥29॥

ಸಪ್ತಋಷಿಗಳು, ವಿಶ್ವಾಮಿತ್ರ, ವೈವಸ್ವತ ಮನುವಿನ ಸ್ತೋತ್ರ

ಶತಧೃತಿಯ ಸುತರೀರ್ವರುಳಿದ
ಪ್ರತಿಮ ಸುತಪೋನಿಧಿಗಳ ಪರಾ-
ಜಿತನ ಸುಸಮಾಧಿಯೊಳೊಲಿಸಿ ಮೂರ್ಲೋಕದೊಳು ಮೆರೆವ ॥
ವ್ರತಿವರ ಮರೀಚ್ಯತ್ರಿಪುಲಹಾ-
ಕ್ರತು ವಸಿಷ್ಠ ಪುಲಸ್ತ್ಯ ವೈವ-
ಸ್ವತನು ವಿಶ್ವಾಮಿತ್ರರಂಗಿರರಂಘ್ರಿಗೆರಗುವೆನು ॥30॥

ಮಿತ್ರ, ತಾರಾ, ನಿರಋತಿ, ಪ್ರಾವಹಿಯರ ಸ್ತೋತ್ರ

ದ್ವಾದಶಾದಿತ್ಯರೊಳು ಮೊದಲಿಗ-
ನಾದ ಮಿತ್ರ ಪ್ರವಹಮಾನಿನಿ-
ಯಾದ ಪ್ರಾವಹಿ ನಿರಋತಿ ನಿರ್ಜರ ಗುರು ಮಹಿಳೆ ತಾರಾ॥
ಈ ದಿವೌಕಸರನುದಿನಾಧಿ-
ವ್ಯಾಧಿಯುಪಟಳವಳಿದು ವಿಬುಧರಿ
ಗಾದರದಿ ಕೊಡಲಖಿಳಮಂಗಳವಾವಕಾಲದಲಿ ॥31॥

18ನೆಯ ಕಕ್ಷೆಯ ವಿಶ್ವಕ್ಸೇನ, ಗಣಪತಿ, ಶೇಷಶತಸ್ಥರ ಸ್ತೋತ್ರ

ಮಾನನಿಧಿಗಳೆನಿಸುವ ವಿಷ್ವ-
ಕ್ಸೇನಧನಪ ಗಜಾನನರಿಗೆ ಸ-
ಮಾನರೆಂಭತ್ತೈದು ಶೇಷಶತಸ್ಥ ದೇವಗಣ ॥
ಕಾನಮಿಸುವೆನು ಬಿಡದೆ ಮಿಥ್ಯಾ-
ಜ್ಞಾನ ಕಳೆದು ಸುಬೋಧವಿತ್ತು ಸ-
ದಾನುರಾಗದಲೆಮಗೆ ಪರಿಪಾಲಿಸಲಿ ಸಂಪದವ ॥32॥

ಮರೀಚಿ ಋಷಿಗಳು ಹಾಗೂ ಜಯಂತನ ಸ್ತೋತ್ರ

ಭೂತಮಾರುತವಾಂತರಭಿಮಾ-
ನೀ ತಪಸ್ವಿ ಮರೀಚಿಮುನಿ ಪುರು-
ಹೂತನಂದನ ಪಾದಮಾನಿ ಜಯಂತರೆಮಗೊಲಿದು ॥
ಕಾತಗವ ಪುಟ್ಟಿಸದೆ ವಿಷಯದಿ
ವೀತಭಯನ ಪದಾಬ್ಜದಲಿ ವಿಪ-
ರೀತಬುದ್ಧೀಯನೀಯದೆ ಸದಾ ಪಾಲಿಸಲಿ ಎಮ್ಮ ॥33॥

ಸಪ್ತೇಂದ್ರರು, ಏಕಾದಶ ಮನುಗಳು, ಋಷಿಗಳು, ಕ್ಷಿತಿಪರ ನಾಮಗಳು

ಓದಿಸುವ ಗುರುಗಳನು ಜರಿದು ಸ-
ಹೋದರರಿಗುಪದೇಶಿಸಿದ ಮಹ-
ದಾದಿಕಾರಣ ಸರ್ವಗುಣಸಂಪೂರ್ಣ ಹರಿಯೆಂದು ॥
ವಾದಿಸುವ ತ್ವತ್ತತಿಯ ತೋರೆಂ-
ದಾದನುಜ ಬೆಸಗೊಳಲು ಸ್ತಂಭದಿ
ಶ್ರೀದನಾಕ್ಷಣ ತೋರಿಸಿದ ಪ್ರಹ್ಲಾದ ಸಲಹೆಮ್ಮ ॥34॥

ನರಹರಿಯನ್ನು ತೋರಿಸಿದ ಪ್ರಹ್ಲಾದರೆ ! ಎಮ್ಮನುದ್ಧರಿಸಿ

ಬಲಿ ಮೊದಲು ಸಪ್ತೇಂದ್ರರಿವರಿಗೆ
ಕಲಿತ ಕರ್ಮಜ ದಿವಿಜರೆಂಬರು
ಉಳಿದ ಏಕಾದಶಮನುಗಳು ಉಚಥ್ಯ ಚವನ ಮುಖ ॥
ಕುಲಋಷಿಗಳೆಂಭತ್ತು ಹೈಹಯ
ನಿಳೆಯ ಕಂಪನಗೈದ ಪೃಥು ಮಂ-
ಗಳ ಪರೀಕ್ಷಿತ ನಹುಷ ನಾಭಿ ಯಯಾತಿ ಶಶಿಬಿಂದು
॥35॥

ರಾಜರುಗಳು, 8 ದಿಕ್ಪಾಲಕರು, ಗಂಧರ್ವರು, ಚಿತ್ರಗುಪ್ತರು ನಮ್ಮನ್ನು ಪಾಲಿಸಲಿ

ಶತಕೆ ಸಂಕೇತುಳ್ಳ ಪ್ರಿಯ-
ವ್ರತ ಭರತ ಮಾಂಧಾತ ಪುಣ್ಯಾ-
ಶ್ರೀತರು ಜಯವಿಜಯಾದಿಗಳು ಗಂಧರ್ವರೆಂಟು ಜನ ॥
ಹುತವಹಜ ಪಾವಕ ಸನಾತನ
ಪಿತೃಗಳೆಲ್ಲರು ಚಿತ್ರಗುಪ್ತರು
ಪ್ರತಿದಿವಸ ಪಾಲಿಸಲಿ ತಮ್ಮವನೆಂದು ಎಮಗೊಲಿದು ॥36॥

ಅಪ್ಸರಾಸ್ತ್ರೀಯರು, ರಾಹುಕೇತು, ಕರ್ಮಜ ದೇವತೆಗಳ ಸ್ತೋತ್ರ

ವಾಸವಾಲಯಶಿಲ್ಪಿ ವಿಮಲ ಜ-
ಲಾಶಯಗಳೊಳು ರಮಿಪ ಊರ್ವಶಿ
ಭೇಶ ರವಿಗಳ ರಿಪುಗಳೆನಿಸುವ ರಾಹು ಕೇತುಗಳು ॥
ಶ್ರೀಪದಪಂಥಾನ ಘೂಮಾ-
ರ್ಚಿಃಶ ದಿವಿಜರು ಕರ್ಮಜರಿಗೆ ಸ-
ದಾ ಸಮಾನ ದಿವೌಕಸರು ಕೊಡಲೆಮಗೆ ಮಂಗಳವ॥37॥

ಗಂಗಾ ಮೊದಲಾದ 6 ಮಂದಿ ಮತ್ತು ಸ್ವಾಹಾಸ್ವಧಾ ದೇವಿಯರ ಸ್ತೋತ್ರ

ದ್ಯುನದಿ ಶ್ಯಾಮಲ ಸಂಜ್ಞ ರೋಹಿಣಿ
ಧನಪಪರ್ಜನ್ಯಾನಿರುದ್ಧನ
ವನಿತೆ ಬ್ರಹ್ಮಾಂಡಾಭಿಮಾನಿ ವಿರಾಟದೇವಿಯರು ॥
ನೆನೆವೆ ನಾನಲವಿಂದ ದೇವಾ-
ನನ ಮಹಿಳೆ ಸ್ವಾಹಾಖ್ಯರಾಲೋ-
ಚನೆ ಕೊಡಲಿ ನಿರ್ವಿಘ್ನದಿಂ ಭಗವದ್ಗುಣಂಗಳಲಿ ॥38॥

ಉದಕಾಭಿಮಾನಿ ಬುಧನ ಸ್ತೋತ್ರ

ವಿಧಿಪಿತನ ಪಾದಾಂಬುಜಗಳಿಗೆ
ಮಧುಪನಂತೆ ವಿರಾಜಿಪಾಮಲ
ಉದಕಗಳಿಗೆ ಸದಾಭಿಮಾನಿಯು ಎಂದೆನಿಸಿಕೊಂಬ ॥
ಬುಧಗೆ ನಾ ವಂದಿಸುವೆ ಸನ್ಮೋ-
ದದಿ ನಿರಂತರ ಒಲಿದು ಎಮಗ-
ಭ್ಯುದಯ ಪಾಲಿಸಲೆಂದು ಪರಮೋತ್ಸವದಲನುದಿನದಿ
॥39॥

ದೇವಕೀಯಶೋದಾದೇವಿಯರಿಗೆ ವಂದಿಪೆ

ಶ್ರೀವಿರಂಚಾದ್ಯರ ಮನಕೆ ನಿಲು-
ಕಾವಕಾಲಕು ಜನನರಹಿತನ
ತಾ ಒಲಿಸಿ ಮಗನೆಂದು ಮುದ್ದಿಸಿ ಲೀಲೆಗಳ ನೋಳ್ಪ ॥
ದೇವಕಿಗೆ ವಂದಿಪೆ ಯಶೋದಾ
ದೇವಿಗಾನಮಿಸುವೆನು ಬಿಡದೆ ಕೃ-
ಪಾವಲೋಕನದಿಂದ ಸಲಹುವುದೆಮ್ಮ ಸಂತತಿಯ ॥40॥

ನಾಮಾಭಿಮಾನಿನೀ ಅಶ್ವಿನಿಪತ್ನಿ ಉಷಾದೇವಿಗೆ ವಂದನೆ

ಪಾಮರರನು ಪವಿತ್ರಗೈಸುವ
ಶ್ರೀ ಮುಕುಂದನ ವಿಮಲ ಮಂಗಳ
ನಾಮಗಳಿಗಭಿಮಾನಿಯಾದ ಉಷಾಖ್ಯದೇವಿಯರು ॥
ಭೂಮಿಯೊಳಗುಳ್ಳಖಿಳ ಸಜ್ಜನ
ರಾಮಯಾದಿಗಳಳಿದು ಸಲಹಲಿ
ಆ ಮರುತ್ತನ ಮನೆಯ ವೈದ್ಯರ ರಮಣಿ ಪ್ರತಿದಿನದಿ ॥41॥

ಭೂದೇವಿಯ ಸ್ತೋತ್ರ

ವನಧಿವಸನೆ ವರಾದ್ರಿನಿಚಯ
ಸ್ತದಿನವಿರಾಜಿತೆ ಚೇತನಾಚೇ-
ತನವಿಧಾರಕೆ ಗಂಧರಸ ರೂಪಾದಿಗುಣವಸುಷೆ ॥
ಮುನಿಕುಲೋತ್ತಮ ಕಶ್ಯಪನ ನಿಜ-
ತನುಜೆ ನಿನಗಾನಮಿಪೆ ಎನ್ನವ
ಗುಣಗಳೆಣಿಸದೆ ಪಾಲಿಪುದು ಪರಮಾತ್ಮನರ್ಧಾಂಗಿ ॥42॥

ಜಡ ಚೇತನಗಳನ್ನು ಧರಿಸಿರುವ ಧರಾದೇವಿ ಎಮ್ಮನು ಪಾಲಿಸು

ಪುರುಟಲೋಚನ ನಿನ್ನ ಕದ್ದೋ-
ಯ್ದಿರಲು ಪ್ರಾರ್ಥಿಸೆ ದೇವತೆಗಳು-
ತ್ತರವ ಲಾಲಿಸಿ ತಂದ ವರಾಹರೂಪ ತಾನಾಗಿ ॥
ಧರಣಿಜನನಿಯ ತ್ವತ್ಪದಾಬ್ಜಕೆ-
ಎರಗಿ ಬಿನ್ನೈಸುವೆನು ಪಾದ-
ಸ್ಪರುಶ ಮೊದಲಾದಖಿಳ ದೋಷಗಳೆಣಿಸದಿರು ಎಂದು
॥43॥

ಹರಿಗುರುಗಳನ್ನರ್ಚಿಸದವರಿಗೆ ಶಿಕ್ಷಿಸುವ ಶನೈಶ್ಚರನೆ ಉದ್ಧರಿಸು

ಹರಿಗುರುಗಳರ್ಚಿಸದ ಪಾಪಾ-
ತ್ಮರನ ಶಿಕ್ಷಿಸಲೋಸುಗ ಶನೈ-
ಶ್ಚರನೆನಿಸಿ ದುಷ್ಫಲಗಳೀವ ನಿರಂತರವು ಬಿಡದೆ ||
ತರುಣಿನಂದನ ನಿನ್ನ ಪಾದಾಂ-
ಬುರುಹಗಳಿಗಾನಮಿಪೆ ಬಹುದು-
ಸ್ತರ ಭವಾರ್ಣವಮಗ್ನನಾದೆನ್ನುದ್ಧರಿಸಬೇಕು ||44||

ಸತ್ಕರ್ಮಾಭಿಮಾನಿ ಪುಷ್ಕರನ ಸ್ತುತಿ

ನಿರತಿಶಯ ಸುಜ್ಞಾನಪೂರ್ವಕ-
ವಿರಚಿಸುವ ನಿಷ್ಕಾಮಕರ್ಮಗ-
ಳರಿತು ತತ್ತತ್ಕಾಲದಲಿ ತಜ್ಜನ್ಯಫಲರಸವ ||
ಹರಿಯ ನೇಮದಲುಣಿಸಿ ಬಹುಜೀ-
ವರಿಗೆ ಕರ್ಮಪನೆನಿಪ ಗುರು ಪು-
ಷ್ಕರನು ಸತ್-ಕ್ರಿಯಂಗಳಲಿ ನಿರ್ವಿಘ್ನತೆಯ ಕೊಡಲಿ
||45||

ಆಜಾನಜದೇವತೆಗಳ ಪ್ರಾರ್ಥನೆ

ಶ್ರೀನಿವಾಸನ ಪರಮಕಾರು-
ಣ್ಯಾನಿವಾಸಸ್ಥಾನರೆನಿಪ ಕೃ-
ಶಾನುಜರು ಸಾಹಸ್ರಷೋಡಶಶತರು ಶ್ರೀ ಕೃಷ್ಣ ॥
ಮಾನಿನಿಯರೆಪ್ಪತ್ತು ಯಕ್ಷರು
ದಾನವರು ಮೂವತ್ತು ಚಾರಣಾ
ಜಾನಜಾಮರರಪ್ಸರರು ಗಂಧರ್ವರಿಗೆ ನಮಿಪೆ ॥46॥

ಗೋಪಿಕಾಸ್ತ್ರೀಯರಿಗೆ ನಮನಗಳು

ಆ ಯಮುನೆಯೊಳು ಸಾದರದಿ ಕಾ-
ತ್ಯಾಯನೀವ್ರತ ಧರಿಸಿ ಕೆಲರು ದ-
ರಾಯುಧನೆ ಪತಿಯೆನಿಸಿ ಕೆಲವರು ಜಾರತನದಲ್ಲಿ ॥
ವಾಯುಪಿತನೊಲಿಸಿದರು ಈರ್ಬಗೆ
ತೋಯಜಾಕ್ಷಿಯರವರ ಪಾದಕೆ
ನಾ ಎರಗುವೆ ಮನೋರಥಂಗಳ ಸಲಿಸಲನುದಿನವು॥47॥

ಕಿನ್ನರರು, ಗುಹ್ಯಕರು, ನಾಗದೇವತೆಗಳು, ರಾಕ್ಷಸಗುಣದಿ ದೇವತೆಗಳ ಸ್ತೋತ್ರ

ಕಿನ್ನರರು ಗುಹ್ಯಕರು ರಾಕ್ಷಸ
ಪನ್ನಗರು ಪಿತೃಗಳು ಸಿದ್ಧರು
ಸನ್ನುತಾಜಾನಜರು ಸಮರಿವರಮರಯೋನಿಜರು ॥
ಇನ್ನಿವರ ಗಣವೆಂತು ಬಣ್ಣಿಸ-
ಲೆನ್ನಳವೆ ಕರುಣದಲಿ ಪರಮಾ-
ಪನ್ನಜನರಿಗೆ ಕೊಡಲಿ ಸನ್ಮುದ ಸುಪ್ರತಾಪವನು ॥48॥

ಶತೋನ ಶತಕೋಟಿ ಋಷಿಗಳು ಹಾಗೂ ಪಿತೃಗಳ ಪ್ರಾರ್ಥನೆ

ನೂರು ಮುನಿಗಳನುಳಿದು ಮೇಲಣ
ನೂರುಕೋಟಿ ತಪೋಧನರ ಪಾ-
ದಾರವಿಂದಕೆ ಮುಗಿವೆ ಕರಗಳನುದ್ಧರಿಸಲೆಂದು ॥
ಮೂರು ಸಪ್ತಶತಾಹ್ವಯರ ತೊರೆ-
ದೀ ಋಷಿಗಳಾನಂತರದಲಿಹ
ಭೂರಿಪಿತೃಗಳು ಕೊಡಲಿ ಎಮಗೆ ಸದಾ ಸುಮಂಗಳವ
॥49॥

ದೇವಗಂಧರ್ವರ ಗುಣಗಾನ

ಪಾವನಕೆ ಪಾವನನೆನಿಸುವ ರ-
ಮಾವಿನೋದನ ಗುಣಗಣಂಗಳ
ಸಾವಧಾನದಲೇಕಮಾನಸರಾಗಿ ಸುಸ್ವರದಿ ॥
ಆ ವಿಬುಧಪತಿ ಸಭೆಯೊಳಗೆ ನಾ-
ನಾವಿಲಾಸದಿ ಪಾಡಿ ಸುಖಿಸುವ
ದೇವಗಂಧರ್ವರು ಕೊಡಲಿ ಎಮಗಖಿಳ ಪುರುಷಾರ್ಥ
॥50॥

ಮನುಷ್ಯಗಂಧರ್ವರು ಹಾಗೂ ಕ್ಷಿತಿಪರ ಸ್ಮರಣೆ

ಭುವನಪಾವನನೆನಿಪ ಲಕುಮೀ-
ಧವನ ಮಂಗಳ ದಿವ್ಯನಾಮ
ಸ್ತವನಗೈವ ಮನುಷ್ಯಗಂಧರ್ವರಿಗೆ ವಂದಿಸುವೆ ॥
ಪ್ರವರಭೂಭುಜರುಳಿದು ಮಧ್ಯಮ-
ಕುವಲಯಪರೆಂದೆನಿಸಿಕೊಂಬರ
ದಿವಸ ದಿವಸಂಗಳಲಿ ನೆನೆವನು ಕರಣಶುದ್ಧಿಯಲಿ ॥51॥

ಮನುಷ್ಯೋತ್ತಮರ ಸ್ತೋತ್ರ

ಶ್ರೀಮುಕುಂದನ ಮೂರ್ತಿಗಳ ಸೌ-
ದಾಮಿನಿಯವ್ಪೋಲ್ ಹೃದಯ ವಾರಿಜ-
ವ್ಯೋಮಮಂಡಲಮಧ್ಯದಲಿ ಕಾಣುತಲಿ ಮೋದಿಸುವ ॥
ಆ ಮನುಷ್ಯೋತ್ತಮರ ಪದಯುಗ
ತಾಮರಸಗಳಿಗೆರಗುವೆ ಸದಾ
ಕಾಮಿತಾರ್ಥಗಳಿತ್ತು ಸಲಹಲಿ ಪ್ರಣತಜನತತಿಯ ॥52॥

ವಿಷ್ಣುಭಕ್ತರೆಲ್ಲರಿಗೂ ನಮಸ್ಕಾರಗಳು

ಈ ಮಹೀಮಂಡಲದೊಳಿಹ ಗುರು-
ಶ್ರೀಮದಾಚಾರ್ಯರ ಮತಾನುಗ-
ರಾ ಮಹಾವೈಷ್ಣವರ ವಿಷ್ಣುಪದಾಬ್ಜಮಧುಕರರ ॥
ಸ್ತೋಮಕಾನಮಿಸುವೆನವರವರ
ನಾಮಗಳ ಪೇಳಲಳವೆ ಬಹುವಿಧ
ಯಾಮ ಯಾಮಂಗಳಲಿ ಬೋಧಿಸಲೆನಗೆ ಸನ್ಮತಿಯ ॥53॥

ತಾರತಮ್ಯ ಸ್ತೋತ್ರದಿಂದ ಸಕಲ ಇಷ್ಟಾರ್ಥ ಪ್ರಾಪ್ತಿ

ಮಾರನಯ್ಯನ ಕರುಣಪಾರಾ-
ವಾರ ಮುಖ್ಯಸುಪಾತ್ರರೆನಿಪ ಸ-
ರೋರುಹಾಸನ ವಾಣಿ ರುದ್ರೇಂದ್ರಾದಿ ಸುರನಿಕರ ॥
ತಾರತಮ್ಯಾತ್ಮಕ ಸುಪದ್ಯಗ-
ಳಾರು ಪಠಿಸುವರಾ ಜನರಿಗೆ ರ-
ಮಾರಮಣ ಪೂರೈಸಲೀಪ್ಸಿತ ಸರ್ವಕಾಲದಲಿ ॥54॥

ತ್ರಿಕಾಲ ಪಠಣೆಯಿಂದ ಕಾಯ ವಾಕ್ ಮನಃ ಶುದ್ಧಿ ಹಾಗೂ ಸಕಲ ದುರಿತ ಪರಿಹಾರ

ಮೂರು ಕಾಲಗಳಲ್ಲಿ ತುತಿಸೆ ಶ-
ರೀರವಾಙ್ಮನಶುದ್ಧಿ ಮಾಳ್ಪುದು
ದೂರಗೈಸುವುದಖಿಳಪಾಪಸಮೂಹ ಪ್ರತಿದಿನವು ॥
ಚೋರಭಯ ರಾಜಭಯ ನಕ್ರಚ-
ಮೂರು ಶಸ್ತ್ರ ಜಲಾಗ್ನಿ ಭೂತ ಮ-
ಹೋರಗ ಜ್ವರ ನರಕಭಯ ಸಂಭವಿಸದೆಂದೆಂದು ॥55॥

ಜಗನ್ನಾಥವಿಟ್ಠಲನಿಗೆ ಜಯವಾಗಲಿ

ಜಯ ಜಯತು ತ್ರಿಜಗದ್ವಿಲಕ್ಷಣ
ಜಯ ಜಯತು ಜಗದೇಕಕಾರಣ
ಜಯ ಜಯತು ಜಾನಕೀರಮಣ ನಿರ್ಗತಜರಾಮರಣ ॥
ಜಯ ಜಯತು ಜಾಹ್ನವೀಜನಕ ಜಯ
ಜಯತು ದೈತ್ಯಕುಲಾಂತಕ ಭವಾ-
ಮಯಹರ ಜಗನ್ನಾಥವಿಟ್ಠಲ ಪಾಹಿ ಮಾಂ ಸತತ ॥56॥

॥ ಇಲ್ಲಿಗೆ ಮೂವತ್ತೆರಡನೆಯ ಕಕ್ಷ್ಯಾತಾರತಮ್ಯಸಂಧಿ ಮುಗಿಯಿತು ॥

ಶ್ರೀ ಗೋಪಾಲದಾಸರ ಶಿಷ್ಯರಾದ
ಶ್ರೀ ಜಗನ್ನಾಥದಾಸವರ್ಯರಿಂದ ವಿರಚಿತವಾದ
ಶ್ರೀಹರಿಕಥಾಮೃತಸಾರವು ಸಮಾಪ್ತವಾಯಿತು

॥ ಶ್ರೀಕೃಷ್ಣಾರ್ಪಣಮಸ್ತು ॥

ಫಲಸ್ತುತಿಸಂಧಿ-33

ಹರಿಕಥಾಮೃತಸಾರ ಸಕಲ ಶಾಸ್ತ್ರದ ಕೈಪಿಡಿ

ಹರಿಕಥಾಮೃತಸಾರ ಶ್ರೀಮ-
ದ್ಗುರುವರ ಜಗನ್ನಾಥದಾಸರ
ಕರತಳಾಮಲಕವನೆ ಪೇಳಿದ ಸಕಲ ಸಂಧಿಗಳ ॥
ಪರಮಪಂಡಿತಮಾನಿಗಳು ಮ-
ತ್ಸರಿಸಲೆದೆಗಿಚ್ಚಾಗಿ ತೋರುವು-
ದರಸಿಕರಿಗಿದು ತೋರಿ ಪೇಳುವುದಲ್ಲ ಧರೆಯೊಳಗೆ ॥1॥

ಭಾಮಿನಿ ಷಟ್ಪದಿಯಲ್ಲಿರುವ ತಾರತಮ್ಯಾತ್ಮಕ ಸ್ತೋತ್ರ ಪೇಳಿದ ಗುರು ಕಾರುಣ್ಯವು ವರ್ಣನಾತೀತ !

ಭಾಮಿನಿಯ ಷಟ್ಪದಿಯ ರೂಪದ-
ಲೀ ಮಹಾದ್ಭುತ ಕಾವ್ಯದಾದಿಯೊ-
ಳಾ ಮನೋಹರ ತರತಮಾತ್ಮಕ ನಾಂದಿಪದ್ಯಗಳ ॥
ಯಾಮಯಾಮಕೆ ಪಠಿಸುವವರ ಸು-
ದಾಮಸಖ ಕೈಪಿಡಿಯಲೋಸುಗ
ಪ್ರೇಮದಿಂದಲಿ ಪೇಳ್ದ ಗುರುಕಾರುಣ್ಯಕೇನೆಂಬೆ ॥2॥

ಸಾರಾತ್ಮಕ ಗ್ರಂಥ ಪಠಿಸಿದವರಿಗೆ ಸಂಸಾರವಿಲ್ಲ

ಸಾರವೆಂದರೆ ಹರಿಕಥಾಮೃತ
ಸಾರವೆಂಬುವೆದೆಮ್ಮ ಗುರುವರ
ಸಾರಿದಲ್ಲದೆ ತಿಳಿಯದೆನುತ ಮಹೇಂದ್ರನಂದನನ ॥
ಸಾರಥಿಯು ಬಲಗೊಂಡು ಸಾರಾ-
ಸಾರಗಳ ನಿರ್ಣೈಸಿ ಪೇಳ್ದನು
ಸಾರ ನಡೆವ ಮಹಾತ್ಮರಿಗೆ ಸಂಸಾರವೆಲ್ಲಿಹುದೊ ॥3॥

ದೇವತಾನುಗ್ರಹದಿಂದ ರಚಿತವಾದ ಈ ಗ್ರಂಥ ಜ್ಞಾನಿಗಳಿಂದ ಮಾನ್ಯ

ದಾಸವರ್ಯರ ಮುಖದಿ ನಿಂದು ರ-
ಮೇಶನನು ಕೀರ್ತಿಸುವ ಮನದಭಿ-
ಲಾಷೆಯಲಿ ವರ್ಣಾಭಿಮಾನಿಗಳೊಲಿದು ಪೇಳಿಸಿದ ॥
ಈ ಸುಲಕ್ಷಣ ಕಾವ್ಯದೊಳ್ ಯತಿ-
ಪ್ರಾಸಗಳಿಗೆ ಪ್ರಯತ್ನವಿಲ್ಲದೆ
ಲೇಸುಲೇಸೆನೆ ಶ್ರಾವ್ಯವಾದುದೆ ಕುರುಹು ಕವಿಗಳಿಗೆ ॥4॥

ಭಗವನ್ಮಹಿಮೆ ಹೇಳುವ ಪ್ರಾಕೃತ ಗ್ರಂಥ ಅಪ್ರಾಕೃತತವೆನಿಸುವುದು

ಪ್ರಾಕೃತೋಕ್ತಿಗಳೆಂದು ಬರಿದೆ ಮ-
ಹಾಕೃತಘ್ನರು ಜರಿವರಲ್ಲದೆ
ಸ್ವೀಕೃತವ ಮಾಡದಲೆ ಬಿಡುವರೆ ಸುಜನರಾದವರು ॥
ಶ್ರೀಕೃತೀಪತಿಯಮಲಗುಣಗಳು
ಈ ಕೃತಿಯೊಳುಂಟಾದ ಬಳಿಕ
ಪ್ರಾಕೃತವೆ ಸಂಸ್ಕೃತದ ಸಡಗರವೇನು ಸುಗುಣರಿಗೆ ॥5॥

ಸಜ್ಜನರಿಗೆ ಸಮ್ಮತವಾಗಿರುವ ಹರಿಕಥಾಮೃತಸಾರ

ಶ್ರುತಿಗೆ ಶೋಭನವಾಗದೊಡೆ ಜಡ-
ಮತಿಗೆ ಮಂಗಳವನೀಯದೊಡೆ ಶ್ರುತಿ
ಸ್ಮೃತಿಗೆ ಸಮ್ಮತವಿಲ್ಲದಿದ್ದೊಡೆ ನಮ್ಮ ಗುರುರಾಯ ॥
ಮಥಿಸಿ ಮಧ್ವಾಗಮಪ್ರಯೋಬ್ಧಿಯ
ಕ್ಷಿತಿಗೆ ತೋರಿದ ಬ್ರಹ್ಮವಿದ್ಯಾ-
ರತರಿಗೀಪ್ಸಿತ ಹರಿಕಥಾಮೃತಸಾರ ಸೊಗಸುವುದೆ ॥6॥

ಭಗವಂತನೆ ನುಡಿಸಿರುವ ಈ ಗ್ರಂಥದಲ್ಲಿ ಪುನರುಕ್ತಿ ಇತ್ಯಾದಿ ದೋಷಗಳಿಲ್ಲ

ಭಕ್ತಿವಾದದಿ ಪೇಳ್ದನೆಂಬ ಪ್ರ-
ಸಕ್ತಿ ಸಲ್ಲದು ಕಾವ್ಯದೊಳು ಪುನ-
ರುಕ್ತಿ ಶುಷ್ಕಸಮಾಸ ಪದವ್ಯತ್ಯಾಸ ಮೊದಲಾದ ॥
ಯುಕ್ತಿಶಾಸ್ತ್ರವಿರುದ್ಧಶಬ್ದ ವಿ-
ಭಕ್ತಿವಿಷಮಗಳಿರಲು ಜೀವ-
ನ್ಮುಕ್ತಿಯೋಗ್ಯವೆದೆಂದು ಸಿರಿಮದನಂತ ಮೆಚ್ಚುವನೆ ॥7॥

ಈ ಗ್ರಂಥದ ಅಧಿಕಾರಿಗಳು ಸಜ್ಜನರು

ಆಶುಕವಿಕುಲಕಲ್ಪತರು ದಿ-
ಗ್ದೇಶವರಿಯಲು ರಂಗನೊಲುಮೆಯ
ದಾಸಕೂಟಸ್ಥರಿಗೆರಗಿ ನಾ ಬೇಡಿಕೊಂಬುವೆನು ॥
ಈ ಸುಲಕ್ಷಣ ಹರಿಕಥಾಮೃತ
ಮೀಸಲಳಿಯದೆ ಸಾರ ದೀರ್ಘ
ದ್ವೇಷಿಗಳಿಗೆರೆಯದಲೆ ಸರಿಸುವುದೆನ್ನ ಭಿನ್ನಪವ ॥8॥

ದೂಷಕರ ದೂಷಣವೆ ಈ ಗ್ರಂಥಕ್ಕೆ ಭೂಷಣ

ಪ್ರಾಸಗಳ ಪೊಂಸಿಸದೆ ಶಬ್ದ
ಶ್ಲೇಷಗಳ ಶೋಧಿಸದೆ ದೀರ್ಘ-
ಹ್ರಾಸಗಳ ಸಲ್ಲಿಸದೆ ಷಟ್ಪ ದಿಗತಿಗೆ ನಿಲ್ಲಿಸದೆ ॥
ದೂಷಕರು ದಿನದಿನದಿ ಮಾಡುವ
ದೂಷಣವೆ ಭೂಷಣವು ಎಂದುಪ-
ದೇಶಗಮ್ಯವು ಹರಿಕಥಾಮೃತಸಾರ ಸಾಧ್ಯರಿಗೆ ॥9॥

ಈ ಗ್ರಂಥವು ಯೋಗ್ಯರಿಗೆ ಮಾತ್ರ ಇಷ್ಟವಾಗುವುದು

ಅಶ್ರುತಾಗಮಭಾವ ಇದರ ಪ-
ರಿಶ್ರಮವು ಬಲ್ಲವರಿಗಾನಂ-
ದಾಶ್ರುಗಳ ಮಳೆಗರೆಸಿ ಮೈ ಮರೆಸುವ ಚಮತ್ಕತಿಯ ॥
ಮಿಶ್ರರಿಗೆ ಮರೆಮಾಡಿ ದಿವಿಜರ
ಶಸ್ತ್ರದಲಿ ಕಾಯ್ದಿಪ್ಪರಿದರೊಳು
ಪಶ್ರುತಿಗಳು ತಪ್ಪುವುವೇ ನಿಜಭಕ್ತಿಯುಕ್ತರಿಗೆ ॥10॥

ಭಕ್ತರ ಪಾಲಿಗೆ ನವನಿಧಿ

ನಿಚ್ಚ ನಿಜಜನ ಮೆಚ್ಚ ಗೋಧನ
ಅಚ್ಚ ಭಾಗ್ಯವ ಪೆಚ್ಚ ಪೇರ್ಮೆಯು
ಕೆಚ್ಚ ಕೇಳ್ವನು ಮೆಚ್ಚ ಮಲಮನ ಮುಚ್ಚಲೆಂದೆನುತ ॥
ಉಚ್ಚವಿಗಳಿಗೆ ಪೊಚ್ಚ ಪೊಸದೆನ-
ಲುಚ್ಚರಿಸಿದೀ ಸಚ್ಚರಿತ್ರೆಯ-
ನುಚ್ಚರಿಸೆ ಸಿರಿವತ್ಸಲಾಂಛನ ಮೆಚ್ಚಲೇನರಿದು ॥11॥

ಗ್ರಂಥದ ಮೂಲಕ ತಾತ್ವಿಕರು ಸಮಾಜದಲ್ಲಿ ಮೆರೆಯುವರು

ಸಾಧುಸಭೆಯೊಳು ಮೆರೆಯೆ ತತ್ವಸು-
ಬೋಧವೃಷ್ಟಿಯ ಗೆರೆಯೆ ಕಾಮ-
ಕ್ರೋಧ ಬೀಜವ ಹುರಿಯೆ ಖಳರೆದೆ ಬಿರಿಯೆ ಕರಕರಿಯ ॥
ವಾದಿಗಳ ಪಲ್ಮುರಿಯೆ ಪರಮವಿ-
ನೋದಿಗಳ ಮೈಮರೆಯಲೋಸುಗ
ಹಾದಿ ತೋರಿದ ಹಿರಿಯ ಬಹುಚಾತುರಿಯ ಹೊಸಪರಿಯ
॥12॥

ಶ್ರೀಪಾದರಾಜರ, ವ್ಯಾಸರಾಜರ, ವಾದಿರಾಜರ, ಪುರಂದರದಾಸರ ಕೋಶಕ್ಕೊಪ್ಪುವ ಹರಿಕಥಾಮೃತಸಾರ

ವ್ಯಾಸತೀರ್ಥರ ಒಲವೊ ವಿಠಲೋ-
ಪಾಸಕ ಪ್ರಭುವರ್ಯ ಪುರಂದರ
ದಾಸರಾಯನ ದಯವೊ ತಿಳಿಯದು ಓದಿ ಕೇಳದಲೆ ॥
ಕೇಶವನ ಗುಣಮಣಿಗಳನು ಪ್ರಾ-
ಣೇಶಗರ್ಪಿಸಿ ವಾದಿರಾಜರ
ಕೋಶಕೊಪ್ಪುವ ಹರಿಕಥಾಮೃತಸಾರ ಪೇಳಿದರು ॥13॥

ಜಗನ್ನಾಥದಾಸರ ಉಪಕಾರವನ್ನು ಸಜ್ಜನರು ಎಂದೂ ಮರೆಯಲಾರರು !

ಹರಿಕಥಾಮೃತಸಾರ ನವರಸ-
ಭರಿತ ಬಹುಗಂಭೀರ ರತ್ನಾ-
ಕರ ರುಚಿರ ಶೃಂಗಾರ ಸಾಲಂಕಾರ ವಿಸ್ತಾರ ॥
ಸರಸ ನರಕಂಠೀರವಾಚಾ-
ರ್ಯರ ಜನಿತ ಸುಕುಮಾರ ಸಾತ್ವಿ-
ಕರಿಗೆ ಪರಮೋದಾರಮಾಡಿದ ಮರೆಯದುಪಕಾರ ॥14॥

ಉತ್ತಮರಿಂದ ಮಾತ್ರ ದಕ್ಕಿಸಿಕೊಳ್ಳಲು ಸಾಧ್ಯವೆನಿಸುವ ಹರಿಕಥಾಮೃತಸಾರ

ಅವನಿಯೊಳು ಜ್ಯೋತಿಷ್ಮತಿಯ ತೈ-
ಲವನು ಪಾಮರನುಂಡು ಜೀರ್ಣಿಸ-
ಲವನೆ ಪಂಡಿತನೋಕರಿಪವಿವೇಕಿಯಪ್ಪಂತೆ ||
ಶ್ರವಣಮಂಗಳ ಹರಿಕಥಾಮೃತ-
ಸವಿದು ನಿರ್ಗುಣಸಾರಮಕ್ಕಿಸ-
ಲವ ನಿಪುಣನ್ನೈ ಯೋಗ್ಯಗಲ್ಲದೆ ದಕ್ಕಲರಿಯದಿದು ||15||

ಗ್ರಂಥನಿಷ್ಠರಿಗೆ ಮುಕ್ತಿಯನ್ನೆ ಕೊಡುವುದು

ಅಕ್ಕರದೊಳೀ ಕಾವ್ಯದೊಳು ಒಂ-
ದಕ್ಕರವ ಬರೆದೋದಿದವ ದೇ-
ವರ್ಕಳಿಂ ದುಸ್ತ್ಯಜ್ಯನೆನಿಸಿ ಧರ್ಮಾರ್ಥಕಾಮಗಳ ||
ಲೆಕ್ಕಿಸದೆ ಲೊಕೈಕನಾಥನ
ಭಕ್ತಿಭಾಗ್ಯವ ಪಡೆವ ಜೀವ-
ನ್ಮುಕ್ತಗಲ್ಲದೆ ಹರಿಕಥಾಮೃತಸಾರ ಸೊಗುಸುವದೆ ||16||

ನಿತ್ಯ ಪಠನೆಯಿಂದ ಅನಿಷ್ಟ ನಿವೃತ್ತಿ ಹಾಗೂ ಇಷ್ಟ ಪ್ರಾಪ್ತಿಯಾಗುವುದು

ಒತ್ತಿ ಬಹ ವಿಘ್ನಗಳ ತಡೆವಪ-
ಮೃತ್ಯುವಿಗೆ ಮರೆ ಮಾಡಿ ಕಾಲನ
ಭೃತ್ಯರಿಗೆ ಭೀಕರವ ಪುಟ್ಟಿಸಿ ಸಕಲಸಿದ್ದಿಗಳ ॥
ಒತ್ತಿಗೊಳಿಸಿ ವನರುಹೇಕ್ಷಣ
ನೃತ್ಯಮಾಡುವನವನ ಮನೆಯೊಳು
ನಿತ್ಯಮಂಗಳ ಹರಿಕಥಾಮೃತಸಾರ ಪಠಿಸುವರ ॥17॥

ಒಂದು ಅಧ್ಯಾಯ ಪಠಿಸಿದರೂ ಸರ್ವಸಿದ್ಧಿ ಫಲ

ಆಯುರಾರೋಗ್ಯೈಶ್ವರ್ಯ ಯಶೋ
ಧೈರ್ಯ ಬಲವಿಜ್ಞಾನಸಮಸಹಾಯ ಶೌರ್ಯೋ-
ದಾರ್ಯ ಗುಣಗಾಂಭೀರ್ಯ ಮೊದಲಾದ ॥
ಆಯತಕಳುಂಟಾಗಲೊಂದ-
ಧ್ಯಾಯ ಪಠಿಸಿದ ಮಾತ್ರದಿಂ ಶ್ರವ-
ಣೀಯವಲ್ಲವೆ ಹರಿಕಥಾಮೃತಸಾರ ಸುಜನರಿಗೆ ॥18॥

ಸರ್ವದೋಷ ನಿವಾರಣೆ

ಕುರುಡ ಕಂಗಳ ಪಡೆವ ಬಧಿರನಿ-
ಗೆರಡುಕಿವಿ ಕೇಳ್ಬಹವು ಬೆಳೆಯದ
ಮುರುಡ ಮದನಾಕೃತಿಯ ತಾಳ್ವನು ಕೇಳ್ದಮಾತ್ರದಲಿ ॥
ಬರಡು ಹೈನಾಗುವುದು ಕೇಳ್ದರೆ
ಕೊರಡು ಪಲ್ಲವಿಸುವುದು ಪ್ರತಿದಿನ
ಹುರಡಿಲಾದರು ಹರಿಕಥಾಮೃತಸಾರವನು ಪಠಿಸೆ ॥19॥

ಹರಿಕಥಾಮೃತಸಾರದ ಪಠನೆಯು ಗಂಗಾದಿ ಸಕಲ ಸ್ನಾನಕ್ಕಿಂತಲೂ ಅಧಿಕ ಫಲ ನೀಡುವುದು

ನಿರ್ಜರತರಂಗಿಣಿಯೊಳನುದಿನ
ಮಜ್ಜನಾದಿ ಸಮಸ್ತಕರ್ಮ ವಿ-
ವರ್ಜಿತಾಶಾಪಾಶದಿಂದಲಿ ಮಾಡಿದಧಿದಕಫಲ ॥
ಹೆಜ್ಜೆ ಹೆಜ್ಜೆಗೆ ದೊರೆಯದಿಪ್ಪವೆ
ಸಜ್ಜನರು ಶಿರತೂಗವಂದದಿ
ಘರ್ಜಿಸುತಲೀ ಹರಿಕಥಾಮೃತಸಾರ ಪಠಿಸುವರ ॥20॥

ಮಂಗಳ ಫಲ ನೀಡುವ ಮಂಗಳ ಗ್ರಂಥ

ಸತಿಯರಿಗೆ ಪ್ರತಿಭಕುತಿ ಪತ್ನಿ-
ವ್ರತ ಪುರುಷರಿಗೆ ಹರುಷ ನೆಲೆಗೊಂ-
ಡತಿಮನೋಹರವಾಗಿ ಗುರುಹಿರಿಯರಿಗೆ ಜಗದೊಳಗೆ ॥
ಸತತ ಮಂಗಳವೀವ ಬಹು ಸು-
ಕೃತಿಗಳೆನಿಸುತ ಸುಲಭದಿಂ ಸ-
ದ್ಗತಿಯ ಪಡೆವರು ಹರಿಕಥಾಮೃತಸಾರವನು ಪಠಿಸೆ ॥21॥

ಶ್ರೀ ಜಗನ್ನಾಥದಾಸರನ್ನು ಸಾಮಾನ್ಯರೆಂದು ಹೇಳುವವರು ನಕರಭಾಗಿಗಳು

ಎಂತು ವರ್ಣಿಸಲೆನ್ನಳವೆ ಭಗ-
ವಂತನಮಲ ಗುಣಾನುವಾದಗ-
ಳೆಂತು ಪರಿಯಲಿ ಪೂರ್ಣಬೋಧರ ಮತವ ಪೊಂದಿದರ ॥
ಚಿಂತನೆಗೆ ಬಪ್ಪಂತೆ ಬಹು ದೃ-
ಷ್ಟಾಂತಪೂರ್ವಕವಾಗಿ ಪೇಳ್ದ ಮ
ಹಂತರಿಗೆ ನರರೆಂದು ಬಗೆವರೆ ನಿರಯಭಾಗಿಗಳು ॥22॥

ಜಿಜ್ಞಾಸುಗಳಿಗೆ ಶಾಸ್ತ್ರದ ರಸದೌತಣ

ಮಣಿಖಚಿತ ಹರಿವಾಣದಲಿ ವಾ
ರಣಸುಭೋಜ್ಯಪದಾರ್ಥ ಕೃಷ್ಣಾ-
ರ್ಪಣವೆನುತರ್ಪಸಿದವರಿಗೋಸುಗ ನೀಡುವಂದದಲಿ ॥
ಪ್ರಣತರಿಗೆ ಪೊಂಗನಡ ವರವಾ-
ಙ್ಮಣಿಗಳಿಂ ವಿರಚಿಸಿದ ಶ್ರುತಿಯೊ-
ಳುಣಿಸಿ ನೋಡುವ ಹರಿಕಥಾಮೃತಸಾರವನುದಾರ ॥23॥

ಗ್ರಂಥ ಪಠನೆ ಮಾಡುವವರ ದೋಷವನ್ನು ಲೆಕ್ಕಿಸದೆ ಕೃಷ್ಣ ಕೈಪಿಡಿವನು

ದುಷ್ಟರೆನ್ನದೆ ದುರ್ವಿಷಯದಿಂ
ಪುಷ್ಟ ರೆನ್ನದೆ ಪೂತಕರ್ಮ
ಭ್ರಷ್ಟರೆನ್ನದೆ ಶ್ರೀದವಿಟ್ಠಲ ವೇಣುಗೋಪಾಲ ॥
ಕೃಷ್ಣ ಕೈಪಿಡಿಯುವನು ಸತ್ಯವಿ-
ಶಿಷ್ಟದಾಸತ್ವವನು ಪಾಲಿಸಿ
ನಿಷ್ಠೆಯಿಂದಲಿ ಹರಿಕಥಾಮೃತಸಾರ ಪಠಿಸುವರ ॥24॥

॥ ಇಲ್ಲಿಗೆ ಶ್ರೀಜಗನ್ನಾಥದಾಸರ ಸಾಕ್ಷಾತ್ ಶಿಷ್ಯರಾದ
ಶ್ರೀದವಿಟ್ಠಲದಾಸರು ರಚಿಸಿದ ಫಲಸ್ತುತಿಸಂಧಿಯು ಮುಗಿಯಿತು ॥

ಶ್ರೀಗುರುಶ್ರೀಶವಿಠ್ಠಲರಿಂದ ವಿರಚಿತವಾದ

ಫಲಸ್ತುತಿಸಂಧಿ-34

ದಾಸವರ್ಯರ ದಾಸ ಕರ್ಜಗಿ
ದಾಸರೆಂಬರ ಈ ಸುವಾಕ್ಯವು
ದಾಸಿನವ ಮಾಡದಿರ ಶ್ರೀ ಹರಿದಾಸರಾದವರು
ಕಾಶಿ ಮೊದಲಾದ ಸುಕ್ಷೇತ್ರದಿ
ವಾಸ ಮಾಡಲು ಈ ಸುಜನ ಸಹ-
ವಾಸ ಫಲ ದೊರಕುವದೆ ಶೋಧಿಸೇ ಸಕಲಶಾಸ್ತ್ರದಲಿ
||1||

ಶ್ರೀವರನ ದಾಸರಿಗೆ ಭಕುತಿಯಲಿ
ಸೇವಕನು ನಾನೆಂದು ಪೇಳುವ
ಜೀವನವೆ ಸಜ್ಜೀವಿ ಅವ ಹರಿದಾಸನೆಂದರಿದು ||
ಆವನಾದರೂ ಆದಿಯಲಿ ಇದ
ಭಾವಶುದ್ಧದಿ ಓದಿ ಬರೆಯಲು
ಕಾವನಯ್ಯನು ಕರುಣಿಸುವನು ಸದಾವಕಾಲದಲಿ ||2||

ಹರಿಕಥಾಮೃತಸಾರ ನೋಡುವ
ಪರಮಭಕ್ತರ ಜ್ಞಾನದೃಷ್ಟಿಗೆ
ವರಸುಲೋಚನದಂತೆ ಇಪ್ಪವು ಈಸು ಪದ್ಯಗಳು ॥
ಅರಸಿಕರಿಗಿದು ಪೇಳಲಾಗದು
ಮುರಹರನ ದಾಸರಿಗೆ ತಪ್ಪದೆ
ಹರುಷ ಸುರಿಸುವನಿಹಪರದಿ ಗುರುಶ್ರೀಶ ವಿಟ್ಠಲನು ॥5॥

॥ ಇಲ್ಲಿಗೆ ಶ್ರೀಗುರುಶ್ರೀಶವಿಟ್ಠಲರಿಂದ ವಿರಚಿತವಾದ
ಫಲಸ್ತುತಿಸಂಧಿಯು ಮುಗಿಯಿತು ॥

ಸಂಧಿಮಾಲಾಸಂಧಿ-35

ಹರಿಕಥಾಮೃತಸಾರಸಂಧೀಗ-
ಳರುಹುವೆನು ತತ್ಕತ ಮಹಾತ್ಮರ
ಚರಣಕರುಣಾಬಲವಿರಲು ಸನ್ಮಂಗಳಾಚರಣಾ ॥
ಸರಸ ಸಂಧಿಯ ಪೇಳ್ದ ಸುಜನರಿ-
ಗ್ಧರುಷಕೊಡುವುದುಯೆಂದು ಪರಮಾ-
ದರದಿ ಕರುಣಾಸಂಧಿವ್ಯಾಪ್ತಿ ಸುಸಂಧಿ ಭೋಜನದಾ ॥1॥

ಸಂಧಿ ಸುಖದ ವಿಭೂತಿ ಸಿರಿಗೋ-
ವಿಂದನಾಜ್ಞದಿ ಪೇಳಿದರು ಆ-
ನಂದ ನೀಡುವ ಪಂಚಮಹಾಯಜ್ಞದ ಸುಸಂಧೀಯನ ॥
ಛಂದದಿಂದಲಿ ಪಂಚತನ್ಮಾ-
ತ್ರೆಂದು ಕರಿಸುವ ಸಮಧಿ ಪೇಳ್ದರು
ಇಂದಿರೇಶನ ಪ್ರೀತಿ ಬಡಿಸುವ ಮಾತೃಕಾಸಂಧಿ ॥2॥

ವರ್ಣಪ್ರಕ್ರಿಯಾಸಂಧಿ ಸುಜನರ
ಕರ್ಣಗಳಿಗೆತಿಶ್ರಾವ್ಯವೆನಿಪುದು
ತೂರ್ಣದಲಿ ಸರ್ವಪ್ರತೀಕಧ್ಯಾನಪ್ರಕ್ರಿಯವಾ ॥
ನಿರ್ಣೈಸಿದರು ನಾಡಿಯನು ಸಂ-
ಪೂರ್ಣ ಗುಣನಾಮಸಂಧಿಯನು
ಸ್ವರ್ಣನಾಭಿಪ್ರಮುಖ ಜೀವನಪ್ರಕ್ರಿಯಾಸಂಧಿ ॥3॥

ವಾಸುದೇವನ ಕರುಣದಿಂದಲಿ
ಶ್ವಾಸಸಂಧಿಯ ಪೇಳಿದರು ಜಗ-
ದೀಶನಿಂದಲಿ ದತ್ತಸ್ವಾತಂತ್ರ್ಯಾಖ್ಯಸಂಧಿಯನಾ ॥
ಲೇಸೆನಿಪ ಸ್ವಾತಂತ್ರ್ಯವಿಭಜನ
ದಾಸರುಸಾರಿದರೆಲ್ಲ ಬಿಂಬೋ-
ಪಾಸನಹ ಸಂಧೀಯನು ಹರಿಯ ಸ್ತೋತ್ರಸಂಧಿಯನು ॥4॥

ಸುಗುಣತರಮಭಾವಸಂಧಿಯು
ಮಿಗಿಲು ಆವೇಶವತಾರವ
ನಗಧರನ ಭಕ್ತಾಪರಾಧಸಹಿಷ್ಣುಸಂಧಿಯನಾ ॥
ಹಗಲು ಇರುಳೆನ್ನದೆಲೆ ಪಿರಿಯರು
ಬಗೆಬಗೆಯ ಶಾಸ್ತ್ರವನು ಶೋಧಿಸಿ
ಸುಗತಿಪ್ರದ ಬೃಹತ್ತಾರತಮ್ಯದ ಸಾಧನದ ಸಂಧೀ ॥5॥

ದೇವನಂಘ್ರಿಯನೆನೆವುತಲಿ ಕ್ರೀ-
ಡಾವಿಲಾಸವರೋಹ ಸಂಧಿಯು
ದೇವತಾನುಕ್ರಮಣಿಕಾ ವಿಘ್ನೇಶಸಂಧಿಯನ ॥
ಭಾವವುಳ್ಳಣುತಾರತಮ್ಯವ
ತಾ ವಿರಚಿಸುತ ದೈತ್ಯತರತಮ
ಭಾವ ನೈವೇದ್ಯಪ್ರಕರಣದಸಂಧಿ ಪೇಳಿದರು ॥6॥

ನೀರಜಾಕ್ಷನ ನೆನೆದು ಕಕ್ಷ್ಯ-
ತಾರತಮ್ಯದ ಸಂಧಿ ಪೇಳುತ
ಶ್ರೀರಮಣಗರ್ಪಿಸುತಲಿರೆ ಭೀಮೇಶವಿಠ್ಠಲನ ॥
ಚಾರುಚರಣವನೆನುತನುದಿನ
ಧಾರುಣಿಯೊಳು ಮೆರೆದ ನಮ್ಮ
ಗುರುದೊರೆ ಜಗನ್ನಾಥಾಖ್ಯ ದಾಸರ ನೆನೆವೆನನವರತ ॥7॥

ಶ್ರೀಮತ್ ಜಗನ್ನಾಥದಾಸರಾಯರ ಶಿಷ್ಯ ಭೀಮೇಶದಾಸರಿಂದ
ವಿರಚಿತವಾದ ಸಂಧಿಮಾಲಾಸಂಧಿ ಸಮಾಪ್ತವಾಯಿತು
ಅಸ್ಮದ್ಗುರ್ವಂತರ್ಗತ-ಭಾರತೀರಮಣ - ಮುಖ್ಯಪ್ರಾಣಾಂತರ್ಗತ-
ಹನುಮಭೀಮಧ್ವಾಂತರ್ಗತ-ರಾಮಕೃಷ್ಣವೇದವ್ಯಾಸಾತ್ಮಕ -
ಲಕ್ಷ್ಮೀಹಯಗ್ರೀವನಿಗೆ ಈ ಗ್ರಂಥವು ಸಮರ್ಪಿತವಾಗಲಿ
॥ ಶ್ರೀ ಕೃಷ್ಣಾರ್ಪಣಮಸ್ತು ॥

ತಪ್ಪೋಪ್ಪಿಗೆ

ಪುಟ	ಸಾಲು	ತಪ್ಪು	ಒಪ್ಪು
X	16	ಪತಿಭಕ್ತಿ,ಪಾ	ಪತಿಭಕ್ತಿಪ.....
3	2	ಸದ್ಭುದ್ಧಿ	ಸದ್ಬುದ್ಧಿ
6	2	ಉಪಾಕರ	ಉಪಕಾರ
6	10	ಸುಂಮಗಳವ	ಸುಮಂಗಳವ
13	15	-ಕನಾದ	-ಕನಾಹ
23	6	ಬಿಟ್ಟ	ಬೆಟ್ಟ
25	5	-ಷಗಳಿಂದ	-ಷರೂಪಗಳಿಂದ
30	9	ಅಸ್ಪೃಜ	ಅಸ್ಪೃಜ್ಯ
37	2	-ಗಳ	ಗಳು
39	9	ಮಾತ್ರ	ಪಾತ್ರ
53	11	ಕರುಣದಿ	ಕರಣದಿ
57	5	ಭೋಕ್ತೃಗೆ	ಭೋಕ್ತೃಗ
64	12	ಸುಂಗಧ	ಸುಗಂಧ
69	4	ತದ್ವಿ	ಸದ್ವಿ
74	9	ವ್ಯಾಪರವೇ	ವ್ಯಾಪಾರವೇ
75	14	ಲ್ಲುಂಬು-	ಲ್ಲಂಬು
84	11	-ವಮಿಲ್ಲಿ	-ವಲ್ಲಿ
90	7	ಡತುಳ-	ತುಳ
119	1	ಖುಷಿಕ	ಖುಷಿ
123	1	ಪ್ರದಾನ	ಪ್ರಧಾನ
132	9	-ದ್ರಿಗಳ-	ದ್ರಿಯಗ
191	9	ಇಷ್ಟಪ್ರದ	ಇಷ್ಟ
192	1	ಭಗವ	ಭವ
195	5	ಭಕರ	ಭಕ್ತರ
204	7	-ವನೇ	ವರೇ
204	8	ಶ್ರೀಹರಿಯ	ಶ್ರೀಹರಿಯು
220	5	ಸಂಶಯ	ಸಾಂಶ
266	1	ಪ್ರಕೃತ	ಪ್ರಾಕೃತ
266	8	-ದತಿ	ದ್ಗತಿ
306	10	ಗೋಮಯೆ	ಗೋಮಯು

-B-

ಪುಟ	ಸಾಲು	ತಪ್ಪು	ಒಪ್ಪು
308	8	24, 25 ಹೆಡ್ಡಿಂಗ್ ಇಂಟರ್‌ಚೇಂಜ್	
308	9	ಮೇರುತೇಶ	ಮಾರುತೇಶ
309, 312	1	32, 33 ಹೆಡ್ಡಿಂಗ್ ಇಂಟರ್‌ಚೇಂಜ್	
318	14	ಶುಚಿ	ಶಚಿ
321	1	ಪರೀಕ್ಷಿತಿ	ಪರೀಕ್ಷಿತ
321	10	ಅಗ್ನಾ	ಅಗ್ನಿ
322	2	ಚಿರಪತ್ರಿ	ಚಿರಪಿತೃ
322	8	ತುಬುರ	ತುಂಬುರ
339	7	ಭ್ರಗು	ಭೃಗು
340	10	ಳಲು	ಳು
357	1	ಶನೇ	ಶನೈ
364	14	ಹೃ	ಹ್ವ
367	9	ಸತ್	ಷತ್
369	1	ಕುಸ್ಥಂ ಅ	ಕುಸ್ಥ ಆ
369	8	ದ್ಧಾತ	ದ್ಧಾತೃ
370	1	ಅಗಣೀ	ಅಗ್ರಣೀ
371	9	ಹೆಡ್ಡಿಂಗ್ 27, 29 ಇಂಟರ್‌ಚೇಂಚ್	
380	8	ವರ	ವರು
381	13	ನಾ	ನಾದಿ
382	2	ಗುಣ	ಗಣ
386	15	ರತ್ನ	ರತ್ನಕ
409	15	ನಾವದ	ನಾವ
412	8	ನೆಸು	ನೆನಿಸು
412	10	ಅಶನ	ಅನಶನ
421	2	ಮದ್ದಾನ	ಮದ್ದಾನೆ
433	15	ಭವದು-	ಬಹುದು
434	11	ಣಗೆ	ಣೆಗೆ
436	4	ತ್ಯೆದು	ತ್ಯೆ ದು
436	5	ಚಿಥ್ಯಬ್ಯಾ	ಚೆಥ್ಯ ಚ್ಯ
446	8	ಸ್ಮತಿ	ಸ್ಮೃತಿ

ಪುಟ	ಸಾಲು	ತಪ್ಪು	ಒಪ್ಪು
447	8	ತುಟೊ	ತುಂಟೋ
447	10	ಭಜಿಸಿದ	ಭಜಿಸದ
447	15	ಪ್ರೇರನು	ಪ್ರೇರಕನು
466	7	ದುನುಜ	ದನುಜ
478	8	ಏಖ	ಏಕ
482	9	ಅಮ್ಲ	ಆಮ್ಲ
489	7	ಭಾಷ್ಪ	ಬಾಷ್ಪ
492	4	ಶೀವ	ಶಿವ
492	11	ಕ್ಷಣಿತ	ಕ್ವಣಿತ
504	13	ಚವನ	ಚ್ಯವನ
508	3	ಸ್ತದಿನ	ಸ್ತನ
514	11	ವಾಜ್ಮನ	ವಾಜ್ಮನ
518	8	ಸಂಸ್ಕತದ	ಸಂಸ್ಕೃತದ

* * * *

ವಿಷಯಾನುಕ್ರಮಣಿಕೆ

* * * *

ಶರೀರಮಾನಿ ಅಹಂಕಾರಿಕ ಪ್ರಾಣದೇವರ ಸ್ತೋತ್ರ

ಚಾರುತರ ನವವಿಧ ಭಕುತಿ ಗಂ-
ಭೀರ ವಾರಾಶಿಯೊಳು ಪರಮೋ-
ದಾರ ಮಹಿಮನ ಹೃದಯ ಫಣಿಪತಿ ಪೀಠದಲಿ ಭಜಿಪ ॥
ಭೂರಿ ಕರ್ಮಾಕರನೆನಿಸುವ ಶ-
ರೀರಮಾನಿ ಪ್ರಾಣಪತಿ ಪದ-
ವಾರಿರುಹಕಾನಮಿಪೆ ಮದ್ಗುರುರಾಯರಹುದೆಂದು ॥18॥

10ನೆಯ ಕಕ್ಷದ ದೇವತೆಗಳ ಸ್ತೋತ್ರ

ವಿತತಮಹಿಮನ ವಿಶ್ವತೋಮುಖ-
ನತುಳಭುಜಬಲ ಕಲ್ಪತರುವಾ-
ಶ್ರಿತರೆನಿಸಿ ಸಕಲೇಷ್ಟ ಪಡೆದನುದಿನದಿ ಮೋದಿಸುವ
ರತಿ ಸ್ವಯಂಭುವ ದಕ್ಷ ವಾಚ-
ಸ್ಪತಿ ಬಿಡೌಜನ ಮಡದಿ ಶಚಿ ಮ-
ನ್ಮಥಕುಮಾರನಿರುದ್ಧರೆಮಗೀಯಲಿ ಸುಮಂಗಳವ ॥19॥

17ನೆಯ ಕಕ್ಷೆ ಮಿತ್ರಾದಿಗಳಿಂದ ವಿಶ್ವಕ್ಸೇನ, ಗಣಪತಿ, ಅಶ್ವಿನೀದೇವತೆಗಳ ತಾರತಮ್ಯ

ಮಿತ್ರ ತಾರಾ ನಿರಋತಿ ಪ್ರವಹ-
ಪತ್ನಿ ಪ್ರಾವಹಿ ಸಮರು ವಿಶ್ವಾ-
ಮಿತ್ರಗಿಂತಲಿ ಕೊರತೆ ವಿಷ್ವಕ್ಸೇನ ಗಣನಾಥ ॥
ವಿತ್ತಪತಿ ಅಶ್ವಿನಿಗಳಧಮರು
ಮಿತ್ರ ಮೊದಲಾದವರಿಗಿಂತಲಿ
ಬಿತ್ತರಿಪೆನು ಶತಸ್ಥ ದಿವಿಜರ ವ್ಯೂಹನಾಮಗಳ ॥4॥

100 ಜನ ಸೋಮಪಾನಾರ್ಹ ದೇವತೆಗಳು

ಮರುತರೊಂಭತ್ತಧಿಕ ನಾಲ್ವ-
ತ್ತೆರಡು ಅಶ್ವಿನಿ ವಿಶ್ವೇದೇವರು
ಎರಡೈದು ಹನ್ನೊಂದು ರುದ್ರರು ದ್ವಾದಶಾದಿತ್ಯ ॥
ಗುರು ಪಿತೃತ್ರಯವಷ್ಟವಸುಗಳು
ಭರತ ಭಾರತಿ ಪೃಥ್ವಿ ಋಭುವೆಂ-
ದರಿವುದಿವರನು ಸೋಮರಸಪಾನಾರ್ಹರಹುದೆಂದು ॥5॥

ಅವರೋಹಣತಾರತಮ್ಯಸಂಧಿ-26

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಾಗವದ್ಭಕ್ತರಿದನಾದರದಿ ಕೇಳುವುದು ॥ಪ॥

ಸಂಧಿಸೂಚನೆ

ಶ್ರೀ ರಮಣನಿಜಭಕ್ತರೆನಿಸುವ
ವಾರಿಜಾಸನಮುಖ್ಯ ನಿರ್ಜರ
ತಾರತಮ್ಯವ ಪೇಳ್ವೆ ಸಂಕ್ಷೇಪದಲಿ ಗುರುಬಲದಿ ॥

ಶ್ರೀಹರಿಯಿಂದ ಇಂದ್ರಕಾಮರವರೆಗೆ ಭಕ್ತಿಜ್ಞಾನ ಕೊಡಲೆಂದು ವಂದಿಸುವೆ

ಕೇಶವಗೆ ನಾರಾಯಣಗೆ ಕಮ-
ಲಾಸನ ಸಮೀರಗೆ ವಾಣಿ-
ವೀಶ ಫಣಿಪ ಮಹೇಶರಿಗೆ ಷಣ್ಮಹಿಷಿಯರ ಪದಕೆ ॥
ಶೇಷ ರುದ್ರರ ಪತ್ನಿಯರಿಗೆ ಸು-
ವಾಸವ ಪ್ರದ್ಯುಮ್ನರಿಗೆ ಸಂ-
ತೋಷದಲಿ ವಂದಿಸುವೆ ಭಕ್ತಿಜ್ಞಾನ ಕೊಡಲೆಂದು

ಆಹಂಕಾರಿಕ ಪ್ರಾಣದೇವನಿಂದ, 14ನೆಯ ಕಕ್ಷೆಯ ನಾರದರ ತನಕ ಜ್ಞಾನ ಭಕ್ತಿ ವಿರಕ್ತಿಯ ಯಾಚನೆ

ಪ್ರಾಣದೇವಗೆ ನಮಿಪೆ ಕಾಮನ
ಸೂನು ಮನು ಗುರು ದಕ್ಷ ಶಚಿ ರತಿ-
ಮಾನಿನಿಯರಿಗೆ ಪ್ರವಹದೇವಗೆ ಸೂರ್ಯ ಸೋಮ ಯಮ ॥
ಮಾನವಿಗೆ ವರುಣನಿಗೆ ವೀಣಾ-
ಪಾಣಿ ನಾರದಮುನಿಗೆ ನಮಿಸುವೆ
ಜ್ಞಾನಭಕ್ತಿವಿರಕ್ತಿ ಮಾರ್ಗವ ತಿಳಿಸಲೆನಗೆಂದು ॥2॥

ಅಗ್ನಿಯಿಂದ ಧನಪ ಗಣಪಾದ್ಯರ ತಾರತಮ್ಯ ಸ್ತೋತ್ರ

ಅನಲ ಭೃಗು ದಾಕ್ಷಾಯಣಿಯರಿಗೆ
ಕನಕಗರ್ಭಜ ಸಪ್ತಋಷಿಗಳಿ-
ಗೆಣೆಯೆನಿಪ ವೈವಸ್ವತಸುಮನು ಗಾಧಿಸಂಭವಗೆ ॥
ದನುಜ ನಿರಋತಿ ತಾರ ಪ್ರಾವಹಿ
ವನಜಮಿತ್ರಗೆ ಅಶ್ವಿನಿ ಗಣಪ
ಧನಪ ವಿಷ್ವಕ್ಸೇನರಿಗೆ ವಂದಿಸುವೆನನವರತ ॥3॥